ಕನ್ನಡ ಹಸ್ತಪ್ರತಿಗಳ

ವರ್ಣನಾತ್ಮಕ ಸೂಚೀ

ಒಂಬತ್ತನೆಯ ಸಂಪುಟ

ಕನ್ನಡ ಅಧ್ಯಯನ ಸಂಸ್ಥೆ : : ಮೈಸೂರು ವಿಶ್ವವಿದ್ಯಾನಿಲಯ





ಕನ್ನಡ ಅಧ್ಯಯನ ಸಂಸ್ಥೆಯ ಪ್ರಕಟಣೆ–೩೯೧

ಪ್ರಾಚ್ಯಕಾವ್ಯ ಮಾಲೆ–೭೨

ಪ್ರಧಾನ ಸಂಪಾದಕ

ಹಾ. ಮಾ. ನಾಯಕ

ವಿಭಾಗ ಸಂಪಾದಕ

ಎನ್. ಬಸವಾರಾಧ್ಯ

ಕನ್ನಡ ಹಸ್ತಪ್ರತಿಗಳ

ವರ್ಣನಾತ್ಮಕ ಸೂಚೀ

ಒಂಬತ್ತನೆಯ ಸಂಪುಟ (ಸ–ಹ)

ಈ ಯೋಜನೆಯಲ್ಲಿ ಸಹಕರಿಸಿದವರು

ಎನ್. ಬಸವಾರಾಧ್ಯ
ಬಿ. ಎಸ್. ಸಣ್ಣಯ್ಯ
ಎಸ್. ಬಸಪ್ಪ
ಎಸ್. ಎನ್. ಕೃಷ್ಣಜೋಯಿಸ್
ಎಂ. ಸಿ. ಪದ್ಮನಾಭಶರ್ಮ
ಕೆ. ಆರ್. ಶೇಷಗಿರಿ
ಜಿ. ಜಿ. ಮಂಜುನಾಥನ್
ಎಂ. ಎನ್. ಲೀಲಾವತಿ
ನಂ. ತಪಸ್ವೀಕುಮಾರ್
ಹ. ಕ. ರಾಜೇಗೌಡ
ವೈ. ಸಿ. ಭಾನುಮತಿ
ಎಂ. ಪಿ. ಮಂಜಪ್ಪಶೆಟ್ಟಿ

ಕನ್ನಡ ಹಸ್ತಪ್ರತಿಗಳ

ವರ್ಣನಾತ್ಮಕ ಸೂಚೀ

ಒಂಬತ್ತನೆಯ ಸಂಪುಟ (ಪ–ಹ)

ಸಂಯೋಜಕ ಸಂಪಾದಕ

ಬಿ. ಎಸ್. ಸಣ್ಣಯ್ಯ

ಕನ್ನಡ ಅಧ್ಯಯನ ಸಂಸ್ಥೆ

ಮೈಸೂರು ವಿಶ್ವವಿದ್ಯಾನಿಲಯ

1981

KANNADA HASTAPRATIGALA VARNANATMAKA SUCHI—SAMPUTA IX (Descriptive Catalogue of Kannada Manuscripts-Volume IX) Co-ordinating editor : B. S. Sannaiah; Published by The Institute of Kannada Studies, University of Mysore, Manasagangotri, Mysore-570 006. First edition : 1981. Pp. xii + 450.

ಬೆಲೆ : ರೂ. **20-00**

ಮಾರಾಟಗಾರರು : ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು 570 012

ಮುದ್ರಣ : ತಾಂಡವಮೂರ್ತಿ ಪ್ರೆಸ್, ಇರ್ವಿನ್ ರಸ್ತೆ, ಮೈಸೂರು 570 001

ಮುನ್ನುಡಿ

ಕನ್ನಡ ಅಧ್ಯಯನಕ್ಕೆ ಸಂಬಂಧಪಟ್ಟ ಚಟುವಟಿಕೆಗಳೆಲ್ಲವನ್ನೂ ಕೇಂದ್ರೀಕರಿಸುವ ದೃಷ್ಟಿಯಿಂದ ೧೯೬೬ರ ಕೊನೆಯಲ್ಲಿ ಪ್ರಾಚ್ಯಸಂಶೋಧನಾಲಯದ ಕನ್ನಡ ವಿಭಾಗವನ್ನು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ವಿಲೀನಗೊಳಿಸಲಾಯಿತು. ಅಂದಿನಿಂದ ಈ ಭಾಗವನ್ನು ಅಧ್ಯಯನ ಸಂಸ್ಥೆಯ 'ಸಂಪಾದನ ವಿಭಾಗ'ವೆಂದು ಹೆಸರಿಸಲಾಯಿತು. ಕ್ರಿ. ಶ. ೧೪೩೬ರಲ್ಲಿ ಪ್ರತಿಮಾಡಲಾಗಿರುವ ಹಾಗೂ ಅತ್ಯಂತ ಪ್ರಾಚೀನ ಉಪಲಬ್ಧ ಹಸ್ತಪ್ರತಿಯಾಗಿರುವ 'ಪುಷ್ಪದಂತ ಪುರಾಣ'ದ ಹಸ್ತಪ್ರತಿಯಿಂದ ಹಿಡಿದು ೧೮೫೦ರಲ್ಲಿ ಲಿಖಿತವಾಗಿರುವ 'ಪ್ರಭಾವತಿ ಪರಿಣಯ'ದ ಹಸ್ತಪ್ರತಿಯವರೆಗೆ ಇಂದು ೫೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಹೊಂದಿರುವ 'ಸಂಪಾದನ ವಿಭಾಗ' ಅಧ್ಯಯನ ಸಂಸ್ಥೆಯ ಒಂದು ಪ್ರಧಾನ ಅಂಗವಾಗಿದೆ. ಕನ್ನಡ ಭಾಷಾ ಸಾಹಿತ್ಯಗಳಿಗೆ ಸಂಬಂಧಿಸಿದ ಅಧ್ಯಯನವನ್ನು ಕೈಗೊಳ್ಳುವವರಿಗೆ, ಸಂಶೋಧಕರಿಗೆ, ಸ್ನಾತಕ ಮತ್ತು ಸ್ನಾತಕೋತ್ತರ ಕನ್ನಡ ವಿದ್ಯಾರ್ಥಿಗಳಿಗೆ ಇದು ಆಕರ ಗ್ರಂಥಗಳ ತವರಾಗಿದೆ, ಪ್ರೇರಣೆಯ ಸ್ರೋತವಾಗಿದೆ.

ಮುದ್ರಣ ಸೌಲಭ್ಯ ಈಗ್ಗೆ ಕೆಲವು ಶತಮಾನಗಳಿಂದೀಚೆಗೆ ಮಾನವ ಜನಾಂಗಕ್ಕೆ ದೊರೆತಿರುವ ವರ. ಈ ಸೌಲಭ್ಯವಿಲ್ಲದಿದ್ದ ಕಾಲದಲ್ಲಿ ಓಲೆಗರಿ ಅಥವಾ ತಾಡಪತ್ರದ ಮೇಲೆ ಕಂಠದಿಂದ ಕೊರೆದು, ಅನನ್ಯ ಶ್ರದ್ಧೆಯಿಂದ ಈ ಸಾಹಿತ್ಯವನ್ನು ಅಭ್ಯಸಿಸಿ, ಅದನ್ನು ಕಾಯ್ದುಕೊಂಡು ಬಂದ ಹಿರಿಯರಿಂದ ಅಂದಿನ ಅಪೂರ್ವಸಾಹಿತ್ಯ ನಮ್ಮ ಸಂಪತ್ತಾಗಿ ಉಳಿದಿದೆ. ತಮಗೆ ಪ್ರಿಯವೆನಿಸಿದ ಸಾಹಿತ್ಯಕೃತಿಗಳನ್ನು ಪ್ರತಿಮಾಡಿಸಿ ಇಟ್ಟುಕೊಳ್ಳುತ್ತಿದ್ದುದು ಆ ಕಾಲದ ಒಂದು ಬಗೆಯ ಹವ್ಯಾಸವೇ ಆಗಿತ್ತು. ಈ ಕಾರಣದಿಂದಾಗಿಯೇ ಓಲೆಗರಿಯ ಒಂದು ಸಂಪುಟದಲ್ಲಿಯೇ ಅನೇಕ ಗ್ರಂಥಗಳನ್ನು, ಗ್ರಂಥಭಾಗಗಳನ್ನು ಪ್ರತಿಲಿಪೀಕರಿಸುವುದನ್ನು ಕಾಣುತ್ತೇವೆ. ಹಸ್ತಪ್ರತಿಗಳ ಅನೇಕ ಪ್ರತಿಗಳನ್ನು ಸಿದ್ಧಪಡಿಸಿ ಹಂಚುವುದನ್ನು ಪುಣ್ಯಕಾರ್ಯವೆಂದು ಬಗೆದು, ಈ ರೀತಿ ಮಾಡುತ್ತಿದ್ದುದಕ್ಕೂ ಉದಾಹರಣೆಗಳಿವೆ. ಪ್ರತಿಲಿಪೀಕರಣ ಹಲವರಿಗೆ ಜೀವನೋಪಾಯದ ಸಾಧನವಾಗಿಯೂ ಇತ್ತು. ಹಸ್ತಪ್ರತಿಗಳನ್ನು ಸುಂದರ, ಸಂದರ್ಭೋಚಿತ ಚಿತ್ರಗಳಿಂದ ಅಲಂಕರಿಸುವ ವಾಡಿಕೆಯೂ ಇತ್ತು. ಇವು ನಮ್ಮ ಜನಗಳ ಸಾಹಿತ್ಯ–ಶಾಸ್ತ್ರ-ಕಲಾಭಿರುಚಿಯ ಪ್ರತೀಕವಾಗಿವೆ.

ಸಂಸ್ಕೃತಿ, ಇತಿಹಾಸ, ಭಾಷಾಚರಿತ್ರೆ–ಇವುಗಳ ಸಮಗ್ರ ಅರಿವಿಗೆ ಶಾಸ್ತ್ರೀಯವಾಗಿ ಸಂಪಾದಿಸಿದ ಸಾಹಿತ್ಯ ಅತ್ಯಾವಶ್ಯಕ. ಅಷ್ಟೇ ಅಲ್ಲ, ಕೋಶ ಅಥವಾ ನಿಘಂಟುಗಳ ರಚನೆಗೆ, ಅವುಗಳ ಮೂಲಘಟಕಗಳಾದ ಶಬ್ದಗಳ ಅರ್ಥನಿರ್ಧಾರಕ್ಕೆ ಶಾಸ್ತ್ರೀಯವಾಗಿ ಸಂಪಾದಿಸಿದ ಸಾಹಿತ್ಯಕೃತಿಗಳು ಅನಿವಾರ್ಯವಾಗುತ್ತವೆ. ಸಾಂಸ್ಕೃತಿಕ ಮತ್ತು ಐತಿಹಾಸಿಕ ಪುನರ್ರಚನೆಗೆ ಅಗತ್ಯವಾಗಿ ಬೇಕಾಗಿರುವ ಅನೇಕ ಗ್ರಂಥಗಳು ಇಂದಿಗೂ ಅನುಪಲಬ್ಧವಾಗಿವೆ. ಶಾಸನಗಳಲ್ಲಿ, ಅನ್ಯಕವಿಗಳ ಕೃತಿಗಳಲ್ಲಿ

ಉಕ್ತವಾಗಿರುವುದರಿಂದ ಮಾತ್ರ ಹಲವು ಕವಿಗಳ ಮತ್ತು ಗ್ರಂಥಗಳ ಹೆಸರುಗಳು ತಿಳಿದುಬರುತ್ತವೆ. 'ಕಾವ್ಯ ಪ್ರಯೋಗ ಪರಿಣತಮತಿ' ಗಳಾಗಿದ್ದ ಕನ್ನಡ ಜನತೆಯ ಬಳಿ ಒಂದು ಕಾಲದಲ್ಲಿ ಇವೆಲ್ಲ ಲಭ್ಯವಾಗಿದ್ದಿರಬೇಕು. ನಾಡಿನ ಹಲವೆಡೆಗಳಲ್ಲಿ ಓಲೆಗರಿಯ ಸಾಹಿತ್ಯ ಅನೇಕ ಶತಮಾನಗಳವರೆಗೆ ತನ್ನ ವೈಭವವನ್ನು ಮೆರೆದಿತ್ತು. ಕಾವ್ಯ ಪಾರಾಯಣ ಸಾಂಸ್ಕೃತಿಕ ಜೀವನದ ಅಂಗವಾಗಿ ಪರಿಣಮಿಸಿತ್ತು. ಕಾಲಕ್ರಮದಲ್ಲಿ ದೇಶ ಕಾಲ ಪರಿಸರಗಳ ಪ್ರಭಾವದಿಂದ, ಜನತೆಯ ಅಜ್ಞಾನ, ಅಶ್ರದ್ಧೆ ಮತ್ತು ಔದಾಸೀನ್ಯಗಳ ಫಲವಾಗಿ ಅವು ಮೂಲೆಗುಂಪಾಗುತ್ತ ಬಂದು ಕೀಟಗಳಿಗೆ ಆಹಾರವಾಗತೊಡಗಿದವು. ಅವುಗಳನ್ನು ಸಂರಕ್ಷಿಸಲಾರದೆ ನದಿಯ ಪಾಲೋ, ಬೆಂಕಿಯ ಪಾಲೋ ಮಾಡುತ್ತಿದ್ದ ಉದಾಹರಣೆಗಳು ಅಸಂಖ್ಯವಾಗಿವೆ. ಮತ್ತೆ ಕೆಲವೆಡೆಗಳಲ್ಲಿ ನವರಾತ್ರಿಯಂದು ಬೆಳಕುಕಂಡು, ಪೂಜಾರ್ಹವಾಗಿ ಹಾಲುಂಡು ಮತ್ತೆ ಕತ್ತಲ ಕೋಣೆಯ ಮೂಲೆ ಸೇರಬೇಕಾದ ದುಃಸ್ಥಿತಿ ಒದಗಿ ಹಲವಾರು ಅಮೂಲ್ಯ ಪ್ರತಿಗಳು ತ್ರುಟಿತವಾಗಿ ಹೋಗಿವೆ. ಇಂಥ ಮೌಢ್ಯವನ್ನು ದೂರಮಾಡಿ, ಹಸ್ತಪ್ರತಿಗಳನ್ನು ಹೊರಗೆಳೆದು, ಅವುಗಳನ್ನು ಕೊಂಡು ಇಲ್ಲವೆ ಎರವಲಾಗಿ ಪಡೆದು ಪರಿಷ್ಕರಿಸಿ, ಸಂಪಾದಿಸುವ ಹೊಣೆಯನ್ನು ಹೊತ್ತಿದೆ ಈ ಸಂಸ್ಥೆಯ ಸಂಪಾದನ ವಿಭಾಗ.

ಅನುಪಲಬ್ಧವಾಗಿರುವ ಸಾಹಿತ್ಯರಾಶಿಯನ್ನು ಹೊರತರಲು, ಉಪಲಬ್ಧ ಸಾಹಿತ್ಯಕ್ಕೆ ಪರಿಷ್ಕಾರನೀಡಲು ಹಸ್ತಪ್ರತಿಗಳ ಸಂಗ್ರಹಕಾರ್ಯ ಸತತವಾಗಿ ನಡೆಯಬೇಕಾಗಿದೆ. ಸಾಹಿತ್ಯಿಕ ಚಟುವಟಿಕೆಯ ಕೇಂದ್ರಗಳಾಗಿದ್ದ ಎಡೆಗಳಲ್ಲಿ, ಕವಿಗಳ ಕೀರ್ತಿ ಹರಡಿದ್ದ ಪ್ರದೇಶಗಳಲ್ಲಿ, ಜ್ಞಾನಗಂಗೆಯನ್ನು ಮನೆಮನೆಯ ಬಾಗಿಲಿಗೆ ಕೊಂಡೊಯ್ದ ಶಿವಶರಣರು ಮತ್ತು ದಾಸರುಗಳು ಸಂಚರಿಸುತ್ತಿದ್ದ ಸ್ಥಳಗಳಲ್ಲಿ ಅವರ ನೆನಪಿಗಾಗಿ ಮಠಗಳು, ಸ್ಮಾರಕಗಳು ನಿರ್ಮಿತವಾಗಿರುವ ಕಡೆಗಳಲ್ಲಿ, ಅನುಯಾಯಿಗಳ ಮತ್ತು ಭಕ್ತರ ಮನೆಗಳಲ್ಲಿ, ಸಾಹಿತ್ಯೋಪಾಸಕರ ಬಳಿಯಲ್ಲಿ ಹೇಗೋ ಎಂತೋ ಸಂಗ್ರಹಿತವಾಗಿರುವ ಹಸ್ತಪ್ರತಿಗಳನ್ನು ಸಂಗ್ರಹಿಸಿ ರಕ್ಷಿಸಬೇಕಾಗಿದೆ. ಈ ಸಂಸ್ಥೆಯ ಹಸ್ತಪತ್ರಿಯ ಭಂಡಾರವನ್ನು ಈ ದೃಷ್ಟಿಯಿಂದ ಬೆಳೆಸಿಕೊಂಡು ಬರುವತ್ತ ಆದ್ಯಗಮನ ಕೊಡಲಾಗಿದೆ.

ಸಂಗ್ರಹಿಸಿದ ಪ್ರತಿಗಳನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡು ಬರುವುದೂ ಅತ್ಯಂತ ಮುಖ್ಯವಾದ ಹೊಣೆ. ಕೀಟಗಳ ಹಾವಳಿಗೆ ಸಿಕ್ಕಿ ಪ್ರತಿಗಳು ಶಿಥಿಲವಾಗದಂತೆ ನೋಡಿಕೊಳ್ಳುವ ದೃಷ್ಟಿಯಿಂದ ಸಾಧ್ಯವಾದಷ್ಟು ಸಲ ಅವುಗಳನ್ನು ಸ್ವಚ್ಛಗೊಳಿಸುವುದು, ಕೀಟ ನಿರೋಧಕ ತೈಲ ಲೇಪನ ಮಾಡುವುದು, ವಾಯುನಿಯಂತ್ರಿತ ಕೊಠಡಿಯಲ್ಲಿಟ್ಟು ಪ್ರಧೂಮನ ಉಪಚಾರ ನೀಡುವುದು (Fumigation Treatment), ತೀರ ತ್ರುಟಿತವಾದ ಹಸ್ತಪ್ರತಿಗಳನ್ನು ಮೈಕ್ರೊಫಿಲಂಗಳಲ್ಲಿ ಶಾಶ್ವತಗೊಳಿಸುವುದು ಅಗತ್ಯವಾಗುತ್ತದೆ. ಈ ರೀತಿ ಹಸ್ತಪ್ರತಿಗಳನ್ನು ಕಾಪಾಡಿಕೊಂಡು ಬರುವುದು ವ್ಯಕ್ತಿಗಳಿಗೆ ಶ್ರಮಸಾಧ್ಯವಾದ ಹಾಗೂ ಆರ್ಥಿಕವಾಗಿ ಸುಲಭಸಾಧ್ಯವಲ್ಲದ

ಕಾರ್ಯ. ಕನ್ನಡ ಅಧ್ಯಯನ ಸಂಸ್ಥೆ ಹಸ್ತಪ್ರತಿಗಳ ಸಂರಕ್ಷಣೆಗೆ ಅಗತ್ಯವಾದ ಮೇಲ್ಕಂಡ ಎಲ್ಲ ಕ್ರಮಗಳನ್ನೂ ಕೈಗೊಂಡಿದೆ.

ಗ್ರಂಥಸಂಪಾದನೆ ಶ್ರಮಸಾಧ್ಯವಾದ ಕಾರ್ಯ. ವಿದ್ವತ್ತು, ವ್ಯುತ್ಪತ್ತಿ, ಪ್ರತಿಭೆ ಮೇಳವಿಸಿರುವ ಸಮರ್ಥರು ಕೈಗೊಳ್ಳಬೇಕಾದ ಕಾರ್ಯ. ಈ ಕಾರ್ಯ ವಲ್ಲಿ ಹಲವಾರು ಭಾಷೆಗಳ, ಶಾಸ್ತ್ರಗಳ ಪರಿಚಯವೂ ಅಗತ್ಯವಾಗುತ್ತದೆ. ಹಸ್ತಪ್ರತಿ ಗಳೂ ಕಾಲ ದೇಶ ಮತ್ತು ಪರಿಸರಗಳ ಪ್ರಭಾವಕ್ಕೆ ಒಳಗಾಗಿರುತ್ತವೆ. ಸಾಹಿತ್ಯಾ ಭ್ಯಾಸಿಗಳು ಹಸ್ತಪ್ರತಿಗಳ ಮೇಲೆ ಟಿಪ್ಪಣಿಗಳನ್ನು, ತಮ್ಮ ಅನಿಸಿಕೆಗಳನ್ನು ಬರೆದು ಬಿಡುತ್ತಿದ್ದುದೂ ಉಂಟು. ಕಾಲಕ್ರಮದಲ್ಲಿ ಅವು ಮೂಲದ ಅಂಗವೋ ಎಂಬಂತೆ ಸೇರಿಬಿಡುತ್ತಿದ್ದುದೂ ಸಹಜವೇ. ಪ್ರತಿಭಾವಂತರೂ, ವ್ಯುತ್ಪನ್ನಮತಿಗಳೂ, ಕಾವ್ಯರಚನಾಸಮರ್ಥರೂ ಮೂಲವನ್ನು ಕೆಲವು ವೇಳೆ ಉತ್ತಮಪಡಿಸಿ, ಕೆಲವು ವೇಳೆ ಕೆಡಿಸಿ, ಅರ್ಥಸೌಲಭ್ಯಕ್ಕಾಗಿ ಅರ್ಥವಾಗುವಂತಹ ಪಾಠಾಂತರಗಳನ್ನು ಕಲ್ಪಿಸಿ, ಅಲ್ಲಲ್ಲಿ ಮೂಲಧಾಟಿಗೆ ಭಂಗಬರದಂತೆ ತಮ್ಮ ಸ್ವಂತ ರಚನೆಗಳನ್ನು ಪ್ರಕ್ಷೇಪಿಸಿ ಬಿಟ್ಟಿರುವುದೂ ಉಂಟು. ಇಂತಹ ಪ್ರಕ್ಷೇಪಗಳು ಕೆಲವೊಮ್ಮೆ ಸನ್ನಿವೇಶದ ಪ್ರಭಾವ ವನ್ನು ಹೆಚ್ಚಿಸಿರುವುದೂ ಉಂಟು; (ಒಂದು ವೇಳೆ ವಾಸ್ತವವಾಗಿ ಹಾಗಾಗದಿದ್ದರೂ ಪ್ರಕ್ಷೇಪಕರು ಹಾಗೆ ಭಾವಿಸಿಕೊಂಡದ್ದೂ ತಮ್ಮ ಚಪಲವನ್ನು ತೀರಿಸಿಕೊಂಡದ್ದೂ ಸತ್ಯ!) ಒಟ್ಟಿನಲ್ಲಿ ಅನಾವಶ್ಯಕ ವಿಸ್ತರಣಕ್ಕೆ ಕಾರಣವಾಗಿ ಕೃತಿಯ ಗಾತ್ರದ ಹೆಚ್ಚಳಕ್ಕೆ ಮಾತ್ರ ನೆರವಾಗಿರುವುದೂ ಉಂಟು. ಲಿಪಿಕಾರರೂ ಅನೇಕ ವೇಳೆ ತಮಗೆ ಸರಿತೋರಿದಂತೆ ಅಥವಾ ಸೂಕ್ತಕಂಡಂತೆ ಶಬ್ದರೂಪಗಳನ್ನು ಬದಲಾಯಿಸಿ ಅಥವಾ ಬೇರೆ ಶಬ್ದವನ್ನು ತಂದು ಗಿಡಿದು, ತಿಳಿದೋ ತಿಳಿಯದೆಯೋ ಮೂಲಕ್ಕೆ ತಿದ್ದುಪಡಿಗಳನ್ನು ತಂದುಬಿಡುತ್ತಿದ್ದುದುಂಟು. ಇಂತಹ ಅನೇಕ ಕಾರಣಗಳಿಂದಾಗಿ ಒಂದು ಕೃತಿಯ ಹಲವು ಪ್ರತಿಗಳಲ್ಲಿ ಪಾಠವ್ಯತ್ಯಾಸಗಳು ಕಂಡುಬರುತ್ತವೆ. ಒಂದೊಂದೇ ಪ್ರತಿಗಳು ದೊರಕಿದ್ದು ಅವೂ ತ್ರುಟಿತವಾಗಿರುವಂತಹ ಸಂದರ್ಭಗಳಲ್ಲಿ ಮೂಲಪ್ರತಿಯ ಪಾಠವನ್ನು ಪುನರ್ರಚಿಸಬೇಕಾಗುತ್ತದೆ. ಇದು ನಿಜಕ್ಕೂ ಪ್ರತಿಭೆಯ ಕೆಲಸವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸಂಪಾದಕನ ಪರೀಕ್ಷೆಯೇ ನಡೆದು ಹೋಗುತ್ತದೆ. ವಿದ್ವತ್ತಿನ ಹಿನ್ನೆಲೆಯಲ್ಲಿ ತಾಳ್ಮೆ, ಶ್ರಮಸಹಿಷ್ಣುತೆ ಇಲ್ಲವಾದರೆ ಈ ಕ್ಷೇತ್ರದಲ್ಲಿ ಯಶಸ್ಸು ಪಡೆಯುವುದು ಸಾಧ್ಯವಾಗುವುದಿಲ್ಲ. ಗ್ರಂಥಸಂಪಾದನೆ ಇಂದು ವಿಶಿಷ್ಟಶಾಸ್ತ್ರವಾಗಿಯೇ ಬೆಳೆದಿದೆ.

'ಸಂಪಾದನ ವಿಭಾಗ' ಹಲವಾರು ಸಾಹಿತ್ಯ ಮತ್ತು ಶಾಸ್ತ್ರಗ್ರಂಥಗಳನ್ನು ವೈಜ್ಞಾನಿಕವಾಗಿ ಸಂಪಾದಿಸಿ, ಪಾಠಗಳನ್ನು ನಿರ್ಧರಿಸಿ, ಪಾಠಾಂತರಗಳನ್ನು ಒದಗಿಸಿ, ವಿಸ್ತಾರವಾದ ಪೀಠಿಕೆಗಳನ್ನು ಬರೆದು, ಕವಿಯ ಕಾಲ, ದೇಶ, ಕೃತಿಗಳ ವಿಚಾರಗಳನ್ನು ಚರ್ಚಿಸಿ, ಅವುಗಳ ಸಾಹಿತ್ಯಿಕ ಮೌಲ್ಯವನ್ನು ಪರಿಶೀಲಿಸಿ, ಅಗತ್ಯ ವಾದಲ್ಲಿ ಟಿಪ್ಪಣಿ ವ್ಯಾಖ್ಯಾನಗಳನ್ನು ಒದಗಿಸಿ ಬೆಳಕಿಗೆ ತರುತ್ತಿದೆ. ಪ್ರಾಚ್ಯವಿದ್ಯಾ

ಸಂಶೋಧನಾಲಯದ ಅಂಗವಾಗಿದ್ದಾಗ ಹೊರತಂದಿರುವ ೪೦ ಗ್ರಂಥಗಳ ಜೊತೆಗೆ ಅಧ್ಯಯನ ಸಂಸ್ಥೆಯಲ್ಲಿ ಸೇರ್ಪಡೆಯಾದ ಮೇಲೆ 'ಪ್ರಾಚ್ಯಕಾವ್ಯ ಮಾಲೆ'ಯ ಹೆಸರಿನಲ್ಲಿ ಈಗಾಗಲೇ ೭೧ ಗ್ರಂಥಗಳನ್ನು ಹೊರತರಲಾಗಿದೆ. ಬೆಳಕುಕಾಣಲು ಹಾತೊರೆಯುತ್ತಿರುವ ಗ್ರಂಥಗಳನ್ನು ವ್ಯವಸ್ಥಿತ ರೀತಿಯಲ್ಲಿ ಹೊರತರಲು ಸಂಸ್ಥೆ ಸತತವಾಗಿ ಶ್ರಮಿಸುತ್ತದೆ. ಇದುವರೆಗೂ ಸಂಪಾದನ ವಿಭಾಗದ ಸಂಶೋಧನ ಸಹಾಯಕರು ಸಿದ್ಧಪಡಿಸಿದ ಕೃತಿಗಳನ್ನು ಮಾತ್ರ ಪ್ರಕಟಿಸಲಾಗುತ್ತಿತ್ತು. ಈಗ ಈ ವಿಭಾಗದಲ್ಲಿ ಸಂಗ್ರಹಿತವಾಗಿರುವ ಹಸ್ತಪ್ರತಿಗಳನ್ನು ಉಪಯೋಗಿಸಿಕೊಂಡು ಹೊರಗಿನವರೂ ಸಂಪಾದಿಸಬಹುದಾದ ಗ್ರಂಥಗಳನ್ನು ಪ್ರಕಟಿಸಲು ಯೋಜಿಸಲಾಗಿದೆ. ಇದರಿಂದ ಪ್ರಕಟಣೆಯ ಕೆಲಸ ತ್ವರಿತಗೊಳ್ಳುತ್ತದೆ. ಹಸ್ತಪ್ರತಿಗಳಲ್ಲೇ ಉಳಿದು ಸಾಮಾನ್ಯರ ಕೈಗೆಟುಕದ ಗ್ರಂಥಗಳನ್ನು ಸರ್ವರಸ್ವತ್ತಾಗಿಸುವ ಉದ್ದೇಶವೂ ತೀವ್ರಗೊಳ್ಳುತ್ತದೆ.

ಸಂಪಾದನ ವಿಭಾಗ ಸಂಕಲಿತ ಗ್ರಂಥಗಳನ್ನು ಹೊರತರುವಲ್ಲಿಯೂ ನಮಗೆ ನೆರವಾಗುತ್ತಿದೆ. ಎರಡು ಸಾವಿರ ವರ್ಷಗಳ ಸುದೀರ್ಘ ಪರಂಪರೆಯುಳ್ಳ ಕನ್ನಡ ಸಾಹಿತ್ಯದ ಸಿಂಹಾವಲೋಕನ ಮಾಡಿಸುವಂತಹ ಪ್ರಾತಿನಿಧಿಕ ಸಂಕಲನ ಗ್ರಂಥಗಳನ್ನು ಸಿದ್ಧಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಲಾಗುತ್ತಿರುವ ಈ ಗ್ರಂಥಗಳು ಆಯಾ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಕನ್ನಡ ಸಾಹಿತ್ಯದ ಪರಿಚಯವನ್ನು ಬಯಸುವವರಿಗೂ ಉಪಯುಕ್ತವಾಗುತ್ತವೆ. ಇಂಥ ಸಂಕಲನಗಳನ್ನು ಸಿದ್ಧಪಡಿಸುವುದೂ ಸಂಪಾದನ ವಿಭಾಗದ ಒಂದು ಪ್ರಮುಖ ಹೊಣೆಯಾಗಿದೆ.

ಅಧ್ಯಯನ ಸಂಸ್ಥೆಯ ಹಸ್ತಪ್ರತಿಗಳ ಭಂಡಾರದಲ್ಲಿ ಸಂಗ್ರಹಗೊಂಡಿರುವ ಹಾಗೂ ಸಂಪಾದನ ವಿಭಾಗದ ಸಹೋದ್ಯೋಗಿಗಳು ಆಗಿಂದಾಗ್ಗೆ ನಡೆಸಿದ ಪರಿವೀಕ್ಷಣಾಕಾರ್ಯಗಳ ಅಂಗವಾಗಿ ಈವರೆಗೆ ದೊರಕಿರುವ ಹೊಸ ಹಸ್ತಪ್ರತಿಗಳ ವಿವರಣಾತ್ಮಕ ಸೂಚಿಯನ್ನು ವ್ಯವಸ್ಥಿತ ರೂಪದಲ್ಲಿ ಹೊರತರುವ ಯೋಜನೆಯ ಅಂಗವಾಗಿ ಈಗ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯ ಒಂಬತ್ತನೆಯ ಸಂಪುಟ ಪ್ರಕಟವಾಗುತ್ತಿದೆ. ಈಗ ಎಲ್ಲ ಸಂಪುಟಗಳೂ ಪ್ರಕಟವಾಗಿ ಕನ್ನಡ ಸಾಹಿತ್ಯದ ಸಮೃದ್ಧಿ ನಿಚ್ಚಳವಾಗಿ ಗೋಚರಿಸುತ್ತಿದೆ. ವಿದ್ವಾಂಸರಿಗೆ, ಸಾಹಿತ್ಯಾಸಕ್ತರಿಗೆ ಉಪಯುಕ್ತವಾಗುವಂಥ ಈ ಸಂಪುಟಗಳ ಸಿದ್ಧತೆಯಲ್ಲಿ ನೆರವಾಗಿರುವ ವಿಭಾಗ ಸಂಪಾದಕರಾದ ಶ್ರೀ ಎನ್. ಬಸವಾರಾಧ್ಯ ಅವರಿಗೂ, ಸಿದ್ಧಪಡಿಸಿದ ಮಾಹಿತಿಯನ್ನು ಸಂಯೋಜಿಸಿದ ಶ್ರೀ ಬಿ. ಎಸ್ ಸಣ್ಣಯ್ಯನವರಿಗೂ, ಮಾಹಿತಿಯನ್ನು ಸಂಗ್ರಹಿಸಿದ ಸಂಶೋಧನ ಸಹಾಯಕರುಗಳಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೬

ಹಾ. ಮಾ. ನಾಯಕ
ಪ್ರಧಾನ ಸಂಪಾದಕ

ವಿಭಾಗ ಸಂಪಾದಕರ ಮಾತು

ಮಾನವನ ಜ್ಞಾನವಿಕಾಸಕ್ಕೆ ಗ್ರಂಥಭಂಡಾರಗಳು ಬಹುಮುಖ್ಯವಾದ ಸಾಧನಗಳಾಗಿವೆ. ಈ ಗ್ರಂಥಭಂಡಾರಗಳು ಮುದ್ರಿತ ಗ್ರಂಥಗಳನ್ನೂ ಅಮುದ್ರಿತ ಗ್ರಂಥಗಳನ್ನೂ ಒಳಗೊಂಡಿರುತ್ತವೆ. ಮುದ್ರಿತ ಗ್ರಂಥಗಳು ವಾಚಕರಿಗೆ ಸುಲಭಗಮ್ಯವಾದುವು. ಅಮುದ್ರಿತ ಗ್ರಂಥಗಳು ಪರಿಶೀಲನೆಗೆ ದುರ್ಲಭವೂ ದುಸ್ತರವೂ ಆದುವು. ಈ ಹಸ್ತಪ್ರತಿಗಳು ಸುಲಭಸಾಧ್ಯವಾಗಬೇಕಾದರೆ ಇವುಗಳ ವರ್ಣನಾತ್ಮಕ ಸೂಚಿ ಅತ್ಯಂತ ಅವಶ್ಯವಾಗುತ್ತದೆ. ಇಂಗ್ಲಿಷಿನ (Catalogue) ಸೂಚಿ ಮತ್ತು (Descriptive Catalogue) ವರ್ಣನಾತ್ಮಕ ಸೂಚಿ ಇವು ಒಂದಕ್ಕಿಂತ ಮತ್ತೊಂದು ವ್ಯಾಪಕಾರ್ಥವುಳ್ಳ ಶಬ್ದಗಳು. ಕೇವಲ (Catalogue) ಸೂಚಿಗಿಂತ (Descriptive Catalogue) ವರ್ಣನಾತ್ಮಕ ಸೂಚಿ ಬಹು ಉಪಯುಕ್ತವಾದುದು ಎಂಬುದು ಸರ್ವವಿದಿತ. ಯಾವುದೇ ಗ್ರಂಥಭಂಡಾರದಲ್ಲಿನ ಎಲ್ಲ ಕೃತಿಗಳನ್ನೂ ಸಮಗ್ರವಾಗಿ ಪರಿಶೀಲಿಸುವುದು ಸಾಧ್ಯವಾಗದ ಕೆಲಸ. ಆದರೆ ಈ ವರ್ಣನಾತ್ಮಕ ಸೂಚಿ (Descriptive Catalogue) ಯಿಂದ ಎಲ್ಲ ಕೃತಿಗಳ ಒಂದು ಸಂಕ್ಷಿಪ್ತ ಮಾಹಿತಿ ಪಡೆದುಕೊಳ್ಳುವುದು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಗ್ರಂಥಭಂಡಾರಗಳಲ್ಲಿನ ಹಸ್ತಪ್ರತಿಗಳ ಕೃತಿಗಳ ವರ್ಣನಾತ್ಮಕ ಸೂಚಿ ಅವಶ್ಯವಷ್ಟೇ ಅಲ್ಲ ಅನಿವಾರ್ಯವೂ ಹೌದು. ಈ ವರ್ಣನಾತ್ಮಕ ಸೂಚಿಯಿಂದ ಯಾವುದೇ ಒಂದು ಕೃತಿಯ ಸಂಕ್ಷಿಪ್ತ ಸಮಗ್ರ ಮಾಹಿತಿ ದೊರಕಿದಂತಾಗುತ್ತದೆ. ವಿದ್ವಾಂಸರಿಗೂ ಸಂಶೋಧಕರಿಗೂ ಈ ಸೂಚಿಗಳು ಕೈಪಿಡಿಗಳಂತಿರುತ್ತವೆ. ಇವುಗಳಿಂದ ಯಾವ ಯಾವ ಗ್ರಂಥಭಂಡಾರದಲ್ಲಿ ಯಾವ ಯಾವ ಕೃತಿಗಳು ಉಪಲಬ್ಧವಿವೆ, ಅವುಗಳ ಸ್ವರೂಪ ಸ್ಥಿತಿಗತಿ ಎಂತಹುದು ಎಂಬುದನ್ನು ಅರಿತುಕೊಳ್ಳಬಹುದಾಗಿದೆ. ಒಟ್ಟಿನಲ್ಲಿ ಈ ವರ್ಣನಾತ್ಮಕ ಸೂಚಿಗಳು ಮೂಲಕೃತಿಗಳ ಒಂದು ಸಂಕ್ಷಿಪ್ತ ಸಮಗ್ರ ನೋಟವನ್ನು ನೀಡಬಲ್ಲವು. ಈ ಸೂಚಿಗಳ ಅವಲೋಕನದಿಂದ ಮೂಲಕೃತಿಗಳ ಅವಲೋಕನವನ್ನೇ ಮಾಡಿದಂತಾಗುತ್ತದೆ. ಈ ದೃಷ್ಟಿಯಿಂದ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯ ಪ್ರಕಟಣೆ ಅತ್ಯಂತ ಮಹತ್ವಪೂರಿತವಾದುದು. ಗ್ರಂಥಭಂಡಾರವನ್ನು ಸೂರೆಹೊಡೆದು ತೋರುವಂತಹ ಕಾರ್ಯ ಇದು. ಇಂತಹ ಕಾರ್ಯವನ್ನು ಕನ್ನಡ ಅಧ್ಯಯನ ಸಂಸ್ಥೆ ಕೈಕೊಂಡಿದೆ.

ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯ ನಾಲ್ಕು ಸಂಪುಟಗಳನ್ನು ಪ್ರಾಚ್ಯ ವಿದ್ಯಾಸಂಶೋಧನಾಲಯದಿಂದ ಈಗಾಗಲೇ ಪ್ರಕಟಿಸಲಾಗಿದೆ. ಉಳಿದ ಐದು ಸಂಪುಟಗಳನ್ನು ಈಗ ಹೊರತರಲಾಗುತ್ತಿದೆ. ಈ ಸಂಪುಟಗಳಲ್ಲಿ ಅನುಸರಿಸಿರುವ ವಿಧಿವಿಧಾನಗಳನ್ನು ಸಂಯೋಜಕ ಸಂಪಾದಕರ ಅರಿಕೆಯಲ್ಲಿ ವಿವರಿಸಲಾಗಿದೆ.

ಈ ಐದು ಸಂಪುಟಗಳಲ್ಲಿಯೂ ಹಿಂದಿನ ನಾಲ್ಕು ಸಂಪುಟಗಳ ಕ್ರಮವನ್ನೇ ಅನುಸರಿಸಿದೆ. ಆದರೆ ಹಸ್ತಪ್ರತಿಗಳ ವಿವರಣೆಗಳನ್ನು ಬರೆದವರ ಹೆಸರಿನ ಆದ್ಯಕ್ಷರಗಳನ್ನು ಆಯಾ ನಮೂದಿನ ಕೆಳಗೆ ಕೊಡಲಾಗಿದೆ.

ಎನ್‌ಬಿಎ–ಎನ್. ಬಸವಾರಾಧ್ಯ	ಜಿಎಸ್‌ಎಸ್–ಜಿ. ಎಸ್. ಸಣ್ಣಯ್ಯ
ಎಸ್‌ಬಿ–ಎಸ್. ಬಸಪ್ಪ	ಎಸ್‌ಎನ್‌ಕೆ–ಎಸ್. ಎನ್. ಕೃಷ್ಣಜೋಯಿಸ್
ಎಂಸಿಪಿ–ಎಂ. ಸಿ. ಪದ್ಮನಾಭಶರ್ಮ	ಕೆಆರ್‌ಎಸ್–ಕೆ. ಆರ್. ಶೇಷಗಿರಿ
ಜಜಿಎಂ–ಜಿ.ಜಿ. ಮಂಜುನಾಥನ್	ಶ್ರೀನಂತ–ಸಂ. ತಪಸ್ವೀಕುಮಾರ್
ಎಂಎನ್‌ಎಲ್–ಎಂ. ಎನ್. ಲೀಲಾವತಿ	ಹಕರಾ–ಹ. ಕ. ರಾಜೇಗೌಡ
ವೈಸಿಬಿ–ವೈ. ಸಿ. ಭಾನುಮತಿ	ಎಂಪಿಎಂ–ಎಂ. ಪಿ. ಮಂಜಪ್ಪಶೆಟ್ಟಿ

ಈಗ ಪ್ರಕಟವಾಗುತ್ತಿರುವುದು ಒಂಬತ್ತನೆಯ ಸಂಪುಟ. ಇದರಲ್ಲಿ ಸಕಾರದಿಂದ ಹಕಾರದವರೆಗೆ ಒಟ್ಟು ೪೧೬ ಕೃತಿಗಳ ವಿವರಣೆಯನ್ನು ಕೊಟ್ಟಿದೆ. ಅಲ್ಲದೆ ಈಗ ಪ್ರಕಟವಾಗಿರುವ ಎಲ್ಲ ಒಂಬತ್ತು ಸಂಪುಟಗಳಲ್ಲಿಯ ಕೃತಿಸೂಚಿ ಮತ್ತು ಕರ್ತೃಸೂಚಿಗಳನ್ನೂ, ೫–೯ರ ವರೆಗಿನ ಐದು ಸಂಪುಟಗಳಲ್ಲಿನ ಕೃತಿಗಳಲ್ಲಿ ಸೇರಿರುವ ಇತರ ಭಾಷಾಕೃತಿಗಳ ಹೆಸರುಗಳನ್ನೂ ಪಟ್ಟಿಮಾಡಿ ಕೊಡಲಾಗಿದೆ. ವಿದ್ವಾಂಸರಿಗೂ ಸಂಶೋಧಕರಿಗೂ ಅತ್ಯಂತ ಉಪಯುಕ್ತವಾದ ಈ ಆಕರಗ್ರಂಥವನ್ನು ಜನತೆ ಆದರದಿಂದ ಸ್ವಾಗತಿಸುವರೆಂದು ನಂಬಲಾಗಿದೆ.

ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–೬

ಎನ್. ಬಸವಾರಾಧ್ಯ
ವಿಭಾಗ ಸಂಪಾದಕ

ಅರಿಕೆ

ಮುದ್ರಣ ಸೌಕರ್ಯವಿಲ್ಲದಿದ್ದ ಕಾಲದಲ್ಲಿ ಪ್ರಾಚೀನ ಗ್ರಂಥಗಳು ಓಲೆಗರಿಗಳಲ್ಲಿ ಕ್ರಮೇಣ ಕಡತ, ಕಾಗದಗಳಲ್ಲಿ ಕೈಬರಹದ ಮೂಲಕ ಒದಗಿಬಂದಿವೆ. ಇಂತಹ ಹಸ್ತಪ್ರತಿಗಳು ನಾಡಿನ ಮೂಲೆ ಮೂಲೆಗಳಲ್ಲಿ ಹರಡಿವೆ. ಈ ಹಸ್ತಪ್ರತಿಗಳನ್ನು ಕರ್ನಾಟಕ ಹಾಗು ಇತರೆಡೆಗಳಿಂದ ಸಂಗ್ರಹಿಸಿ ಸಂಸ್ಥೆಯ ಹಸ್ತಪ್ರತಿ ಭಂಡಾರಕ್ಕೆ ಸೇರಿಸಲಾಗಿದೆ. ಕೆಲವು ಗ್ರಂಥಗಳನ್ನು ಮೈಕ್ರೊಫಿಲಂ ರೂಪದಲ್ಲಿಯೂ ಸಂಗ್ರಹಿಸಲಾಗಿದೆ. ಮೈಕ್ರೊಫಿಲಂಗಳ ಸೂಚಿಯನ್ನೇ ಪ್ರತ್ಯೇಕವಾಗಿ ಹೊರತರಬೇಕೆಂಬ ಉದ್ದೇಶವಿರುವುದರಿಂದ ಅವುಗಳನ್ನು ಇಲ್ಲಿ ಸೇರಿಸಿಲ್ಲ.

೧೯೫೮ರವರೆಗೆ ಸಂಗ್ರಹಿಸಿದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯ ನಾಲ್ಕು ಸಂಪುಟಗಳು ೧೯೬೨-೬೩ರಲ್ಲಿ ಪ್ರಾಚ್ಯವಿದ್ಯಾಸಂಶೋಧನಾಲಯ ಮಾಲೆಯಲ್ಲಿ ಹೊರಬಂದಿವೆ. ಅಲ್ಲಿಂದೀಚೆಗೆ ಮಾರ್ಚ್ ೧೯೭೮ರವರೆಗೆ ಸಂಗ್ರಹಿತವಾದ ಹಸ್ತಪ್ರತಿಗಳ ಸೂಚಿಗಳು ಈಗ ಐದು ಸಂಪುಟಗಳಲ್ಲಿ ಹೊರಬರುತ್ತಿವೆ.

ಈ ಸೂಚೀಪಟ್ಟಿಕೆಯಲ್ಲಿ ಮೊದಲು ಕ್ರಮಾಂಕವನ್ನು ಆಂಗ್ಲಸಂಖ್ಯೆಯಲ್ಲಿ ಕೊಟ್ಟು ಅನಂತರ ಗ್ರಂಥದ ಸಂಖ್ಯೆಯಲ್ಲಿ ಕನ್ನಡ ಅಂಕಿಗಳನ್ನು ಕೊಡಲಾಗಿದೆ. ಈ ಅಂಕಿಗಳ ಹಿಂದೆ 'ಕೆ' ಎಂದಿದ್ದರೆ ಓಲೆಯ ಪ್ರತಿಯೆಂದೂ, 'ಕೆ. ಎ.' ಎಂದಿದ್ದರೆ ದೊಡ್ಡ ಅಳತೆಯ ಕಾಗದದ ಪ್ರತಿಯೆಂದೂ, 'ಕೆ. ಬಿ.' ಎಂದಿದ್ದರೆ ಚಿಕ್ಕ ಅಳತೆಯ ಕಾಗದದ ಪ್ರತಿಯೆಂದೂ ತಿಳಿಯಬೇಕು. ಒಂದೇ ಕಟ್ಟಿನಲ್ಲಿ ಒಂದಕ್ಕಿಂತ ಹೆಚ್ಚು ಗ್ರಂಥಗಳಿದ್ದಾಗ ಆ ಗ್ರಂಥವು ಆ ಕಟ್ಟಿನಲ್ಲಿ ಎಷ್ಟನೆಯದೆಂಬುದನ್ನು ಸೂಚಿಸಲು ಹಸ್ತಪ್ರತಿಸಂಖ್ಯೆಯ ಮುಂದೆ ಒಂದು ಓರೆಗೀಟನ್ನು ಹಾಕಿ ಅದರ ಮುಂದೆ ಗ್ರಂಥದ ಸಂಖ್ಯೆಯನ್ನು ಕೊಡಲಾಗಿದೆ. ಅನಂತರ ಗ್ರಂಥದ ಹೆಸರು, ಪ್ರಭೇದಗಳನ್ನು ಕೊಟ್ಟಿದೆ. ಎರಡನೆಯ ಸಾಲಿನಲ್ಲಿ ಹಸ್ತಪ್ರತಿಯ ಅಳತೆ, ಗ್ರಂಥದ ಕರ್ತೃ, ಆತನ ಕಾಲಗಳನ್ನು ಕೊಡಲಾಗಿದೆ. ಇವು ತಿಳಿಯದಿದ್ದಾಗ ಪ್ರಶ್ನಾರ್ಥಕ ಚಿಹ್ನೆಗಳನ್ನು ಸೂಚಿಸಲಾಗಿದೆ. ಕವಿ ಮತ್ತು ಕಾಲವಿಚಾರಗಳಿಗೆ ಬಹುಮಟ್ಟಿಗೆ ಕರ್ನಾಟಕ ಕವಿಚರಿತೆಯನ್ನು ಅವಲಂಬಿಸಿದೆ. ಮೂರನೆಯ ಸಾಲಿನಲ್ಲಿ ಪತ್ರಸಂಖ್ಯೆಗಳನ್ನೂ, ಪ್ರತಿಪತ್ರದ ಒಮ್ಮುಖದಲ್ಲಿ ಎಷ್ಟು ಪಂಕ್ತಿಗಳಿವೆಯೆಂಬುದನ್ನೂ, ಪ್ರತಿ ಪಂಕ್ತಿಯಲ್ಲಿ ಎಷ್ಟು ಅಕ್ಷರಗಳಿವೆಯೆಂಬುದನ್ನೂ ಕೊಟ್ಟಿದೆ. ಪತ್ರ ಎಂದಿದ್ದಾಗ ಎರಡು ಕಡೆಯೂ ಸೇರಿ ಒಂದು ಪತ್ರವೆಂತಲೂ, ಪುಟ ಎಂದಿದ್ದರೆ ಪ್ರತಿಪಕ್ಕಕ್ಕೂ ಪುಟಸಂಖ್ಯೆ ಇದೆಯೆಂದೂ ತಿಳಿಯಬೇಕು. ಪತ್ರದ ಒಂದೇ ಕಡೆ ಬರವಣಿಗೆಯಿದ್ದರೆ ಅದನ್ನು ವಿಶೇಷದಲ್ಲಿ ಸೂಚಿಸಲಾಗಿದೆ.

ಗ್ರಂಥದ ‘ಆದಿ’ ಮತ್ತು ‘ಅಂತ್ಯ’ ಭಾಗಗಳಿಂದ ಉದ್ಧರಿಸುವಾಗ ಹಸ್ತಪ್ರತಿಗಳಲ್ಲಿ ಇದ್ದಂತೆಯೇ ಯಾವ ತಿದ್ದುಪಡಿಯೂ ಇಲ್ಲದೆ ಕೊಡಲಾಗಿದೆ. ಆದರೆ ಕೆಲವೆಡೆ ಪದ್ಯಗಳನ್ನು ಕೊಡುವಾಗ ಛಂದಸ್ಸಿಗನುಸಾರವಾಗಿ ವಿಭಾಗಿಸಲಾಗಿದೆ. ಮೂಲಪ್ರತಿಯಲ್ಲಿ ಇದ್ದಂತೆಯೇ ಕೊಡುವುದರಿಂದ ಹಸ್ತಪ್ರತಿಗಳ ಸ್ವರೂಪ ವ್ಯಕ್ತವಾಗುತ್ತದೆ. ಈ ಉದ್ಧೃತ ಭಾಗಗಳಲ್ಲಿ ಕೆಲವು ಕಡೆ (........) ಈ ಚಿಹ್ನೆಯನ್ನು ಹಾಕಿರುವಲ್ಲಿ ಗ್ರಂಥಲೋಪವೆಂದೂ (× × ×) ಈ ಗುರುತಿರುವೆಡೆಯಲ್ಲಿ ಗ್ರಂಥಭಾಗವಿದ್ದರೂ ಬಿಟ್ಟು ಮುಂದಿನ ಭಾಗ ಕೊಟ್ಟಿದೆಯೆಂದೂ ತಿಳಿಯಬೇಕು. ‘ವಿಷಯ’ ವಿಭಾಗದಲ್ಲಿ ಗ್ರಂಥದ ಪ್ರತಿಪಾದ್ಯ ವಿಷಯವನ್ನು ಒಂದೊಂದು ವಾಕ್ಯದಲ್ಲಿ ಸೂಚಿಸಲಾಗಿದೆ. ‘ವಿಶೇಷ’ ವಿಭಾಗದಲ್ಲಿ ಗ್ರಂಥದ ಲಿಪಿ, ಸ್ಥಿತಿ, ಶಕಟರೇಫದ ಬಳಕೆ, ಅಸಮಗ್ರ, ಲುಪ್ತಪತ್ರಗಳ ವಿವರಣೆ, ಅದೇ ಕಟ್ಟಿನಲ್ಲಿರುವ ಇತರ ಗ್ರಂಥಗಳ ವಿವರಗಳನ್ನು ಸಂಗ್ರಹವಾಗಿ ಸೂಚಿಸಿದೆ. ಸಂಸ್ಕೃತ ಮತ್ತು ಇತರ ಭಾಷೆಯ ಗ್ರಂಥಗಳನ್ನು ಪ್ರತ್ಯೇಕವಾಗಿ ಪಟ್ಟಿಮಾಡಿ ಕೊಡುವುದರ ಜೊತೆಗೆ ಈಗಾಗಲೆ ಪ್ರಕಟವಾಗಿರುವ ನಾಲ್ಕು ಸಂಪುಟಗಳ ಮತ್ತು ಈಗ ಪ್ರಕಟವಾಗುತ್ತಿರುವ ಐದು ಸಂಪುಟಗಳ ಕೃತಿಗಳ ಮತ್ತು ಕರ್ತೃಗಳ ಅಕಾರಾದಿ ಪಟ್ಟಿಯನ್ನು ಈ ಸಂಪುಟದಲ್ಲಿ ಕೊಡಲಾಗಿದೆ.

ಈ ಕಾರ್ಯದಲ್ಲಿ ಸಹಕರಿಸಿದ ವಿಭಾಗದ ಎಲ್ಲ ಸಹೋದ್ಯೋಗಿಗಳಿಗೆ ವಂದನೆಗಳು.

ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–೬

ಬಿ. ಎಸ್. ಸಣ್ಣಯ್ಯ
ಸಂಯೋಜಕ ಸಂಪಾದಕ

1

ಕೆ. ೧೦೭೮	**ಸಂಕೀರ್ತನೆ ಪುಸ್ತಕ**	ಹಾಡುಗಳು
೬" × ೧.೫"	?	?
೧–೯೮ ಪತ್ರ	೭ ಪಂಕ್ತಿ	೨೨ ಅಕ್ಷರ

ಆದಿ : ಶ್ರೀವೇಲಾಪುರಸೌಮ್ಯಕೃಪಾಯಸಮಃ ಶುಭಮಸ್ತು. ಶ್ರೀಕುಣಿಕಾಲಪಿಮ್ಮೆಶ್ವರನ ಪಾದಾರವಿಂದವೇ ಗತಿ ಶ್ರೀಯುರಾರೋಗ್ಯಶ್ವರ್ಯಮಸ್ತು ಶ್ರೀಚಂದಾಂಕಣೋಪ ನಿರ್ವಿಘ್ನಮಸ್ತು. ಶ್ರೀಶಾರದಾಂಬಾಯ ನಮಹ ನಿರ್ವಿಘ್ನಮಸ್ತು ಸಂಕೀರ್ತನೆಯ ಪುಸ್ತಕಕ್ಕೆ ಶುಭಮಸ್ತು
ಚನ್ನರಾಯ ಎನ್ನಹುಯಿಲು ಕೇಳಬಾರದೆ ಪ್ರ
ಸನ್ನವೇಲಾಪುರದೊಳಿಪ್ಪಾ
ಚನ್ನಕೇಶವರಾಯ ನಿನಗೆ

ಅಂತ್ಯ : ನಡೆಯಬಾಡಾನಾಡುವಾ ಜಡಿದು ಪಲೀಸುವಾಪೂಂ
ಗೊಡವಮಾಲಿಗಳೊಳು ಹೊಳಹೊಳವಂತೆ
ಕಡುಚಲ್ವ ವೇಲಾಪುರದೊಡೆಯ ವೈಕುಂಠಪಾತಿ
ಪಿಡಿದಾಡುತಿಹ ಪುಟ್ಟ ಚಂಡಿವಲ್ಲೆ ರಾಮಾಣೆ ॥ ೩ ॥

ವಿಷಯ : ಹಾಡುಗಳು.

ವಿಶೇಷ : ಬೇರೆಬೇರೆ ಹಾಡುಗಳ ಸಂಗ್ರಹ. ೭೮ನೆಯ ಓಲೆಯ ತುದಿಯಲ್ಲಿ ಸುಳಾದಿ ಎಂದಿದೆ. ಪುರಂದರದಾಸರ ಕೀರ್ತನೆಗಳಿವೆ. ೮೦ನೆಯ ಓಲೆಯ ಎಡತುದಿಯಲ್ಲಿ ಲಕ್ಷ್ಮಿಕಾಂತಹೆಬ್ಬಾರ, ವಸಂತಪದ ಎಂದಿದೆ. ಪ್ರತಿ ಉತ್ತಮಸ್ಥಿತಿಯಲ್ಲಿದೆ.

—ಹಕರಾ

2

ಕೆ. ೭೭೫	**ಸಂಕ್ಷೇಪ ಪುರಾಣ**	ಪದ್ಯ, ಗದ್ಯ
೭.೬" × ೨"	?	?
೧೫೨-೧೭೦ ಪತ್ರ	೮ ಪಂಕ್ತಿ	೪೦ ಅಕ್ಷರ

ಆದಿ : ಶ್ರೀಮದುಭಯ ಲಕ್ಷ್ಮೀರಮಣಾಯ ನಮಃ ॥ ಶ್ರೀಮತೇ ನಮಃ ॥ ಸಂಕ್ಷೇಪ ಪುರಾಣ ಬರೆಯುದಕ್ಕೆ ಶುಭಮಸ್ತು ॥

ಶ್ರೀ ವೃಷಭಜಿನೇಂದ್ರಾದಿ ಮ
ಹಾವೀರಜಿನಾಂತ್ಯಮಾದ ಜಿನಪತಿಗಳ್ ಭ
ವ್ಯಾವಳಿಗೆ ಚತುರ್ವಿಂಶತಿ
ದೇವದ್ರ್ಯಯಗೆಯ್ಗೆ ವಿಮಿಲರತ್ನತ್ರಯಮುಂ
ಶ್ರೀಮದಶೋಕಂ ಮುಕ್ಕೊಡೆ
ಚಾಮರತತಿ ದಿವ್ಯಭಾಷೆ ಸುರತೂರ್ಯರವಂ
ಪೂಮಳೆ ಕೇಸರಿಪೀಠಂ
ಭಾಮಂಡಲಮೆಸೆಯೆ ನೆಗಳ್ದನಾದಿಜಿನೇಂದ್ರಂ

ವೃ॥ ಕವಿಪರಮೇಶ್ವರರ್ಬ್ಬರೆದುದಂ ಜಿನಸೇನ ಮಹಾಮುನೀಶ್ವರರೀ ಭವ್ಯಾವಳಿಗೆ ಪೇಳ್ದು ಮಾಣೆ ಗುಣಭದ್ರಮುನೀಶ್ವರರೆಯ್ದೆ ಪೇಳ್ದು ಪಲ್ಲವಿಸಿದುದುಂ ತ್ರಿಷಷ್ಟಿಪುರುಷ ಪ್ರತಿಬಂಧಪುರಾಣಮಂ ಮಹೋತ್ಸದೊಳು ಭವ್ಯ ಕೋಟಿಗರುಪಿದಂ ಗುಣರತ್ನ ಭೂಷಣಂ ॥
ಕಲ್ಯಾಣತ್ರ್ಯಯಪ್ರಾಪ್ತಂ ವಿವಕ್ಷಿತ ವಸ್ತುವಂ ಪೇಳ್ವಾಗಳ್ಮುಂನ ಆಪ್ತಾಗಮ ವಕ್ತ್ರ ಶೋತೃಕೆದೆಮೆಂಬಿವಂ ಪೇಳ್ದುದುದವರೊಳು ಮೊದಲನಾಪ್ತನೆಂಬೊಂನಷ್ಟಾದಶ ದೋಷರಹಿತನಪ್ಪೊಂ ಯರಡನೆಯಾಗಮವೆಂಬುದು ।

ಅಂತ್ಯ : ದೇವೇಂದ್ರ ಬಂದು ದೇವತರು ರಕ್ತಚಂದನ ಕಾಲಾಗರು ಮೊದಲಾದವರಿಂದ ಶರೀರಸಂಸ್ಕಾರಮಂ ಮಾಡಿ ಆನಂದನೃತ್ಯಮನಾಡಿ ಪೋದಂ ॥ ವರ್ದ್ಧಮಾನಪುರಾಣ ಸಮಾಪ್ತಾ । ಶ್ರೀ ॥ ಶ್ರೀ ॥ ಸಂಕ್ಷೇಪಪುರಾಣ ಸಮಾಪ್ತಾಃ ಮಂಗಲ ಮಹಾಶ್ರೀ ॥ ನೀಯರ್ಾಪಥೆ ಸಾಮಾಯಿಕ ಸಕಲಿಕಸಹಾವಾಲೆ ೧೧ಕ್ಕೆ ಗ್ರಂಥಪ್ರಮಾಣ ೨೦೦ ಲಘುಪುರಾಣವಾಲೆ ೩೯ಕ್ಕೆ ಗ್ರಂಥಪ್ರಮಾಣ ೮೫೦ ವುಭಯಂ ಗ್ರಂಥಪ್ರಮಾಣ ೧೦೫೦ಕ್ಕೆ ಮಂಗಳ ಮಹಾಶ್ರೀ ॥

ವಿಷಯ : ತೀರ್ಥಂಕರರ ಸಂಕ್ಷೇಪ ಕಥೆ.

ವಿಶೇಷ : ಕೃತಿ ಸಮಗ್ರವಾಗಿದೆ. ಆರಂಭದಲ್ಲಿ ಕೆಲವು ಪದ್ಯಗಳನ್ನು ಬಿಟ್ಟರೆ ಉಳಿದುವೆಲ್ಲ ಗದ್ಯಭಾಗವೇ. ಈ ಗ್ರಂಥಕ್ಕೆ ಮೊದಲು ಇದೇ ಕಟ್ಟನಲ್ಲಿ ಬೇರೊಂದು ಕೃತಿ ಇದ್ದು ಅದನ್ನು ಕಟ್ಟಿಂದ ಬೇರ್ಪಡಿಸಿರುವಂತಿದೆ. ಅಕ್ಷರಗಳು ಸ್ಫುಟವಾಗಿವೆ.

—ಎಸ್‌ಎನ್‌ಕೆ

3

ಕೆ. ೭೩೧ **ಸಂಕ್ಷೇಪ ರಾಮಾಯಣ (ಸಟೀಕು)** ಶ್ಲೋಕ, ಟೀಕು

೧೪.೬" × ೧.೪" ? ?

೩೩-೫೮ ಪತ್ರ ೬ ಪಂಕ್ತಿ ೬೬ ಅಕ್ಷರ

ಆದಿ : ಶ್ರೀಮತೇರಾಮನುಜಾಯ ನಮಃ × × × ಸಂಕ್ಷೇಪ ರಾಮಾಯಣದ ವ್ಯಾಖ್ಯಾನ ಬರಯುದಕ್ಕೆ ನಿರ್ವಿಘ್ನಮಸ್ತು × × × ಈ ಭೂಲೋಕದಲ್ಲಿ

ಅಜಾಯಮಾನೋ ಬಹುಧಾ ವಿಜಾಯತೆ ||

ಪರಿತ್ರಾಣಾಯಸಾಧೂನಾಂ ವಿನಾಶಾಯಚ ದುಷ್ಕೃತಾಂ

ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ

ಹೀಗೆಂಬ ಶೃತಿಸ್ಮೃತ್ಯುಕ್ತ ಪ್ರಕಾರದಿಂದ ಸಜ್ಜನರುಗಳನ್ನು ರಕ್ಷಿಸುವದಕ್ಕೋಸುಗ ಸರ್ವೇಶ್ವರನಾದ ಶ್ರೀಮನ್ನಾರಾಯಣನು ತ್ರೇತಾಯುಗದಲ್ಲಿ ಅಯೋಧ್ಯಾಪಟ್ಟಣದಲ್ಲಿ ದಶರಥಮಹಾರಾಯಗೆ ಪುತ್ರನಾಗಿ ಅವತರಿಸಿದನು

ಅಂತ್ಯ : ಇದಂ ರಾಮಚರಿತ್ರಂ ಯಿದು ಅಧ್ಯಾಹಾರ್ಯವು ರಾಮಚರಿತವನ್ನು ಬ್ರಾಂಹ್ಮಣರು ಪೋದಿದನಾದರೆ ವಾಕ್‍ಶ್ರೇಷ್ಟತರವನ್ನು ಯ್ಯೆದುವನು ವೇದವೇದಾಂಗ ಪಾರಂಗತನಾಗುವನು ಕ್ಷತ್ರಿಯರು ಓದಿದನಾದರೆ ಸಾಂಬ್ರಾಜ್ಯವಂನು ಯ್ಯೆದುವನು ಹೀಗೆಂದರೆ ಚಕ್ರವರ್ತಿಯಾಗುವನು ಯಂಬುದು ತಾತ್ಪರ್ಯಂ ವೈಶ್ಯನೋದಿದನಾದರೆ ಮೌಲ್ಯದ್ರವ್ಯಂಗಳಿಸೆ ಲಾಭವನ್ನು ಯ್ಯೆದುವನು ಹೀಗೆಂದರೆ ವ್ಯಾಪಾರದಲ್ಲಿ ಬಹುಲಾಭ ಉಂಟಾಗುವದು ಯಂಬದು ತಾತ್ಪರ್ಯಂ ಶೂದ್ರನೋದಿದನಾದರೆ ಶೂದ್ರರೆಲ್ಲರಿಗೂ ಪೂಜ್ಯನಾಗುವನು ಯಂಬುದು ತಾತ್ಪರ್ಯ || ೯೯ ಇತಿ ಶ್ರೀ ಸಂಕ್ಷೇಪರಾಮಾಯಣ ಕರ್ನಾಟಭಾಷಾ ವ್ಯಾಖ್ಯಾನ ಸಂಪೂರ್ಣಂ ಜಯ ಮಂಗಳಮಹಾ ಶ್ರೀ ಶ್ರೀ.

ವಿಷಯ : ಶ್ರೀಮದ್ರಾಮಾಯಣದ ಸಂಕ್ಷೇಪ ಕಥೆ.

ವಿಶೇಷ : ಸಮಗ್ರ. ಇದರ ಜೊತೆಯಲ್ಲಿ ಪದ್ಮಪುರಾಣ, ಹರಿಪೂಜಾ ಪ್ರಕರಣ, ಮುಕುಂದಮಾಲಾ ಸ್ತೋತ್ರ ಸಟೀಕು, ಆಳವಂದಾರು ಸ್ತೋತ್ರ ಸಟೀಕು, ರಂಗನಾಥ ಪಾದುಕಾಸಹಸ್ರ ಸಟೀಕು ಎನ್ನುವ ಕೃತಿಗಳಿವೆ.

—ಜಿಜಿಎಂ

4

ಕೆ.ಎ. ೪೨೪/೧ **ಸಂಖ್ಯಾಸ್ಥಾನ** ಪದ್ಯ, ಗದ್ಯ
೧೦.೫" × ೯.೬" ? ?
೧-೩ ಪುಟ ೨೦ ಪಂಕ್ತಿ ೨೦ ಅಕ್ಷರ

ಆದಿ : (ಗಣಿತಂ) ಸಂಖ್ಯಾಸ್ಥಾನ. ಅಷ್ಟವಸು, ದಂತಿ, ದುರಿತ, ಕರ್ಮ್ಮ, ದಿಗು, ದಿಕ್ಕು, ಸಾಷ್ಟಾಂಗ, ಇಭ, ಗಜ, ದಿಗ್ಗಜ, ಮದ, ಹಸ್ತಿ, ಮಾತಂಗ, ಮರಣಾನಯ (?), ಪುಷ್ಕರ, ವಾಸವ, ಯೋಗ, ಇಂತಿನಿತು ಎಂಟಕ್ಕೆ ಪೆಸರು ॥ ೮ ॥

ಅಂತ್ಯ : ತ್ರಿವಿಂಶತಿ ಮತಂ ಕ್ಷೋಭಂ ಮಹಾಕ್ಷೋಭಶ್ಚತು........ನಿಧಿಶ್ಚೈವ ಷಡ್ವಿಂಶತಿ ಮಹನದೀ (ಮಹಾನದೀ/ಮಹಾನಿಧಿಃ)
ಸಪ್ತವಿಂಶಃ ಪರಾರ್ಧ್ಯಃ ಸ್ಯಾತ್ ಅಷ್ಟಾವಿಂಶತಿ ಮಧ್ಯಮಮ್ ।
ನವವಿಂಶತಿ ಸಮುದ್ರಸ್ಯ ಅನ್ತ್ಯಂ ತ್ರಿದಶನಿರ್ಣಯಃ ॥

ವಿಷಯ : ಆಯಾ ಸಂಖ್ಯೆಗಳಿಗೆ ಬರುವ ಪದಗಳ ವಿವರ.

ವಿಶೇಷ : ಅಸಮಗ್ರ. ಇವನ್ನು ಮದರಾಸು ಪ್ರಾಚ್ಯಕೋಶಾಗಾರದಲ್ಲಿ 1935-36ರಲ್ಲಿ ಡಿ. 1479 ರಿಂದ ಪ್ರತಿಮಾಡಲಾಗಿದೆ. ಇದರ ಜೊತೆಯಲ್ಲಿ 'ಗಣಿತಸಾರ', 'ವ್ಯವಹಾರ ಗಣಿತ' ಮೊದಲಾದ ಇತರ ಮೂರು ಗ್ರಂಥಗಳಿವೆ.

—ಬಿಎಸ್ಎಸ್

5

ಕೆ. ೭೬೭/೧೬ **ಸಂಗಮೇಶ್ವರ ಶತಕ** ವೃತ್ತ
೧೩" × ೨" ಸಂಗಪ್ರಭು ೧೮ನೆಯ ಶತಕ
೮೬-೯೨ ಪತ್ರ ೧೨ ಪಂಕ್ತಿ ೯೪ ಅಕ್ಷರ

ಆದಿ : ಶ್ರೀಗುರು ಚಂನಮಲ್ಲೇಶ್ವರಾಯ ನಮಃ ॥ ಸಂಗಮೇಶ್ವರ ಶತಕ ಉತ್ಪಲಮಾಲಾವೃತ್ತ ॥

ಶ್ರೀಕನಕಾದ್ರಿವಾಸ ಫಣಿಭೂಷ ಸುರೇಶ್ವರ ಮಸ್ತಕಾಂಘ್ರಿ ನೀ
ರಾಕರ ಕಲ್ಪಪಂಕಜ ಭವಾಹ್ವಯ ತಾತ ವೃಷೇಂದ್ರವಾಹಯ್ಯೆ
ನಾಕನುಜೇಶಜಾನ್ವಮನೋಹರ ಭಕ್ತಕುಟುಂಬಿ ಸರ್ವ್ವಲೋ
ಕಾಕೃತ ರಕ್ಷಿಸೆಂಮ ಭರದೂರ ಪುರಾಧಿಪ ಸಂಗಮೇಶ್ವರಾ ॥ ೧ ॥

ಅಂತ್ಯ : ದೇವ ಜಯಪ್ರಸಂನ ಪರಿಪೂರ್ನ್ನ ಜಯಪ್ರತಿಮ ಪ್ರಕೀರ್ತಿಯಂ
ತೀವಿಜಯಪ್ರಕಾಶ ಜಯಸತ್ಯವಿತಾರಸದಿಂಪು ಲೋಲ ಮ
ಜ್ಜೀವಜಯಾಖ್ಯ ನಿಂಮ ಪದಕೀಶತಕೋದ್ಗಮದಿಂದಲರ್ಚಿಪೆಂ
ಭಾವಿಸಿ ರಕ್ಷಿಸೆಂನ ಬರದೂರಪುರಾಧಿಪ ಸಂಗಮೇಶ್ವರಂ ॥ ೧೦೧ ॥
ಸಂಗಮೇಶ್ವರ ಶತಕಂ ಸಂಪೂರ್ನ್ನ ॥ ಅಂತೂ ಶತಕ ॥ ೧೬ಕ್ಕಂ ॥
ಮಂಗಳಮಹಾಶ್ರೀ ॥

ವಿಷಯ : ಸಂಗಮೇಶ್ವರನ ಸ್ತುತಿ.

ವಿಶೇಷ : ಪ್ರತಿಯೊಂದು ಪದ್ಯವೂ । ಬರದೂರ ಪುರಾಧಿಪ ಸಂಗಮೇಶ್ವರಾ । ಎಂದು ಮುಗಿಯುತ್ತದೆ. ಇದಲ್ಲದೆ ಇದೇ ಕಟ್ಟಿನಲ್ಲಿ ' ಶಂಕರ ಶತಕ ' ಮೊದಲಾದ ೧೯ ಶತಕಗಳಿವೆ.

—ಎಸ್.ಬಿ.

೬

ಕೆ. ಬಿ. ೭೩೧	**ಸಂಗಮೇಶ್ವರ ಶತಕ**	ವೃತ್ತ
೮.೮" × ೬.೨"	ಸಂಗಪ್ರಭು	೧೮ನೆಯ ಶತಕ
೧-೩೩ ಪತ್ರ	೧೪ ಪಂಕ್ತಿ	೧೮ ಅಕ್ಷರ

ಆದಿ : ಶ್ರೀ ಶಿವಲಿಂಗಾಯನಮಃ ಶ್ರೀ ಸಂಗಮೇಶ್ವರ ಶತಕಂ ॥ ಉತ್ಪಲ ಮಾಲಾವೃತ್ತ
ಶ್ರೀಕನಕಾದ್ರಿವಾಸ ಫಣಿಭೂಷಣ ಸುರೇಶ್ವರಮಸ್ತಕಾಂಘ್ರಿನೀ
ರಾಕರಕಲ್ಪ ಪಂಕಜ ಭವಾನ್ವಯತಾತ ವೃಷೇಂದ್ರ ವೈ
ನಾಕನುಜೇಶ ಜಾಹ್ನವಿ ಮನೋಹರ ಭಕ್ತಕುಟುಂಬಿ ಸರ್ವ
ಲೋಕಾಕೃತ ರಕ್ಷಿಸೆನ್ನ ಬರದೂರಪುರಾಧಿಪ ಸಂಗಮೇಶ್ವರಾ ॥ ೧ ॥

ಅಂತ್ಯ : ದೇವಜಯ ಪ್ರಸನ್ನ ಪರಿಪೂರ್ನ ಜಯಪ್ರತಿಮ ಪ್ರಕೀರ್ತಿಯಂ
ತೀವಿ ಜಯ ಪ್ರಕಾಶ ಜಯ ಸತ್ಯವಿತಾರದಿಂಪುಲೋಲಮ
ಜ್ಜೀವಜಯಾಖ್ಯ ನಿಮ್ಮ ಪದಕೀ ಶತಕೋದ್ಗಮದಿಂದಲರ್ಚಿಪೆಂ
ಭಾವಿಸಿ ರಕ್ಷಿಸೆನ್ನ ಬರದೂರಪುರಾಧಿಪ ಸಂಗಮೇಶ್ವರಾ ॥ ೧೦೧ ॥

ವಿಷಯ : ಈಶ್ವರಸ್ತುತಿ.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ.

—ಜಿಜಿಎಂ

7

ಕೆ. ೯೩೭/೫ **ಸಂಗಮೇಶ್ವರ ಸ್ತುತಿ** ವೃತ್ತ
೮.೫" × ೧.೮" ಸಂಗಪ್ರಭು ೧೮ನೆಯ ಶತಕ
೧-೩ ಪತ್ರ ೮ ಪಂಕ್ತಿ ೪೦ ಅಕ್ಷರ

ಆದಿ: ಶ್ರೀ ಗುರುವೇ ಗತಿ । ಸಂಗಮೇಶ್ವರನ ಸ್ತುತಿ ಬರವುದಕ್ಕೆ ಶುಭಮಸ್ತು ॥
ಶಾರ್ದೂಲ ವೃತ್ತಾ ॥
ಸ್ವಾಮಿ ಮದೀಯ್ಯ ಮಾನಸವನೇಜ ದಿನೇಶ್ವರ ಮಾದವಾಜಸು
ತ್ರಾಮ ಕಿರೀಟಮಂಡಿತ ಪದಾಂಬುಜ ವಿಶ್ವಕುಟ್ಟುಂಬರ ರಕ್ಷ....
ದಾಮದಮಾ ಸುಧಾರಸ ಸಮುಗ್ರಕಟಾ....ತದೂರ ನಿ
ಷ್ಕಾಮ ಚಿದಂಗನಾರಮಣ ದೇಶಿಕ ಕೂಡಲ ಸಂಗಮೇಶ್ವರಾ ॥ ೧ ॥

ಅಂತ್ಯ: ಕಂದರ ಭಸಿತ ಕಂದರ ವಿಧಿ
ಕಂದರ ಕರ ಬಂದ ರಹಿತ ಹಂಧುರ ಗುಣಸಂ
ಬಂಧ ಭ್ರುತ ಸಿಂಧು ಸಂಹ್ರುತ
ಸಿಂಧುರ ಸೋಮೇಶಲಿಂಗ ಜಯಜಯ ಭವಭಂಗಾ ॥ ೮ ॥
ಸಂಗಮೇಶ್ವರ ಸೋಮೇಶ್ವರನ ಸ್ತುತಿ ಸಮಾಪ್ತ ಮಂಗಳಮಹಾಶ್ರೀ.

ವಿಷಯ: ಸಂಗಮೇಶ್ವರನ ಪ್ರಾರ್ಥನಾ ಪದ್ಯಗಳು.

ವಿಶೇಷ: ಬರಹ ಸ್ಫುಟ, ಸುಂದರ. ಇದೇ ಕಟ್ಟಿನಲ್ಲಿ ವಟಪುರ ಸಿದ್ಧಾಂತ ಸ್ತೋತ್ರ, ಗಿರಿಜಾಕಲ್ಯಾಣದೊಳಗಣ ಪದ, ಮಣ್ಣೇಶ್ವರ ಪುರಾಣದ ನಾಂದ್ಯ, ವೈದ್ಯಶಾಸ್ತ್ರ ಇತ್ಯಾದಿ ಒಟ್ಟು ೯ ಗ್ರಂಥಗಳಿವೆ.

—ಕೆಆರ್‌ಎಸ್

8

ಕೆ. ಎ. ೫೭೮/೧೯ **ಸಂಗಮೇಶ್ವರ ಸ್ತುತಿ** ವೃತ್ತ
೧೨" × ೯.೮" ಸಂಗಪ್ರಭು ೧೮ನೆಯ ಶತಕ
೧೫೭-೧೫೮ ಪುಟ ೨೪ ಪಂಕ್ತಿ ೨೦ ಅಕ್ಷರ

ಆದಿ: ಶ್ರೀಗುರುವೇಗತಿ । ಸಂಗಮೇಶ್ವರನ ಸ್ತುತಿ ಬರುವುದಕ್ಕೆ ಶುಭಮಸ್ತು ।
ಶಾರ್ದೂಲ ವೃತ್ತಾ
ಸ್ವಾಮಿಮದಿಯ ಮಾನಸಿವನೆಜ ದಿನೇಶರ ಮಾದವಾಜ ಸು
ತ್ರಾಮ....ಜಮಂಡಿತ ಪದಾಂಬುಜ ವಿಶ್ವಕುಟುಂಬ ರಕ್ಷ

ದಾಮುದವಾಸು ಧಾರಸಸಮಗ್ರ ಕಟ....ದೂರ ನಿ
ಷ್ಕಾಮಚಿದಂಗ ಸಾರಮಣದೇಶಿಕ ಕೂಡಲಸಂಗಮೇಶ್ವರಾ ‖ ೧

ಅಂತ್ಯ : ತರಣಾದಿತ್ಯ ಪ್ರಕಾಶವರಣ ಶರಣ ಸಂದೋಹಮಂದಾರ ಚೆಂದಾ್ರ
ಭರಣಾಂತನೊಲಿ ಚಂಚದ್ಗರಳ ಕಳಾದೂರ್ಯ ಗಾಂಭೀರ್ಯ
ಶೌರ್ಯಾ
ಕರಕಂದರ್ಪಾರಿ ಶೌರಿಸ್ತುತ ಗುಣಗಣ ರಂಗತರಂಗಾಂಗ ಗಂಗಾ
ಧರ ಮತ್ಪ್ರಾಣೇಶ ಸಂಗಪ್ರಭುವೆ ವಿಬುವೆ ರಕ್ಷಿಪುದಿಂದ್ರ ಚೆಂಡಾ ‖ ೯

ಕಂದ ‖ ಶ್ರೀಮದಮರಾಮರೇಂದ್ರ ಪಿ
ತಾಮಹ ತಾಮರಸ ನಯನ ಪೂಜಿತ ಪದ ಮಾ
ಯಾಮಯ ಹರಖಲ ಕದಳಿ
ಸಾಮಜ ಸೋಮೇಶಲಿಂಗ ಜಯಭವಭಂಗಾ ‖ ೧

ವಿಷಯ : ಸಂಗಮೇಶ್ವರನ ಸ್ತುತಿ.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ. ಇದರ ಜೊತೆಯಲ್ಲಿ ಶಿವಶರಣಾಷ್ಟಕ ಮೊದಲಾದ ೨೪ ಕೃತಿಗಳಿವೆ.

—ಜಿಜಿಎಂ

9

ಕೆ.ಎ. ೪೭೪	**ಸಂಗೀತ ಪದಗಳು**	ಹಾಡು
೧೦.೭″ × ೬.೪″	?	?
೧-೭೪ ಪುಟ	೨೦ ಪಂಕ್ತಿ	೨೦ ಅಕ್ಷರ

ಆದಿ : ಸಂಗೀತ ಪದಗಳು.
ರಾಗ । ಮುಖಾರಿ ।

ಎನ್ನೊಳರುಹದೆ ನೀನಿಂತು ಪೋಪರೆ ಪೇಳು ।
ನಿನ್ನ ಸಾಹಸಕೆ ನಾನೇನೆಂಬೆನಕಟ ‖ ಪ ‖

ಪವಣರಿಯದೆ ನಿನ್ನ ಪಾಂಚಜ . . . .
. . . . ತದಿಂದ . . . . ತಾಕೀತಿಂತು ‖

ಕವಚವನೊಡೆದೊತ್ತಿ ಕವಿದಲಗಿನ ಮೊನೆ
ಯವಯವದೊಳೆ ನಾಂಟ . . . . . ದಿದೆ ‖ ೧ ‖

ಅಂತ್ಯ : ಅಡಿಗೆರಗಿದೆನಗೆ ಸಂತಸಮನೀಯು
ದೊಡೆ ನಿನಗೌದಾರ್ಯವೆಂತಪ್ಪುದು
ಕಡುಗಿಯೆನ್ನಲಿವರುಳ ತನಗೆ ಮುನಿ
ದೊಡೆ ನಿನಗೆ ಗಾಂಭೀರ್ಯವೆಂತಪ್ಪುದು ||
ಜಡಿದೆನ್ನ ತಪ್ಪುಗಳ ಗಲಭೆಗೈ
ದೊಡೆ ನಿನಗೆ ಚಾತುರ್ಯವೆಂತಪ್ಪುದು
ಬಿಡದೆನ್ನ ಪೊರೆಯದೊಡೆ ಸ್ಥೈರ್ಯ ನಿನಗೆಂತಪ್ಪ
ದೊಡೆಯ ತಿರುನಾರಾಯಣ || ೩ ||

ವಿಷಯ : ಭಕ್ತಿಯ ಹಾಗೂ ಶ್ರೀರಂಗಪಟ್ಟಣದ ವರ್ಣನೆಯ ಹಾಡುಗಳಿವೆ.

ವಿಶೇಷ : ಬರಹ ಚೆನ್ನಾಗಿದೆ. ಚಿಕ್ಕದೇವರಾಯನ ಕಾಲದಲ್ಲಿ ರಚಿತವಾದ ಹಾಡುಗಳ ಸಂಕಲನ ಗ್ರಂಥ. ಇದರಲ್ಲಿ ಕೆಲವು ತೆಲುಗು ಹಾಡುಗಳೂ ಇವೆ. ಅಂತ್ಯದ ಪುಟದಲ್ಲಿ 'Copied from the original Ms. D.No. 1295 Sangita Padagalu by Sri P. Subraya Bhat, Vidwan, Pandit, 12-6-1949' ಎಂದು ಬರೆದಿದೆ.

—ಕೆಆರ್‌ಎಸ್

10

ಕೆ.ಬಿ. ೬೪೨	**ಸಂಗೀತ ಬಸವೇಶ್ವರ ನಾಟಕ**	ಗದ್ಯ, ಪದ್ಯ
೮.೨" × ೬.೬"	ಸಂಗನಬಸವ	?
೧-೨೮ ಪತ್ರ	೧೬ ಪಂಕ್ತಿ	೧೬ ಅಕ್ಷರ

ಆದಿ : ಸಂಗೀತ ಬಸವೇಶ್ವರ ನಾಟಕಂ || ಪ್ರುಥಮಾಂಕ ಪ್ರಾರಂಭ ||
ನಾಂದಿ || (ಚಾಲ ಪ್ರೇಮ ನೇಮು)
ಶ್ರೀ ಶಂಭೋಶಂಕರ ಸುರ ಶ್ರುತಿ ತತಿನುತಹತಮಾರಾಧೀರಾ |
ಗಂಗಾಭಂಗಾ ಸಂಗಾ ಸಂಗಾತುಂಗಾ | ಸುಜಟದಿ ಗುರು ಪಟಮುಂಗ–
ಲಾಂಗ | ಗಿರಿರಾಡ್ವಾಲ ಮುಖಕೇಲಾಲಾ | ಭವಗ್ರಣಿಮಾಲಾ |
ಗುಲಕುಕ್ಷೇಲಾ | ಸ್ಫುರುಣ | ಕರುಣ | ಹರಶರಣ ಪರ
ಮರಣ ಹರಣವರ | ಚರಣ ಗುಣಗುರು || ೧ ||
ಸೂತ್ರಧಾರನ ಮಾತು ||
ಶ್ರೀಜಗಚ್ಛಾಲಕನಾದೀ ಪರಮೇಶ್ವರನ ಸ್ತವನವಂನು ಎಷ್ಟು
ಮಾಡಿದರೂ ಅಲ್ಪವೇ ಸರಿ.

ಅಂತ್ಯ : ವಾಸುದೇವ—ಗುಹರಾಜಾ, ತಾವು ಯಾವ ಕಾರ್ಯದ ನಿಮಿತ್ಯನಾಗಿ ವ್ಯಸನವುಳ್ಳವರಾಗಿದ್ದೀರೋ ಆ ಕಾರ್ಯವು ತಂಮ ವ್ಯಸನವಂನು ದೂರಮಾಡಲು ಸ್ವಲ್ಪ ದಿವಸಗಳಲ್ಲಿ ಕೈಗೂಡುವದು.
ಬಿಜ್ಜಳ—ಅದು ಹ್ಯಾಗೆ
ವಾಸುದೇವ—ಮಹದೇವ ಭಟರಂನು ವಿಚಾರ ಮಾಡಿದರೆ ತಾನೆ ತಿಳಿಯುವುದು.

ವಿಷಯ : ಬಿಜ್ಜಳಮಹಾರಾಜನ ಆಸ್ಥಾನದಲ್ಲಿ ಬಸವಣ್ಣನು ಮಂತ್ರಿಯಾಗುವುದಕ್ಕೆ ಮೊದಲಿನ ಕಥೆ.

ವಿಶೇಷ : ಅಸಮಗ್ರಗ್ರಂಥವಾಗಿರಬಹುದು ಆದಿಯಲ್ಲಿ ಈ ಗ್ರಂಥದ ಕರ್ತೃವಿನ ವಿವರವಿದೆ—"ಸಂಗನ ಬಸವನು ಯೀ ಪುಸ್ತಕದಲ್ಲಿ (ಸಂಗೀತ ಬಸವೇಶ್ವರ ನಾಟಕ) ಬರೆದಿರುತ್ತಾನೆ." ಪತ್ರದ ಎರಡು ಕಡೆಗಳಲ್ಲಿಯೂ ಬರಹವಿದೆ. ಅಕ್ಷರವು ಸೋಡಿಯಾಗಿದ್ದು ಓದಲು ಕಷ್ಟಸಾಧ್ಯ.

—ಕೆಆರ್ಎಸ್

11

ಕೆ.ಎ. ೫೧೧	**ಸಂಗೀತರತ್ನಾಕರ**	ಶ್ಲೋಕ
೧೧.೫″ × ೭.೫″	?	?
೨೩ ಪತ್ರ	೧೩ ಪಂಕ್ತಿ	೩೪ ಅಕ್ಷರ

ಆದಿ : ಸಂಖ್ಯ ದಶವಿಧ ಗಮಕಮುಲೂ ।

ಶ್ಲೋಕಂ—ಆರೋಹಮವರೋಹಾಂಚ
ತಾಲಸ್ಫುರಿತ ಕಂಪಿತಾಃ
ಆಘಾತ ಪ್ರತ್ಯಾಘಾತಶ್ಚ
ತ್ರಿಪ್ಯಶ್ಚಾಂದೋಳಮೂರ್ಚಿತಾಂ ॥

೧ ಆರೋಹಣಂ ಸರಿಗಮಪದನಿಸ ಹತ್ತೋಣ
೨ ಅವರೋಹಣಂ ಸನಿದಪಮಗರಿಸ ಯಿಳಿಯೋಣ
೩ ಘಾಲ ಆರೋಹಣ ಅವರೋಹಣಯೀ ೨ ರಲ್ಲೂ ಜಾರು
—ತಾಲೀಸ್ವರಗಳು ನುಡಿಸೋಣ ಘಾಲೂ ॥

ಅಂತ್ಯ : ಸರಿಗಮಪನಿಸ–ಸನಿದಪಮಗರಿಸ
ಸರಿಗಮಪಧಸ–ಸಧಪಮಗರಿಸ

ಸರಿಗಮಪಧನಿಸ–ಸನೀಪಮಾಗರಿಸ–ನಿಷಾದಗಾಂಧಾರದಲ್ಲಿ
ಗಮಕಹಿಡಿಯೋದು.
ಸಮವರಿದಾಪನಿಧನಿಸಾ–ಸಸನಿಧಮಮಸ
ಸರಿಗಮಧನಿಸ–ಸನಿಪಮಗರಿಸ

ವಿಷಯ : ಸಂಗೀತ ಶಾಸ್ತ್ರ.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ.

—ಜಿಜಿಎಂ

12

ಕೆ. ೮೧೧ **ಸಂಜ್ಞಾ ಪ್ರಕರಣ (ಶಬ್ದಮಣಿದರ್ಪಣ)** ಗದ್ಯ, ಪದ್ಯ
೮" × ೧.೮" ಕೇಶಿರಾಜ ಸು. ೧೨೬೦
೩ ಪತ್ರ ೧೫ ಪಂಕ್ತಿ ೪೫ ಅಕ್ಷರ

ಆದಿ : ಶ್ರೀಗುರುವೇ ಗತಿ ||
ಕ್ರಮದಿಂದೆ ಸಂಧಿ ನಾಮಂಯೆಂಬ ಸಮುಚ್ಚಯ ದಶದಿಂ ಸಂಜ್ಞಾ ಪ್ರಕರಣ ಗೂಢಪದ ಪ್ರಕರಣಮುಂಟು || ೧ ||
ಅಕ್ಕರಮುಂ ವರ್ಣಮುಂಯೆಂಬ ಸಮುಚ್ಚಯದಿಂ
ಶುದ್ಧಗೆ ಮೊದಲಾದ ನಾಮಮುಂಟು.

ಅಂತ್ಯ : ಆದಂ ಯೆಂಬ ವಿಕಲ್ಪದಿಂದಕಾರಕ್ಕೆ ಬತ್ವಮುಂಟು | ದ್ವಿತೀಯ || ಬಿದಿಗೆ | ಚೆಲಂ || ಸೀರೆ | ಪಾಟಳಂ || ಹಾದರಿ | ವಾಳಂ || ಬಾಳೆ | ಕುದ್ದಾಳಂ || ಗುದ್ದಲಿ || ಅರಿಕಂ || ಅಳಕಂ. × × × ಲತ್ವಕಂ ಮತ್ವಮುಂಟು || ಸಮುಚ್ಚಯ || ಸಂಪೂರ್ನ್ನ ಮಂಗಳ ಮಹಾ ಶ್ರೀ ಶ್ರೀ ||

ವಿಷಯ : ವ್ಯಾಕರಣ ವಿಷಯ, ಸಮುಚ್ಚಯ ವಿಚಾರ.

ವಿಶೇಷ : ಸಮಗ್ರ. ಸಂಜ್ಞಾಪ್ರಕರಣದಲ್ಲಿ ಕೇಶಿರಾಜನು ಹೇಳುವ ಎಲ್ಲಾ ವಿಷಯಗಳಿಲ್ಲ.

—ಎಂಪಿಎಂ

13

ಕೆ.ಎ. ೪೬೨/೩ | ಸಂತಾಪ ಶತಕಂ | ಕಂದ
೧೩.೨" × ೮.೫' | ಹನುಮಾನ್ ವೆಂಕಟರಾಯ | ೧೯೪೪
೩೯-೪೪ ಪತ್ರ | ೩೬ ಪಂಕ್ತಿ | ೨೦ ಅಕ್ಷರ

ಆದಿ: ಶ್ರೀಕವಿರಾಜಕೃತಂ ಸಂತಾಪಶತಕಂ.

ಕಂ|| ಶ್ರೀವರನಸುರಕುಲಾಂತಕ
ನಾಗಮವಿನುತಂ ಸುರೌಘರಕ್ಷಕನಾದ್ಯಂ |
ಕಾಮಿತಫಲಪ್ರದಂ ಸ
ದ್ಭಾವೋದಯನೊಲ್ದು ರಕ್ಷಿಸುಗೆ ರಂಗೇಶಂ ||

ಕಂ|| ನೆಗಳ್ದಿರ್ಪುದು ಬೆಳ್ಳಾವೆಯ
ಸನಿಹದೊಳೀ ಗೊಲ್ಲಹಳ್ಳಿ ರಂಗೇಶ್ವರನಾ |
ವಿಲಸತ್ಸಾನಿಧ್ಯಮಿದೆಂ
ದೊಲವಿಂದಾಂ ಬಂದೆನೆನ್ನ ಹೃಚ್ಛಾಂತ್ಯರ್ಥಂ || ೨ ||

ಅಂತ್ಯ : ಕಂ|| ಅರುವತ್ತಯ್ದುಂಬರಿಸಂ
ನೆರೆದತ್ತೆನಗೀಗಳದರಿನದಿರ್ಗುಂ ಕೆಯ್ಗಳ್ |
ಪರೆಯಿಂ ಮಸುಳ್ಗುಂ ಕಣ್ಗಳ್
ಗುರುರಂಗನೊಳಮರ್ಗುಮೆನ್ನ ಬಗೆ ತರಿಸಲದಿಂ || ೧೦೬ ||

ಕಂ|| ಸುಜನರ ಕೃತಿಗಳ್ ಫಲಿಸುಗೆ
ಕುಜನರ ದುರ್ಮತಿಗಳಳಿದು ಸದ್ಬುದ್ಧಿಗಳು |
ದ್ಭವಿಸುಗೆ ರಂಗೇಶನ ದಯೆ
ಸಕಲರ್ಗಂ ಪ್ರಸರಿಸಿರ್ಕೆ ಬರ್ಕೆ ಶುಭಂಗಳ್ || ೧೦೭ ||
(ಸಂತಾಪ ಶತಕಂ ಸಂಪೂರ್ಣಂ)

ವಿಷಯ : ಕವಿಯ ಜೀವನದರ್ಶನವೇ ಈ ಕೃತಿಯ ವಸ್ತು.

ವಿಶೇಷ : ಈ ಕೃತಿಯನ್ನು ವ್ಯಯ ಸಂವತ್ಸರದಲ್ಲಿ ಎಂದರೆ ೧೯೪೪ರಲ್ಲಿ ರಚಿಸಲಾಗಿದೆ. ಪತ್ರದ ಎರಡು ಕಡೆಯೂ ಬರವಣಿಗೆಯಿದೆ. ಇದೇ ಪುಸ್ತಕದೊಡನೆ 'ಪ್ರತಿಜ್ಞಾಯೌಗಂಧರಾಯಣ' ಮತ್ತು 'ಸ್ವಪ್ನವಾಸವದತ್ತ' ಎಂಬ ಎರಡು ನಾಟಕಗಳಿವೆ. ಸಂತಾಪ ಶತಕದ 'ಮುನ್ನುಡಿ'ಯಲ್ಲಿ ಕವಿಯು "ಎನ್ನ ಪರವಯಸ್ಸಿನೊಳೆನ್ನ ಕರ್ಮಪರಿಪಾಕದಿನೆನಗೊದವಿದ ಕಷ್ಟಂಗಳತ್ತಣಿಂ ಬಗೆ ನೊಂದೀ ಸಂತಾಪಶತಕಮಂ

ಬರೆದಿರ್ಪೆಂ ಇದನೋದುವುದರಿಂ ಸಹೃದಯರ್ಗೆನ್ನ ಮನದ ತರಿಸಲಂ ಬಗೆಗೊಳ್ಗುಂ" ಎಂದು ಹೇಳಿದ್ದಾನೆ.

—ಬಿಎಸ್‌ಎಸ್

14

ಕೆ. ೧೭೨೦/೧	**ಸಂಧ್ಯಾವಂದನೆ ಲಕ್ಷಣ ಇತ್ಯಾದಿ**	ಶ್ಲೋಕ, ಟೀಕು
೪.೮" × ೨"	?	?
೧-೩೬ ಪತ್ರ	೧೦ ಪಂಕ್ತಿ	೨೪ ಅಕ್ಷರ

ಆದಿ : ಶ್ರೀಮತ್ಪಂಚಗುರುಭ್ಯೋ ನಮಃ ॥ ಮಲಮೂತ್ರ ವಿಸರ್ಜ್ಜನೆ ಸ್ಥಾನ ॥ ಓಂ ಹ್ರಿತಾ ಅತ್ರ ಸ್ಥಿತಕ್ಷೇತ್ರ ಪಾಲಮಪರಾಧಂ । ಕ್ಷಮಾಸಮಾ ಮನುಜಾನಿ ಹಿಸ್ಥಾನಾದಷ್ಮಾ ತ್ಪ್ರಯಾಹಿ ಅಹಮತ್ರ ಮೂತ್ರ ಪೂರಿಷೋತ್ಸರ್ಜ್ಜನಂ ಕರೋಮಿ ಸ್ವಾಹಾ ॥ × × × ಅಂಗುಲಿ ಭೇದಃ ॥ ಅಂಗುಷ್ಟವೆಂದರೆ ಹೆಬ್ಬೆರಳು । ತರ್ಜ್ಜನೀಯಂದರೆ ಹೆಬ್ಬೆರಳ ದಂಡೆ ಬೆರಳು । ಮಧ್ಯಮಾಂಗುಲಿಯಂದರೆ ತರ್ಜನೀ ಬೆರಳ ದಂಡೆ ಬೆರಳು । ಅನಾಮಿಕಾಂಗುಲಿಯಂದರೆ ಮಧ್ಯಮಾಂಗುಲಿ ದಂಡೆ ಬೆರಳು । ಕನಿಷ್ಟಾಂಗುಲಿಯಂದರೆ ಕಿರುವೆರಳು ॥ ಯಿವರ ಭೇದಂಗಳರಿತು ಅಂಗಸ್ಪರ್ಶನಂಗೆಯ್ವುದೂ ॥ (೧೧ನೆಯ ಪತ್ರದಿಂದ)

ಅಂತ್ಯ : ಅಯಂ ಪಠಿತ ಸಂಸಿದ್ಧಃ । ಶ್ರೀ ಜ್ವಾಲಿನ್ಯಧಿದೈವತಃ । ಮಾಲಾಮಂತ್ರಃ ಪ್ರಾಜಾಪ್ಯದೈ್ಯಃ ಗ್ರಹರೋಗ ವಿಷಾ ವಿಹೃತ್ ॥ ಯಿತಿ ಜ್ವಾಲಿನೀಮಾಲಾ ಮಂತ್ರಂ ॥

ವಿಷಯ : ಸಂಧ್ಯಾವಂದನೆಯ ಲಕ್ಷಣ ಹಾಗೂ ಮಂತ್ರ ವಿಚಾರಗಳು.

ವಿಶೇಷ : ಈ ಗ್ರಂಥದಲ್ಲಿ ಚತುರ್ವಿಂಶತಿ ತೀರ್ಥಕರ ತರ್ಪಣ, ಯಕ್ಷದೇವತೆಯರಿಗೆ ನೀಡುವ ತರ್ಪಣ, ಗಂಧಲೇಪನ ಲಕ್ಷಣ, ಜ್ವಾಲಿನೀ ಮಂತ್ರಗಳಿವೆ. ಇದೇ ಕಟ್ಟಿನಲ್ಲಿ ಚತುರಂಗದ ಮನೆಯ ದ್ವಿಗುಣೋತ್ತರ ಸಂಖೆಯ ಲೆಖ್ಖ, ದೃಷ್ಟಾಂತನ್ಯಾಯ (ಸು) ಗಳೇ ಮೊದಲಾಗಿ ಒಟ್ಟು ೬ ಕೃತಿಗಳಿವೆ.

—ಕೆಜಿಆರ್‌ಎಸ್

15

ಕೆ ೧೪೦೨/೧	**ಸಂಪಾದನೆಯ ಸಾರಾಮೃತ**	ವಚನ, ಟೀಕು
೧೬" × ೨"	?	?
೧-೩೦ ಪತ್ರ	೧೩ ಪಂಕ್ತಿ	೮೮ ಅಕ್ಷರ

ಆದಿ: ಶ್ರೀಗುರು ಬಸವ ಲಿಂಗಾಯ ನಮಃ । ಸಂಪಾದನೆಯ ಸಾರಾಮೃತ ! ಪ್ರಥಮದಲ್ಲಿ ಪ್ರಭುದೇವರು ನಿರೂಪಿಸಿದ ಪಿಂಡಸ್ಥಲದ ವಚನ ॥ ಶಿಲೆಯೊಳಗಣ ಪ್ರತಿಬಿಂಬದಂತೆ ಬೀಜದೊಳಗಣ ವೃಕ್ಷದಂತೆ ಶಬ್ದದೊಳಗಣ ನಿಃಶಬ್ದದಂತೆ ಗೊಹೇಶ್ವರಾ ನಿಮ್ಮ ಶರಣ ಸಂಬಂದಾ ॥

ಟೀಕು॥ ಶಿಲೆಯೊಳಗಿಪ್ಪ ಅಗ್ನಿ ವ್ಯೆದೋಱಿದ ಹಾಂಗೆ ಬ್ರಹ್ಮಉ ಪಿಂಡಸ್ಥವಾಗಿ ಕಾಣಿಸ ಬಾರದೆಂಬುದೀಗ ಶಿಲೆಯೊಳಗಣ ಪಾವಕನಂತೆ ಎಂಬುದರ್ಥ

ಅಂತ್ಯ: ಆ ಹಂಣ ಪ್ರಭುದೇವರು ಆರೋಗಣೆಯಮಾಡಿ ನಿಜದಲ್ಲಿ ನಿರ್ವಯಲಾದರೆಂಬ ಶಬ್ದಕ್ಕರ್ಥ । ಆ ಪ್ರಭುವಿನ ಕೃಪಾಪ್ರಸಾದವ ಚೆಂನಬಸವಣ್ಣ ನಳವಡಿಸಿಕೊಂಡ ಕಾರಣ ನಿಃಕಲಪರಬ್ರಹ್ಮವು ಹೃತ್ಕಮಲಕರ್ನಿಕಾಕುಹರ ಮಧ್ಯದಲ್ಲಿ ಯಿಂಬಿಟ್ಟುಕೊಂಡನೆಂಬುದೀಗ ಪ್ರಭುವಿನಕಾರುಣ್ಯ ಪ್ರಸಾದವ ಕೊಂಡೆನಾಗಿ ಕೂಡಲಸಂಗಮದೇವರು ಯಿತ್ತಬಾರೆಂದು ತಂಮ ಹೃತ್ಕಮಲದಲ್ಲಿ ಯಿಂಬಿಟ್ಟುಕೊಂಡರೆಂಬ ಶಬ್ದಕ್ಕರ್ಥ ॥ ೧೦ ॥ ಅಂತುವಚನ ೨೬೭.

ವಿಷಯ: ಶೂನ್ಯಸಂಪಾದನೆಯ ಸಂಗ್ರಹ.

ವಿಶೇಷ: ಸಮಗ್ರವೆ ಅಸಮಗ್ರವೆ ತಿಳಿದುಬರುವುದಿಲ್ಲ, ಸಮಾಪ್ತಿ ವಾಕ್ಯಗಳು ಕಾಣಬರುವುದಿಲ್ಲ. ಮೇಲೆ ಉದ್ಧರಿಸಿದ ಭಾಗವಾದ ಮೇಲೆ ಬರವಣಿಗೆಯಿಲ್ಲ. ಇದೇ ಕಟ್ಟಿನಲ್ಲಿ ಬಸವರಾಜದೇವರ ಷಡುಸ್ಥಲದ ವಚನದ ಕಥಾಸಾರ, ಏಕೋತ್ತರ ಶತಸ್ಥಲ ಸಾರಾಮೃತ, ವಚನಗಳು ಸಟೀಕು, ಮೂರುಸಾವಿರ ವಚನದ ಗ್ರಂಥದ ವಾಕ್ಯಗಳೆಂಬ ಕೃತಿಗಳಿವೆ.

—ಜಿಜಿಎಂ

16

ಕೆ. ೭೪೮/೧೨	**ಸಂಬಂಧದ ವಚನಗಳು**	ವಚನ
೧೨.೫" × ೨.೨"	ಸಂಪಾದನೆಯ ಚೆನ್ನಂಜೆದೇವ	ಸು. ೧೫೩೦
೧೨೪-೧೩೫ ಪತ್ರ	೧೬ ಪಂಕ್ತಿ	೮೨ ಅಕ್ಷರ

ಆದಿ: ಶ್ರೀಗುರು ಬಸವಲಿಂಗಾಯ ನಮಃ । ಪೊಂಮೆಯಾ ಶ್ರೀಗುರುವಿನ ಶ್ರೀಚರಣವ ನೆನದಡೆ । ಬವಬಂಧನ ಬಿಡುವುದು ; ಗುರುವೆ ಶರಣು

ಗುರುಲಿಂಗವೆ ಶರಣು । ಹಱಿ ಬ್ರಂಹ್ಮಾದಿಗಳಿಗೆ ಅಗೋಚರವಾದ ಕೂಡಲಚೆಂನಸಂಗಯ್ಯಾನೆಂಬ ಲಿಂಗವ ತೋಱಿದ ಬಸವಂಣಗುರುವೆ ಶರಣು ಶರಣು ॥ ೧ ॥

ಶಿವಗುರುವೆಂದು ಬಲ್ಲಾತನೆ ಗುರು । ಶಿವಲಿಂಗವೆಂದು ಬಲ್ಲಾತನೆ ಗುರು । ಶಿವಜಂಗಮವೆಂದು ಬಲ್ಲಾತನೆ ಗುರು । ಶಿವಪ್ರಸಾದವೆಂದು ಬಲ್ಲಾತನೆ ಗುರು । ಶಿವಾಚಾರವೆಂದು ಬಲ್ಲಾತನೆ ಗುರು । ಯಿಂತೆ ಪಂಚವಿಧ ವೇದಂಚ ಬ್ರಹ್ಮವೆಂದಱಿದ ಮಹಾಮಹಿಮ ಸಂಗನ ಬಸವಂಣ ಯೆನಗೆಯು ಗುರು ನಿನಗೆಯು ಗುರು । ಜಗವೆಲ್ಲಕ್ಕು ಗುರು ಕಾಣ ಗೊಹೇಶ್ವರಾ ॥ ೨ ॥

ಅಂತ್ಯ : ಸ್ಥೂಲಕಂಥೆ ಸೂಕ್ಷ್ಮಟೊಪ್ಪರ ಸತ್ಯದಂಡ ಶಾಂತಿಭಸಿತ । ಸುಚಿತ್ತ ಮಣಿತತ್ವ ಕರ್ಪರ । ವೈರಾಗ್ಯ ಹಾವುಗೆ । ಮನದೃಡವೆಕವುಪು । ಆಚಾರವೆ ಕಂಕಣ । ಕ್ಷಮೆದಮೆಯೆ ಕರ್ನಕುಂಡಿಲ । ಯಿಂತೀವೆರಸಿ ಸುಳಿದನು ಜಗತ್ಪಾವನವ ಮಾಡಲೆಂದು । ಭಕ್ತಿಭಿಕ್ಷವ ಬೇಡುತ್ತ ಬಂದನಯ್ಯಾ । ತಂನ ವೊಲುಮೆಯ ಶರಣರಿಗೆ ನಿಜಸುಖವನೀಯ್ಯ ಲೆಂದು ಕಲಿದೇವಾ ನಿಂಮ ಶರಣ ಪ್ರಭುದೇವರ ಶ್ರೀಪಾದವ ಕಂಡು ಅರ್ಚಿಸಿ ಪೂಜಿಸಿ ನಿಶ್ಚಿಂತನಾದೆನೂ ॥ ೧೨೧ ॥ ಸಂಬಂಧದ ವಚನ ಸಮಾಪ್ತ ಮಂಗಳಮಹಾಶ್ರೀ ॥

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಇದರೊಡನೆ ಕರಣಹಸಿಗೆ, ಏಕೋತ್ತರ ಶತಸ್ಥಲ ವೊದಲಾದ ೨೯ ಗ್ರಂಥಗಳಿವೆ. ಕೊನೆಯಲ್ಲಿ ೯ ಸಂಕೀರ್ಣ ಓಲೆಗಳಿವೆ. ಕೆಲವು ಗ್ರಂಥಗಳಲ್ಲಿ ಶಕಟರೇಫದ ಬಳಕೆ ಇದೆ. ಕೆಲವು ಗರಿಗಳ ಅಂಚು ಮುರಿದು ಶಿಥಿಲವಾಗಿವೆ.

—ಎಸ್‌ಎನ್‌ಕೆ

17

ಕೆ. ೧೧೩೫/೨	**ಸಂಬಂಧದ ವಚನಗಳು**	ವಚನ
೬.೫″ × ೨″	ಸಂಪಾದನೆಯ ಚೆನ್ನಂಜೆದೇವ	ಸು. ೧೫೩೦
೧೪-೨೮ ಪತ್ರ	೧೩ ಪಂಕ್ತಿ	೪೨ ಅಕ್ಷರ

ಆದಿ : ಸಂಮಂಧದ ವಚನ ॥ ಭಕ್ತಂಗೆ ಕ್ರಿ । ಮಾಹೇಶ್ವರಂಗೆ ನಿಶ್ಚಯ । ಪ್ರಸಾದಿಗೆ ನಿಷ್ಠೆ ಪ್ರಾಣಲಿಂಗಿಗೆ ಯೋಗ । ಶರಣಂಗೆ ನಿಬ್ಬೆಱಗು ।

ಐಕ್ಯಂಗೆ ನಿರ್ಲೇಪ । ಯಿಂತೀ ಷಟ್ಸ್ಥಲವನಗಲಿಸಿ ನಿಂದುದು ವಿರಕ್ತನ ಯೇಕಸ್ಥಲದಾಟ । ನಿಜತತ್ವದ ಕೂಟ । ಶಂಭೂನಿಂದಿತ್ತ ಸ್ವಯಂಭು ನಿಂದತ್ತ ಅತಿಬಳ ನೋಡಾ ಮಾತುಳಂಗ ಮಧುಕೇಶ್ವರನೂ ॥ ೧ ॥

ಅಂತ್ಯ : × × × ಯಿಂತಪ್ಪ ಶರಣ ನುಡಿದುದೆ ತತ್ವ । ನಡೆದುದೆ ಸಿದ್ಧಾಂತ । ನೋಡಿದುದೆ ಅರ್ಪಿತ । ಮುಟ್ಟಿದುದೆ ಪ್ರಸಾದ । ಪರಿಣಾಮಿಸಿದುದೆ ತ್ರುಪ್ತಿಯಾದ ಮಹಾಶರಣಂಗೆ ಶರಣೆಂದು ಬದುಕಿದೆನು ಕಾಣಾ ಪರಮಪಂಚಾಕ್ಷರಮೂರ್ತಿ ಶಾಂತಮಲ್ಲಿಕಾರ್ಜುನಯ್ಯಾ ॥ ೧೧೪ ॥ ಅಲ್ಲೆಂನ ಆಹುದೆಂನಯೆಲ್ಲವು ತಂನಿಂದಾಯಿತ್ತಾಗಿ । ಬೇಕೆಂನ ಬೇಡೆಂನ ನಿತ್ಯದಿ ತೃಪ್ತತಾನೆ....

ವಿಷಯ : ಶರಣನ ನಡೆವಳಿಕೆಗೆ ಸಂಬಂಧಿಸಿದ ರೀತಿ ನೀತಿಗಳು.

ವಿಶೇಷ : ಅಸಮಗ್ರ. ಶಕಟರೇಫವಿದೆ. ೧೧೫ ರಿಂದ ೧೨೧ನೆಯ ವಚನಗಳವರೆಗೆ ಲುಪ್ತ, ಕಾರಣ ೨೯ ರಿಂದ ೩೩ನೆಯ ಪತ್ರಗಳಿಲ್ಲ. ಈ ಗ್ರಂಥವಾದ ಮೇಲೆ ಬರುವ ಬಸವಸ್ತೋತ್ರವೆಂಬ ಗ್ರಂಥದ ಆದಿಯಲ್ಲಿ ಲೋಪ ವಾಗಿದೆ. ಇದೇ ಕಟ್ಟಿನಲ್ಲಿ ಆಚರಣೆವಚನ, ಬಸವಸ್ತೋತ್ರ ಮೊದ ಲಾಗಿ ಒಟ್ಟು ಆರು ಕೃತಿಗಳಿವೆ.

[ಕ.ಹ ಪ್ರ.ವ.ಸೂ. ಚತುರ್ಥಸಂಪುಟ ಪುಟ ೩೯೯ ಕ್ರಮಾಂಕ 1874 ನೋಡಿ.]

—ಕೆಆರ್ಎಸ್

18

ಕೆ. ೧೧೩೭/೨ | **ಸಂಬಂಧದ ವಚನಗಳು** | ವಚನ

೮.೬" × ೨.೧" | ಸಂಪಾದನೆಯ ಚೆನ್ನಂಜೆದೇವ | ಸು. ೧೫೩೦

೧೧೩-೧೨೫ ಪತ್ರ | ೧೩ ಪಂಕ್ತಿ | ೫೪ ಅಕ್ಷರ

ಆದಿ : ...ತಂದುಕೊಟ್ಟನಾಗಿ ವೊಳಗೆಂನದೆ ಹೊಱಗೆಂನದೆ ಆ ಲಿಂಗವ ನಚ್ಚಿ ಮಚ್ಚಿ ಹರುಷದೊಳೋಲಾಡುವೆ । ಅದೆಂತೆಂದಡೆ । ಯೇತೋ ವಾಚೋ ನಿರ್ವರ್ತತೆ ಅಪ್ರಾಪ್ಯಮನಸಾಸಹನಾದ ಬಿಂದುಕಳಾತೀತಂ ಗುರುಣಾಂ ಲಿಂಗಮುದ್ಭವಂ ಯಿಂತೆಂದುದಾಗಿ ಮಹಾಘನಲಿಂಗನ ಪಡದು ಆನಂದಿಸುವೆ ಕೂಡಲಸಂಗಮದೇವಾ ॥ ೬

ಅಂತ್ಯ : ಸ್ಥೂಲ ಕಂಥೆ ಸೂಕ್ಷ್ಮಟೊಪ್ಪರ ಸತ್ಯದಂಡ

× × ×

ವೊಲುಮೆಯ ಶರಣರಿಗೆ ನಿಜಸುಖವನೀಯಲೆಂದು
ಕಲಿದೇವಾ ನಿಮ್ಮ ಶರಣ ಪ್ರಭುದೇವರಶ್ರೀಪಾದವಕಂಡು
ಅರ್ಚಿಸಿ ಪೂಜಿಸಿ ನಿಶ್ಚಿಂತನಾದೆನು ॥ ೧೨೧

ಚೆನ್ನಂಜೆಯದೇವರು ಸೇರಿಸಿದ ಸಮಂದದ ವಚನಗಳು ಸಮಾಪ್ತ ಮಂಗಳಮಹಾಶ್ರೀಶ್ರೀ.

ವಿಷಯ : ಶರಣರನ್ನು ಕುರಿತ ಸ್ತುತಿ.

ವಿಶೇಷ : ಇದೇ ಕಟ್ಟಿನಲ್ಲಿ ಬಸವಣ್ಣನ ವಚನಗಳು, ಮಿಶ್ರಸ್ತೋತ್ರ ಇತ್ಯಾದಿ ೧೦ ಕೃತಿಗಳಿವೆ.

—ಜಿಜಿಎಂ

19

ಕೆ. ೧೧೫/೨ **ಸಂಬಂಧದ ವಚನಗಳು** ವಚನ

೧೦.೫″ × ೨″ ಸಂಪಾದನೆಯ ಚೆನ್ನಂಜೆದೇವ ಸು. ೧೫೩೦

೧೭೧-೧೮೪ ಪತ್ರ ೧೨ ಪಂಕ್ತಿ ೫೪ ಅಕ್ಷರ

ಆದಿ : ಶ್ರೀಗುರು ಬಸವ ಲಿಂಗಾಯ ನಮಃ ಸಂಬಂಧದ ವಚನ

ವಚನ॥ ಭಕ್ತಂಗೆ ಕ್ರಿ ಮಾಹೇಶ್ವರಂಗೆ ನಿಶ್ಚಯ ಪ್ರಸಾದಿಗೆ ನಿಷ್ಠೆ ಪ್ರಾಣಲಿಂಗಿಗೆ ಯೋಗ। ಶರಣಂಗೆ ನಿಬ್ಬೆರಗು। ಐಕ್ಯಂಗೆ ನಿರ್ಲೇಪ। ಯಿಂತೀ ಷಟ್ಸ್ಥಲವನವಗವಿಸಿ ನಿಂದುದು ವಿರಕ್ತನ ಯೇಕಸ್ಥಲದಾಲಯ। ನಿಜತತ್ವದ ಕೂಟ। ಶಂಭುವಿಂಗಿಂದಿತ್ತ ಸ್ವಯಂಭುವಿಂದತ್ತ ಅತಿಬಳ ನೋಡಾ ಮಾತುಳಾಂಗ ಮಧುಕೇಶ್ವರನು.

ಅಂತ್ಯ : ಸ್ಥೂಲಕಂಥೆ ಸೂಕ್ಷ್ಮಕೊಪ್ಪರ। ಸತ್ಯದಂಡ। ಶಾಂತಿಭಸಿತ। ಸುಚಿತ್ತಮಣಿ। ತತ್ವಖರ್ಪರ। ವೈರಾಗ್ಯವೇ ಹಾವುಗೆ। ಮನದ್ರುಡವೆ ಕಾಪು। ಆಚಾರವೇ ಕಂಕಣ। ಕ್ಷಮೆದಮೆಯೇ ಕರ್ನಕುಂಡಲ। ಯಿಂತಿವೆರಸಿ ಸುಳಿವಮ ಜಗತ್ಪಾವನ ಮಾಡಲೆಂದು ಭಕ್ತಿಭಿಕ್ಷವ ಬೇಡುತ್ತ ಬಂದವಯ್ಯಾ। ತಂನ ವೊಲುಮೆಯ ಶರಣರಿಗೆ ನಿಜಸುಖವನೀಯಲೆಂದು ಕಲಿದೇವ ನಿಮ್ಮ ಶರಣಪ್ರಭುದೇವರ ಕಂಡು ಅರ್ಚಿಸಿ ಪೂಜಿಸಿ ನಿಶ್ಚಿಂತನಾದೆನು ॥ ಚಂನಂಜೆದೇವರು ಸೇರಿಸಿದ ಆಚರಣೆ ಸಂಬಂಧದ ವಚನ ಸಮಾಪ್ತ ಮಂಗಳಮಹಾಶ್ರೀ ಶ್ರೀ ಶ್ರೀ.

ವಿಷಯ : ಶರಣನ ನಡವಳಿಕೆ.

ವಿಶೇಷ : ಸಮಗ್ರ. ಈ ಕೃತಿಯ ನಂತರ ೧೮೪-೧೮೬ನೆಯ ಪತ್ರಗಳಲ್ಲಿ ಕೆಲವು ವಚನಗಳಿವೆ. ಇದರೊಡನೆ ಪ್ರಭುಲಿಂಗಲೀಲೆ ಮೊದಲಾದ ಇತರ ಗ್ರಂಥಗಳಿವೆ.

—ಹಕರಾ

20

ಕೆ. ೧೬೬೧/೧೨ | **ಸಂಬಂಧದ ವಚನಗಳು** | ವಚನ

೯.೪" × ೧.೭" | ಸಂಪಾದನೆಯ: ಚೆನ್ನಂಜೆದೇವ | ಸು. ೧೫೩೦

೧೩೦-೧೪೩ ಪತ್ರ | ೯ ಪಂಕ್ತಿ | ೪೩ ಅಕ್ಷರ

ಆದಿ : ಶ್ರೀಗುರು ಬಸವ ಲಿಂಗಾಯ ನಮಃ ‖ ಸಂಮುಂಥದ ವಚನ ‖ ಭಕ್ತಂಗೆ ಕ್ರೀ ಮಾಹೇಶ್ವರಂಗೆ ನಿಶ್ಚಯ ಪ್ರಸಾದಿಗೆ ನಿಷ್ಠೆ ಪ್ರಾಣಲಿಂಗಿಗೆ ಯೋಗ ಶರಣಂಗೆ ನಿಬ್ಜೆಜಗು ಆಯಿಕ್ಯಂಗೆ ನಿರ್ಲೇಪ ಯಿಂತೀ ಷಟ್ಸ್ಥಲವನವಗವಿಸಿ ನಿಂದುದು ವಿರಕ್ತನ ಯೇಕಸ್ಥಲವಾಟ ನಿಜ ತತ್ವದ ಕೂಟ । ಶಂಭುಗಿಂದಿತ್ತಶ್ವಯ ಬಿಗಿಂದತ್ತ ಅತಿಬಳ ನೋಡಾ ಮಾತುಳಂಗ ಮಧುಕೇಶ್ವರನೂ ‖ ೧ ‖

ಅಂತ್ಯ : ಸ್ಥೂಲಕಂಥೆ । ಸೂಕ್ಷ್ಮಪ್ರೋಪ್ಪುರ । ಸತ್ಯದಂಡ । ಕಾಂತಿಭಸಿತಾ ಸುಚಿತ್ತಮುಖ । ತತ್ವಕರ್ಪ್ಪರು ವೈರಾಗ್ಯ ಹಾವುಗೆ । ಮನದುೃಢವೆ ಕವುಪು । ಆಚಾರವೆ ಕಂಕಣ । ಕ್ಷಮೆದಮೆಯೆ ಕರ್ನ್ನಕುಂಡಿಲ ಯಿಂತೀವೆರಸಿ ಸುಳಿವನು । ಜಾಗತ್ಪಾಮನವ ಮಾಡಲೆಂದು ಭಕ್ತಿ ಭಿಕ್ಷನ ಬೇಡುತ । ಬಂದನಯ್ಯತ ನಮಃ ‖

ವಿಷಯ : ವೀರಶೈವ ಸಿದ್ಧಾಂತ

ವಿಶೇಷ : ಇದೇ ಕಟ್ಟಿನಲ್ಲಿ ಆಚರಣೆಯ ವಚನ, ಮಿಶ್ರಸ್ತೋತ್ರ, ಶೀಲದ ವಿವರ, ಬಸವ ಸ್ತೋತ್ರ, ಏಕೋತ್ತರ ಶತಸ್ಥಲ ಮೊದಲಾದ ೧೫ ಕೃತಿಗಳಿವೆ. ಮತ್ತು ಗುರುತಿಸಲಾಗದ ಕೆಲವು ಪತ್ರಗಳಿವೆ.

—ವೈಸಿಬಿ

21

ಕೆ ಎ. ೪೧೬ | **ಸಂಭಾಷಣೆಯ ಸರಣಿ** | ಗದ್ಯ.

೧೨.೫'' × ೮.೨'' | ? | ?

೪೭ ಪುಟ | ೨೧ ಪಂಕ್ತಿ | ೧೫ ಅಕ್ಷರ

ಆದಿ : ಸಂಭಾಷಣೆ ಸರಣಿ.
ಮೊದಲನೇ ಪಾಠ
ನಾನುಯಿದನ್ನ ವೋದಿದೆನು.
ನೀವುಯಿದರನ್ನ ಯಷ್ಟು ಸಾರಿ ವೋದಿದಿರಿ.
ಪ್ರತಿಶಬ್ದಗಳನ್ನು ಗ್ನಾಪಕ ತೋರುವತನಕ ಅದನ್ನ ವೋದಿದೆನು
ನೀವು ಅದರನ್ನ ಯತ್ತಿ ಬರದಿದ್ದೀರಾ
ಯತ್ತಿ ಬರದಿದ್ದೇನೆ.

ಅಂತ್ಯ : ಅವನು ಹೇಳಿದಂತ ಮರತು ಬಿಟ್ಟೆ
ಅದನ್ನು ಮರತುಬಿಟ್ಟರಾ
ನಾನು ಮರತುಬಿಟ್ಟೆ
ನಾನು ಮರತು ಹೋಗಲಿಲ್ಲಾ
ಯಿಾ ಪಂಙ್ತಿ ಡೊಂಕ್ಕಾಗಿ ಬರದುಯಿಧೆ
ಅದನ್ನ ಮತ್ತು ಬರೀ
ಅದನ್ನ ಡೊಂಕ್ಕುಯಿಲ್ಲದೆ ಬರೀ
ಸಮಾಪ್ತ :

ವಿಷಯ : ಸಂಭಾಷಣಾ ರೀತಿಯಲ್ಲಿ ಭಾಷೆಯನ್ನು ಕಲಿಯುವಿಕೆ.

ವಿಶೇಷ : ಶಿಥಿಲಪ್ರತಿ.

—ಬಿಎಸ್ಎಸ್

22

ಕೆ.ಬಿ. ೭೦೧/೧	ಸಂವತ್ಸರ	ಗದ್ಯ
೬.೫''×೮''	?	?
೩ ಪತ್ರ	೩೦ ಪಂಕ್ತಿ	೧೬ ಅಕ್ಷರ

ಆದಿ : ಪ್ರಭವಾ । ವಿಭವಾ । ಶುಕ್ಲಾ । ಪ್ರಮೋದೂತಾ । ಪ್ರಜೋತ್ಪತ್ಯಾ । ಅಂಗೀರಸ । ಶ್ರೀಮುಖಾ । ಭಾವಾ । ××× । ಅಂತೂ ೬೦ ಅರುವತ್ತು ಸಂವತ್ಸರಗಳೂ ॥

ಅಂತ್ಯ : ಭೂಲೋಕಾ–ಭೂಸ್ವಲೋರ್ಕಾ– ಸುವಲೋರ್ಕಾ–ಮಹಾಲೋಕಾ–ಜನಲೋಕಾ ××× ಮಹಾತ್ತಲ್ಲಾ – ಪಾತ್ತಾಳಾ – ಇವ ೭ ಸಪ್ತ ಲೋಕಗಳೂ–ಇತಿ ಸಂವತ್ಸರಾಸಿಕಲ ಶಾಸ್ತ್ರ ಸಂಪೂರ್ಣ ಮಂಗಳ ಮಹಾಶ್ರೀ ಶ್ರೀ ॥

ವಿಷಯ : ಸಂವತ್ಸರ ವಿಚಾರ.

ವಿಶೇಷ : ಕೃತಿ ಸಮಗ್ರ. ಪ್ರತಿ ಸುದೃಢ. ಅತ್ಯಂತ ಮೋಡಿ ಅಕ್ಷರ. ಇದರೊಂದಿಗೆ " ವೈದ್ಯ ನಿಘಂಟು " ಮುಂತಾದ ಕೃತಿಗಳಿವೆ.

—ಎಂಪಿಎಂ

23

ಕೆ. ೧೬೮೩/೧	**ಸಂವತ್ಸರ ಫಲ**	ಶ್ಲೋಕ, ಟೀಕು.
೮.೬'' × ೧.೭''	?	?
೨-೫ ಪತ್ರ	೬ ಪಂಕ್ತಿ	೩೦ ಅಕ್ಷರ

ಆದಿ : ಸಂವತ್ಸರ ಫಲಹೇಳು ಗ್ರಂಥಾ ॥ ವತ್ಸರಂ ದ್ವಿಗುಣೀಕೃತ್ವಾ ತ್ರೀಣಿ ಶೂಂನ್ಯಂ ಚಕಾರಯೇತ್ ಮಮಿರ್ಹರತೆ ಭಾಗಂ ಶೇಷಂ ದುರ್ಭಿಕ್ಷ ಲಕ್ಷಣಂ॥ ಫಲಗ್ರಂಥಾ॥ ಯೇಕಂ ಚತುರ್ಥಂ ದುರ್ಭಿಕ್ಷಂ ದ್ವಯೆ ಪಂಚ ಸುಭಿಕ್ಷಂಚ ತ್ರೀಣಿಷಷ್ಟಿಸಮಾಯುತಂ × × × ಯಿದಂನು ಸಂಕ್ರಾಂತಿ ಗಳು ಹುಟ್ಟುವ ದಿವಸಗಳಲ್ಲಿ ನೋಡಿ ಕೊಳ್ಳುವ ಕ್ರಮಾ ॥ ಸಂಕ್ರಾಂತಿ ಯೆಷ್ಟೋ ನಕ್ಷತ್ರಯೆಷ್ಟೋ ತಿಥಿಯಷ್ಟೋ ವಾರಂಯೆಷ್ಟೋ ಅಷ್ಟನ್ನು ವಟ್ಟುಗೂಡಿಯೇಳರಿಂದಾ ಹೆಚ್ಚುಗುಣಿಸಿ

ಅಂತ್ಯ : ಗ್ರಂಥ॥ ನಮಸ್ತುಂಗಶಿರಶ್ಚುಂಬಿ ಚಂದ್ರಚಾಮರ ಚಾರವೆ ತ್ರೈಲೋಕ ನಗಾರರಂಭ ಮೂಲಸ್ತಂಭಾಯ ಶಂಭವೆ ॥ ಶ್ರೀರುದ್ರಪ್ಪಸಂನಾ ಶ್ರೀಗುರು.

ವಿಷಯ : ಜ್ಯೋತಿಷ್ಯ.

ವಿಶೇಷ : ಅಸಮಗ್ರ. ಶೀರತ್ರುಟಿತ. ಇದರ ಜೊತೆಯಲ್ಲಿ ಮೋಹಚುಳಿಸಿಗೆ ಎನ್ನುವ ಒಂದು ವೈದ್ಯಪತ್ರವಿದೆ. ಅಲ್ಲದೆ ಶಿವಲಿಂಗಷಟ್ಪದಿಯೂ ಈ ಕಟ್ಟಿನಲ್ಲಿದೆ.

—ಜಿಜಿಎಂ

24

ಕೆ. ೧೪೩೦/೨	**ಸಕಲವೈದ್ಯ ಸಂಹಿತಾ ಸಾರಾರ್ಣವ (ವೀರರಾಜೋಕ್ತಿ ವಿಲಾಸ)**	ಗದ್ಯ.
೯.೬'' × ೧.೯''	ವೀರರಾಜೇಂದ್ರ	ಸು. ೧೭೨೦
೩ ಪತ್ರ	೧೧ ಪಂಕ್ತಿ	೪೪ ಅಕ್ಷರ

ಆದಿ : ಶುಭಮಸ್ತು ॥ ವೀರರಾಜೋಕ್ತಿ ವಿರೋಸಂಗ್ರಾಹಾ ॥ ನಾಡಿಪರೀಕ್ಷೆ ॥ ಆದೌ ಸರ್ವೇಷು ರೋಗೇಷು ನಾಡಿಜಿಂಹ್ಮಾಚ ಮೂತ್ರಕಂ ಪರೀಕ್ಷ ಯೇತ್ಸಯಂ ವೈದ್ಯಾ ॥ ಸದ್ವಿಧಾನಂ ನಿಗತದ್ಯತೆ ॥ ಪುರುಷೆರ್ಗೆ ಬಲದ ಕೈಯ್ಯ ಹೆಬ್ಬೆರಳಲ್ಲಿ ಮುಲದಲ್ಲಿ ಬಲೆಯೆ ಹಾಗದಹಾಗೆ ಶರಿರಾವಲಿ ವಾನೂ ವ್ಯಾಪಿಸಿಕೊಂಡು ಯಿರುವದು । ಸ್ತ್ರೀಯರ್ಗೆ ಯಡದ ಕೈಯಲ್ಲಿ ನೋಡುವದೂ

ಅಂತ್ಯ : ಶ್ಲೇಷ್ಮಲಕ್ಷಣ । ಕಿಸುವಾಯಲೂ ಹಡೆಯಗಿ ಬಂದುದೇ ಗುರುತು ಬಳಲಿಕೆಯು ನಿಷ್ಠುರಾವಾಗಿ ಅಲ್ಪ ಮತ್ತು ಮರವೆಚ್ಚೆ ಕಂನ್ಯಗುಧಿ ಶ್ಲೇಷ್ಮ ಒಕುಳುಯಿಲು ಕ್ಷೀಣ ಶ್ಲೇಷ್ಮಲಕ್ಷಣ.

ವಿಷಯ : ವೈದ್ಯ.

ವಿಶೇಷ : ಅಸಮಗ್ರ. ಇದೇ ಕಟ್ಟನಲ್ಲಿ ವೈದ್ಯಪುಸ್ತಕ ವೊದಲಾದ ೪ ಕೃತಿ ಗಳಿವೆ.

—ಜಿಜಿಎಂ

25

ಕೆ.ಬಿ. ೭೧೯/೧	**ಸಕಲಾಗಮಶಿಖಾಮಣಿ**	ವಚನ
೧೧.೨'' × ೫.೬''	ಬಾಲಸಂಗಯ್ಯ (?)	ಸು. ೧೧೬೦
೧-೧೮ ಪತ್ರ	೮ ಪಂಕ್ತಿ	೨೮ ಅಕ್ಷರ

ಆದಿ : ಶ್ರೀಗುರು ಬಸವ ಲಿಂಗಾಯ ನಮಃ ॥ ಸಕಲಾಗಮ ಶಿಖಾಮಣಿ ಬರವುದಕ್ಕೆ ಶುಭಮಸ್ತು ॥
ಶ್ರೀಮನ್ನಿರಾಳ ನಿರಂಜನ ನಿರಾಮಯಾತ್
ಪರಮಪರಮಾನಂದ ಪರಮಾತ್ಮ ಪರಮೇಶ್ವರ ಪರಾಪರಬ್ರಹ್ಮ
ಅಸಮತೇಜೋಮಯ.
ಅಗಣಿತಅಗೋಚರ ಅಪ್ರಮೇಯ × × ×
ಅಡಿಷುತ್ತಿರ್ದನು ನೋಡಾ ನಂಮ ಅಪ್ರಮಾಣಕೂಡಲಸಂಗಮ
ದೇವಾ ॥ ೧ ॥

ಅಂತ್ಯ : ಕಂಣಿಲ್ಲದ ಅಂಧಕನು ಕಾಲಿಲ್ಲದ ಪಶುವ ಮೆಯ್ಯುವನು
ಕಂಣಿಲ್ಲದ ಅಂಧಕನ ಅತಿಗಳದು
ಕಾಲಿಲ್ಲದ ಪಶುವು ವೊಡುಕ್ಕೆ ಗಗನದಲ್ಲಿ ತಲೆಯಿಲ್ಲದ

ವ್ಯಾಘ್ರ ಹಿಡಿದು ನುಂಗಿದುದ ಕಂಡು ಬೆರಗಾದೆ ನೋಡಾ
ಅಪ್ರಮಾಣ ॥ ೧೦೦ ॥

ಇತಿ ಸಕಲಾಗಮ ಶಿಖಾಮಣಿ ಸಮಾಪ್ತ ಶ್ರೀ ಶ್ರೀ.

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ. ಇದರ ಜೊತೆಯಲ್ಲಿ ನಿಗಮಾಗಮ ಸಾರ ಎನ್ನುವ ಕೃತಿಯೂ ಇದೆ.

—ಜಿಜಿಎಂ

26

ಕೆ. ೧೭೯೩	**ಸಕಲಾಗಮ ಸಾರವೃತ್ತಿ**	ಗದ್ಯ
೧೨ ೫" × ೨"	?	?
೧–೧೩೬ ಪತ್ರ	೭ ಪಂಕ್ತಿ	೫೫ ಅಕ್ಷರ

ಆದಿ : ಶ್ರೀ ಶಾಂತಿನಾಥಾಯನಮಃ ॥ ಶ್ರೀಮದಾದಿಬ್ರಹ್ಮಣೇನಮೋನಮಃ। ಸಕಲಾಗಮಸಾರಸ್ಯ। ವೃತ್ತಿಂ ಸದ್ಭಾವನಾಕರಿಂ ॥ ದ್ರವ್ಯಸಂಗಹ ಸೂತ್ರಸ್ಯ। ವಕ್ಷ್ಯೇನತ್ವಾಜಿನೇಶ್ವರಂ। ಪಂಚಾಸ್ತಿ ಕಾಯ ಷಡ್ದ್ರವ್ಯ ಸಪ್ತತತ್ವ ನವಪದಾರ್ಥಂ ಸಂಸಾರಮೋಕ್ಷಕಾರಣಮೆಂದೆಲ್ಲಾ ಗ್ರಂಥ ದರ್ಥಮನೊಬ್ಬುಳಿ ಮಾಡಿ ಸಂಕ್ಷೇಪಿಸಿ ಪೇಳುತ್ತಂ। ಸಕಲಾಗಮಧರ ರಪ್ಪ ಶ್ರೀಮನ್ನೇಮಿಚಂದ್ರಸಿದ್ಧಾಂತ ದೇವರು ತಮ್ಮಿಂ ರಚಿಇಸಲ್ಪಟ್ಟ ಗ್ರಂಥದಾದಿಯೊಳು ಚತುರ್ವಿಧಫಲಮನಪೇಕ್ಷಿಸಿ। ವಿಶಿಷ್ಟದೇವತಾ ವಿಶಿಷ್ಟಮಂಗಲಾರ್ತ್ಥಮಾಗಿ ನಮಸ್ಕಾರಮಂ ಮಾಡಿದಪರು.

ಅಂತ್ಯ : ಏತದ್ರವ್ಯಸಂಗ್ರಹಸೂತ್ರದ ವಿಸ್ತರಣ ಕರ್ಣಾಟಕ ವಿವರಣರೂಪ ಶ್ರೋತ್ರುಜನ ಹೃದಯಾನಂದಕಾರಿ ಸ್ವರ್ಗಾಪವರ್ಗ ಸುಖಸಂಪಾದ್ಯ ನ್ವರ್ಥ ಸಂಜ್ಞಕ ಭಾವನಾಸಾರ ಗ್ರಂಥದ ಸೂತ್ರಂ ಪಾತನಿಕೆ ಸೂತ್ರಾರ್ಥವಿವರಣ ತಾತ್ಪರ್ಯಮೆಂಬಿನಂ ಪ್ರತ್ಯೇಕಂ ವಿವಕ್ಷಿಸಿ ಕೇಳ್ದಾ ಪದದರ್ತ್ಥಂಗಳನಡಿಗಡಿಗೆ ಬಿಡದೆ ಎಡೆವರಿಯದೆ ಭಾವಿಸುವಂತ ಮುರ್ಮುಖನಪ್ಪಾಸನ್ನ ಭವ್ಯಂಗೆ ಸಂಸಾರನಿಬಂಧನ ಕಷಾಯಾದಿ ಸಕಲ ವಿಭಾವಮುಂ ಮೋಕ್ಷನಿಬಂಧನ ಸಮ್ಯಗ್ದರ್ಶನಾದಿ ನಿಖಿಲಸ್ವಭಾವ ಪ್ರಕಟನಮುಮಕ್ಕುಮಂ

ವಿಷಯ : ಜೈನತತ್ತ್ವ.

ವಿಶೇಷ : ಕೊನೆಯ ಪತ್ರಕ್ಕೆ ಕ್ರಮಸಂಖ್ಯೆ ಇಲ್ಲ.

—ವೈಸಿಬಿ

27

ಕೆ. ೧೦೦೦/೬	**ಸಕೀಲದ ವಚನ**	ಗದ್ಯ, ವಚನ
೧೨.೮″ × ೨″	?	?
೬೮–೭೪ ಪತ್ರ	೧೩ ಪಂಕ್ತಿ	೮೦ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯನಮಃ ॥ ಯಿಂನೂರಿಪ್ಪತ್ತೈದು ಸಕೀಲದ ವಚನವೆಂತೆಂದೊಡೆ । ತಾರಕಾಕೃತಿ ದಂಡಕಾಕೃತಿ ಕುಂಡಲಾಕೃತಿ ಅರ್ಧಚಂದ್ರಾಕೃತಿ ದರ್ಪಣಾಕೃತಿ ಜ್ಯೋತಿರ್ಮಯಾಕೃತಿ ನಿಷ್ಕಳಾಕೃತಿ ನಿರಂಜನಾಕೃತಿ ಈ ೯ಕೃತಿಗಳು ಈ ಕೃತಿಗಳ ಮಧ್ಯದಲ್ಲಿ ಪ್ರಣಮಂಗಳಾವಾವೆಂದಡೆ ನಕಾರ ಮಕಾರ ಶಿಕಾರ ವಾಕಾರ ಯಕಾರ ಓಂಕಾರ ಒಕಾರ ಕ್ಷಕಾರ ಪಕಾರ ಈ ೯ಪ್ರಣಮಂಗಳು × ×

ಅಂತ್ಯ : × × ಸುಜ್ಞಾನವೆ ಹಸ್ತ ಪ್ರಸಾದಲಿಂಗ ಶ್ರೋತ್ರವೆಂಬ ಮುಖಶಬ್ದದಾರ್ತ್ಥಸೂಶಬ್ದ ಪ್ರಸಾದಪರಶಕ್ತಿ ಆನಂದವೆಂಬ ಭಕ್ತಿ ಶಾಂತಿಕಲೆ ಶಿವಸಾದಾಖ್ಯಪರಿಪೂರ್ನವೆಂಬ ಲಕ್ಷಣ ಅನಾದಿವತ್‍ಯೆಂಬ ಸೌಗ್ನ ಅಜಪೆಯೆಂಬವೆಂದಯಿಂತಿಲೆಲ್ಲವುಯಿಷ್ಟಲಿಂಗದ ನಾಳದಲ್ಲಿ ಸಂಬಂಧವು ಜೋತಿರಾಕೃತಿ ಓಂಕಾರ ಪ್ರಣವ ಆಗ್ನಾ ಚಕ್ರಐಕ್ಯನೆ ಅಂಗ ಸದೋವಹಸ್ತೆ × × ಶ್ರೀಪಾದಪದ್ಮಕ್ಕೆ ನಮೋನಮೋಯೆಂಬೆನಯ್ಯ ಮಹಾದಾನಿ ಕೂಡಲಚನ್ನಸಂಗಮದೇವಾ × × ಆಧಾರ ಚಕ್ರದಲ್ಲಿ ದಳ ನಾಲ್ಕುದಳ ವಂದುದಳಕ್ಕೆ ೪೩೨ ಜಪ × × ಯಿಂತೀಜಪವವೊಟ್ಟು ಜಮಿ ೨೧೬೦ ಗಳಿಗೆ ೫೬೦ ಪಾನಿವಳ ೬೦೦ ಯಿಂತಿ ಸಕೀಲ ಸಮಾಪ್ತ ಮಂಗಳಮಹಾ ಶ್ರೀಶ್ರೀ.

ವಿಷಯ : ವೀರಶೈವಸಿದ್ಧಾಂತ

ವಿಶೇಷ : ಈ ಕಟ್ಟಿನಲ್ಲಿ ಹಂಸಪವನಲಕ್ಷಣ, ಬಿರುದಾವಳಿಗಳು ಇತ್ಯಾದಿ ೧೫ ಕೃತಿಗಳಿವೆ. ೧–೮೬ ಪತ್ರಗಳಲ್ಲಿ ಉದ್ಧರಣೆಯ ಪಟಲದ ಚಿತ್ರಗಳಿವೆ. ೬–೫೮ ಪತ್ರಗಳಿಲ್ಲ

—ಜಿಜಿಎಂ

28

ಕೆ.ಬಿ. ೬೯೭/೧೫	**ಸಕೀಲ ಸಂಬಂಧ**	ವಚನ
೬″ × ೮.೫″	ಚೆನ್ನಬಸವಣ್ಣ	ಸು. ೧೧೬೦
೪ ಪತ್ರ	೨೦ ಪಂಕ್ತಿ	೨೦ ಅಕ್ಷರ

ಆದಿ : ಶ್ರೀ ಮದ್ಗುರು ಸಿದ್ಧಲಿಂಗೇಶ್ವರಾಯ ನಮಃ ॥ ಬಸವಂಣ ಚಂನ ಬಸವಂಣ ಪ್ರಭುದೇವರು ಮುಖ್ಯವಾದ ಅಸಂಖ್ಯಾತ ಗಣಂಗಳೂ। ನಿರೂಪಿಸಿದ ಸಕೀಲ ಸಂಪುಂದಂಗಳು ತೊಂಬತಾರು ಸಕೀಲನೂರಾ ಪಂದು ಸ್ಥಲದ ಯಿಪ್ಪತ್ತೊಂದು ಸಾವಿರದ ಆರನೂರ ಜಪದ ಕಟ್ಟಳೆ ಯನು ಮೂರು ಸಾವಿರದ ಆನೂರ್ರ ಪಾನಿವಾಳ ಅರುವತ್ತು ಘಳಗಿ। ಬರವುದಕ್ಕೆ ಶುಭಮಸ್ತು ॥ ಲೇಖನಪಾಟಯೋಃ ಭದ್ರಂಭೂಯಾತ್ ತಾತಾಕೃತಿದಂಡತ್ಮಾಕೃತಿ । ಕುಂಡಲಾಕೃತಿ । ಅರ್ಧಚಂದ್ರಾಕೃತಿ । ದರ್ಪಣಾಕೃತಿ ಜೋತಿರಾಕೃತಿ ॥

ಅಂತ್ಯ : ಯಿಂತಿಷ್ಟು ತಿಳಿದು। ಅರ್ಪಿಸಬಲ್ಲಡೆ। ಆತಂಗೆ ಭಕ್ತನೆಂಬಾ। ಆತಂಗೆ ಮಹೇಶ್ವರನೆಂಬೆ ಆತಂಗೆ ಪ್ರಾಸಾಧಿಯೆಂಬೆ। × × × × । ಆತನ ಪಾದಕ್ಕೆ ನಮೊ ನಮೊ ನಮೊ ನಮೊ ನಮೊ ನಮೊ ನಮೊ ನಮೊ ಯಂಬೆನೈಯಾ ॥ ಕೂಡಲಚಂನಸಂಗಮ ದೇವಾ ॥

ವಿಷಯ : ವೀರಶೈವಸಿದ್ಧಾಂತ.

ವಿಶೇಷ : ಕೃತಿ ಸಮಗ್ರ ; ಪ್ರತಿ ಸುದೃಢ ; ಬರವಣಿಗೆ ಮೋಡಿ. ಇದರೊಂದಿಗೆ ಮಿಶ್ರಾರ್ಪಣ ಮುಂತಾದ ಕೃತಿಗಳಿವೆ.

—ಎಂಪಿಎಂ

29

ಕೆ. ೧೫೭೭/೧	ಸಜ್ಜನಚಿತ್ತವಲ್ಲಭ (ಸಟೀಕು)	ಶ್ಲೋಕ, ಟೀಕಂ
೭.೫″ × ೧.೭″	ಮಲ್ಲಿಷೇಣಸೂರಿ	?
೧–೨೦ ಪತ್ರ	೮ ಪಂಕ್ತಿ	೪೨ ಅಕ್ಷರ

ಆದಿ : ಪಂಚಗುರುಭ್ಯೋನಮಃ ॥ ಯಸ್ಯಸಜ್ಞಾನ ಕೋಣಸ್ಥೌಲೋಕಾ ಲೋಕ ವಣೋಪಮೌ ತಸ್ಮೈ ವೀರಜಿನೇಂದ್ರಾಯ ನಮಸ್ತತ್ರದ ಸಿದ್ಧಯೆ ॥ ಶ್ರೀಮಲ್ಲಿಷೇಣಪಂಡಿತ ದೇವರತ್ಯಾಸಂನಾಶೇಷವಿನೇಯ ಜನಂಗಳಂ ಸಂಬೋಧಿಪಲ್ವೇಡಿ ಸಜ್ಜನಚಿತ್ತವಲ್ಲಭಮೆಂಬ ಗ್ರಂಥಮಂ ವಿರಚಿಸುತಂ ಮೊದಲಲಿಷ್ಟದೇವತಾ ನಮಸ್ಕಾರಂ ಮಾಡಿಪರು ನತ್ವಾವೀರಜಿನಂ ಜಗತ್ರಯಗುರುಂ ಮುಕ್ತಿಶ್ರೀಯೋವಲ್ಲಭ × × ಜಗತ್ರಯಗುರುಂ । ತ್ರೈಲೋಕಕ್ಕೆ ಗುರುವಪ್ಪ । ಮುಕ್ತಿಶ್ರೀಯೋ ವಲ್ಲಭಂ । ಅನಂತಸುಖಸ್ವರೂಪವನುಳ್ಳ ಮೋಕ್ಷಲಕ್ಷ್ಮಿಗೆಜಿಯನಪ್ಪ

ಅಂತ್ಯ : ಇತ್ಯುಭಯಭಾಷಾಕವಿಶೇಖರ ಶ್ರೀಮಲ್ಲಿಷೇಣಸೂರಿ ವಿರಚಿತ ಸಜ್ಜನ

ಚಿತ್ತವಲ್ಲಭನಾಮ ಗ್ರಂಥಸ್ಯ ಸಕಲಜನಮನೋಹಾರಿಣಿ ಪರಮ ವಿರೋಧಿಕಾರಿಣಿ ಕರ್ನಾಟಕ ವೃತ್ತಿಸ್ಸಮಾಪ್ತಃ॥ ಶ್ರೀಪಂಚಗುರು ಭ್ಯೋನಮಃ.

ವಿಷಯ : ಜೈನತತ್ವ.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ. ಶಕಟರೇಫದ ಬಳಕೆಯಿದೆ. ಇದರ ಜೊತೆಗೆ ಶ್ರೀಪದಾಶೀತಿ ಎನ್ನುವ ಗ್ರಂಥವಿದೆ.

—ಜಿಜಿಎಂ

30

ಕೆ. ೧೧೪೭	**ಸತ್ಕ್ರಿಯಾಜ್ಞಾನಸಾರಾಮೃತ (ಸಟೀಕು)**	ಶ್ಲೋಕ, ಟೀಕು
೭″ × ೨″	?	?
೧–೬೭ ಪತ್ರ	೧೧ ಪಂಕ್ತಿ	೪೪ ಅಕ್ಷರ

ಆದಿ : ಗುರುಬಸವಲಿಂಗಾಯನಮಃ ಶ್ರೀಗುರುಬಸವಾದಿ ಪ್ರಮಥ ಗಣೇ ಭ್ಯೋನಮಃ ಪಾರ್ಥಿವನಾಮಸಂ॥ ಶ್ರಾವಣಶುದ್ಧ ೧ ಮಿಾಯಲ್ಲಿ ಆರಂಭಮಾಡಿದ ಪುಸ್ತಗವೂ॥ ಶ್ರೀಗುರುಭ್ಯೋನಮಃ ಸತ್ಕ್ರಿಯಾಜ್ಞಾ ನಾಮೃತವ ಬರವುದಕ್ಕೆ ಶುಭಮಸ್ತು ಆಯುರಾರೋಗ್ಯಮಸ್ತು ಶೋಭ ನಮಸ್ತು। ವೃತ್ತ

ಗುರುಚರಣಂ ಭವಹರಣಂ ಶರಣಹೃದಯ ಭರಣಮತ್ತ
ಕರಸುಕಕರಣಂ। ಮರಣಭಯಾದುತ್ತಣ ತರುಣೀರುಣ
ಕಿರುಣವರಣಮಹಮಿಾಳೇ॥೧॥

ಅಂತ್ಯ : ಪಂಚಾಚಾರಕ್ರಮಂ ಯುಕ್ತಂ
ತಾದಾದಿರಾಮನಿರ್ನಾಮಂ।
ಮಹಾತ್ಮಂ ಮಮರೂಪಯೋ
ಗುರೋಕ್ತಂ ಮಂತ್ರಮಾತ್ರೇಣ॥
ಯಿಷ್ಟಮಿಗೆ ಶುಶಾಂತಪ
ಈಶ್ವರೋವಾಚ॥

ವಿಷಯ : ವೀರಶೈವಾಗಮಸಾರ.

ವಿಶೇಷ : ಗ್ರಂಥ ಪೂರ್ಣವಾಗಿದೆ. ಅಕ್ಷರ ಚೆನ್ನಾಗಿದೆ. ಕನ್ನಡದಲ್ಲಿ ಪ್ರತಿಪದಕ್ಕೆ ಅರ್ಥವನ್ನು ಬರೆದಿದೆ.

—ಎಂಸಿಪಿ

31

ಕೆ. ೧೩೨೮ | ಸತ್ಕ್ರಿಯಾಜ್ಞಾನಸಾರಾಮೃತ (ಸಟೀಕು) | ಶ್ಲೋಕ, ಟೀಕು
೯.೬″ × ೨″ | ? | ?
೧–೬೪ ಪತ್ರ | ೧೧ ಪಂಕ್ತಿ | ೫೫ ಅಕ್ಷರ

ಆದಿ : ಶ್ರೀಗುರುಬಸವಾಯನಮಃ। ಸತ್ಕ್ರಿಯಾಗ್ನಾನಸಾರಾಮ್ರುತ ॥ ಗುರುಚರಣಂಭವಹರಣಂ ಶರಣಹೃದಯಾಭರಣಮಾತ್ಮಸುಖಕರಣಂ ಮರಣಭಯಾದುತ್ತ ಮರಣ ಕರುಣಾರುಣ ಕಿರಣವರಣ ಮಾಹಾಮಿೂಲೆ ಟೀಕೂ ॥ ಭವಹರಣಂ। ಸಂಸಾರವ ಸಂಹರಿಸುತ್ತಿದ್ದ ಶರಣಹೃದಯಾಭರಣವಾಗಿರ್ದ। ಆತ್ಮಸುಖಕರಣಂ। ಆತ್ಮಸುಖಯೇವ ಮಾಡುವ ಮರಣಭಯಾತ್। ಮರಣಭೀತಿಯದೆಸೆಯಿಂ ಉತ್ತರಣಂದಾಂಟಿಸುತಿರ್ದ। ವರುಣಾಕಿರಣವರಣಂ। ಹೊಸತಾದ ರಕ್ತವರ್ಣದ ಕಿರಣಗಳಿಂದ ಮುಸುಕಿದ ಗುರುಚರಣಂ। ಗುರುಚರಣವನು। ಅಹಂ ನಾನುಯಿೂಳೆ ಸ್ತೋತ್ರವಂ ಮಾಡುತ್ತಲಿರ್ದೆನೂ ॥೧॥

ಅಂತ್ಯ : ಭಕ್ತಮುಕ್ತ ವಿರಕ್ತಸ್ಯ ಸಕಲಂ ವಸ್ತುಚೇತನಃ। ಬ.... ಕೃತಸ್ಮೃತ್ಯಂ ಸರ್ವಯುಗಂ.... ಕಾರಸ್ವರೂಪರಾದ ಭಕ್ತಂ। ಭಕ್ತರುಗಳು। ವಿರಕ್ತ। ವಿರಕ್ತರುಗಳು। ಮುಕ್ತಂ। ಮುಕ್ತರಾದೆವೆಂಬವರು।....ಲ್ಲಚೈತಂ.... ಪವಾಗಿ ಸರ್ವಯುಗಂ ಪ್ರಸಸ್ಯತೆ। ಎಲ್ಲಾ ಯುಗಂಗಳಲ್ಲಿಯೂ ತೋಜಲ್ಪಟ್ಟಹಂಥಾ। ಬಸವನಾ....ವಾಯಂಬ ನಾಮವನು.... ಚ್ಚರಣೆಯಾಗಿ ಕ್ರುತಂ ಮಾಡುವದೂ ॥೧೧೧॥ ಅಂತೂ ವುಭಯಂ ಸ್ಥಲಂ ೪೫೩ಕಂ ಮಂಗಳ × × ವಿಕ್ರಮಸಂ.... ರದ ಪುಸ್ಯ ಬಹುಳ ೧ ಲ್ಲು ಯಿೂ ಸಾಸ್ತ್ರ ಬರದು ಸಮರ್ಪಿತವಾದುದು ಮಂಗಳ ಮಹಾ ಶ್ರೀಶ್ರೀ.

ವಿಷಯ : ವೀರಶೈವ ಆಚಾರ ವಿಚಾರಗಳು.

ವಿಶೇಷ : ಸಮಗ್ರ. ಇದೇ ಕಟ್ಟಿನಲ್ಲಿ ಕೃತಿ ಗೊತ್ತಾಗದ ೨೩ ಮತ್ತು ೨೪ ನೆಯ ಸಂಖ್ಯೆಯ ಎರಡು ಪತ್ರಗಳಿವೆ.

— ಜಿಜಿಎಂ

32

ಕೆ.ಬಿ. ೬೩೯ | ಸತ್ಕ್ರಿಯಾ ಸಮಾಧಿ ವಿವರ | ತ್ರಿವಿಧಿ, ಗದ್ಯ
೮.೨″ × ೬.೬″ | ? | ?
೧–೧೮ ಪತ್ರ | ೧೯ ಪಂಕ್ತಿ | ೨೮ ಅಕ್ಷರ

ಆದಿ : ತ್ರಿವಿಧಿ ಬರೆವುದಕ್ಕೆ ಶುಭಮಸ್ತು
ಗುರುರಾಯು ತಂನ ಮಗನೊರೆದ ಸ್ತೋತ್ರಕ್ಕೆ ಮಚ್ಚಿ
ಪರಮಹರುಷದಲಿ ಕರದೆತ್ತಿ ಬೋಧಿಪನು
ಶಿರದಾ ಮೇಲಭಯಾಕರವಿಟ್ಟು ॥ ೧ ॥

ಅಭಯ ಹಸ್ತವನಿಟ್ಟು ಅಭಿಮುಖದೆ ಕುಳ್ಳಿರ್ಸಿ
ಶುಭವಾರ ತಾರ ತಿಥಿಗಳಿಂದನುಸರಿಸಿ
ಅಭವ ಬೋಧಿಪನು ಶಿಷ್ಯಂಗೆ ॥ ೨ ॥

ಅಂತ್ಯ : ಬಕಾರವಿದ್ದರೆ ಗಣಸಂನ್ನಿಧಿ ಪದವಿ। ಸಕಾರವಿದ್ದರೆ ಗಣನಾಮ ಪದವಿ। ನಕಾರವಿದ್ದರೆ ಶಿವಸಂನ್ನಿಧಿ ಪದವಿ। ಗೋಳಕವಿದ್ದರೆ ಪರಬ್ರಹ್ಮಾ ಮುಃಕ್ತಿ ಪದವಿಯೆಂದು ಹೇಳುವದು. ಯಿದುಸತ್ತ್ಯವೆಂದರು ಮುಕ್ತರು। ಯಿದು ಅಸತ್ಯವೆಂದವರಿಗೆ ನರಕಕಾರಣ ಮಹಾದಾನಿಕೂಡಲ ಸಂಗಮ್ನ ದೇವಾ ಇಲ್ಲಿಗೆ ಸಶ್ಯಿಯ್ಯ ಸಮಾಧಿಯ ವಿವರ ಸಂಪೂರ್ಣ ಮಂಗಳ ಮಹಾ ಸಮಾಧಿಗೆ ಹೇಳುವ ಶತಕಂಗಳು। ಸುಗ್ನಾನ ಚಿಂತಾಮಣಿ ಯೊಳಗಿನದೂ ॥ ಸಾದಿಸುವ ಚಾಷ್ಠ ಮಿದಿದ್ನವ ಹಾದಿಯಲ್ಲಿದು ಕೇಳು ಆತ್ಮಸಮಾಧಿ ಕರ್ಮವಿರೋಧಿ ಬ್ರಂಹ್ಮಾದನಾದಿ ಕೇಳೆಂದಾ ॥ ೧ ॥

× × ×

ಮನವಚನ ಕಾಯಕದಿ ಫಲವನು
ನೆನಿಯದವ ತಾಜೀವ ಪರಮುದ
ನೆನಹಿನುಸಂಧಾನದಿಂದನುದಿನದಿ ಸಮಾಧಿಯುಲೀ ॥ ೫ ॥
ಇತೀ ಶತಕಂಗಳೈದು ಪೇಳ್ವೆನು ಯಿತಿ ಶ್ರೀ.

ವಿಷಯ : ವೀರಶೈವರಲ್ಲಿ ಮರಣಹೊಂದಿದವರ ಸಮಾಧಿವಿವರಣೆ.

ವಿಶೇಷ : ಇದೇ ಪುಸ್ತಕದಲ್ಲಿ ಮರಣಚಿಹ್ನ, ಬಹಿರಂಗಮರಣಚಿಹ್ನ, ವಿಭೂತಿ ವೀಳ್ಯ, ರುದ್ರಾಕ್ಷಿ ಸಂಬಂಧಿಸುವುದು, ಬಸವಣ್ಣನವರು ಕೂಡಲ ಸಂಗಮೇಶ್ವರ ಗುಡಿಗೆ ಹೋಗಿ ಸ್ತೋತ್ರವನ್ನು ಹೇಳಿದ ವಚನಗಳು, ಸವಾಲು–ಸವಾಲಿಗೆ ಜವಾಬು ಎಂಬೀ ವಿಷಯಗಳಿವೆ. ಅಲ್ಲಲ್ಲಿ ಸಮಾಧಿ ಕ್ರಮದ ಚಿತ್ರಗಳಿವೆ. ಅಕ್ಷರವು ಚೆನ್ನಾಗಿದೆ.

—ಕೆಆರ್ಎಸ್

33

ಕೆಎ. ೪೩೫	**ಸತ್ಯಭಾಮಾ ಕಲ್ಯಾಣಂ**	ಯಕ್ಷಗಾನ
೧೦.೫″ × ೬.೫″	?	?
೧–೬೨ ಪುಟ	೨೦ ಪಂಕ್ತಿ	೨೦ ಅಕ್ಷರ

ಆದಿ : ಶ್ರೀಶುಭಮಸ್ತು । ನಿರ್ವಿಘ್ನಮಸ್ತು । ಸತ್ಯಭಾಮಾಕಲ್ಯಾಣ ॥ ದ್ವಿಪದೆ ॥ ಬರಿಯಲು ಶುಭಮಸ್ತು । ಶ್ರೀಕಾಂತನಿವಾಸ ಶ್ರೀಸೋಮ ದೈವರಿಪುಮದಭಂಗ । ದಿವ್ಯಕೃಪಾಂಗ ದಾನವಸಂಹಾರ ದಾರಿದ್ರದೂರ ವಾನರಸೇವಾ ವೈಕುಂಠವಾಸ ಸರ್ವತಭೂಷ ಕಂದರ್ಪರೂಪ ದಿವಕರ ಸಮವಿಟ್ಟು ಶ್ರೀತಿಮ್ಮರಾಯಾ ॥ ವಚನಾ ॥ ಯಿಂತೆಂದು ಪ್ರಾರ್ಥನೆ ಯಂ ಮಾಡಿ ಇಷ್ಟಾರ್ಥವರಗಳಂ ಪಡದು ಅಹೋಬಲವಾಸ ಶತರವಿ ಸಂಕಾಶ ಕಾಯೋ ದಿವ್ಯಜನಕ ಕಾರುಣ್ಯಗಮಕ ನಾರಸಿಂಹಸ್ವರೂಪ ನಾನಾಭೀತಿಟೋಪ ನರಸಿಂಹ ಬಹುನಾಮನಾಥಜನಪ್ರೇಮ ರಕ್ಷಿಸು ವುದು ಎಂದು ರಾಜೀವಾಕ್ಷಂಗೆರಗಿ ಅಕ್ಷಯವರವಂ ಪಡದು ಆನಂದ ದಿಂದ ದೇವನಂ ಭಕ್ತನುಕಾಪನಂ ಚಕ್ರಿಂಗೆ ಭಾವನಂ ಸಂಜೀವ ಶ್ರೀ ಕೃಷ್ಣದೇವನಂ ಭಜಿಸಿ ॥ × × × ಶ್ರೀಸತ್ಯಭಾಮಾವಿವಾಹದ ಕಥಾ ಪ್ರಾರಂಭವದೆಂತೆನೇ ॥

ಅಂತ್ಯ : ಸತ್ಯಭಾಮಾ ಕಲ್ಯಾಣ ಅವನಿಯೊಳೆಲ್ಲ ಆ ಚಂದ್ರಾರ್ಕವಾಗಿ ಚತು ಸ್ಸಾಗರ ಪರಿಯಂತರ ಅವನಿಯಲ್ಲಾ ಪ್ರಕಟಿಸುತ್ತಿರಲೀ ॥ ಇತಿ ಸತ್ಯ ಭಾಮಾ ಕಲ್ಯಾಣ ಮಹೋತ್ಸವ ಸಂಪೂರ್ಣಂ ಮಂಗಳಂ ಮಹಾಶ್ರೀ ಶ್ರೀಕೃಷ್ಣಾರ್ಪಣಮಸ್ತು.

ವಿಷಯ : ಶ್ರೀಕೃಷ್ಣ ಮತ್ತು ಸತ್ಯಭಾಮೆಯರ ವಿವಾಹ.

ವಿಶೇಷ : ಇದನ್ನು ಮದರಾಸು ಪ್ರಾಚ್ಯಕೋಶಾಗಾರದಲ್ಲಿ 1924-25ರಲ್ಲಿ 18-7-20 ಪ್ರತಿಯಿಂದ ನಕಲು ಮಾಡಲಾಗಿದೆ.

— ಬಿಎಸ್‌ಎಸ್

34

ಕೆ. ೧೬೬೭	**ಸತ್ಯೇಂದ್ರಚೋಳನ ಸಾಂಗತ್ಯ**	ಸಾಂಗತ್ಯ
೧೦.೬" × ೨"	ಶಾಂತಕವಿ	ಸು. ೧೬೦೦
೧-೬೨ ಪತ್ರ	೧೨ ಪಂಕ್ತಿ	೫೦ ಅಕ್ಷರ

ಆದಿ: ಶ್ರೀ ಗುರುಶಿದ್ಧಲಿಂಗಾಯ ನಮಃ ॥ × × ×
ಪದನು ॥
ಶ್ರೀಪತಿ ಸುರಪತಿ ಪದ್ಮಜಾರ್ಚಿತಾ
ಶ್ರೀಪಾದಪಂಕಜಯುಗಳಾ
ಶ್ರೀಪಾರ್ವತಿಯ ಕಾಂತ ಶ್ರೀಪದವಿಯನಿತ್ತು
ಶ್ರೀ ಪರಮೇಶ್ವರ ಜಯತು ॥ ೧ ॥

ಅಂತ್ಯ : ಯಿಾ ವರ ಸತ್ಯೇಂದ್ರಚೋಳನ ಚಾರಿತ್ರವ
ಭಾವಿಸಿ ಕೇಳ್ವ ಪೇಳ್ವರಿಗೆ
ದೇವೇಂದ್ರಪದವಿತ್ತು ಕಾವ ಶ್ರೀಗುರುಶಾಂತ
ಭೂವಿ ಚಂದ್ರಾರ್ಕರುಳ್ಳನಕಾ ॥ ೧೪೧ ॥
ಅಂತು ಸಂಧಿ ೯ಕ್ಕಂ ಪದನು ೧೭೦೧ಕ್ಕಂ ಮಂಗಳ ಮಹಾಶ್ರೀ.

ವಿಷಯ : ಸತ್ಯೇಂದ್ರಚೋಳನ ಕಥೆ

ವಿಶೇಷ : ಸಮಗ್ರ. ಇದೇ ಕಟ್ಟಿನಲ್ಲಿ ಬೇರೊಂದು ಕೃತಿಯ ಒಂದು ಪತ್ರವಿದೆ.

—ವೈಸಿಬಿ

35

ಕೆ.ಬಿ. ೬೫೧/೧	**ಸದಾಶಿವ ನೀತಿ**	ಕಂದ, ವೃತ್ತ
೬.೫" × ೮"	ಸೋದೆಯ ಸದಾಶಿವ	೧೬೭೩
೨-೪೩ ಪತ್ರ	೧೫ ಪಂಕ್ತಿ	೧೮ ಅಕ್ಷರ

ಆದಿ : ದಿವಿಭುವಿರವಿ ಕವಿಪವಿಚವಿ।
ಭವಸವಿ ಭವಭುವನ ವಸುವ
ಭುವನವನೀವಾ ॥
ಆವಶಿವ ಭವ.....ಸವರುವ
ಯುವಲವ ಜೀವನ ವಶವ ದೇವನೆ ಸವಿವಾ ॥ ೪ ॥

ಅಂತ್ಯ : ಶಿವಶಂಕರ ಚಂದ್ರಶೇಖರ
ಭವನಾಶನ ಭರ್ಗಭೀಮ ಭಸಿತೋಜ್ವಲನೆ ॥
ರವಿಶಶಿ ಪಾವಕನೇತ್ರನೆ
ಕವಿತಾ ವರಧಾತ ಕಾಯೋ ಗುರುನಂದೀಶಾ ॥ ೩ ॥
॥ ೫೧೪ ॥ ಶ್ರೀ ॥

× × × × × ×

ಶ್ರೀಮಂನ್ಮಹಾವೀರ ಮಹೇಶ್ವರಾಚಾರ್ಯ ಮಳೆಯ ಗುರುನಂದೀಶ್ವರ ಕರುಣ ಸಂಜಾತ ಸದಾಶಿವ ನೀತಿ ಪಂಚಶತಕ ಸಂಪೂರ್ಣವಿತಿ ಶಿವಂ ॥ ಮಂಗಳ ಮಹಾಶ್ರೀ ಶ್ರೀ ॥

ವಿಷಯ : ಭಕ್ತಿ, ಜ್ಞಾನ, ವೈರಾಗ್ಯ ಹಾಗೂ ವ್ಯವಹಾರ ಬೋಧಕ ನೀತಿಗಳು ಪ್ರತಿಪಾದಿತವಾಗಿವೆ.

ವಿಶೇಷ : ಅಸಮಗ್ರ. ಮೋಡಿ ಅಕ್ಷರ. ಇದರೊಂದಿಗೆ ಅಪರಾಧ ಸ್ತೋತ್ರ ಮುಂತಾದ ಕೃತಿಗಳಿವೆ.

—ಎಂಪಿಎಂ

36

ಕೆ.ಬಿ. ೬೬೬/೨ | ಸದ್ಗುರು ನಿರಾಳ ಸ್ತೋತ್ರ | ಭಾಮಿನೀ ಷಟ್ಪದಿ

೬'' × ೪'' | ? | ?

೨-೮ ಪತ್ರ | ೮ ಪಂಕ್ತಿ | ೨೦ ಅಕ್ಷರ

ಆದಿ : ಗುರುವೇಗತಿ ಸದ್ಗುರು ಚೀಲಾಳ ಸ್ತೋತ್ರ.
ಶ್ರೀಮದಮಲಾನಂದನಥಜನ
ಪ್ರೇಮ ಶಾಸ್ವಿತರವಿಶಶಿ
ಧಾಮನಿರ್ಜರ ನಿತ್ಯನಿಗಮಸ್ತೋಮನುತಚರಣಾ
ಕಾಮಸಂಹರ ವರಕೃಪಾಕರ
ನಾಮಸೀಮೆಗಳಿಲ್ಲದಾ ಚರಿತ
ಸ್ವಾಮಿ ಗನತರ ಪರಮ ಶ್ರೀಗುರುದೇವ ಶರಣಾರ್ತಿ ॥ ೧ ॥

ಅಂತ್ಯ : ಶರಣು ನಿತ್ಯಗೆ ಶರಣುಸತ್ಯ
ಶರಣು ಶಾಸ್ವಿತ ಶರಣುಭಾಸ್ವಿತ
ಶರಣುಕಂಧರ ಶರಣುಬಂಧುರ ಶರಣುಭವನಾಶ
ಶರಣುಶೀಲನೆ ಶರಣುಲೋಲನೆ
ಶರಣುಶಾಂತನೆ ಶರಣುಕಾಂತನೆ
ಶರಣುಶಂಭು ಶ್ರೀಗುರುದೇವ ಶರಣಾರ್ತಿ ॥ ೨೩ ॥

ಯಿಾ ತೆರದು ಗುರುಸ್ತುತಿಯನಾಮವ
ನೆಂತು ಬರದೋದಿದೊಡೆ ಮನದೊಳು
ಪೂತಮಯ ಸುಜ್ಞಾನಸಂಚರಿಸುವದು ದಿಟ ಬಳಿಕಾ
ಜಾತಿ ಸೂತಕ ಭ್ರಾಂತಳಿದು ನಿ
ರ್ಜಾತ ನಿರುಪಮ ನಿಜಗುರು ಬಸವಲಿಂಗನೊಳೈಕ್ಯಸಿದ್ಧಿಸಿಗುಂ
ಚೀಲಾಳಸ್ತೋತ್ರ ಸಂಪೂರ್ನ ಜಯಮಂಗಳಮಹಾಶ್ರೀ ॥ ೨೪ ॥

ವಿಷಯ : ವೀರಶೈವ ಸಿದ್ಧಾಂತ ಹಾಗೂ ಸ್ತೋತ್ರಪದ್ಯಗಳು.

ವಿಶೇಷ : ಸಮಗ್ರವಾಗಿದೆ. ಕಾಗದವು ತೆಳುವು. ಅಂತ್ಯದಲ್ಲಿ ಉಲ್ಲೇಖಿಸಿರುವ ಪದ್ಯದಲ್ಲಿ ಛಂದಸ್ಸಿನ ದೋಷವಿದೆ. ಇದೇ ಪುಸ್ತಕದಲ್ಲಿ ಗಿರಿಜಾ

ಸ್ತೋತ್ರ, ಮರುಕರುಣಾಮೃತ ಹಾಗೂ ಹಾಡು, ಲಾವಣಿ ಎಂಬ ಇತರ ಕೃತಿಗಳೂ ಇವೆ.

—ಕೆಆರ್‌ಎಸ್

37

ಕೆ.ಬಿ. ೬೫೧/೩	**ಸದ್ಗುರು ನಿರಾಳ ಸ್ತೋತ್ರ**	ಭಾಮಿನೀಷಟ್ಪದಿ
೬.೫" × ೮"	?	?
೪೮-೫೨ ಪತ್ರ	೧೫ ಪಂಕ್ತಿ	೧೮ ಅಕ್ಷರ

ಆದಿ : ಶ್ರೀಗುರು ಮುರುಗೇಂದ್ರಾಯನಮಃ ॥ ಸದ್ಗುರುನಿರಾಳಸ್ತೋತ್ರ ಬರೆವುದಕ್ಕೆ ಶುಭಮಸ್ತು ॥
ಶ್ರೀಮದಮಲಾನಂದ ನತಜನ
ಹೇಮಶಾಶ್ವತ ಶಾಂತ್ತರವಿಸೇಸಿ
ಧಾಮ ನಿರ್ಜರ ನಿತ್ಯ ನಿಗಮಸ್ತೋಮ ನುತಚರಣಾ ॥ ಪಲ್ಲ ॥
ಕಾಮಸಂಹರ ವರಕೃಪಾಕರ
ನಾಮಶೀಮೆಗಳಿಲ್ಲದಚಲಿತ
ಸ್ವಾಮಿಘನತರ ಪರಮಶ್ರೀಗುರುದೇವ ಶರಣಾರ್ಥಿ ॥ ೧ ॥

ಅಂತ್ಯ : ಯಿೊತ್ಸರದ ಗುರುಸ್ತೋತ್ರಸಾಮವ
ನೋತು ಬರದೋದಿದೊಡೆ ಮನದೊಳು
ಪೂತುಮಯಸುಗ್ನಾನ ಸಂಜನಿಸುವದು ಧಿಟ ಬಳಿಕಾ
ಜಾತಿ ಸೂತ್ರಕ ಭ್ರಾಂತಳಿದು ನಿ
ರ್ಜಾತ ನಿರುಪಮ ನಿತ್ಯಘಪರಂ
ಜೋತಿ ನಿಜಗುರುಬಸವಲಿಂಗನೊಳೈಕ್ಯ ಸಿದ್ಧಿಪುದೂ ॥ ೨೫ ॥
ಯಿತಿ ಸದ್ಗುರು ನಿರಾಳಸ್ತೋತ್ರ ಸಮಾಪ್ತ ಮಂಗಳಮಹಾ ಶ್ರೀ ಶ್ರೀ ॥

ವಿಷಯ : ಶಿವಸ್ತುತಿ.

ವಿಶೇಷ : ಸಮಗ್ರಕೃತಿ. ಮೋಡಿಅಕ್ಷರ. ಇದರೊಂದಿಗೆ ಸದಾಶಿವನೀತಿ ಮುಂತಾದ ಇತರ ಕೃತಿಗಳಿವೆ.

—ಎಂಪಿಎಂ

38

ಕೆ. ೭೭೩/೭ **ಸದ್ಗುರುರಗಳೆ** ರಗಳೆ

೬.೬" × ೧.೮ ಪಾಲ್ಕುರಿಕೆ ಸೋಮನಾಥ ಸು. ೧೯೫೫

೫೧-೬೩ ಪತ್ರ ೮ ಪಂಕ್ತಿ ೨೩ ಅಕ್ಷರ

ಆದಿ : ಗುರುಬಸವಲಿಂಗಾಯನಮಃ ॥ ಸದ್ಗುರುರಗಳೆ ॥
ಶ್ರೀಗುರುಲಿಂಗಘೃಣಾಂಮ್ರುತರ । ಪಾಲಿಸೆಂನುವಂ ಬಸವೇಶಾ ॥
ಶ್ರೀಗುರುಭ್ಯೋನಮಃ । ಶಿವಮೂರ್ತಿಸದ್ಗುರುವೆ ॥ ೧ ॥
ಅಂಗಮಧ್ಯಾಂತಃ ಸಿರೋವರ್ತ್ತಿ ಸದ್ಗುರುವೆ ॥ ೨ ॥
ಭಾವನಾತೀಕಃತ್ರಭೋಸ್ಫೂರ್ತ್ತಿ ಸದ್ಗುರುವೆ ॥ ೩ ॥
ಭೂವಿನಳಲಗ್ಬರಿತಕೀರ್ತಿ ಸದ್ಗುರುವೆ ॥ ೪ ॥

ಅಂತ್ಯ : ಗವುರವಮಹಿಮರಗಳೆಯ
ಗವುರವಕ್ರುಪೆಯಿಂದ ಪಾಲ್ಕುಱಿಕೆಯ ಸೋಮಾಂಕಂ
ಗವುರವರತಿಯಿಂ ರಚಿಸಿದ
ಗವುರವನ ಯಿಷ್ಟಕರನುಷ್ಟಿಸಲ್ ಬಸವೇಷಾ ॥ ೩ ॥
ಸದ್ಗುರು ರಗಳೆ ಸಮಾಪ್ತ ಮಂಗಳಮಹಾಶ್ರೀ ॥

ವಿಷಯ : ಗುರುಮಹಿಮೆ (ಸ್ತುತಿ).

ವಿಶೇಷ : ಸಮಗ್ರಕೃತಿ. ಇದರೊಡನೆ ಗುರುರಗಳೆ, ಷಡಕ್ಷರಿಯರಗಳೆ, ಶರಣು ಬಸವರಗಳೆ, ವೀರಶೈವರಗಳೆ, ಭೀಮಕವೀಶ್ವರರಗಳೆ, ಬಸವೇಶ್ವರ ಪವಾಡದರಗಳೆ, ಮನೋವಿಕಾರರಗಳೆ, ಗುರುಬೋಧಾಮೃತರಗಳೆ, ಬಸವರಾಜರಗಳೆ, ಲಿಂಗಾರ್ಚನರಗಳೆ, ಭಕ್ತಿಬಿನ್ನಹದರಗಳೆ, ಮಂಗಳಾಷ್ಟಕ(ಶರಣಗಣನಾಮಸ್ತೋತ್ರ), ಅಷ್ಟಾವರಣದಮಂಗಳಾಷ್ಟಕ, ಇಪ್ಪತ್ಮೂರು ಮಂಗಳಾಷ್ಟಕಗಳು, ದೇವೀಸ್ತೋತ್ರ ಇತ್ಯಾದಿ ಕೃತಿಗಳಿವೆ.

—ಎಸ್‌ಎನ್‌ಕೆ

39

ಕೆ. ೧೧೧೩/೮ **ಸದ್ಗುರುರಗಳೆ** ರಗಳೆ

೧೧.೭" × ೧.೧೧" ಪಾಲ್ಕುರಿಕೆ ಸೋಮನಾಥ ಸು. ೧೯೫೫

೧-೩ ಪತ್ರ ೧೧ ಪಂಕ್ತಿ ೬೫ ಅಕ್ಷರ

ಆದಿ : ಶ್ರೀಗುರು ಬಸವಲಿಂಗಾಯನಮಃ
ಶ್ರೀಗುರುಲಿಂಗಘೃಣಾಮೃತ
ಸಾಗರನಿದ್ಧೂರ್ಣಿತ ದುಷ್ಟದುರ್ಘವಮಾಯಾ
ವಾಗುರ ಮುಕ್ತಿಪ್ರದ ವಿ
ದ್ಯಾಗಾರ ಪಾಲಿಸೆಂನುವಂ ಬಸವೇಶಾ ||
ರಗಳೆ || ಶ್ರೀಗುರುಭ್ಯೋಂನಮಃ ಶಿವಮೂರ್ತಿ ಸದ್ಗುರುವೆ
ಆಗಮಾಧ್ಯಾಂತಃ ಶಿರೋವರ್ತಿ ಸದ್ಗುರುವೆ || ೧ ||
ಭಾವನಾತೀತ ಪ್ರಭಾಸ್ಫೂರ್ತಿ ಸದ್ಗುರುವೆ
ಭೂಮಿಯತ್ತಳದಿಗ್ಭರಿತ ಕೀರ್ತಿ ಸದ್ಗುರುವೆ || ೨ ||

ಅಂತ್ಯ : ಶ್ರೀದೇಶಿಕ ವಿದ್ಯಾದ್ವೈತ
ವೇದವೇದ ಶಿರಃ ಸಂಪಾದಿತ
ಚೋದಿತಮಹಿಮಾ ಮ
ಹೋದಯ ರಕ್ಷಿಪ್ಪುದೆನ್ನುವಂ ಬಸವೇಶಾ || ೧ ||
ಗುರುಭಕ್ತಿ ಸಿದ್ಧಿರಸ್ತು ಸ
ಗುರುಪ್ರಸಾದಯಿಕ ಪುಷ್ಟಿರಸ್ತು
ಗುರುಸ್ತೋತ್ರ ರಸಾಮೃತಾತ್ಮನಾಂ ಶಾಂತಿರಸ್ತು
ಕಲ್ಯಾಣಮಸ್ತು ಶಿವಬಸವೇಶಾ || ೨ ||
ಗೌರವಮಹಿಮಾರಗಳೆಯು
ಗೌರವಕೃಪೆಯಿಂದ ಪಾಲ್ಕುರಿಕೆ ಸೋಮಾಂಕಂ
ಗೌರವರತಿಯಿಂ ರಚಿಸಿದ
ಗೌರವನೈಷ್ಟಿಕರನಿಷ್ಟಿಸಲ್ಬಸವೇಶಾ
ಸದ್ಗುರುರಗಳೆ ಸಮಾಪ್ತ ಮಂಗಳಮಹಾಶ್ರೀ.

ವಿಷಯ : ಗುರುಮಹಿಮೆ.

ವಿಶೇಷ : ಸಮಗ್ರ. ಶಕಟರೇಫ ಇದೆ. ಗುರುಬಸವೇಶನ ಶಿವಯೋಗಾಂಗ ಭೂಷಣ, ಮನೋವಿಜಯಕಾವ್ಯ ಮೊದಲಾದ ಇತರ ಏಳುಕೃತಿಗಳು ೧–೭೫ ಪತ್ರದವರೆಗಿವೆ. ಪ್ರಕೃತ ಕೃತಿಯ ಪತ್ರಸಂಖ್ಯೆ ಬೇರೆ ಯಾಗಿದೆ. ಪತ್ರಗಳು ಶಿಥಿಲವಾಗಿವೆ.

—ಬಿಎಸ್‌ಎಸ್

40

ಕೆ. ೬೬೫ಬಿ/೨ | ಸದ್ಗುರು ರಹಸ್ಯ | ಭಾಮಿನೀ ಷಟ್ಪದಿ

೯.೫'' × ೨'' | ಗುರುಬಸವ | ಸು. ೧೪೩೦

೨೧-೨೭ ಪತ್ರ | ೧೩ ಪಂಕ್ತಿ | ೫೧ ಅಕ್ಷರ

ಆದಿ : ಶ್ರೀಗುರು ಬಸವಲಿಂಗಾಯನಮಃ ಸದ್ಗುರು ರಹಸ್ಯ । ರಾಗ ಧನ್ಯಾಸಿ । ಪಲ್ಲವ । ಭಾಮಿನಿ ॥

ಪಲ್ಲ : ಪರಿಭವಂಗಳಿಗಂಜಿ ಭರದಿಂ
ಶರಣು ವೊಕ್ಕಂಗೊಲಿದು ಮುದದಿಂ
ದೊರೆದನಾ ನಿಜತತ್ವಬೋಧೆಯ ದೇಶಿಕೋತ್ತಮನು ॥

ಅಂತ್ಯ : ಬಾಲ ನೀ ಕೇಳ್ವಂತಕೋಶದ
ಮೇಳದಿಂ ಜಡದೃಶ್ಯ ದುಃಖ ಕ
ರಾಳಿಯಿಂದಲ ಶುದ್ಧತರದಿಂದಿರದ ನಿತ್ಯದೊಳು ।
ಜಾಳಿಸಿದ ದೇಹವನು ತಾನೆಂ
ದೂಳಿ ತದ್ದಾತ್ಮಾನು ವಶದಿಂ
ಕೀಲಿಸಿರಲುಂ ಸ್ವಪ್ನ ಕಲ್ಪಿತ....

ವಿಷಯ : ಜೀವ, ಆತ್ಮ ಹಾಗೂ ಮಾನವನ ಬಾಳಿನ ಗುರಿ ಮುಂತಾದ ಅಧ್ಯಾತ್ಮ ವಿಷಯಗಳನ್ನು ವಿವರಿಸಲಾಗಿದೆ.

ವಿಶೇಷ : ಈ ಗ್ರಂಥ ಅಪೂರ್ಣವಾಗಿದೆ. ೨೭ನೆಯ ಓಲೆಯಲ್ಲಿ " ಇತಿ ಸದ್ಗುರು ರಹಸ್ಯ ಚತುರ್ವಿಂಶಕ ನಿರಸನ ತೃತೀಯೋಪದೇಶ: ಅಂತೂ ಪದನು ೯೫ಕ್ಕಂ ಮಂಗಳ ಮಹಾ ಶ್ರೀ ಶ್ರೀ " ಎಂದಿದೆ. ಪ್ರತಿಸಂಧಿಯ ಆದಿಯಲ್ಲೂ ವಿವಿಧ ರಾಗಗಳನ್ನು ಸೂಚಿಸಿದ್ದರೂ ಛಂದಸ್ಸು ಮಾತ್ರ ಭಾಮಿನೀ ಷಟ್ಪದಿಯೇ ಆಗಿರುವುದನ್ನು ಗಮನಿಸಬೇಕು. ಇದರೊಡನೆ ಯೋಗಾಂಗ ಭೂಷಣ, ಕಲ್ಯಾಣೇಶ್ವರ-ಮೊದಲಾದ ಇತರ ಆರು ಗ್ರಂಥಗಳಿವೆ.

—ಶ್ರೀನಂತ

41

ಕೆ. ೮೪೭/೨ | ಸದ್ಗುರು ರಹಸ್ಯ | ಭಾಮಿನೀ ಷಟ್ಪದಿ

೭" × ೧.೭" | ಗುರುಬಸವ | ಸು. ೧೪೩೦

೩೬-೬೧ ಪತ್ರ | ೧೧ ಪಂಕ್ತಿ | ೪೬ ಅಕ್ಷರ

ಆದಿ : ಸದ್ಗುರು ರಹಸ್ಯ ॥ ರಾಗ ಧನ್ಯಾಸಿ ॥
ಪಲ್ಲ॥ ಪರಿಭವಂಗಳಿಗಂಜಿ ಭರದಿಂ
ಶರಣುವೊಕ್ಕಂಗೊಲಿದು ಮುದದಿಂ
ದೊರೆದನಾ ನಿಜತತ್ತ್ವಬೋಧೆಯ ದೇಶಿಕೋತ್ತಮನೂ
ಪದ॥ ಶ್ರೀ ಪರಮ ಪಾವನ ಕಳಾಚಿ
ದ್ರೂಪ ಚಿತ್ಪರಿಪೂರ್ನ್ನ ಮಹಿಮಾ
ಳಾಪನಳಮಳಾನಂದ ವೃಂದೋಲ್ಲಾಸ ನಿಜತತ್ವಾ
ದೀಪ ಮಾಯಾಲೋಪನಖಿಲ
ವ್ಯಾಪಕಾಂಗ ವಿಶಿಷ್ಟ ಪರಮ ಪ
ರಾಪ ಪರಾನ್ವಯ ಸಾಕ್ಷಿ ಗುರುಬಸವಂಗೆ ಶರಣೆಂದೆ ॥ ೧ ॥

ಅಂತ್ಯ : ಲೀಲೆಯಿಂದಿಂನೂಱು ಮೂವ
ತ್ತೇಳು ಪದನಂ ಸಾಂಗವಾಗಿ ಸ
ಮೇಳದಿಂ ನವವೋಪದೇಶ ಪರಿಪ್ರಮಾಣಗಳಿಂ
ಹೇಳಿ ಶಿಷ್ಯನ ಸಂದು ಸಂಶಯ
ಜಾಳಮುಂ ಬಱಿಕೈದು ತಂನ ವಿ
ಶಾಲ ಸುಖದೊಳಗೈಕ್ಯನಂ ಮಾಡಿದನು ದೇಶಿಕನು ॥ ೧೯ ॥
ಇತಿ ಶ್ರೀಮದ್ಗುರು ರಹಸ್ಯೆ ನವವೋಪದೇಶಃ ಪದನು ೩೩೭ಕ್ಕಂ
ಮಂಗಳ ಮಹಾ ಶ್ರೀ ॥

ವಿಷಯ : ವೀರಶೈವತತ್ತ್ವ ಬೋಧೆ.

ವಿಶೇಷ : ಸುಂದರ ಬರವಣಿಗೆ. ಸಮಗ್ರ. ಹಾಳೆಗಳ ಮಧ್ಯದಲ್ಲಿ ಹುಳುಗಳು ತಿಂದಿವೆ. ಶಕಟರೇಫದ ಬಳಕೆಯಿದೆ. ಈ ಕಟ್ಟಿನಲ್ಲಿ ಇದೇ ಕವಿಯ ಕಲ್ಯಾಣೇಶ್ವರ ಮುಂತಾದ ಕೃತಿಗಳಿವೆ.

—ಎಂಪಿಎಂ

42

ಕೆ. ೯೮೯/೩	ಸದ್ಗುರು ರಹಸ್ಯ	ಭಾಮಿನೀ ಷಟ್ಪದಿ
೧೦.೪″ × ೨.೩″	ಗುರುಬಸವ	ಸು. ೧೪೩೦
೧೩೭-೧೩೫ ಪತ್ರ	೧೨ ಪಂಕ್ತಿ	೬೯ ಅಕ್ಷರ

ಆದಿ : ಸದ್ಗುರು ರಹಸ್ಯ ರಾಗ ಧನಶ್ರಾಸಿ ॥ ಭಾಮಿನಿಪದ ॥

ಪಲ್ಲ॥ ಪರಿಭವಂಗಳಿಗಂಜಿ ಭರಿದಿಂ
ಶರಣು ಹೊಕ್ಕಂಗೊಲಿದು ಮುದದಿಂ
ದೊರೆದನಾ ನಿಜತತ್ವಬೋಧೆಯ ದೇಶಿಕೋತ್ತಮನೂ

ಪದ ॥ ಶ್ರೀಪರಮ ಪಾವನ ಕಳಾ ಚಿ
ದ್ರೂಪ ಚಿತ್ಪರಿಪೂರ್ವ ಮಹಿಮಾ
ಳಾಪನಮಳಾನಂದ ವೃಂದೋಲಾಸ ನಿಜತತ್ವ
ದೀಪ ಮಾಯಾ ಲೋಪನಖಿಲ
ವ್ಯಾಪಕಾಂಗ ವಿಶಿಷ್ಟ ಪರಮ ಪ
ರಾಪರಾನ್ವಯ ಸಾಕ್ಷಿ ಗುರುಬಸವೇಶಂಗೆ ಶರಣೆಂಬೆ ॥ ೧ ॥

ಅಂತ್ಯ : ಲೀಲೆಯಿಂದಿಂನೂಱುಮೂವ
ತ್ತೇಳು ಪದನಂ ಸಾಂಗವಾಗಿ ಸ
ಮೇಳದಿಂ ನವವೋಪದೇಶ ಪರಿಮಾಣಗಳಿಂ
ಹೇಳಿ ಶಿಷ್ಯನ ಸಂದು ಸಂಯ
ಜಾಳಮಂ ಬಱಿಕೆಯಿದು ತಂನ ವಿ
ಶಾಲ ಸುಖದೊಳಗೈಕ್ಯನಂ ಮಾಡಿದನು ದೇಶಿಕನೂ ॥ ೧೯ ॥

ಯಿಂತಿ ಶ್ರೀಮತ್ಸದ್ಗುರು ರಹಸ್ಯೇ ನವವೋಪದೇಶಃ ॥ ಅಂತು ಸಂಧಿ ೯ಕ್ಕಂ ಪದನು ೫೦೬ಕ್ಕಂ ಮಂಗಳ ಮಹಾ ಶ್ರೀ. ಅಂತು ಕಾವ್ಯ ೨ಕ್ಕಂ ಸಂಪೂರ್ಣ ಮಂಗಳ ಮಹಾ ಶ್ರೀ.

ವಿಷಯ : ವೀರಶೈವತತ್ತ್ವ ಬೋಧೆ.

ವಿಶೇಷ : ಸಮಗ್ರ. ಗ್ರಂಥದಲ್ಲಿ ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಪದ್ಮರಾಜ ಪುರಾಣ, ಸಪ್ತಕಾವ್ಯಗಳಲ್ಲಿನ ಇತರ ಕೃತಿಗಳು, ಭಿಕ್ಷಾಟನ ಚರಿತ್ರೆ ಇವೆ.

[ಕ. ಹ. ಪ್ರ. ವ. ಸೂ. ಚತುರ್ಥ ಸಂಪುಟ. ಪುಟ ೩೪೧–೩೪೪, ಕ್ರಮಾಂಕ 1857–1860 ನೋಡಿ]

—ಕೆಆರ್‌ಎಸ್

43

ಕ. ೧೮೧೩/೨	**ಸದ್ಗುರು ರಹಸ್ಯ**	ಭಾಮಿನೀ ಷಟ್ಪದಿ
೧೧.೨" × ೧.೮೮"	ಗುರುಬಸವ	ಸು. ೧೯೩೦
೨೦–೩೭ ಪತ್ರ	೮೮ ಪಂಕ್ತಿ	೬೫ ಅಕ್ಷರ

ಆದಿ: ಶ್ರೀ ಗುರು ಬಸವಲಿಂಗಯೇಂ ನಮಃ । ರಾಗ ಶುದ್ಧ ಸಾಳಗ
ಪಲ್ಲ॥ ವುತ್ತರ ಲಿಂಗಾಂಗದ ಭೇದವ
ಸತ್ಯೋಕ್ತಿಗಳಿಂ ಪ್ರಕಟಿಸಿ ತದನಂತರ
ನಿತ್ಯಾಚರಣೆಯ ಭೇದವನಣುಗಂಗೊರೆದನು ದೇಶಿಕನೂ
ಪದ। ಅಸುಲಿಂಗದ ಸೇವನೆಯಿಂತನುಗುಣ
ವಸತವಸುಟ್ಕಂತರಗತ ಚಿರ ಮಾ
ನಸ ವೇತಾಳನನೋಡಿಸಿ ನಿಶ್ಚಿಂತದ ನಿಜಸುಖದಿಂದಾ
ಹಸನಾಗಿಹ ಪರಮಾತ್ಮನ ಚಿದ್ಘನ
ರಸಮಯವಹ ಸಂತೃಪ್ತಿಯ ಪೆಸರಿಂ
ದೆಸದಿಹ ಲಿಂಗದೊಳೇಕೀಕರಿಸೂದೆ ಪರಮಸಮಾಧಿ ॥ ೧ ॥

ಅಂತ್ಯ: ಲೀಲೆಯಿಂದಿಂನೂಜಿ ಮೂವ
ತ್ತೇಳು ಪದನಂ ಸಾಂಗವಾಗಿ ಸ
ಮೇಳದಿಂ ನವಮೋಪದೇಶ ಪರಿಪ್ರಮಾಣಗಳಿಂ
ಹೇಳಿ ಶಿಷ್ಯನ ಸಂದು ಸಂಶಯ
ಜಾಳಮಂ ಬಜಿಕೈದು ತಂನ ವಿ
ಶಾಲ ಸುಖದೊಳಗೈಕ್ಯನಂ ಮಾಡಿದನು ದೇಶಿಕನೂ ॥ ೧೯ ॥
ಯಿತಿ ಶ್ರೀಮತ್ಸದ್ಗುರು ರಹಸ್ಯ ನವಮೋಪದೇಶಃ ಸಮಾಪ್ತ. ಅಂತು ಸಂಧಿ ೯ಕ್ಕಂ ಪವನು ೨೩ಲಕ್ಕಂ ಶುಭಮಸ್ತು.

ವಿಷಯ: ವೀರಶೈವತತ್ತ್ವ ನಿರೂಪಣೆ.

ವಿಶೇಷ: ಸಮಗ್ರ. ಶಕಟರೇಫ ಇದೆ. ೨೮ ಮತ್ತು ೩೩ನೆಯ ಗರಿಗಳ ಸ್ವಲ್ಪ ಭಾಗಗಳು ಮುರಿದು ಲುಪ್ತವಾಗಿವೆ. ಈ ಗ್ರಂಥದ ಇತರ ಪ್ರತಿಗಳಿಗೆ ಹ. ಪ. ಸೂಚಿಯ ೪ನೆಯ ಸಂಪುಟ ನೋಡಿ. ಇದೇ ಕಟ್ಟಿನಲ್ಲಿ ಶಿವಯೋಗಾಂಗವಿಭೂಷಣ, ಕಲ್ಯಾಣೇಶ್ವರ ಮೊದಲಾದ ಇತರ ಏಳು ಗ್ರಂಥಗಳಿವೆ.

—ಬಿಎಸ್ಎಸ್

44

ಕೆ. ೧೦೪೦/೨	**ಸದ್ಗುರು ರಹಸ್ಯ**	ಭಾಮಿನೀ ಷಟ್ಪದಿ
೫.೨″ × ೧.೯″	ಗುರುಬಸವ	ಸು. ೧೪೩೦
೫೦-೮೧ ಪತ್ರ	೧೦ ಪಂಕ್ತಿ	೩೨ ಅಕ್ಷರ

ಆದಿ: ಸದ್ಗುರು ರಹಸ್ಯ ॥ ರಾಗ ಧನ್ನಾಸಿ ॥
ಪಲ್ಲವ॥ ಪರಿಭವಂಗಳಿಗಂಜಿ ಭರದಿಂ
ಶರಣುವೊಕ್ಕಂಗೊಲಿದು ಮುದದಿಂ
ದೊರೆದನಾ ನಿಜತತ್ತ್ವಬೋಧೆಯ ದೇಶಿಕೋತ್ತಮನೂ ॥
ಪದ ॥ ಶ್ರೀಪರಮಪಾವನ ಕಳಾ ಚಿ
ದ್ರೂಪ ಚಿತ್ಪರಿಪೂರ್ಣ್ನ ಮಹಿಮಾ
ಳಪನಮಳಾನಂದ ವೃಂದೋಲಾಲ ನಿಜತ . . .
ಪರಾನ್ವಯ ಸಾಕ್ಷಿ ಗುರುಬಸವಂಗೆ ಶರಣೆಂಬೆ ॥ ೧ ॥

ಅಂತ್ಯ: ಲೀಲೆ ಇಂದಿಂನೂಱು ಮೂವ
ತ್ತೇಳು ಪದನಂ ಸಾಂಗಮಾಗಿ ಸ
ಮೇಳದಿಂ ನವಮೋಪದೇಶ ಪರಿ ಪ್ರಮಾಣಗಳಿಂ
ಹೇಳಿ ಶಿಷ್ಯನ ಸಂದು ಸಂಶಯ
ಜಾಳಮಂ ಬಱಿಕ್ಕೆದು ತಂನ ವಿ
ಸಾಲ ಸುಖದೊಳಗೈಕ್ಯನಂ ಮಾಡಿದನು ದೇಶಿಕನೂ ॥ ೧೯ ॥

ಇತಿ ಶ್ರೀಮತ್ಸದ್ಗುರು ರಹಸ್ಯೆ ನವಮೋಪದೇಹಃ ॥ ಅಂತು ಸಂಧಿ ೯ಕ್ಕಂ ಪದನು ೨೩೭ಕ್ಕಂ ಶುಭಮಸ್ತು ಸದ್ಗುರು ರಹಸ್ಯೇ ಸಂಪೂರ್ನಂ ಮಂಗಳ ಶ್ರೀ.

ವಿಷಯ: ವೀರಶೈವತತ್ತ್ವ ಬೋಧೆ.

ವಿಶೇಷ: ಗ್ರಂಥವು ಸಮಗ್ರವಾಗಿದೆ. ಶಕಟರೇಫವನ್ನು ಗ್ರಂಥದಲ್ಲಿ ಬಳಸಿದೆ. ಇದೇ ಕಟ್ಟಿನಲ್ಲಿ ಶಿವಯೋಗಾಂಗ ವಿಭೂಷಣ, ಕಲ್ಯಾಣೇಶ್ವರ, ಸ್ವರೂಪಾಮೃತ, ವೃಷಭಗೀತೆ, ಅವಧೂತಗೀತೆ, ಮನೋವಿಜಯ ಕಾವ್ಯಗಳೂ ಇವೆ.

[ಕ.ಹ ಪ್ರ.ವ.ಸೂ. ಚತುರ್ಥ ಸಂಪುಟ. ಪುಟ ೩೪೧-೩೪೫, ಕ್ರಮಾಂಕ 1851-1860 ನೋಡಿ]

—ಕೆಆರ್‌ಎಸ್

45

ಕೆ. ೧೧೦೩/೭ | ಸದ್ಗುರು ರಹಸ್ಯ | ಭಾಮಿನೀ ಷಟ್ಪದಿ
೧೪.೨'' × ೨'' | ಗುರು:ಬಸವ | ಸು. ೧೪೩೦
೧೭೦-೧೮೪ ಪತ್ರ | ೧೩ ಪಂಕ್ತಿ | ೯೫ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯನಮಃ ॥ ಸದ್ಗುರು ರಹಸ್ಯ.

ಪಲ್ಲವ। ಪರಿಭವಂಗಳಿಗಂಜಿ ಭರದಿಂ
ಶರಣು ಹೊಕ್ಕಂಗೊಲಿದು ಮುದದಿಂ
ದೊರೆದನಾ ನಿಜತತ್ವ ಬೋಧೆಯ ದೇಶಿಕೋತ್ತಮನು ॥

ಪದ॥ ಶ್ರೀ ಪರಮ ಪಾವನಕಳಾ ಚಿ
ದ್ರೂಪ ಚಿತ್ಪರಿಪೂರ್ಣಮಹಿಮಾ
ಳಾಪನ ಮಳಾನಂದ ವೃಂದೋಲ್ಲಾಸ ನಿಜತತ್ವಾ
ಧಿಪಮಾಯಾಲೋಪ ನಖಿಲ
ವ್ಯಾಪಕಾಂಗ ವಿಶಿಷ್ಟ ಪರಮ ಪ
ರಾಪರಾನ್ವಯ ಸಾಕ್ಷಿ ಗುರುಬಸವಂಗೆ ಶರಣೆಂಬೆ ॥ ೧

ಅಂತ್ಯ : ಲೀಲೆಯಿಂದಿನೂಱ ಮೂವ
ತ್ತೇಳು ಪದನಂ ಸಾಂಗವಾಗಿ ಸ
ಮೇಳದಿಂ ನವಮೋಪದೇಶದ ಪರಿಪ್ರಮಾಣಗಳಿಂ
ಹೇಳಿ ಶಿಷ್ಯನ ಸಂದು ಸಂಶಯ
ಜಾಳಮಂ ಬಱಿಕೈದು ತನ್ನ ವಿ
ಶಾಲ ಸುಖದೊಳಗೈಕ್ಯನಂ ಮಾಡಿದನು ದೇಶಿಕನು

ಇತಿ ಶ್ರೀಮತ್ಸದ್ಗುರು ರಹಸ್ಯೆ ನವಲೋಪದೇಶಃ ॥ ಅಂತು ಸಂಧಿ ೯ಕ್ಕಂ ಪದನು ೨೩೭ಕ್ಕಂ ಮಂಗಳ ಮಹಾ. ಇತಿ ಸದ್ಗುರು ರಹಸ್ಯ ಸಂಪೂರ್ಣ ಶ್ರೀ ಶ್ರೀ.

ವಿಷಯ : ವೀರಶೈವತತ್ತ್ವ ಬೋಧೆ.

ವಿಶೇಷ : ಇದರ ಜೊತೆಯಲ್ಲಿ ಭೈರವೇಶ್ವರ ಪುರಾಣದ ಕಥೆಗಳು, ಬಸವೇಶ್ವರ ಪುರಾಣ ಕಥಾಸಾಗರ, ಬಸವ ಪುರಾಣ ಮತ್ತು ಭೈರವೇಶ್ವರ ಪುರಾಣದ ಕಥೆಗಳಿಗೆ ಸೇರಿದ ಸಂಸ್ಕೃತ ಆಧಾರ ಗ್ರಂಥ ಮತ್ತು ಸಪ್ತ ಕಾವ್ಯದ ಗುರುಬಸವನ ಕಾವ್ಯಗಳಿವೆ.

—ಜಿಜಿಎಂ

46

ಕೆ. ೧೩೭೨/೨	**ಸದ್ಗುರು ರಹಸ್ಯ**	ಭಾಮಿನೀ ಷಟ್ಪದಿ
೯″ × ೨″	ಗುರುಬಸವ	ಸು. ೧೪೩೦
೨೩–೩೯ ಪತ್ರ	೧೧ ಪಂಕ್ತಿ	೫೪ ಅಕ್ಷರ

ಆದಿ: ಶ್ರೀಗುರು ಬಸವಲಿಂಗಾಯನಮಃ । ಸದ್ಗುರು ರಹಸ್ಯಾ ॥ ರಾಗ ಧನ್ಯಾಸಿ ॥

ಪಲ್ಲವಾ। ಪರಿಭವಂಗಳಿಗಂಜಿ ಭರದಿಂ
ಶರಣುವೊಕ್ಕಂಗೊಲಿದು ಮುದದಿಂ
ದೊರೆದನಾ ನಿಜತತ್ತ್ವಬೋಧೆಯ ದೇಶಿಕೋತ್ತಮನೂ ॥

ಪದ ॥ ಶ್ರೀಪರಮಪಾವನ ಕಳಾಚಿ
ದ್ರೂಪ ಚಿತ್ಪರಿಪೂರ್ಣ ಮಹಿಮಾ
ಳಾಪದಮಳಾನಂದ ವೃಂದೋಲ್ಲಾಸ ನಿಜತತ್ತ್ವ ॥
ದೀಪಮಾಯಾಲೋಪನಖಿಲ
ವ್ಯಾಪಕಾಂಗ ವಿಶಿಷ್ಟ ಪರಮಪ
ರಾಪರಾನ್ವಯ ಸಾಕ್ಷಿ ಗುರುಬಸವಂಗೆ ಶರಣೆಂಬೆ ॥ ೧ ॥

ಅಂತ್ಯ: ಲೀಲೆಯಿಂದಿನ್ನೂರ ಮೂವ
ತ್ತೇಳು ಪದನಂ ಸಾಂಗವಾಗಿ ಸ
ಮೇಳದಿಂ ನವವೋಪದೇಶ ಪರಿಪ್ರಮಾಣಗಳಿಂ
ಹೇಳಿ ಶಿಷ್ಯನ ಸಂದು ಸಂಶಯ
ಜಾಳಮಂ ಬರಿಕೈದು ತಂನ ವಿ
ಸಾಲ ಸುಖದೊಳಗೈಕ್ಯನಂ ಮಾಡಿದನು ದೇಶಿಕನೂ ॥ ೧೯ ॥
ಯಿತಿ ಸದ್ಗುರು ರಹಸ್ಯೇ ನವವೋಪದೇಶಃ ॥ ಅಂತೂ ಅಧ್ಯಾಯ ೯ಕ್ಕಂ ಪದನೂ ೨೩೭ಕ್ಕಂ ಮಂಗಳ ಮಹಾ ಶ್ರೀ ॥

ವಿಷಯ: ವೀರಶೈವತತ್ತ್ವ ಬೋಧೆ.

ವಿಶೇಷ: ಇದು ಗುರುಬಸವೇಶನ ಸಪ್ತಕಾವ್ಯಗಳಲ್ಲಿ ಒಂದು. ಇದರೊಂದಿಗೆ ಈ ಕಟ್ಟಿನಲ್ಲಿ ಅವನ ಉಳಿದ ಕಲ್ಯಾಣೇಶ್ವರ ಮೊದಲಾದ ಇತರ ೬ ಕೃತಿಗಳಿವೆ. ಕೃತಿ ಸಮಗ್ರ. ಸುಂದರಾಕ್ಷರ.

— ಎಂಪಿಎಂ

47

ಕೆ. ೧೩೫೬/೧೪	**ಸದ್ಯೋಜಾತ ಪೀಟು**	ಗದ್ಯ
೧೬.೯″ × ೧.೯″	ಮುಮ್ಮಡಿ ಕೃಷ್ಣರಾಜ	೧೮೫೦
೩೮೦-೩೮೧ ಪತ್ರ	೬ ಪಂಕ್ತಿ	೫೦ ಅಕ್ಷರ

ಆದಿ: ಶಾಲೀವಾಹನ ಶಕವರ್ಷಂಗಳು ೧೭೪೯ನೆ ವರ್ತಮಾನವಾದ ವ್ಯಯ

ನಾಮ ಸಂವತ್ಸರದ ಮಾರ್ಗಶಿರ ಶು ೭ ಮಂಗಳವಾರದಲ್ಲು ಶ್ರೀಕೃಷ್ಣ ರಾಜ ಮಹಾರಾಜ ಕಂಠೀರವರು ವಿರಚಿಶಿ ಯಿರುವ ಸದ್ಯೋಜಾತ ಪೀಟಿನ ವಿವರ । ಯಿಾ ಸದ್ಯೋಜಾತ ಪೀಟಿಗೆ ಬಾಜು ೧ಕ್ಕೆ ಯಲೆ ೧೨ ರಲ್ಲು ಬಾಜು ೬ಕ್ಕೆ ವಟ್ಟು ಯಲೆ ೭೨ಕ್ಕೆ ವಿವರ । ಮೊದಲನೆ ಚಾಮುಂಡೇಶ್ವರಿ ಬಾಜುಗೆ ಮೊದಲನೇದು ಚಾಮುಂಡೇಶ್ವರಿ ದೊರೆ । ಯರಡನೇದು ರಾಣಿ ಸಿಂಹವಾಹಿನಿ । ಮೂರನೇದು ವಾರಾಹಿ ಮುದ್ರ । ನಾಲ್ಕನೇದು ವಜೀರ ಕುದುರೆ ।

ಅಂತ್ಯ : ಯಿಾ ಮೇರೆಗೆ ಯಿರುವ ಯಿಾ ಸದ್ಯೋಜಾತ ಪೀಟಿಗೆ ಚಾಮುಂಡೇಶ್ವರಿ ಬಾಜು ಕೆಂಪು ರಂಗು । ಸದ್ಯೋಜಾತ ಬಾಜುಗೆ ಹಸಿರು ರಂಗು । ವಾಮದೇವ ಬಾಜುಗೆ ವರ್ತಿರಂಗು । ಅಘೋರ ಬಾಜುಗೆ ಹಳದಿ ರಂಗು । ತತ್ಪುರುಷ ಬಾಜುಗೆ ಸಿಂಧೂರ ವರ್ಣ । ಈಶಾನ ಬಾಜುಗೆ ಕಪ್ಪು ರಂಗು । ಯಿಾ ಮೇರೆಗೆ ಆಯಾ ಬಾಜುಗಳಂನು ಆಯಾ ರಂಗಿನ ಗುರುತುಗಳಿಂದಲೆ ತಿಳಿದುಕೊಂಡು ಕೃಷ್ಣರಾಜ ಪೀಟಿನ ಪ್ರಕಾರಕ್ಕೆ ಆಡಬಹುದು । ಚಾಮುಂಡೇಶ್ವರಿ ದೊರೆ ಯಲೆ ಯಾರಿಗೆ ಬರುತ್ತೊ ಅವರೆ ಮೊದಲು ಆಡತಕ್ಕದ್ದು । ಯಿಾ ಮೇರೆಗೆ ಮೂರು ಜನ ನಾಲ್ಕು ಜನ ಬೇಕಾದರು ಬುದ್ಧಿವಂತರು ನೋಡಿ ಕೊಂಡಾಡುವದು

ವಿಷಯ : ಸದ್ಯೋಜಾತ ಪೀಟು ಎಂಬ ಆಟದ ವಿವರ.

ವಿಶೇಷ : ಇದೇ ಕಟ್ಟಿನಲ್ಲಿ ಚಾಮುಂಡಿಕಾ ಲಘು ನಿಘಂಟು, ದೇವಿ ಸಾಯುಜ್ಯದ ಕನ್ನಡ ಟೀಕು ಲಕ್ಷಣ ಮೊದಲಾದ ಇತರ ೧೮ ಕೃತಿಗಳಿವೆ.

—ವೈಸಿಬಿ

48

ಕೆ. ೭೫೩/೧	**ಸನತ್ಕುಮಾರ ಚರಿತ್ರೆ**	ಭಾಮಿನೀ ಷಟ್ಪದಿ
೧೩.೪" × ೧.೭"	ಬೊಮ್ಮರಸ	೧೪೮೫
೧-೬೯ ಪತ್ರ	೮ ಪಂಕ್ತಿ	೭೬ ಅಕ್ಷರ

ಆದಿ : ಸನತ್ಕುಮಾರ ಷಟ್ಪದಾ ಬರೆಯುವುದಕ್ಕೆ ನಿರ್ವಿಘ್ನಮಸ್ತು.
ಶ್ರೀಮದಮರ ನರೋರಗೇಂದ್ರ
ಸ್ತೋಮ ರತ್ನ ಕಿರೀಟ ತಾಟಿತ
ಕೋಮಲಾಂಘ್ರಿ ಸರೋಜಯುಗಲ ವಿರಾಜಿತಾನುಪಮಾ

ಸೋಮ ರವಿ ಕೋಟಿಪ್ರಕಾಶಿತ
ಕಾಮದರ್ಪವಿದೂರ ತ್ರಿಜಗ
ತ್ಸ್ವಾಮಿ ಪಾರ್ಶ್ವಜಿನೇಂದ್ರ ಪಾಲಿಸು ಮತಿಗೆ ಮಂಗಲವಾ ‖ ೧ ‖

ಅಂತ್ಯ : ಸುರ ನರೋರಗ ವಂದ್ಯ ಸುಮನ
ಶ್ಶರಮದಿಭ ಮೃಗೇಂದ್ರ ರಾಜಿತ
ತೆರಕಣಾಂಬಿನಿವಾಸ ಪಾರ್ಶ್ವಜಿನೇಂದ್ರ ಚಂದ್ರಮನಾ
ಚರಣಕಮಲ ಭ್ರಮರನಿಭ ಬೊ
ಮ್ಮರಸ ಪೇಳ್ದ ಸನತ್ಕುಮಾರನ
ವರಕಥಾ ವಿಸ್ತರದಿ ಪದಿನೇಳಾದ ವಾಶ್ವಾಸಾ ‖ ೪೫ ‖

ಶ್ರೀಮದಮರ ನರೋರಗೇಂದ್ರ ಪ್ರಮುಖ ಸಕಲಸುರ ಸಮಿತಿ ಮೌಲಿ ಕೀಲಿತ ಮಾಣಿಕ್ಯ × × × × ಬಾಲದಿನಕರ ಬೊಮ್ಮರಸುಪಾಧ್ಯ ಸುಕುಮಾರ ಬೊಂಮರಸ ವಿರಚಿತ ಸನತ್ಕುಮಾರ ಪ್ರಬಂಧದೊಳು ಸಂಪೂರ್ನ್ನಮಾಶ್ವಾಸಂ ‖ ಸನತ್ಕುಮಾರ ಷಟ್ಪದ ಸಮಾಪ್ತಂ ಮಂಗಳ ಮಹಾ ಶ್ರೀ.

ವಿಷಯ : ಸನತ್ಕುಮಾರನ ಕಥೆ

ವಿಶೇಷ : ಸಮಗ್ರ. ಬರಹ ಮುದ್ದಾಗಿದೆ. ೬೬ನೆಯ ಪತ್ರದಲ್ಲಿ ಒಂದು ಕಡೆ ಮಾತ್ರ ಬರಹವಿದೆ. ಶುದ್ಧವಾದ ಕಡೆಯಲ್ಲಿ 'ತ್ಯಕ್ತಪುಟಃ' ಎಂದಿದೆ. ಇದೇ ಕಟ್ಟಿನಲ್ಲಿ ಜೀವಂಧರ ಚರಿತ್ರೆ (ಭಾಸ್ಕರಕವಿ ಕೃತ) ಎಂಬ ಇನ್ನೊಂದು ಕೃತಿ ಇದೆ.

—ಕೆಆರ್ಎಸ್

49

ಕೆ.ಎ. ೪೭೯	**ಸನತ್ಕುಮಾರ ಚರಿತ್ರೆ**	ಭಾಮಿನೀ ಷಟ್ಪದಿ
೧೦.೪" × ೯.೫"	ಬೊಮ್ಮರಸ	೧೪೨೫
೭೫–೨೨೫ ಪತ್ರ	೨೦ ಪಂಕ್ತಿ	೧೮ ಅಕ್ಷರ

ಆದಿ : ಯೊಡನೆ ಹೋರುವ ನಭದ ತಾರಾವಳಿಗಳನು ಮುಳಿದೂ
ಜಡಿದು ನೆಲಕುದಿರರಿಸುವ ಸಹಸ
ವಿಡಿದ ಭಟರೊಡೆಗೂಡಿ ಖೇಚರ
ರೊಡೆಯ ಚಾತುರ್ಬಲವ ಪರಿವೃತನಾಗಿ ನಡತಂದಾ ೯

ವರಕೃಪಾಣ ಮುಸುಂಡಿ ಸೆಲ್ಲೆಹ
ಪರಿಗೆ ತೋಮರಲಾಡಿ ಗದೆ ಮು
ಧರ ಖಡುಗ ಸಲೆ ಚಕ್ರಖಂಡಯು ಸಬಳಗಳ ತಳೆದೂ
ಧರಣಿ ಬೆಸಲಾದಂದವೆನೆ ಖೇ
ಚರ ಕಟಕ ನಡೆ ತರಲು ಮಧ್ಯದಿ
ಬರುತಲಿರ್ದನು ವಜ್ರವೇಗವ ತಂದೆ ಮುಳಿಸಿನಲಿ ೧೦

ಅಂತ್ಯ : ಸುರನರೋರಗ ವಂದ್ಯ ಸುಮನಸ
ಶರಮದೇಭ ಮೃಗೇಂದ್ರರಾಜಿತ
ತೆರಕಣಾಂಬಿ ನಿವಾಸ ಪಾರ್ಶ್ವ ಜಿನೇಂದ್ರ ಚಂದ್ರಮನಾ
ಚರಣಕಮಲಬ್ರುಸುರನಿಭ ಬೊಂ
ಮ್ಮರಸ ಪೇಳ್ದ ಸನತ್ಕುಮಾರನ
ವರ ಕಥಾವಿಸ್ತರದಿ ಪದಿನೇಳಾದವಾಶ್ವಾಸಾ ॥ ೪ ॥
ಅಂತು ಸಂಧಿ ೧೭ಕ್ಕಂ ಪದನು ೮೭೫ಕ್ಕಂ ಮಂಗಲ ಮಹಾ ಶ್ರೀ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೫೯೦ನೆಯ ಕೀಲಕ ಸಂವತ್ಸರದ ಮಾಘ ಶು ೧೧ ದಿವಸದಲ್ಲಿ ಹಧಿನಾಡ ಸೀಮೆಯ ಯಳವಂದೂರ ಸ್ಥಳಕ್ಕೆ ಪೂರ್ವಿಕರಾದ ಕಾಸ್ಯಪ ಗೋತ್ರದ.... ...ತಣ ಪಂಡಿತರ ಕುಮಾರರಾದ ಸೂರಿಪಂಡಿತರ ಕಿರಿಯ ಮಗ ಬೊಂಮರಸ ಪಂಡಿತನು ನಮ್ಮ ಶಾರದಾ ಭಂಡಾರಕ್ಕೆ ಪೊಸ್ತಕ ವಾಗಬೇಕು ಯೆಂದು ಬರೆದೆರಡು ಸನತ್ಕುಮಾರನ ಕೃತಿಯು ಪೊಸ್ತಕಕ್ಕೆ ಚಂದ್ರತಾರಾರ್ಕರುಳ ಪರಿಯಂತರ ಭದ್ರಂ ಭೂಯಾತ್.

ವಿಷಯ : ಸನತ್ಕುಮಾರ ರಾಜನ ಕಥೆ.

ವಿಶೇಷ : ಅಸಮಗ್ರ. ಎಂಟನೆಯ ಸಂಧಿಯಲ್ಲಿ ೯ನೆಯ ಪದ್ಯದ ಉತ್ತರಾರ್ಧ ದಿಂದ ಆರಂಭವಾಗಿದೆ. ಇದನ್ನು ತಾರೀಖು 25-11-1949ರಲ್ಲಿ ಶ್ರೀ ಟಿ. ವಿ ರಾಮಸ್ವಾಮಿಯವರು ಮದರಾಸು ಪ್ರಾಚ್ಯಕೋಶಾಗಾರದ D. 420 ರಿಂದ ನಕಲು ಮಾಡಿದ್ದಾರೆ. ಅಲ್ಲಲ್ಲಿ ಅಕ್ಷರಗಳು ಲೋಪ ವಾಗಿವೆ. ಅಕ್ಷರಗಳನ್ನು ಬಿಡಿಸಿ ಬರೆದಿದ್ದು, ಓದಲು ಸುಲಭವಾಗಿದೆ.

—ಕೆಆರ್‌ಎಸ್

50

ಕೆ. ೮೩೪/೭	**ಸನತ್ಸುಜಾತನೀತಿ**	ಭಾಮಿನೀ ಷಟ್ಪದಿ
೧೫" × ೧.೩"	ಕುಮಾರವ್ಯಾಸ	ಸು. ೧೪೩೦
೧–೧೧ ಪತ್ರ	೭ ಪಂಕ್ತಿ	೬೮ ಅಕ್ಷರ

ಆದಿ : ಸನತ್ಸುಜಾತ ನೀತಿ ||
ಮುನಿವರನ ಕರುಣದಲ್ಲಿ ಕೌರವ
ಜನಕನಮಲ ಬ್ರಂಹ್ಮವಿದ್ಯವ
ನನುಕರಿಶಿ ಚರಿತಾರ್ಥ ಭಾವದಲಿರುಳು ನೂಕಿದನೂ ||
ಪದನೂ || ಕೇಳು ಜನಮೇಜಯ ಧರಿತ್ರೀ
ಪಾಲ ವಿದುರನ ಬೋಧೆ ಗಂಧನ್ವ
ಪಾಲನಂತಃಕರಣ ಶುದ್ಧಿಯನ್ಯೈದಿದನು ಬಳಿಕಾ
ಹೇಳು ಹೇಳಿಂನ್ನಾತ್ಮ ವಿದ್ಯಾ
ಮೂಲ ಮಂತ್ರಾಕ್ಷರದ ಬೀಜವ
ನಾಲಿಸುವುದೆನೆ ನಗುತ ಕೈಮುಗಿದೆಂದನಾ ವಿದುರಾ || ೧ ||

ಅಂತ್ಯ : ಧರಣಿಪನ ಸಂತೈಸಿಯಾಮುನಿ
ವರನು ತಂನ್ನಾಶ್ರಮಕೆ ತಿರುಗಿದ
ನುರುತರ ಪ್ರೇಮದಲಿ ಧೃತರಾಷ್ಟ್ರಾವನೀಶ್ವರನು
ಕರಣದಮಲಾನಂದರಸದಲಿ
ಹೊರಟು ಹೊಂಪುಳಿಯೋಗಿ ಲಕ್ಷ್ಮೀ
ವರನ ನೆನೆದನು ರಾಯ ಗದುಕಿನ ವೀರನಾರಾಯಣನಾ || ೧೩ ||

ವಿಷಯ : ವಿದುರನು ಧೃತರಾಷ್ಟ್ರನಿಗೆ ತತ್ವೋಪದೇಶ ಮಾಡಿದ್ದು.

ವಿಶೇಷ : ಸಮಗ್ರ. ಭಾರತದಲ್ಲಿ ಬರುವ ಒಂದು ಸಂಧಿ. ಬರಹ ಚೆನ್ನಾಗಿದೆ. ಶಕಟರೇಫವಿದೆ. ಇದೇ ಕಟ್ಟಿನಲ್ಲಿ ವಿದುರ ನೀತಿ, ಹರಿಹರ ಚಾರಿತ್ರ ಮೊದಲಾಗಿ ಇತರ ಎಂಟು ಕೃತಿಗಳಿವೆ.

—ಕೆಆರ್‌ಎಸ್

51

ಕೆ.ಎ. ೫೮೬/೨	**ಸನತ್ಸುಜಾತನೀತಿ**	ಭಾಮಿನೀ ಷಟ್ಪದಿ
೧೧.೫" × ೭.೯"	ಕುಮಾರವ್ಯಾಸ	ಸು. ೧೪೩೦
೧–೧೨ ಪತ್ರ	೨೪ ಪಂಕ್ತಿ	೭೦ ಅಕ್ಷರ

ಆದಿ : ಸನತ್ಸುಜಾತನೀತಿ ಬರೆಯುವದಕ್ಕೆ ಶುಭಮಸ್ತು ||
ಸೂಚನೆ || ಮುನಿವರನ ಕರುಣದಲಿ ಕವುರವ
ಜನಕನಮಳ ಬ್ರಹ್ಮವಿದ್ಯೆಯ
ನನುಕರಿಸಿ ಚರಿತಾರ್ಥಭಾವದೊಳಿರುಳ ನೂಕಿದರು

ಕೇಳು ಜನಮೇಜಯ ಧರಿತ್ರೀ
ಪಾಲ ವಿದುರನ ಬೋಧೆಗಂಧನೃ
ಪಾಲನಂತಃಕರಣ ಶುದ್ಧಿಯನೈದಿದನು ಬಳಿಕ
ಹೇಳು ಹೇಳಿನ್ನಾತ್ಮ ವಿದ್ಯಾ
ಮೂಲ ಮಂತ್ರಾಕ್ಷರವ ಬೀಜವ
ನಾಲಿಸುವೆನೆನೆ ನಗುತ ಕೈಮುಗಿದೆಂದನಾ ವಿದುರಾ ॥ ೧ ॥

ಅಂತ್ಯ : ಧರಣಿಪನ ಸಂತೈಸಿ ಸನ್ಮುನಿ
ವರನು ತನ್ನಾಶ್ರಮಕೆ ತಿರುಗಿದನುರು
ತರಪ್ರೇಮದಲಿ ದೃತರಾಷ್ಟ್ರಾವನೀಶ್ವರನೂ
ಕರಣಾದಮಲಾನಂದರಸಜಲ
ಬಂದು ಹೊಂಘಳಿಯೋಗಿ ಲಕ್ಷ್ಮೀ
ವರನ ನೆನದನು ರಾಯ ಗದುಗಿನ ವೀರನಾರಯಣನಾ ॥ ೧೩೦ ॥
ಸನತ್ಸುಜಾತನೀತಿ ಸಂಪೂರ್ನ ಮಂಗಳ ಮಹಾ ಶ್ರೀ.

ವಿಷಯ : ಮಹಾಭಾರತದಲ್ಲಿ ನೀತಿ.

ವಿಶೇಷ : ಇದೇ ಕಟ್ಟಿನಲ್ಲಿ ಪದಮಂತ್ರಗೋಪ್ಯ, ಜ್ಯೋತಿರ್ಮಯ ಶಾಂಭವೀ ಜ್ಞಾನ ದೀಕ್ಷಾಬೋಧೆ ಮೊದಲಾದ ಕೃತಿಗಳಿವೆ.

—ವೈಸಿಬಿ

52

ಕೆ. ೧೧೧೦/೨೨	**ಸಪ್ತಕಾವ್ಯಂಗಳೊಳಗಣ ಬೇಕಾದ ಪದಂಗಳು**	ವಿವಿಧ ಷಟ್ಪದಿ
೧೨.೫″ × ೨″	ಗುರುಬಸವ	ಸು. ೧೪೩೦
೧೫೧—೧೬೨ ಪತ್ರ	೧೪ ಪಂಕ್ತಿ	೧೦೦ ಅಕ್ಷರ

ಆದಿ: ಶ್ರೀಗುರುಬಸವ ಲಿಂಗಾಯನಮಃ ॥ ಯೋಗಾಂಗ ವಿಭೂಷಣದೊಳಗಣ ಪದ॥ಪ॥ ಷಟ್ಸ್ಥಲ ಚಕ್ರವರ್ತಿ ವಿರಕ್ತ ಶಿಖಾಮಣಿ ಗುರು ಬಸವೇಶ್ವರ ದೇವರು ನಿರೂಪಿಸಿದ ಸಪ್ತಕಾವ್ಯಂಗಳೊಳಗಣ ಪದಗಳು ॥ ಪ್ರಥಮದಲ್ಲಿ ಯೋಗಾಂಗ ವಿಭೂಷಣವು । ಪರಿವರ್ಧಿನಿ ಷಟ್ಪದ ॥ ರಾಗ ನಾಟ ॥ ಪಲ್ಲವ ॥

ತನ್ನಿರವಂ ನೋಡಿಸಿ ನಿಜಸುತನಂ
ಧನ್ಯನ ಮಾಡಿ ನರಂತರದಯೆಇಂ
ಮನ್ನಿಸಿ ಪಿಂಡೋತ್ಪತ್ತಿಯನುಚಿತದಿ ಪೇಳಿದ ದೇಶಿಕನೂ ॥

ಅಂತ್ಯ: ಯಿದರಿಟ್ಟು ಸಕಲವೆಲ್ಲವನು ನೋಡುವ ದಿವ್ಯ
ಹೃದಯಕಮಲ ಕರ್ಣಿಕಾ ಪೀಠದೊಳಗೆ
ಸದಮಳ ಶಂಭುಲಿಂಗವೆ ಸಚ್ಚಿದಾನಂದ
ಪದವೆನಿಸಿಹುದಾಗಿ ಪರಿಭಾವಿಸಿದೊಡೆ ॥ ೩ ॥

ವಿಷಯ: ವೀರಶೈವ ಸಿದ್ಧಾಂತ.

ವಿಶೇಷ: ಈ ಕಟ್ಟಿನಲ್ಲಿ ಹಂಸ ಪವನಲಕ್ಷಣ, ಬಿರುದಾವಳಿ ಗದ್ಯ, ಹಾಡುಗಳು ಇತ್ಯಾದಿ ೧೫ ಕೃತಿಗಳಿವೆ. ೧-೮೬ ಪತ್ರಗಳಲ್ಲಿ ಉದ್ಧರಣೆಯ ಪಟಲದ ಚಿತ್ರಗಳಿವೆ. ೬-೫ಲ ಪತ್ರಗಳಿಲ್ಲ.

—ಜಿಜಿಎಂ

53

ಕೆ. ೧೭೪೯/೧	**ಸಪ್ತಕಾವ್ಯಗಳು**	ವಿವಿಧ ಷಟ್ಪದಿ
೯″ × ೭″	ಗುರುಬಸವ	ಸು. ೧೪೩೦
೧-೯೮ ಪತ್ರ	೧೩ ಪಂಕ್ತಿ	೫೨ ಅಕ್ಷರ

ಆದಿ: ಶ್ರೀ ಗುರುಬಸವೇಶ್ವರಾಯ ನಮಃ ಷಟ್ಸ್ಥಲಚಕ್ರವರ್ತಿ ಗುರುಬಸವೇಶ್ವರದೇವರು ನಿರೂಪಿಸಿದ ಸಪ್ತಕಾವ್ಯಂಗಳೂ ॥ ಪ್ರಥಮದಲ್ಲಿ ಯೋಗಾಂಗಭೂಷಣವೂ ॥ ಪರಿವರ್ಧನಿ ॥

ಪಲ್ಲವ॥ ತನ್ನಿರವಂ ತೋರ್ಜಿಸಿ ನಿಜಸುತನಂ
ಧನ್ಯನವಾಡಿ ನಿರಂತರ ದಯೆಯಿಂ
ಮನ್ನಿಸಿ ಪಿಂಡೋತ್ಪತ್ತಿಯನುಚಿತದಿ ಪೇಳಿದ ದೇಶಿಕನೂ ॥

ಪದನು ॥
ಶ್ರೀಗುರುಲಿಂಗ ಸದೋದಿತ ಘನಸುಖ
ಸಾಗರಷಟ್ಸ್ಥಲನಾಯಕ ಪರಶಿವ
ಯೋಗಿ ಮನೋಮಂದಿರ ಸರ್ವಾಂತರ್ಯಾಮಿ ಜಗತ್ಸಾಕ್ಷಿ
ರಾಗ ವಿರಾಗ ವಿದೂರ ನಿಖಿಲಭವ
ರೋಗಚಿಕಿತ್ಸಕ ಬಸವೇಶ್ವರ ಗಮ
ನಾಗಮನಾದಿ ವಿವರ್ಜಿತ ಕರ್ಮಫಲಪ್ರದಜಯ ಶತತಂ ॥ ೧ ॥

ಅಂತ್ಯ: ಕುಸುಮಷಟ್ಪದಿಯ ಪದ
ಪ್ರಸರಮುಂ ನೂಱ ಮೇ
ಲೆಸೆವವೈವತ್ತೈದನಧ್ಯಾತ್ಮದ

ದೆಸೆಗೊರೆದೆ ಭದ್ರಗುರು
ಬಸವನಾಗ್ಣೆಯೊಳೆ ಭಾ
ವಿಸಲಹುದು ಚಂದ್ರಾರ್ಕರುಳ್ಳನ್ನೆಗಂ ॥ ೨೯ ॥
ಅಂತು ಪ್ರಕರಣಕ್ಕೆ ಪದನು ೩೫೫ಕ್ಕಂ ಮಂಗಳ ಮಹಾ ಶ್ರೀಶ್ರೀ.

ವಿಷಯ : ವೀರಶೈವಸಿದ್ಧಾಂತ.

ವಿಶೇಷ : ಯೋಗಾಂಗಭೂಷಣ, ಸದ್ಗುರುರಹಸ್ಯ, ಮನೋವಿಜಯಕಾವ್ಯ, ಕಲ್ಯಾಣೇಶ್ವರ, ಸ್ವರೂಪಾಮೃತ, ವೃಷಭಗೀತೆ, ಅವಧೂತಗೀತೆ ಯೆನ್ನುವ ಗುರುಬಸವನ ೭ ಕಾವ್ಯಗಳೂ ಪ್ರಭುಲಿಂಗಲೀಲೆ ಮತ್ತು ಪಿಂಡೋತ್ಪತ್ತ್ಯದ ಪದವೂ ಇದೆ.

—ಜಿಜಿಎಂ

54

ಕೆ. ೧೪೪೩	**ಸಪ್ತಕಾವ್ಯಗಳು**	ವಿವಿಧ ಷಟ್ಪದಿ
೧೧.೯″ × ೨″	ಗುರುಬಸವ	ಸು. ೧೪೩೦
೧–೭೪ ಪತ್ರ	೧೦ ಪಂಕ್ತಿ	೫೫ ಅಕ್ಷರ

ಆದಿ : ...ಲ ಚಕ್ರವರ್ತಿ ವಿರಕ್ತಶಿಖಾಮಣಿ ಚೆಂನಬಸವ ದಂಡಾಧೀಶ್ವರಾಯ ನಮಃ ॥ ಗುರುಬಸವೇಶ್ವರನು ನಿರೂಪಿಸಿದ ಷಟ್ಕಾವ್ಯ. ಪರಿವರ್ಧಿನಿ ಷಟ್ಪದಿ.

ತಂನಿರವಂ ತೋರಿಸಿ ನಿಜಸುತನಂ
ಧನ್ಯನ ಮಾಡಿ ನಿರಂತರ ದಯೆಯಿಂ
ಮಂನಿಸಿ ಪಿಂಡೋತ್ಪತ್ತಿಯನುಚಿತದಿ ಪೇಳಿದ ದೇಸಿಕನೂ ॥ ಪಲ್ಲ ॥

ಪದ॥ ಶ್ರೀ ಗುರುಲಿಂಗ ಸದೋದಿತ ಘನಸುಖ
ಸಾಗರ ಷಟ್ಸ್ಥಲನಾಯಕ ಪರಶಿವ
ಯೋಗಿ ಮನೋಮಂದಿರ ಸರ್ವಂತರಿಯಾಮಿ ಜಗತ್ಸಾಕ್ಷಿ
ರಾಗ ವಿರಾಗವಿದೂರ ನಿಖಿಲ ಭವ
ರೋಗ ಚಿಕಿತ್ಸಕ ಬಸವೇಶ್ವರ ಗಮ
ನಾಗಮನಾದಿ ವಿವರ್ಜಿತ ಕರ್ಮಫಲಪ್ರದ ಜಯ ಶತತಂ ॥ ೧

ಅಂತ್ಯ : ಕುಸುಮ ಷಟ್ಪದಿ ಪದ
ಪ್ರಸರಮುಂ ನೂಜ ಮೇ

ಲೆಸೆವವಯ್ಯುತ್ತೈದನಧ್ಯಾತ್ಮದ
ದೆಸೆಗೊರೆದ ಭದ್ರ ಗುರು
ಬಸವನಾಜ್ಞೆಯೊಳಿ ಬಾ
ಳಿಸಲಹುದು ಚಂದ್ರಾರ್ಕರುಳ್ಳನ್ನೆಗಂ ॥ ೨೯

ಯಿತಿ ಪರಿಪೂರ್ನ ನಿರೂಪಣಂ ಸಮಾಪ್ತಂ ॥ ಅಂತು ಪ್ರಕರಣ ೯ಕ್ಕಂ ಪದನು ೩೫೩ಕ್ಕಂ ಮಂಗಳ ಮಹಾ ಶ್ರೀ ಶ್ರೀ. × × ×
ಯಿತಿ ಶ್ರೀ ಗುರುಬಸವೇಶ್ವರದೇವ ನಿರೂಪಿತಂ ಸಪ್ತಮ ಕಾವ್ಯಂ । ಸಂಪೂರ್ನಂ ಮಂಗಳ ಮಹಾ ಶ್ರೀ ಶ್ರೀ.

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ. ಗುರುಬಸವನ ಸಪ್ತಕಾವ್ಯಗಳಾದ ಕಲ್ಯಾಣೇಶ್ವರ, ಸ್ವರೂಪಾಮೃತ, ಸದ್ಗುರು ರಹಸ್ಯ, ವೃಷಭ ಗೀತೆ, ಅವಧೂತ ಗೀತೆ ಮತ್ತು ಮನೋವಿಜಯ ಕಾವ್ಯಗಳಿವೆ.

—ಜಿಜಿಎಂ

55

ಕೆ. ೧೫೫೩	**ಸಪ್ತಕಾವ್ಯಗಳು**	ವಿವಿಧ ಷಟ್ಪದಿ
೬.೫" × ೨.೨"	ಗುರುಬಸವ	ಸು. ೧೪೩೦
೧–೮೩ ಪತ್ರ	೧೪ ಪಂಕ್ತಿ	೪೦ ಅಕ್ಷರ

ಆದಿ : ಶ್ರೀ ಗುರು ಬಸವ ಲಿಂಗಾಯನಮಃ ॥ ಷಟ್ಸ್ಥಲ ಚಕ್ರವರ್ತಿ ಗುರು ಬಸವೇಶ್ವರ ದೇವರು ನಿರೂಪಿಸಿದ ಸಪ್ತಕಾವ್ಯಂಗಳು ॥ ಪ್ರಥಮದಲ್ಲಿ ಯೋಗಾಂಗ ವಿಭೂಷಣವು ॥ ರಾಗ ॥ ವರಾಳಿ ॥ ಪರಿವರ್ಧಿನಿ ॥
ಪಲ್ಲವ॥ ತನ್ನಿರವಂ ತೋಱಿಸಿ ನಿಜಸುತನಂ
ಧನ್ಯನ ಮಾಡಿ ನಿರಂತರ ದಯೆಯಿಂ
ದುಣ್ಣಿಸಿ ಪಿಂಡೋತ್ಪತ್ತಿಯನುಚಿತದೆ ಪೇಳ್ದನು ದೇಶಿಕನೂ ॥
ಪದ॥ ಶ್ರೀ ಗುರುಲಿಂಗಸದೋದಿತ ಘನಸುಖ
ಸಾಂಗರ ಷಟ್ಸ್ಥಲ ನಾಯಕರ ಪರಶಿವ
ಯೋಗಿ ಮನೋಮಂದಿರ ಸರ್ವಾಂತರಿಯಾಮಿ ಜಗತ್ಸಾಕ್ಷಿ
ರಾಗ ವಿರಾಗ ವಿದೂರ ನಿಖಿಲ ಭವ
ರೋಗ ಚಿಕಿತ್ಸಕ ಬಸವೇಶ್ವರ ಗಮ
ನಾಗಮನಾದಿ ವಿವರ್ಜಿತ ಕರ್ಮಫಲಪ್ರದ ಜಯ ಸತತಂ । ೧

ಅಂತ್ಯ : ಕುಸುಮ ಷಟ್ಪದಿ ಪದ.
ಪ್ರಸರ ಮುಂನೂಱ ವೋ
ಲೆಸೆವುವೈವತ್ತೈದನಧ್ಯಾತ್ಮದ
ದೆಸೆಗೊರೆದೆ ಭದ್ರ ಗುರು
ಬಸವನಾಜ್ಞೆಯೊಳೆ ಭಾ
ವಿಸಲಹುದು ಚಂದ್ರಾರ್ಕರುಳ್ಳನ್ನೆಗಂ ॥ ೨೯
ಇತಿ ಪರಿಪೂರ್ಣ ನಿರೂಪಣಂ ಸಮಾಪ್ತಂ ॥ ಅಂತು ಪ್ರಕರಣ ೯ಕ್ಕಂ ಪದಂ ೩೫೫ಕ್ಕಂ ಮಂಗಳ ಮಹಾ ಶ್ರೀಶ್ರೀ. ಅಂತು ಸಪ್ತಕಾವ್ಯಕ್ಕಂ ಪದಂ ೧೭೫೨ಕ್ಕಂ ಮಂಗಳ ಮಹಾ ಶ್ರೀಶ್ರೀ.

ವಿಷಯ : ವೀರಶೈವಸಿದ್ಧಾಂತ.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ. ಯೋಗಾಂಗವಿಭೂಷಣ (೧–೨೩ ಪತ್ರಗಳು), ಸದ್ಗುರು ರಹಸ್ಯ (೨೩–೪೦ ಪತ್ರಗಳು), ಕಲ್ಯಾಣೇಶ್ವರ (೪೦–೪೮ ಪತ್ರಗಳು), ಸ್ವರೂಪಾಮೃತ (೪೮–೫೪ ಪತ್ರಗಳು), ವೃಷಭಗೀತೆ (೫೪–೫೯ ಪತ್ರಗಳು), ಅವಧೂತಗೀತೆ (೪೯–೬೪ ಪತ್ರಗಳು), ಮನೋವಿಜಯ (೬೪–೮೩ ಪತ್ರಗಳು) ಇವೆ.

—ಜಿಜಿಎಂ

56

ಕೆ.ಎ. ೪೪೦	ಸಪ್ತರ್ಷಿ ಸಂವಾದ	ಗದ್ಯ
೧೧.೩″ × ೯.೨″	?	?
೧–೧೭ ಪುಟ	೨೦ ಪಂಕ್ತಿ	೨೦ ಅಕ್ಷರ

ಆದಿ : ಸಪ್ತರ್ಷಿ ಸಂವಾದ
ಕಂ॥ ಒದವಿಸುವಪರ್ಪ ಪುಣ್ಯ
ಪದವೇ ....
.... ಮತದಿಂ
ದೆ ಧರ್ಮಜಗೆ ಪೇೞ್ದ ವಿಸ್ತರದಿಂ ॥
ವಚನ ॥
ಅದೆಂತೆಂದೊಡೆ :—ಎಲೈ ವೈಶಂಪಾಯನ ಮುನೀ .... ದ ನಡೆದ ಕಥಾ ವೃತ್ತಾಂತಮಂ ಕರುಣಿಸಬೇಕೆಂದು ಬಿನ್ನವಿಸಿದ ಜನಮೇಜಯ ರಾ ....

ಅಂತ್ಯ : ....ವೈಶಂಪಾಯನಮುನೀಶ್ವರನಿಂತೆಂದನು ಆ ಸಂಗತಿಯಂ ಶೌನಕಾದಿ ಮುನಿಜಾಲಂಗಳಿಗೆ ಸೂತ(ಪೌರಾಣಿಕನು ನಿರೂಪಿಸಿದ)ನು :— ಸ್ವತಂತ್ರಜನಕ್ಕೆ ಸುಲಭವಾಗಿ ತಿಳಿವಂತೆ ಕರ್ಣಾಟಕ ವಚನ ರಚನೆಯಿಂ ವಿರಚಿತಮಪ್ಪ....ಮಹಾಭಾರತ [ವ] (ದ) ಆನುಶಾಸನಿಕ ಪರ್ವದ ಇತಿಹಾಸಸಮುಚ್ಚಯದೊಳ್ ಸಪ್ತರ್ಷಿ[ಯ] ಸಂವಾದಂ ಸಮಾಪ್ತಂ. ಮಂಗಳ ಮಹಾಶ್ರೀ.

ವಿಷಯ : ಸಪ್ತ ಋಷಿಗಳ ಸಂವಾದರೂಪದಲ್ಲಿ ನಿರೂಪಿತವಾದ ತತ್ವ.

ವಿಶೇಷ : ಇದು ಅಸಮಗ್ರ ಪ್ರತಿ. ಬಹಳ ಲುಪ್ತವಾಗಿದೆ. ಇದನ್ನು ಮದರಾಸು ಪ್ರಾಚ್ಯಕೋಶಾಗಾರದಲ್ಲಿ 1930-31ರಲ್ಲಿ ಪ್ರತಿ ಮಾಡಲಾಗಿದೆ.

—ಬಿಎಸ್‌ಎಸ್

57

ಕೆ.ಎ. ೫೬೬/೫	**ಸಭಾಪತಿ ಲಕ್ಷಣ**	ಶ್ಲೋಕ, ಕಂದ, ಗದ್ಯ.
೧೩.೧ × ೮″	?	?
೧–೯ ಪುಟ	೨೭ ಪಂಕ್ತಿ	೧೬ ಅಕ್ಷರ

ಆದಿ : ಶ್ರೀ ಶಾರದಾ ಗುರುಭ್ಯೋ ನಮಃ × × × ಸಭಾಪತಿಲಕ್ಷಣಕ್ಕೆ ನಿರ್ವಿಘ್ನಮಸ್ತು ||

ಸಭಾಕಲ್ಪತರುಂ ವಂದೇ ವೇದಶಾಖೋಪಶೋಭಿತಂ
ಶಾಸ್ತ್ರಪುಷ್ಪಂ ಸಮಾಕೀರ್ಣಂ ವಿದ್ವದ್ಭ್ರಮರ ಶೋಭಿತಂ × × ×
ಶ್ರೀ ರಮ್ಯಾನುತ ಗುಣಶೃಂಗಾರಮಂ
ರಾಜಾನ್ವಯ ಪ್ರಕಾಶಸನಂ
ನುತದಾನಾರೂಢನೂ ಸಕಲಕಲಾ
ಸರಾಂಗನೊಪ್ಪುತಿರ್ದ ಸಭಾಪತಿಯೆನಲೂ || ೩

ಅಂತ್ಯ : ಪಾಂಡ್ಯ, ಚೋರ, ಚೋಳ, ಸವಾರ, ಸೌರಾಷ್ಟ್ರ, ಅತಿದೇಹ, ವಿದಬಣಾ, ದ್ರಾವಿಡ...ಬಾಹಿಕಾ ಕರುಶ, ತುರುಕಾ, ಗಾಂಧಾರ, ಕೇರಳಾ, ಕಂತುಳಾ, ಅವಂತಿ, ದ್ವಾರಕಾ, ಮಧುರಾ, ಕೋಸಲಾ, ...ಭಾಷೆಯ ಬಲ್ಲವನಾಗಿ ಇಂದ್ರ ಅಗ್ನಿ ಯಮ...ಯತನಾನಿ ಹಂತಾ ತಾನು ಸಭಾಪತಿಯ ಠಾನಕ್ಕೆ...ಮಸ್ತು ಮಂಗಳಮಹಾ...ಶ್ರೀರಾಮ ಚಂದ್ರಾಯ ನಮಃ ಶ್ರೀ.

ವಿಷಯ : ಸಭಾಪತಿಯಾದವನ ಲಕ್ಷಣಗಳು.

ವಿಶೇಷ : ಸಮಗ್ರ. ಮಧ್ಯಮಧ್ಯೆ ತ್ರುಟಿತ. ಇದರ ಕೊನೆಯಲ್ಲಿ ಶಕುನ ವಿಷಯ ಸ್ವಲ್ಪ ಇದೆ. ಅಲ್ಲದೆ ಈ ಪುಸ್ತಕದಲ್ಲಿ ಸುಭಾಷಿತ, ಕಾಲಜ್ಞಾನ ಮೊದಲಾದ ಕೃತಿಗಳಿವೆ.

—ಜಿಜಿಎಂ

58

ಕೆ. ೧೫೫೯/೬	**ಸಮಾಧಿಕ್ರಿಯದ ವಚನ**	ವಾರ್ಧಕ
೮.೪" × ೧.೫"	?	?
೧ ಪತ್ರ	೮ ಪಂಕ್ತಿ	೪೪ ಅಕ್ಷರ

ಆದಿ : ದೇಹಾವಸಾನಕಾಲದೊಳು ಮಹೇಶ್ವರ ಸ
ಮೂಹಡೊಡಗಡಿ ಜಪಿಸುತ್ತ ಪಂಚಾಕ್ಷರಿಯ
ನಾಹ ಶಿವಪದವಂದನೆಯ ಧ್ಯಾನಿಸುವ ನಮನಮಗೆ
ನಿಜಪದವಪ್ಪುದೂ ‖ ಪಲ ‖
ಪಾಲ್ಕುರಿಕೆಯ ಸೋಮ ಮೊಗ್ಗೆಯಮಾಯಿದೇವಗಳು
ಶ್ರೀ ಕರದ ಚಿಕ್ಕಮಾದಂಣ ಕದಿರ ರೆಂಮ್ಮಪ್ಪನು ಕೃ
ಪಾಕರದ ಸಮಾಧಿ ಸೋಮಯ್ಯನಜಗಂಣಾನಿಲನೂರನಿಂಬವ್ವೆಯರು‖
ಯಿಾಕಲ್ಲಿಯುಗದಿ ಶಂಭುಕರದರೊಲ್ಲದ ಸಾಮಾ
ದಿಕರವಧಿಕವೆನುತ್ತು ನಂಮ ಶಿವನ ಶಿ.
ಶ್ಯ ಕಲ್ಲಿತ ಹಿಮಗಿರೀಶ್ವರ ಹಾಳಪ್ಪಯಗಳು ಮೆರದರೀ ಧರಣಿಯೊಳು‖೧

ಅಂತ್ಯ : ಅಂತು ಶಿವಭಕ್ತರ್ಗೆ ಭಸಿತವೀಳೆಯನಿತ್ತು
ಸಂತೋಷದೊಳವನ ಪುಷ್ಪಕದೊಳಿರಿಸುತ್ತ
ಉಘೆ ಮಂತ್ರ ಜಯಜಯಘೋಷದಿಂ ತಂದು
ಸುಸಾಮಾದಿವೇದಿಕೆಯ ಮೇಲಿರಿಸುತ್ತ
ಅಂತರದ ಮೇಲಿಂದ ಗರ್ಭವಾಸಕೆ ತೆಗದು
ಕಂತುಹರ ಚಾರಪಾದಕ್ಕೆ ತೀರ್ತದಿಮೊಖದೊಳದು ಯಿಂತು ನಿಕ್ಷೇಪಿಸೆ.

ವಿಷಯ : ವೀರಶೈವ ಪದ್ಧತಿಯಂತೆ ಸಮಾಧಿ ವಿಚಾರ.

ವಿಶೇಷ : ಅಸಮಗ್ರ. ಇದೇ ಕಟ್ಟಿನಲ್ಲಿ ಬಸವಪವಾಡದ ಸಂಧಿ ಮೊದಲಾದ ೮ ಕೃತಿಗಳಿವೆ.

—ಜಿಜಿಎಂ

59

ಕೆ. ೧೩೭೯/೩ ಸಮಾಧಿಕ್ರಿಯೆ ಗದ್ಯ, ಪದ್ಯ
೧೨.೫" × ೧.೭" ? ?
೯೧–೯೨ ಪತ್ರ ೭ ಪಂಕ್ತಿ ೫೮ ಅಕ್ಷರ

ಆದಿ : ಸನಾಧಿಕ್ರಿಯಾ ॥ ದೇಹಾವಸಾರಣಂದೊಳು ಮಹೇಶ್ವರರ ಸ
ಮೂಹದೊಡಗೂಡಿ ಜಪಿಸುತ್ತ ಪಂಚಾಕ್ಷರಿಯ
ನಾಹಶಿವಪದವೊಂದನೆಯ ಧ್ಯಾನಿಸುವನಾವನವಗೆ ನಿಜಪದವಪ್ಪುದೂ॥
ಪದ॥ ಪಾಲ್ಕುರಿಕೆಯ ಸೋಮ ಮಗ್ಗೆಯ ಮಾಯಿದೇವಗಳ
ಶ್ರೀಕರದ ಚಿಕ್ಕರಾಮನು ಕದಿರರೇಮನು ಕೃ
ಪಾಕರ ಸಮಾಧಿಯ ಸೋವೈಯನಜಗಣ್ಣನಂಬಿಯು ರಾಘ
ವಾಂಕರಿವರೂ ಯಿಾ ಕಲಿಯುಗದಿ ಶಂಭಕರದೊಡಲ್ಲದೆ
ಸಮಾಧಿಕರಾವಧಿಕವನು ತೋಂನಮಃ ಶಿವಾಯ ಶಿಶ್ಯನಾ
ಕಲಿತಹಿಮಗಿರಿಶ್ವರ ಹಾಳ್ಯೈಯಪ್ಪಂಣ × × ×

ಅಂತ್ಯ : ಪರಿಪೂರ್ಣ ಬ್ರಹ್ಮನುಯವಾಗಿ ಆಚರಿಸುತ್ತ
ಪರತತ್ವಗಳ ತಿಳಿದು ಪಾಪಗಳ ಖಂಡಿಸುತ್ತ
ಶರಣ ಮಾರ್ಗದೊಳು ಕೂಡಿ ಗುರುಲಿಂಗಜಂಗಮದ
ಗುಪ್ತಪೂಜೆಯಮಾಡಿ ಶರೀರ ಕರಣೇಂದ್ರಿಯಗಳನೆಲ್ಲ ಧಿಕ್ಕರಿಸಿ
ಹರಶರಣರೊಳ್ಬೆರದ ಮತ್ರ್ಯವ ಬಯಸಬೇಡೆಂದು
ಸರ್ವ ಪುಷ್ಪವನೀವನೂ ॥

ವಿಷಯ : ವೀರಶೈವ ಸಿದ್ಧಾಂತದಂತೆ ಸಮಾಧಿ ಮಾಡುವ ವಿವರ.

ವಿಶೇಷ : ಸಮಗ್ರ. ಅಕ್ಷರಗಳು ಚೆನ್ನಾಗಿಲ್ಲ. ಇದೇ ಕಟ್ಟಿನಲ್ಲಿ ಅನುಭವ ಮುದ್ರೆ ಮೊದಲಾದ ೬ ಕೃತಿಗಳಿವೆ.

—ಜಿಜಿಎಂ

60

ಕೆ. ೧೭೫೩/೧೮ ಸಮಾಧಿಕ್ರಿಯೆ ಶ್ಲೋಕ, ಟೀಕು
೮'' × ೨.೪'' ? ?
೬೨ನೆಯ ಪತ್ರ ೧೨ ಪಂಕ್ತಿ ೪೨ ಅಕ್ಷರ

ಆದಿ : ಶ್ರೀಗುರು ಬಸವಲಿಂಗಾಯನಮಃ ॥ ಶ್ರೀಗುರುವೆ ಗತಿ ॥ ಸಮಾಧಿ
ಕ್ರಿಯದ ॥ ಗ್ರಂಥ ॥

ಅಕಾರಂ ವಾಮಭಾಗಂಚ ವುಕಾರಂ ಪೂರ್ವಮೆ ವಚಃ
ಯುಕಾರಂ ಪರಮಾಗಯುಂ ಓಂಕಾರಂ ದಕ್ಷಣೆ ಸಥ್ಮ
ಹಂಕಾರಂ ಊರ್ಧ್ವಭಾಗಂಚ ಪಂಚಪ್ರಣಮಪ್ರಕೀರ್ತಿತ ॥
ಟೀಕು॥ ಅಕಾರವೆ ಯುಡವಕಡೆ ಸಂಮುಂಥ ವುಕಾರವೆ ಮುಂದೆಸೆಯು ಸಂಮುಂಥ ಮಕಾರವೆ ಬೆಂಸಿನಲ್ಲಿ ಸಂಬಂಥ

ಅಂತ್ಯ : ದೀರ್ಘಂ ನೀಳವನು । ವುಂನತಿಂ ವುದ್ದವನು ಕುರ್ಯಾತ್ ಮಾಡುವದು । ತೃತಿಯಸ್ಯ ಮೂಜನೆಯ ಸೋಪಾನಕ್ಕೆ ತ್ರಿಪಾದಂ ಮೂಜು ಹೆಜ್ಜೆ ಆಯತಂ ವುದ್ದವನು ದೀರ್ಘ ನೀಳವನು ಕುರ್ಯಾತ್ ಮಾಡುವದೂ । ಶ್ರೀ ಶ್ರೀ.

ವಿಷಯ : ವೀರಶೈವರು ಸಮಾಧಿ ಮಾಡುವಾಗಿನ ವಿವರಗಳು

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ. ಇದರ ಜೊತೆಯಲ್ಲಿ ಶತಕತ್ರಯ ಮೊದಲಾದ ೪೭ ಕೃತಿಗಳಿವೆ.

—ಜಿಜಿಎಂ

61

ಕ. ೭೪೮/೨೩ **ಸಮಾಧಿ ಕ್ರೀಯುದ ಲಕ್ಷಣ** ಶ್ಲೋಕ–ಟೀಕು

೧೨.೫″ × ೨.೨″ ? ?

೨–೩ ಪತ್ರ ೧೬ ಪಂಕ್ತಿ ೮೫ ಅಕ್ಷರ

ಆದಿ : ಶಿವಾಯ ನಮಃ । ಸಮಾಧಿ ಕ್ರಿಯ್ಯದ ಲಕ್ಷಣ ॥ ಗ್ರಂಥ ॥ ವುಕುಟಾಗಮೋ ॥ ಗೃಹೇ ಗೋವಾಲಯಶ್ಚೈವ । ತಟಾಕೆ ವನಧಿತಟೆ । ಪುಷ್ಪವಾಟಿ ಗ್ರಾಮಮಧ್ಯೆ । ಆರಂಣ್ಯೆ ಪರ್ವತಾಶ್ರಯುಃ ॥
ಟ್ಕ॥ ಗೃಹೆ । ಮನೆಗಳಲ್ಲಿ । ಗೋವಾಲಯಶ್ಚೈವ । ಗೋವಿನ ಸಾಲೆಗಳಲ್ಲಿ । ತಟಾಕೆ । ಕೆರೆಗಳಲ್ಲಿ ಸಮಿಾಪದಲ್ಲಿ । ನದೀತಟೆ । ಹೊಳೆಗಳ ದಡದಲ್ಲಿ । ಪುಷ್ಪವಾಟೆ । ಹುವ್ವಿನ ತೋಟಗಳಲ್ಲಿ ಗ್ರಾಮಮದ್ಯೇ । ವೂರುಗಳ ಮದ್ಯದಲ್ಲಿ । ಆರಂಣ್ಯೆ । ಆರಂಣ್ಯದಲ್ಲಿ । ಪರ್ವತಾಶ್ರಯುಃ। ಬೆಟ್ಟದ ತಪ್ಪಲಲ್ಲಿ ಗ್ರುಹೆ। ಶಿವಾಲಯುಂಗಳಲ್ಲಿ। ಸಮಿಾಪದಲ್ಲಿ। ಯಿಂತಪ್ಪ । ವುಚಿತ ಸ್ಥಾನಂಗಳಲ್ಲಿ । ಸಮಾಧಿಕ್ರಿಯಗಳ ಮಾಡುವದು॥ ಅದೆಂತೆಂದೊಡೆ ॥

ಅಂತ್ಯ : ಓಂ ನಮಶಿವಾಯ ಯೆಂ . . . . . ನು ಯುಡದ ಕಂಕುಳಲ್ಲಿ ಸಂಬಂದಿಸುವುದು ॥ ಓಂ ಹ್ರಾಂ ಹ್ರೀಂ ಹ್ರೂಂ ಹ್ರೌಂ ನಮಃ ಶಿವಾಯ

ಯೆಂಬ ಪಸಾದ ಪಂಚಾಕ್ಷರವ । ಬಲದ ಕಂಕುಳಲ್ಲಿ ಸಂಬಂಧಿಸುವುದು॥ ಯಿಂನು ಸಮಾಧಿಯ ನಾಲ್ಕು ಮೂರೆಗೆ ಲಿಂಗಮುದ್ರೆಯ ಸ್ಥಾಪ್ಯವ ಮಾಡು....॥

ವಿಷಯ : ವೀರಶೈವ ಪಂಥದಂತೆ ಸಮಾಧಿಕ್ರಿಯೆಯ ವಿವರ.

ವಿಶೇಷ : ಇದರೊಡನೆ ಕರಣಹಸಿಗೆ, ಏಕೋತ್ತರ ಶತಸ್ಥಲ ಮೊದಲಾದ ೨೯ ಗ್ರಂಥಗಳಿವೆ. ಕೊನೆಯಲ್ಲಿ ೯ ಸಂಕೀರ್ಣ ಓಲೆಗಳಿವೆ. ಕೆಲವು ಗ್ರಂಥಗಳಲ್ಲಿ ಶಕಟರೇಫದ ಬಳಕೆ ಇದೆ ಕೆಲವು ಗರಿಗಳ ಅಂಚು ಮುರಿದು ಶಿಥಿಲವಾಗಿವೆ.

—ಎಸ್‌ಎನ್‌ಕೆ

62

ಕೆ. ೭೧೩ **ಸಮಾಧಿಯ ಕ್ರಮದ ವಚನ** ಹಾಡು

೮″ × ೧″ ? ?

೧೧ ಪತ್ರ ೬ ಪಂಕ್ತಿ ೪೮ ಅಕ್ಷರ

ಆದಿ : ಬಸವಲಿಂಗಾಯನಮಃ। ಸಮುದಿಯ ಕ್ರಮದ ವಚನ। ರಾಗ। ದಂನಸಿ ಪಥನು। ದೇಹವಸನ ಕಾವದೆ...ಪರಸ್ಪರ ಸಮೂಹದೊಡಗೂಡಿ।
ಜಪಿಸುತ ಪಂಚರಿಯ। ನಹ ಶಿವಪದವಂ ವನಯ ಧ್ಯಾನಿಸುವನವದಿಗೆ। ನಿಜಪದವವುದು॥ ಪಲ್ಲ॥

ಅಂತ್ಯ : ಸಮುದಿಕ್ರಿಯದ ವಚನ ಸಮಪ್ತಿ
ಶಿವಶರಣನ ದೇಹವೆ ಲಿಂಗವೆಂದು। ತಪಸಿ ಸಂಭ್ರಮದೊಳು।
ಪರ್ವವಂ ಮಾಡಿ ಸುಖದಲಿಯಿಪ್ಪುದು। ಭಕ್ತರ್ ಮಹೇಸ್ವಾರರು
ಸಮುದಿ ಕ್ರಿಯದ ಪಚನ ಸಮಾಪ್ತಿ ಕಾ। ಮಂಗಳ ಮಹಾ ಶ್ರೀಶ್ರೀ.

ವಿಷಯ : ವೀರಶೈವ ಪ್ರಕ್ರಿಯೆಗೆ ಸಂಬಂಧಿಸಿದ ಸಮಾಧಿಯ ಕ್ರಮ.

ವಿಶೇಷ : ಗ್ರಂಥ ಸಮಗ್ರವಾಗಿದೆ. ಗ್ರಂಥಮಧ್ಯದಲ್ಲಿ ಲಿಂಗಕ್ರಿಯೆ ; ಸದ್ಭಕ್ತರಿಗೆ ಮಾಡುವ ತಗಡಿನ ವಿವರಯಂತ್ರಗಳೂ ಇವೆ. ಪತ್ರಗಳ ಕೊನೆಯಲ್ಲಿ ಸ್ವಲ್ಪ ಸ್ವಲ್ಪ ತ್ರುಟಿತವಾಗಿವೆ.

—ಎಸ್‌ಬಿ

63

ಕೆ. ೧೧೧೨/೩	**ಸಮಾಸ ಪ್ರಕರಣಂ**	ವೃತ್ತ, ಕಂದ
೧೩'' × ೨''	?	?
೧-೩೩ ಪತ್ರ	೮ ಪಂಕ್ತಿ	೫೨ ಅಕ್ಷರ

ಆದಿ: ಶ್ರೀ ಮುಖ್ಯ ಪ್ರಾಣಾಯ್ಯೆನಮಃ ।

ಕಱು ತಾಯ ಬಳಿಯನುಳಿಯದ
ತ್ಱದಿಂದಂನಾಮಪದ ಮದರ್ಥಾನುಗಃಮಾ
ಹೆಜಗೆ ಸಮಾಸಂನೆಗಳಂ
ನೆಱೆ ಪ್ರೋಕುಂ ಮಧ್ಯಗತ ವಿಭಕ್ತಿಗಳದಱೊಳ್ ।

ಅಂತ್ಯ: ಕಾವ್ಯಂ-ಕಬ್ಬಂ, ಆಯರಾಜಪ್ಪರಾಜಮಾದುದಕ್ಕೆ
ಲೇಪ್ಯಂ-ಲೆಪ್ಪಂ.... ಯೋಗವಶದಿನಱಿವುದು ॥ ೧೯ ॥ ॥ ಸೂತ್ರ ॥

ವಿಷಯ: ಸಮಾಸ ಪ್ರಕರಣ ಕರ್ನಾಟಕ ಟೀಕು.

ವಿಶೇಷ: ೧-೩೩ ವರೆಗೆ ಸೂತ್ರ ವಿದೆ. ಅಪೂರ್ಣ ಅಕ್ಷರ ಚೆನ್ನಾಗಿದೆ.

—ಎಂಸಿಪಿ

64

ಕೆ.ಎ. ೩೪೦/೩	**ಸಮುದ್ರಮಥನ ಕಥೆ**	ಯಕ್ಷಗಾನ
೧೧.೫" × ೭.೭"	ನಂಜುಂಡ	೧೯ನೆಯ ಶತಕ
೧-೨೦ ಪತ್ರ	೨೫ ಪಂಕ್ತಿ	೨೦ ಅಕ್ಷರ

ಆದಿ: ಶುಭಮಸ್ತು । × × ಶ್ರೀಗರಳ ಪುರಾಧೀಶಾಯ ನಮಃ । ಸಮುದ್ರ ಮಥನ ಕಥೆಯಂ ಬರೆಯುವುದಕ್ಕೆ ನಿರ್ವಿಘ್ನಮಸ್ತು ।

ಕಂ॥ ಶ್ರೀಗರಳಪುರದ ಮಧ್ಯದಿ
ರಾಗದಿ ಗಿರಿಸುತೆಯ ಸಹಿತ ರಾಜಿಪ ಕರುಣಾ
ಸಾಗರ ಶಂಭುಪದಾಬ್ಜ ಪ
ರಾಗಾರುಣ ಶೀರ್ಷನಾಗಿ ರಾಜಿಪೆ ನಿತ್ಯಂ ॥ ೧ ॥
× × × × ×

ನಂಜನಗೂಡರಸನ ಪದ
ಕಂಜಗಳಂ ಭಜಿಸಿ ಚಂಡಿಕಾಸ್ಮರಣ ಮಹಾ
ಸಂಜೀವನ ಜೀವನ ಜೀವನನೀ (?)
ನಂಜುಂಡನು ಜಲಧಿಮಥನ ಕಥೆಯಂ ಪೇಳ್ದಂ ॥ ೪ ॥

ಅಂತ್ಯ : ಯಾರೀ ಕಥೆಯುಂ ಕೇಳುವ
ರ್‍ಯಾರಿದನೋದುವರು ಜಗದೊಳಧಿಕಾದರದಿಂ
ಗೌರೀಶನಧಿಕದಯದಿಂ
ಸಾರಸುತಾಭೀಷ್ಟಮಿತ್ತು ಸಲಹುವನವರಂ ॥

ಕಂದ॥ ರಕ್ಷಿಸು ಭೊಗದೊಳಿಂದ್ರನೆ
ರಕ್ಷಿಸು ರಮಣೀಯಮುಖ ನಿರಾಕೃತಿ ಚಂದ್ರನೆ
ರಕ್ಷಿಸು ಸದ್ಗುಣ ಸಾಂದ್ರನೆ
ರಕ್ಷಿಸು ಯಂನಂನು ಕೃಷ್ಣರಾಜೇಂದ್ರನೆ ನೀಂ ॥
ಸಮುದ್ರಮಥನ ಕಥೆ ಸಂಪೂರ್ಣಂ ಮಂಗಳ ಮಹಾ ಶ್ರೀ ॥

ವಿಷಯ : ದೇವದಾನವರು ಸಮುದ್ರವನ್ನು ಕಡೆದ ಕಥೆ.

ವಿಶೇಷ : ಇದೇ ಪುಸ್ತಕದಲ್ಲಿ ಕರಿಯುಭಂಟನ ಕಥೆ, ತಾರಾಶಶಾಂಕ ನಾಟಕ ಮೊದಲಾದ ಇತರ ನಾಲ್ಕು ಗ್ರಂಥಗಳಿವೆ.

—ಬಿಎಸ್‌ಎಸ್

65

ಕೆ. ೮೬೮	ಸಮ್ಯಕ್ತ್ವ ಕೌಮುದಿ	ವಾರ್ಧಕ ಷಟ್ಪದಿ
೧೧.೫'' × ೧.೫''	ಮಂಗರಸ	೧೫೮೦
೧-೯೭ ಪತ್ರ	೧೦ ಪಂಕ್ತಿ	೪೫ ಅಕ್ಷರ

ಆದಿ : ಶ್ರೀ ಶಾರದಾಗುರುಭ್ಯೋ ನಮಃ ಶ್ರೀಚತುರ್ವಿಂಶತಿತಾರ್ಥಂಕದ ಪರ ದೇವೇಭ್ಯೋ ನಮಃ ಶ್ರೀಪಂಚಗುರುಭ್ಯೋ ನಮಃ ಶುಭಮಸ್ತು ಶೋಭ ನಮಸ್ತು ನಿರ್ವಿಘ್ನಮಸ್ತು ನಿರಂತರಾಯೊಸ್ತು ಶ್ರೀಪತಯೇ ನಮಃ ಸಮ್ಯಕ್ತ್ವಕೌಮುದಿ ಬರೆವುದಕ್ಕೆ ನಿರ್ವಿಘ್ನಮಸ್ತು ವಾರ್ಧಿಕ ಷಟ್ಪದಿ ಶ್ರೀಮತೇ ನಮಃ ಭಾರತಿಯೆ ಗತಿ ॥

ಶ್ರೀಮದುದಿತೋದಯಂ ನೃಪವೈಶ್ಯವಿಭುವರನ
ಭಾಮಿನಿಯರೊರೆದ ಕಥೆಯಂ ಕೇಳಿ ಸಮ್ಯಕ್ತ್ವ

ವಾಮನದೊಳೊಗೆದು ದೀಕ್ಷೆಯನು ಕೈ
ಕೊಮ್ಮರಲೋಕದೊಳ್ ಸಂಜಿಸಿಸಿದಂ ॥ ಪದನು ॥

ಶ್ರೀಮನ್ನತಾಮರೋರ ನರಾಧೀಶ್ವರಂ
ಸ್ತೋವೊನ್ನತ್ತಮಾಂಗಭೂಷಣ ಖಚಿತಮಣಿಗಣೋ
ದ್ಧಾಮ ದಾಮಾರ್ಜಿತೋಲ್ಲಸಿತ ಮೃದುಪಾದ ನವರತ್ನ ರಾಜೀವ
ಯುಗವು ॥
ಸಾಮಜ ವಿರೋಧಿವಿಷ್ಟರ ವಿಭವ ಸಮುತೇತ
ಸೋಮಾರ್ಕಕೋಟಿಲಲಿತ ಪ್ರಕಾಶಂ ಮುಕ್ತಿ
ಭಾಮಿನೀವಲ್ಲಭಂ ವೀರಜಿನರಿಗೆಮಗೆ ಸಮ್ಯಕ್ತ್ವಸಂಪದವನು ॥ ೧ ॥

ಅಂತ್ಯ : ಇದು ವಿಬುಧಜನ ವಿನುತಯಿದು ವಿಬುಧಜನುತ
ಮಿದುಜಿನಸಮಯ ಶರಧಿ ಸಂಪೂರ್ಣೇಂದು
ಸದಮಲ ಚರಿತ್ರ ಯದುವಂಶಭೂವರನ ಶಚಿವಾನ್ವಯಾಂಬಹಂಸನು
ಮದನಸಮರೂಪನುತ್ತಮಗುಣಕರಂಡಕಂ
ಚದುರ ಮಂಗರಸನುಸುದ್ದಿರ್ ಕೌಮುದೀಕಥೆಯೊ
ಳೊದವಿ ರಂಜಿಸಿತು ವುದಿತೊದಯನ ಸಮ್ಯಕ್ತ್ವದೇಳ್ಗೆ ಪನ್ನೆರಡು
ಸಂಧಿ ॥ ೪೭ ॥
ಅಂತು ಸಂಧಿ ೧೨ ಕ್ಕ ಪದನು............... ಶ್ರೀಶ್ರೀಶ್ರೀ ವಿಕ್ರಮ
ನಾಮಸಂವತ್ಸರದ ವೈ............... ಬ.ಬ. ೧೨ ಭೌಮವಾರ ದ್ದಿವಸ
ಕೌಮುದೀಕಥೆ ಸಂಪೂರ್ಣವಾದುದಕ್ಕೆ ಭದ್ರಂ ಭೂಯಿತ್ ವರ್ಧತಾಂ
ಜಿನಶಾಸನಂ ಶ್ರೀಶ್ರೀಶ್ರೀ.

ವಿಷಯ : ಜೈನತತ್ತ್ವ.

ವಿಶೇಷ : ಅಕ್ಷರ ಚೆನ್ನಾಗಿದೆ. ಗ್ರಂಥ ಪೂರ್ಣವಿದೆ. ಕೊನೆಯ ಓಲೆ ತ್ರುಟಿತವಾಗಿದೆ.

—ಎಂಸಿಪಿ

66

ಕೆ. ೧೫೨೬	**ಸಮ್ಯಕ್ತ್ವ ಕೌಮುದಿ**	ವಾರ್ಧಕ ಷಟ್ಪದಿ
೧೩.೩″ × ೨.೧″	ಮಂಗರಸ	೧೫೮೦
೧-೧೩೩ ಪತ್ರ	೮ ಪಂಕ್ತಿ	೪೬ ಅಕ್ಷರ

ಆದಿ : ಶ್ರೀ ಚಂದ್ರಪ್ರಭಜಿನಾಯನಮಃ
ಶ್ರೀಮದುದಿತೋದಯ ನೃಪಂ ವೈಶ್ಯವಿಭುಃ ವರನ

ಭಾಮಿನಿಯರೊರೆದ ಕಥೆಯಂ ಕೇಳಿ ಸಮ್ಯಕ್ತ್ವ
ವಾಮನದೊಳೊಗೆದು ದೀಕ್ಷೆಯಂ ಕೈಕೊಂಡಮರಲೋಕದೊಳಂ
ಜನಿಸಿದಂ ॥ ಪಲ್ಲ ॥

ಪದ॥ ಶ್ರೀಮನ್ನತಾಮರೋರಗ ನರಾಧೀಶ್ವರ
ಸ್ತೋಮೋತ್ತಮಾಂಗಭೂಷಣ ಕಚಿತಮಣಿಗಣೋ
ದ್ದಾಮ ಘಾಮಾರ್ಚಿತೋಲ್ಲಶಿತ ಮೃದುಪಾದ ನವರತ್ನ ರಾಜೀವ
ಯುಗಲ
ಸಾಮಜವಿರೋಧಿವಿಷ್ಟರವಿಭವ ಸಮೋಪೇತ
ಸೋಮಾರ್ಕಕೋಟಿ ಲಲಿತಪ್ರಕಾಶಂ ಮುಕ್ತಿ
ಭಾಮಿನೀವಲ್ಲಭಂ ವೀರಜಿನನೀಗೆಮಗೆ ಸಮ್ಯಕ್ತ್ವಸಂಪದವನು
॥ ೧

ಅಂತ್ಯ : ಇದು ವಿಬುಧಜನವಿನುತಮಿದು ವಿಬುಧಜನವಿನುತ
ಮಿದು ವಿದಿತ ಜಿನಸಮಯಶರಧಿಸಂಪೂರ್ಣೇಂದು
ಸದಮಲ ಚರಿತ್ರ ಯದುವಂಸಭೂವರ ಸಚಿವಾನ್ವಯಾಂಬರಹಂಸನು
ಮದನಸಮರೂಪನುತ್ತಮ ಗುಣಕರಂಡಕಂ
ಚದುರ ಮಂಗರಸನುಸುರ್ದೀ ಕೌಮುದಿಕಥೆಯೊ
ಳೊದವಿ ರಂಜಿಸಿತುವುದಿತೋದಯನ ಸಮ್ಯಕ್ತ್ವದೊಳ್ ಪಂನೆರಡು
ಸಂಧಿ

ಅಂತು ಸಂಧಿ ೧೨ಕ್ಕು ಪದನು ೭೬೬ಕ್ಕಂ ಮಂಗಲ ಮಹಾ ಶ್ರೀಶ್ರೀ.
× × × × × ಸಮ್ಯಕ್ತ್ವ ಕೌಮುದಿಯ ಪುಸ್ತಕವ ಬರದವರು
ದೇಸಿಗಣದ ಜಯಕೀರ್ತಿ ಗುರುಗಳು.

ವಿಷಯ : ಜೈನಸಿದ್ಧಾಂತ.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ.

—ಜಿಜಿಎಂ

67

ಕೆ. ೧೭೬೦	ಸಮ್ಯಕ್ತ್ವ ಕೌಮುದಿ	ವಾರ್ಧಕ ಷಟ್ಪದಿ
೮.೨'' × ೧.೮''	ಮಂಗರಸ	೧೫೮೦
೧–೧೮೪ ಪತ್ರ	೦೦ ಪಂಕ್ತಿ	೩೦ ಅಕ್ಷರ

ಆದಿ: ಶ್ರೀಶಾಂತಿನಾಥಾಯ ನಮಃ × × × ಕೌಮುದಿ ಪುಸ್ತಕಕ್ಕೆ ಶ್ರೀರಸ್ತು ॥

ಶ್ರೀಮದುದಿತೋದಯಂ ನೃಪವೈಶ್ಯವಿಭುವರನ
ಭಾಮಿನಿಯರೊರೆದ ಕಥೆಯಂ ಕೇಳಿ ಸಮ್ಯಕ್ತ್ವ
ವಾಮನದೊಳೊಗೆದು ದೀಕ್ಷೆಯನು ಕೈಕೊಂಡಮರಲೋಕದೊಳ್
ಸಂಜನಿಸಿದಂ ॥

ಶ್ರೀಮನ್ನತಾಮರೋರಗ ನರಾಧೀಶ್ವರ
ಸ್ತೋಮೋತ್ತಮಾಂಗ ಭೂಷಣಖಚಿತ ಮಣಿಗಣೋ
ದ್ಧಾಮದಾಮಾರ್ಚಿತೋಲ್ಲಸಿತ ಮೃದುಪಾದ ನವರತ್ನರಾಜೀವ
ಯುಗಲ

ಸಾಮಜ ವಿರೋಧಿವಿಷ್ಟರ ವಿಭವ ಸಮುಪೇತ
ಸೋಮಾರ್ಕಕೋಟಿ ಲಲಿತಪ್ರಕಾಶಂ ಮುಕ್ತಿ
ಭಾಮಿನೀವಲ್ಲಭಂ ವೀರಜಿನನೀಗೆಮಗೆ ಸಮ್ಯಕ್ತ್ವಸಂಪದವನೂ

ಕಲ್ಲಹಳ್ಳಿಯ ಮಹಾಪ್ರಭು ವಿಜೆಯಭೂವಧೂ
ವಲ್ಲಭನ ತನುಜಾತ ಜಿನಪದಾಂಬುಜಭೃಂಗ
ನೆಲ್ಲ ಕಲೆಯುಲ್ಲಿ ಬಲ್ಲಿದನು ಮಂಗರಸನಾನೀ ಕೌಮುದೀಕಥೆಯನೂ
ಸಲ್ಲಲಿತಮಪ್ಪಾ ಸಕ್ಕದದಿ ಪೂರ್ವಾಚಾರ್ಯ
ರುಲ್ಲಸದಿ ಪೇಳ್ದುದಂ ಕರ್ನಾಟ ಕೃತಿಬಂಧ
ದಲ್ಲಿ ವುದ್ದಂಡ ಷಟ್ಪದಮಾಗಿ ವರೆದೆನಿಂತಿದನು ಭವ್ಯರು ಕೇಳ್ವುದೂ॥

ಅಂತ್ಯ : ಸಾಸಿರದಮೇಲೆ ನಾನೂರುಮೂವತ್ತೊಂದು
ಭಾಸುರಂಬಡೆದ ಶಕವರ್ಷದೆಶೆವಾಶ್ವಯುಜ
ಮಾಸದ ಶುಕ್ಲಪಕ್ಷದ ಪಾಡ್ಯಮುಂ ಮಂದವಾರದೊಳಗೀಕೃತಿಯನೂ
ಈ ಸಂಸ್ಕೃತಿಶ್ರಾಂತ ವಿಶ್ರಾಂತವಿಶ್ರಾಂತಮಂ ಮಾಡು
ವಾಸೆಯಿಂದವೆ ಸಮಾಪ್ತಂಗೆಯ್ವೆನಿಂತಿದನು
ದಾಶೀನಮಂ ಮಾಡದೆ ಭವ್ಯಸಮಿತಿ ಸಂತೋಷದಿಂ ಲಾಲಿಸುವುದೂ
ಅಂತೂ ಸಂಧಿ ೧೨ಕ್ಕಂ ಪದನೂ ೭೮೬ಕ್ಕಂ ಜಯ ಮಂಗಳ ಮಹಾ
ಶ್ರೀ ಶ್ರೀ.

ವಿಷಯ : ಜೈನತತ್ತ್ವಕ್ಕೆ ನಿದರ್ಶನವಾದ ಕಥೆಗಳು.

ವಿಶೇಷ : ಪ್ರತಿ ಚೆನ್ನಾಗಿದೆ. ಸಮಗ್ರ. ೧೧ನೆಯ ಗರಿ ಇಲ್ಲ. ೧೬, ೩೪, ೧೫೪ನೆಯ ಸಂಖ್ಯೆಯ ೨ ಪತ್ರಗಳಿವೆ.

— ಜಿಜಿಮಂ

68

ಕ. ೧೭೯೯ ಸಮ್ಯಕ್ತ್ವ ಕೌಮುದಿ ವಾರ್ಧಕ ಷಟ್ಪದಿ

೧೧.೩" × ೧.೮" ಮಂಗರಸ ೧೫೮೦

೧–೧೧೨ ಪತ್ರ ೮ ಪಂಕ್ತಿ ೫೦ ಅಕ್ಷರ

ಆದಿ : ಶ್ರೀ ವೀತರಾಗಾಯನಮಃ । × × × ×
ಶ್ರೀಮನ್ನ ತಾಮರೋರಗ ನರಾದೀಶ್ವರ
ಸ್ತೋಮೋತ್ತಮಾಂಗಭೂಷಣ ಖಚಿತ ಮಣಿಗಣೋ
ದ್ಧಾಮಧಾಮಾರ್ಚಿತೋಲ್ಲಸಿತ ಮೃದುಪಾದನವರಕ್ತ ರಾಜೀವ ಯುಗಲ
ಸಾಮಜವಿರೋಧಿವಿಷ್ಟರ ವಿಭವಸಮುಪೇತ
ಸೋಮಾರ್ಕಕೋಟಿ ಲಲಿತ ಪ್ರಕಾಶಂ ಮುಕ್ತಿ
ಭಾಮಿನೀವಲ್ಲಭಂ ವೀರಜಿನನೀಗೆಮಗೆ ಸಮ್ಯಕ್ತ್ವ ಸಂಪದವನೂ ॥ ೧ ॥

ಅಂತ್ಯ : ಇದು ವಿಬುಧಜನ ವಿನುತವಿದು ವಿಬುಧಜನ ವಿನುತ
ವಿದು ವಿದಿತಜಿನಸಮಯಶರಧಿಸಂಪೂರ್ಣೇಂದು
ಸದಮಲ ಚರಿತ್ರ ಯದುವಂಶಭೂವರನ ಶಚಿವಾನ್ವಯಾಂಬರಹಂಸನು
ಮದನಸಮರೂಪನುತ್ತಮಗುಣ ಕರಂಡಕಂ
ಚದುರ ಮಂಗರಸನುಸುರ್ದೀ ಕೌಮುದೀಕಥೆಯೊ
ಳೊದವಿ ರಂಜಿಸಿತು ವುದಿತೋದಯನ ಸಮ್ಯುಕ್ತದೇಳ್ಗೆಯ ಪಂನೆ ರಡನೆಯ ಮಿಸುಪ ಸಂಧಿ ॥ ೪೬ ॥

ಸಮಾಪ್ತ ಮಂಗಳ ಮಹಾ ಶ್ರೀಶ್ರೀ ॥ ಕೌಮುದಿ ಸಂಧಿ ೧೨ಕ್ಕಂ ಪದ ೮೦೦ × × × ಗ್ರಂಥಪ್ರಮಾಣ ೨೦೦೦ ಯಿಂತೀ ಶ್ರೀ ಮನ್ಮಹಾ ಸಮ್ಯುಕ್ತ ಕೌಮುದಿ × × ಶ್ರೀ ಮಜ್ಜಿನಪಾದರವಿಂದ ದ್ವಂದ್ವ ಮತ್ತ ಮಧುಕರ × × × ಪದುಮಣ ಸದ್ವಿರಗ ಭುಜ ಬಲಿಯು ರಾಕ್ಷಸ ಸಂವತ್ಸರದ ಕಾರ್ತಿಕ ಬಹುಳ ೧೦ಲ್ಲು ಮಲೆಯಾಳ ದೇಶದ ಪುತ್ತಂಗಡಿ ಚಂದ್ರನಾಥನ ಬಸ್ತಿಯಲ್ಲಿ ಚಂದ್ರಪ್ರಭ ತೀರ್ಥಕರ ಪಾದಸನ್ನಿಧಿಯಲ್ಲಿ ಬರೆದುಕೊಟ್ಟ ಕೌಮುದಿಗ್ರಂಥಕ್ಕೆ ಮಂಗಲ ಮಹಾ ಶ್ರೀಶ್ರೀ ॥

ವಿಷಯ : ಜೈನತತ್ತ್ವ.

ವಿಶೇಷ : ಬರವಣಿಗೆ ಚೆನ್ನಾಗಿದೆ. ಶಿಥಿಲ ಪ್ರತಿ. ಪತ್ರಗಳನ್ನು ಹುಳು ತಿಂದಿವೆ ಮತ್ತು ಅಂಚುಗಳು ಮುರಿದಿವೆ. ೬೯ನೆಯ ಪತ್ರ ಅರ್ಧಕ್ಕೆ ಮುರಿದು ಹೋಗಿದೆ.

—ಎಂಪಿಎಂ

69

ಕೆ. ೧೮೦೩/೧	ಸಮ್ಯಕ್ತ್ವ ಕೌಮುದಿ	ವಾರ್ಧಕ ಷಟ್ಪದಿ
೧೦.೯″ × ೨″	ಮಂಗರಸ	೧೫೮೦
೧–೧೩೨ ಪತ್ರ	೭ ಪಂಕ್ತಿ	೪೬ ಅಕ್ಷರ

ಆದಿ : ಶ್ರೀಚತುರ್ವಿಂಶತಿ ತೀರ್ಥೆಶ್ವರಸ್ವಾಮಿ ಪಾದಾರವಿಂದವೆ ಗತಿ ॥ ಶ್ರೀ ಶಾರದಾ ಗುರುಭ್ಯೋನಮಃ ॥ ಸಮ್ಯಕ್ತ್ವ ಕೌಮುದಿ ಕಥೆ ಬರೆವುದಕ್ಕೆ ಶುಭಮಸ್ತು ॥ ಶ್ರೀರಸ್ತು

ಶ್ರೀಮದುದಿತೋದಯಂ ನೃಪಂ ವೈಂಸ್ಯವಿಭುವರನ
ಭಾಮಿನಿಯರೊರೆದ ಕಥೆಯಂ ಕೇಳಿ ಸಮ್ಯಕ್ತ್ವ
ವಾಮನದೊಳೊಗೆದು ದೀಕ್ಷೆಯನು ಕೈಕೊಂಡಮರಲೋಕದೊಳ್ಜ
ನಿಸಿದಂ

ಪದನು॥ ಶ್ರೀಮಂನತಾಮರೋರಗಾಧೀಶ್ವರ ಸ್ತೋಮೋ
ತ್ತಮಾಂಗ ಭೂಷಣಖಚಿತ ಮಣಿಗಣೋದ್ಧಾಮ
ದಾಮಾರ್ಚಿತೋಲ್ಲಸಿತ ಮೃದುಪಾದಸರೋಜ ನವರತ್ನ
ರಾಜಿಯುಗಲಾ
ಸಾಮಜವಿರೋಧಿವಿಷ್ಟರವಿಭವ ಸಮುಪೇತ
ಸೋಮಾರ್ಕಕೋಟಿ ಲಲಿತಪ್ರಕಾಶಂ ಮುಕ್ತಿ
ಭಾಮಿನೀವಲ್ಲಭಂ ವೀರಜಿನನೀಗೆಮಗೆ ಸಮ್ಯಕ್ತ್ವ
ಸಂಪದವನೂ ॥ ೧

ಅಂತ್ಯ : ಇದು ವಿಬುಧಜನವಿನುತವಿದು ವಿದಿತ ಜಿನಸಮಯ
ಶರಧಿಸಂಪೂರ್ಣೇಂದು ಸದಮಲ ಚರಿತ್ರ ಚಂ
ಗಾಳ್ವಭೂವರನ ಶಚಿವಾನ್ವಯಾಂಬರಹಸನೂ
ಮದನಸಮರೂಪನುತ್ತಮಗುಣಾಕರಂಡಕಂ
ಚದುರ ಮಂಗರಸನರ್ಸ್ಪರ್ದೀ ಕಥೆಯೊಳೊದವಿ ಸೊಗಯಿ
ಸಿದದುದಿತೋದಯ ಸಮ್ಯಕ್ತ್ವದೇಳ್ಗೆ ಪಂನೆರಡನೆಯಸಂಧಿ ॥ ೪೮

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಖವರುಷಗಳು ೧೭೪೧ ನೆಯ ಬಹುಧಾನ್ಯಸಂವತ್ಸರದ ಶ್ರಾವಣಸುದ್ಧ ೨ ಭೌಮ್ಯವಾರ ಮಘಾ ನಕ್ಷತ್ರ ಪೂರ್ವಾರ್ಣಂಣದಲ್ಲಿ ಘಳಿ ೫ ರಲ್ಲಿ ರತ್ನಗಿರಿಬಸ್ತಿಮಠದಧಿಪತಿ ಮಹಾಶಾರದಾದೇವಿಯುವರ ದಿವ್ಯಶ್ರೀಪದ್ಮಾರಾಧಕನಾದಂಥ ಚಿಕ್ಕೆಯ್ಯಾತ್ಮಜ ಪಾಯಂಣನು ಶಾಲಾಪುರದ ಅನಂತಪದ್ಮನಾಭ ಸ್ವಾಮಿಃಯುವರ ಪಾದದ ಸಂನಿಧಾನದಲ್ಲಿ ಜ್ಞಾನಾವರಣೀಯ ಕರ್ಮೋಪಶಮನ ನಿಮಿತ್ಯವಾಗಿ ಬರದಂಥಾ ಕೌಮುದಿ ಪುಸ್ತಕಕ್ಕೆ ಆಯುರಾರೋಗ್ಯೈಸ್ವರ್ಯಾಭಿವೃದ್ಧಿರಸ್ತು ॥ ಸಿದ್ಧಿರಸ್ತು ॥ ಸಂಧಿ ೧೨ಕ್ಕಂ ಪದನು ೮೭೯ ಗ್ರಂಥಪ್ರಮಾಣ ೨೦೦೦೪೦೦ಕ್ಕಂ ಮಂಗಳ ಮಹಾ ಶ್ರೀ ಶ್ರೀ.

ವಿಷಯ : ಜೈನಧರ್ಮದ ಕಥೆಗಳು.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ. ಇದರ ಜೊತೆಗೆ ಜಿನಭಕ್ತಿಸಾರ ಮುಂತಾದ ೧೨ ಕೃತಿಗಳಿವೆ.

—ಜಿಜಿಎಂ

70

ಕೆ. ೧೮೦೪/೭ | **ಸರಳೆ (ಸಂಗೀತ)** | ಸಂಗೀತ

೧೭.೩″ × ೨.೧″ | ? | ?

೧ ಪತ್ರ | ೯ ಪಂಕ್ತಿ | ೯೦ ಅಕ್ಷರ

ಆದಿ : ಸರಳೆ ಬರಉದಕ್ಕೆ ಶುಭಮಸ್ತು
ಸರಿಗಮಪದನಿಸ ಸನಿದಪಮಗರಿಸ ।
ಧ್ರುವತಾಳ ॥

ಸಸರ್‍ರಿರ್‍ರಿ ಗಗಮಮ ಪಪದಧ ನಿನಿಸಸ್ಸಾ
ಸಸನಿನಿದಧಪಪಮಮಗಗರ್‍ರಿರ್‍ರಿಸಸ್ಸಾ
ಸಸರ್‍ರಿರ್‍ರಿಗಗಮಮ
ರ್‍ರಿರ್‍ರಿಗಗಮಮಪಪ
ಗಗಮಮಪಪದಧಾ
ಮಮಪಪಧಧನಿನಿ

ಅಂತ್ಯ : ಧಸಾಧಪಾಮಾದಿ । ಧಧಪಮಗರ್‍ರಿಸಾ
ಪಾಮಾಪಧಸಾಧಸಾ ರ್‍ರಿಸಾಧಾಧಾ ಸಾಧಾಪ

ಥಾದಾಪಾಪ್ಪಾಪ್ಪಮರ್ರಿಮಾಮಪಾಪ್ಪಾ
ಥಾಥಾಪಾಪ್ಪಮೂರ್ರಿಪ್ಪಮಗರ್ರಿಸಸಾಸಾ
ಥಾಥಾಥಾಪಥದಾಪಮಗರ್ರಿಸಾ ||
ಪದುಮನಾಭಾ ||

ವಿಷಯ : ಸಂಗೀತದಲ್ಲಿ ಸರಳೆ.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ. ಇದರ ಜೊತೆಗೆ ಶೃಂಗಾರ ಪದಗಳು ಮುಂತಾದ ಕೃತಿಗಳಿವೆ.

—ಜಿಜಿಎಂ

71

ಕೆ. ೧೦೬೯/೨ **ಸರ್ವಜ್ಞನ ಪದಗಳು** ತ್ರಿಪದಿ

೯.೮" × ೨" ಸರ್ವಜ್ಞ ಸು. ೧೭೦೦

೧–೩ ಪತ್ರ ೮ ಪಂಕ್ತಿ ೪೮ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ || ಸರ್ವಗ್ನಾ ತ್ರಿವಿಧಿ ||
ಕೊಟ್ಟಾದು ಮುನ್ನಿಲ್ಲಾ ಹುಟ್ಟಿದಜಾ ಉಗಳಿತ್ತು
ಕಷ್ಟವಿಷಯಗಳ ಬಿಡಲಿಲ್ಲಾ ಕೈಲಾಸ
ಬಟ್ಟೆಯರ್ಗಹುದೆ ಸರ್ವಗ್ನಾ || ೧ ||
ಕೈಯ್ಯಾರ ಕೊಡಲಿಲ್ಲಾ ವೈಯ್ಯ ದಂಡಿಸಲಿಲ್ಲ
ಅಯ್ಯಗಳೆಲ್ಲಾ ಹರಿದಾರೆ ಕೈಲಾಸ
ಕೈಯ ಮಂಚಿಕೆಯೆ ಸರ್ವಜ್ಞ || ೨ ||

ಅಂತ್ಯ : ಯತ್ತ ಹೋದರೆ ಮನವ ಹೆತ್ತಿಕೊಂಡಿರುತಿಹುದು
ಮತ್ತೊಬ್ಬ ಮುನಿದುಕೊಳಲರಿಯಗ್ನಾನದ
ಬಿತ್ತು ಲೇಸೈಯ್ಯ ಸರ್ವಗ್ನಾ || ೫೦ ||

ವಿಷಯ : ಸರ್ವಜ್ಞನ ವಚನಗಳು. ಲೋಕನೀತಿ.

ವಿಶೇಷ : ಇದರಲ್ಲಿ ೫೦ ತ್ರಿಪದಿಗಳು ಇವೆ. ಇದರ ಜೊತೆಯಲ್ಲಿ ನಂಜುಂಡನ ಭೈರವೇಶ್ವರ ಕಾವ್ಯವಿದೆ

— ಜಿಜಿಎಂ

72

ಕೆ. ೧೦೮೧ **ಸರ್ವಜ್ಞನ ಪದಗಳು** ತ್ರಿಪದಿ

೮″ × ೨″ ಸರ್ವಜ್ಞ ಸು. ೧೭೦೦

೧–೧೦ ಪತ್ರ ೧೨ ಪಂಕ್ತಿ ೩೮ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯನಮಃ ಸಂಪಾದನೆಯ ಸಿದ್ಧವೀರೇಶ್ವರ ದೇವರು ಸೇರಿಸಿದ ಸರ್ವಜ್ಞಮೂರ್ತಿಯ ತ್ರಿವಿಧಿ.

ಪರಮನ್ನ....ದು । ನೆರವಿಯರನೊಲ್ಲದೆ
ನರರೂಪ ತಾಳಿ ಗುರುವಾಗಿ ಭೋದಿಪಗೆ
ಸರಿಯಾರ ಕಾಣೆ ಸರ್ವಜ್ಞ ‖ ೧ ‖

ಅಂತ್ಯ : ಕಿಚ್ಚಿನ ಸಂಗಾತ ವಚ್ಚತ ಕಪ್ಪುರವು
ಅಚ್ಚಳಿದು ನಿಂದು ನಿಜವಾದ ಭೇದವನು
ಮುಚ್ಚುವ ಶರಣ ಸರ್ವಜ್ಞ ‖ ೨೩೮ ‖

ವಿಷಯ : ಭಕ್ತಿ ಮತ್ತು ನೀತಿ.

ವಿಶೇಷ : ಅಸಮಗ್ರ. ೨೩೮ನೆಯ ವಚನಕ್ಕೆ ಕೊನೆಗೊಳ್ಳುತ್ತವೆ. ಹಸ್ತಪ್ರತಿ ಉತ್ತಮಸ್ಥಿತಿಯಲ್ಲಿದೆ.

—ಹಸರಾ

73

ಕೆ. ೧೩೫೭/೩ **ಸರ್ವಜ್ಞನ ಪದಗಳು** ತ್ರಿಪದಿ

೬.೫″ × ೧.೭″ ಸರ್ವಜ್ಞ ಸು. ೧೬೦೦

೨೮–೨೯ ಪತ್ರ ೭ ಪಂಕ್ತಿ ೨೫ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ ‖
ರಾಗವು ಮೂಡವೂ ಶಿವಯೋಗವು ಬಡಗಾವೂ
ರೋಗವು ಶುದ್ಧ ಪಡುವವೂ-ಶೆಂಕವೂ
ಭೋಗಾದ ಬಿಡು ಸರ್ವಜ್ಞಾ ‖ ೧ ‖

ಅಂತ್ಯ : ವಿಟನ ವಿಧು ಸುತನ ಪೀಠ ವರ್ಥನನ
ನಾಗಲೀಕನನ ಇವರ ತಲೆಯ ಶಿಶು
ಜಗದೊಳಗೆ ತಾನೆ ಹೇಳಿದನು ಸರ್ವಜ್ಞ ‖ ೨೪ ‖

ವಿಷಯ : ಲೋಕನೀತಿ.

ವಿಶೇಷ : ಅಸಮಗ್ರ. ಇದೇ ಕಟ್ಟಿನಲ್ಲಿ ಸಹಸ್ರಗಣನಾಮ, ಸಿದ್ಧೇಶ್ವರನ ಷವಾಡವ ವಚನ ಮತ್ತು ಏಕಾದಶ ಪಟಲ ಎಂಬ ಗ್ರಂಥಗಳಿವೆ.

—ವೈಸಿಬಿ

74

ಕೆ. ೧೫೩೩	**ಸರ್ವಜ್ಞನ ಪದಗಳು**	ತ್ರಿಪದಿ
೧೪.೬" × ೧.೮"	ಸರ್ವಜ್ಞ	ಸು. ೧೭೦೦
೧–೩೦ ಪತ್ರ	೬ ಪಂಕ್ತಿ	೪೨ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯನಮಃ ॥ ಸರ್ವಜ್ಞ ತ್ರಿವಿದಿ ॥
ಮುನ್ನ ಪೂರ್ವದೊಳಿನ್ನು ವಂ ನಗದಾರನಳು
ಯಂನಯು ಪೆಸರು ಪುಸ್ಪದಂತ ಕೈಲಾಸದಲ್ಲಿ
ಮಂನಿಪರಾರು ಸರ್ವಜ್ಞ ॥ ೧

ಅಂತ್ಯ : ಕುದುರೆಯು ಚದುರೆಯು ಹದಿರು ಯರಡು ವಂದೆ
ಚದುರನೇರಿದರೆ ಕುಣಿದು ಹೆಡ್ಡನ
ಬೆದರಿಹಾಕುವದು ಸರ್ವಜ್ಞ

ವಿಷಯ : ಲೋಕನೀತಿ.

ವಿಶೇಷ : ಅಸಮಗ್ರ. ಪ್ರತಿ ತೀರ ಅಶುದ್ಧ.

—ಜಿಜಿಎಂ

75

ಕೆ. ೧೭೫೩/೧೩	**ಸರ್ವಜ್ಞನ ಪದಗಳು**	ತ್ರಿಪದಿ
೮" × ೨.೪"	ಸರ್ವಜ್ಞ	ಸು. ೧೭೦೦
೨೩–೩೩ ಪತ್ರ	೧೨ ಪಂಕ್ತಿ	೪೨ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯನಮಃ । ಸರ್ವಜ್ಞಮೂರ್ತಿಯ ತ್ರಿವಿಧಿ ॥
ಪರಮನೈವೊಗವಳಿದು ನೆರವಿಯರನೊಲ್ಲದೆ
ನರರೂಪ ತಾಳಿ ಗುರುವಾಗಿ ಬೋಧಿಪಗೆ
ಸರಿಯಾರ ಕಾಣೆ ಸರ್ವಜ್ಞ ॥ ೧

ಸುರತರುವು ಮರನಲ್ಲ ಸುರಭಿವಂದಾವಲ್ಲ
ಪರುಷ ಪಾಷಾಣದೊಳಗಲ್ಲ
ಗುರುರಾಯ ನರರೊಳಗಲ್ಲ ಸರ್ವಗ್ನಾ ॥ ೨

ಅಂತ್ಯ : ಬಸವರಾಜನ ಚರಣ ಬಿಸರುಹವನನವರತ
ವಸುಧೆ ನೆನೆಯಲ್ಕೆ ಬಸವೇಶ ಲಿಂಗೈ
ಕ್ಯ ಸುಖವನೊಲ್ದೀವೆ ಸರ್ವಗ್ನಾ ॥ ೨೬೫
ಸರ್ವಜ್ಞಮೂರ್ತಿಯ ಆಚರಣೆಸಂಬಂಧದ ತ್ರಿವಿಧಿ ಸಮಾಪ್ತ ಮಂಗಳ
ಮಹಾ ಶ್ರೀ ಶ್ರೀ.

ವಿಷಯ : ನೀತಿ, ಜ್ಞಾನ.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ. ಇದರ ಜೊತೆಯಲ್ಲಿ ಶೀಲವಂತಯ್ಯನ
ತ್ರಿವಿಧಿ ಮೊದಲಾದ ೪೭ ಕೃತಿಗಳಿವೆ.

—ಜಿಜಿಎಂ

76

ಕೆ.ಎ. ೪೫೦ **ಸರ್ವಜ್ಞನ ಪದಗಳು** ತ್ರಿಪದಿ

೧೦.೭" × ೯ ೭" ಸರ್ವಜ್ಞ ಸು. ೧೭೦೦

೧-೧೩೯ ಪುಟ ೨೦ ಪಂಕ್ತಿ ೧೪ ಅಕ್ಷರ

ಆದಿ : ಶ್ರೀ ಶಾರದಾ ಗುರುಭ್ಯೋನಮಃ। ಪರಮಾರ್ಥದ ಪುಸ್ತಕಕ್ಕೆ
ನಿರ್ವಿಘ್ನಮಸ್ತು.
ಮುನ್ನ ಪೂರ್ವದಿಲಾನು ಪನ್ನಗಧರನೊಳು
ಎನ್ನಯ ಪೆಸರು ಪುಷ್ಪದಂತ ಕೈಲಾಸದಿಂ
ಮನ್ನಿಪರು ನೋಡ ಪರಮಾರ್ಥಾ ॥ ೧ ॥
× × × ×
ಅಂಬಊರೊಳಗೆಸೆವ ಕುಂಬಾರಶಾಲೆಯಲಿ
ಇಂಬಿನ ಕಳ್ಳಿ ಪರಮಾರ್ಥ ಮಾಳಿಯೊಳು ಬಸವರಸ
ಇಂಬಿಟ್ಟಸೆನ್ನ ಪರಮಾರ್ಥ ॥ ೭ ॥

ಅಂತ್ಯ : ಹೊಸ . . . ಪಾಪಕ್ಕೆ ಬಸವ ಶರಣೆಂದರೆ
ಬಿಸಿಲಿಗೆ ಕತ್ತಲೆಯು ಹರೆವಂತೆ ಕರ್ಮಗಳು
ಹಸಗೆಟ್ಟೋಗುವವು ಪರಮಾರ್ಥ ॥ ೫೬ ॥

ಅಂತು ಸಂಧಿ ೨೩ಕ್ಕಂ ಪದನು ೯೩೭ಕ್ಕಂ ಮಂಗಳ ಮಹಾ ಶ್ರೀ.
ಶ್ರೀ ಶಾರದಾ ಗುರುಭ್ಯೋಂ ನಮಃ ||
ಪ್ಲವಂಗ ಸಂವತ್ಸರದ ಮಾಘಶುದ್ಧ ೧೫ಲ್ಲು ಚಿಗನಾಯಕನಹಳ್ಳಿ ಲಿಂಗಪ್ಪನು ಮಹಾರಾಜೇಶ್ರೀ ಚೆನ್ನಾಜಮ್ಮನವರಿಗೆ ಪಾರಮಾರ್ಥಿಕದ ಪುಸ್ತಕ ಬರೆದು ಒಪ್ಪಿಸಿದಂಥಾ ಮುಹೂರ್ತದಲ್ಲಿ ನಮ್ಮಂಥಾ ನಂಬಿದ ವರ ಸಾರೋದ್ಧಾರವಾಗಿ ರಕ್ಷಣ್ಯವ ಮಾಡುವಂಥಾ ಅಷ್ಟಪುತ್ರರು ಉಂಟಾಗಿ ಧನ ಕನಕ ವಸ್ತುವಾಹನ ಐಶ್ವರ್ಯಾಭಿವೃದ್ಧಿಯಾಗಲಿ ಯೆಂದು ಹರಸಿ ಬರದುಕೊಟ್ಟ ಪಾರಮಾರ್ಥಿಕದ ಪುಸ್ತಕಕ್ಕೆ ಸದಾ ಜಯ ಮಂಗಳ ಮಹಾ ಶ್ರೀ.

ವಿಷಯ: ನೀತಿ, ಜ್ಞಾನ.

ವಿಶೇಷ: ಇದನ್ನು ಮದರಾಸ್ ಪ್ರಾಚ್ಯಕೋಶಾಗಾರದಲ್ಲಿ ಡಿ. 1566 ರಿಂದ 14-3-1948ರಲ್ಲಿ ಶ್ರೀ ಪಿ. ಸುಬ್ರಾಯಭಟ್ಟರು ಪ್ರತಿಮಾಡಿದ್ದಾರೆ.

—ಜಿಎಸ್ಎಸ್

77

ಕೆ.ಎ. ೪೭೨	**ಸರ್ವಜ್ಞನ ಪದಗಳು**	ತ್ರಿಪದಿ
೧೦.೫" × ೯.೫"	ಸರ್ವಜ್ಞ	ಸು. ೧೬೦೦
೧-೯೨ ಪುಟ	೨೦ ಪಂಕ್ತಿ	೧೪ ಅಕ್ಷರ

ಆದಿ: "ಸರ್ವಜ್ಞತ್ರಿವಿಧ" "ಪರಮಾರ್ಥ" ಅಂಕಿತ. ಶುಭಮಸ್ತು. ಗುರುಪದ್ಧತಿ.
ಗುರುಪಾದಕ್ಕೆರಗಿದವ ಶಿರ... ಶಾಮಣಿಯಾಯ್ತು
ವರ ಬುಧರಿಗೊಲಿದು ಕೊಡುತಿಪ್ಪ ಹಸ್ತವದು
ಸುರತರುವಾದಾಯ್ತು ಪರಮಾರ್ಥ || ೧ ||

ಅಂತ್ಯ: ಕೋಡಗ ಕುದುರೆಯಲಿ
ನೋಡ ನೋಡಲು ಹುಟ್ಟಿ
ಕಾಡಾನೆಗೆರಡು ಗರಿ ಹುಟ್ಟಿ ಗಗನಕ್ಕೆದ್ದಾಡುವಂ ಕಂಡೆ || ೪ ||
ಅರಸು ಬೆಟ್ಟವ ನುಂಗದಿ
ಅರಸಿ ಬೇಸಣಿಗೆ ದುಂ ...
. . . . . . ಕರವಿಳುದ ಕಂಡೆ || ೫ ||

ವಿಷಯ : ನೀತಿ ಜ್ಞಾನ ನಿರೂಪಣೆ.

ವಿಶೇಷ : ಇದರಲ್ಲಿ 'ಸರ್ವಜ್ಞ' ಎಂಬ ಅಂಕಿತಕ್ಕೆ ಬದಲಾಗಿ 'ಪರಮಾರ್ಥ' ಎಂದಿದೆ. ಅಲ್ಲಲ್ಲಿ ಗ್ರಂಥಲೋಪ. ಅಶುದ್ಧ ಪ್ರತಿ. ಇದನ್ನು 1949 ರಲ್ಲಿ ಟಿ. ವಿ. ರಾಮಸ್ವಾಮಿಯವರು ಪ್ರತಿ ಮಾಡಿದ್ದಾರೆ. ಮೂಲ ಪ್ರತಿ ಮದರಾಸು ಪ್ರಾಚ್ಯಕೋಶಾಗಾರದ D 1670.

—ಬಿಎಸ್‌ಎಸ್

78

ಕೆ.ಬಿ. ೭೧೪/೧	**ಸರ್ವಜ್ಞನ ಪದಗಳು**	ತ್ರಿಪದಿ
೮.೧" × ೬.೮"	ಸರ್ವಜ್ಞ	ಸು. ೧೭೦೦
೧–೩೦ ಪತ್ರ	೧೮ ಪಂಕ್ತಿ	೨೪ ಅಕ್ಷರ

ಆದಿ : ಶ್ರೀ ಪ್ರಜೋತ್ಪನಾಮ ಸಂ । ರದ ಆಷಾಢ ಶು ೧೨ ಗುರುವಾರದಲ್ಲು ಸರ್ವಜ್ಞ ತ್ರಿವುಡೆ ಬರಿಯೂವದಕ್ಕೆ ಶುಭಮಸ್ತು ॥ ನಿರ್ವಿಘ್ನಮಸ್ತು ॥ ಜಾತಿಮರ ॥

ಮುಂನ ಪೂರ್ವದೊಳೆಂನು ಷಂನಂಗಧರನಾಳು
ಯಂನಯ ಪೆಸರು ಪುಷ್ಪದಂತ ಕೈಲಾಸದಲಿ
ಮಂನಿಪರಾರು ಸರ್ವಗ್ನಾ ॥ ೧

ಅಂದು ನಾ ಪುಷ್ಪದಂತ ಬಂದೆನು ರುಷಿಯಾಗಿ
ಮುಂದೆ ದೇಶದೊಳು ಸರ್ವಜ್ಞನೆಂದೆನಿಸಿ
ಬಂದವನಃ ನಾನೆ ಸರ್ವಜ್ಞಾ ॥ ೨ ॥

ಅಂತ್ಯ : ಕೂಸುಳ್ಳ ಸೂಳೆಗೆ ಹೇಸದೊತ್ತೆಯ ಕೊಟ್ಟು
ಕೂಸತ್ತು ನಲ್ಲ ಬೇಸತ್ತು ಬಾಣಂತಿ
ವೀಸಕ್ಕು ಬೇಡ ಸರ್ವಗ್ನಾ ॥ ೩೧

ವಿಷಯ : ನೀತಿ, ಜ್ಞಾನ.

ವಿಶೇಷ : ಅಸಮಗ್ರ. ಪ್ರತಿ ಚೆನ್ನಾಗಿದೆ. ಇದರ ಜೊತೆಯಲ್ಲಿ ಗಣಿತದ ಲೆಖ್ಖ ಮೊದಲಾದ ೫ ಕೃತಿಗಳಿವೆ.

—ಜಿಜಿಎಂ

79

ಕೆ. ೧೦೪೩/೯	**ಸರ್ವಜ್ಞ ನೀತಿ**	ತ್ರಿಪದಿ
೧೫.೭'' × ೨''	ಸರ್ವಜ್ಞ	ಸು. ೧೭೦೦
೩೦-೪೩ ಪತ್ರ	೯ ಪಂಕ್ತಿ	೮೨ ಅಕ್ಷರ

ಆದಿ : ಸರ್ವಜ್ಞ ನೀತಿ ಲಿಖ್ಯತೆ । ತ್ರಿವಿಧಿ ॥
ಮಾಳಿಯನು ಮಾಂನವರು ಕೂಳ ತಿಂದ್ಹೊಂಮೆಯಲಿ
ಕೇಳರಿ ಯಂನ ಶಿಶುವೆಂದು ನಾ ಶಿವನ
ಮೇಳಾದ ಮಗನು ಸರ್ವಗ್ನಾ ॥ ೧ ॥

ಅಂತ್ಯ : ಕುಂಭಕ್ಕೆ ಗುರು ಬರಲು ತುಂಬ್ಯಾವು ಕೆರೆ ಭಾವಿ
ಕುಂಭಿನಿಯೊಳಿಲ್ಲ ಬೆಳಸಕ್ಕು ಪ್ರಜೆಗಳಿಗೆ
ಸಂಭ್ರಾಮವಕ್ಕು ಸ ॥ ೨೭ ॥
ಮೀನಕ್ಕೆ ಗುರು ಬರಲು ಮಾನಗಂಡುಗವಕ್ಕು
ಕಾನಾನವೆಲ್ಲ ಬೆಳಸಕ್ಕು ಪ್ರಜೆಗಳಿಗೆ
ಆನಂದವಕ್ಕು ಸ ॥ ೨೮

ವಿಷಯ : ನೀತಿ ಹಾಗೂ ಜ್ಞಾನ.

ವಿಶೇಷ : ಅಸಮಗ್ರ. ಬರಹ ಸುಂದರ. ಇದೇ ಕಟ್ಟಿನ ಆರಂಭದಲ್ಲಿ ತೆಲುಗು ಮಹಾಭಾರತವಿದೆ; ಅನಂತರ ನೀತಿ, ಶ್ಲೋಕ, ಸ್ತೋತ್ರಪದ, ಕರಸ್ಥಲ ನಾಗಲಿಂಗದೇವರ ತ್ರಿವಿಧಿ ಮೊದಲಾದ ಗ್ರಂಥಗಳಿವೆ. 'ಸರ್ವಜ್ಞನ ಪದ'ಗಳೆಂದು ಅಚ್ಚಾಗಿರುವ ಇದೇ ಕವಿಯ ಇತರ ವಚನಗಳನ್ನು ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ಚತುರ್ಥಸಂಪುಟ. ಪುಟ ೩೬೬-೩೬೯ ಕ್ರಮಾಂಕ, 1881-1884ರಲ್ಲಿ ನೋಡಬಹುದು.

—ಕೆಆರ್‌ಎಸ್

80

ಕೆ. ೭೬೭/೨೦	**ಸರ್ವಮಂಗಳೆ ಶತಕ**	ವೃತ್ತ
೧೩" × ೨"	?	?
೧೦೯-೧೧೪ ಪತ್ರ	೧೨ ಪಂಕ್ತಿ	೯೪ ಅಕ್ಷರ

ಆದಿ: ಶ್ರೀಗುರು ಚಂನ್ನಮಲ್ಲೇಶ್ವರಾಯನಮಃ ॥ ಸರ್ವಮಂಗಳ ಶತಕ ॥ ಉತ್ಪಲಮಾಲಾ ವೃತ್ತಂ ॥
ಶ್ರೀಮದಗೇಂದ್ರ ಜಾತೆ ನತಕಲ್ಪ ಕುಜಾತೆ ವಿಶಾಖ ಶಿಮಾತೆ ಶರ ತೇ
ಜೋಮಯಗಾತ್ರೆ ಪಾವನಚರಿತ್ರೆ ಪುರಾರಿಕಲತ್ರೆ ಭಕ್ತ ಸಂ ।
ಸ್ತೋಮ ಸುಪಕ್ಷೆ ದಕ್ಷಮುಖಶಿಕ್ಷೆ ನಿಜೋದ್ಧೃತ ದಕ್ಷೆ ಶುದ್ಧ ಚಿ
ದ್ವ್ಯೋಮ ವಿಯುಕ್ತೆ ನಿರ್ಮಲ ವಿಮುಕ್ತೆ ಜಯಾನಘ ಸರ್ವಮಂಗಳೆ ॥ ೧ ॥

ಅಂತ್ಯ: ನಿಜ ದೇಹಕಾರರೂಪ ಪರತತ್ವ ನಿರಂಜನ ಲಿಂಗದಂಘ್ರಿ ಪಂ ।
ಕಜ ಮಕರಂದ ಷಟ್ಪದ ಸಮಂ ಗಿರಿರಾಜ ವರಾತ್ಮ ಸಂಭವಾ ॥
ತ್ಮ ಜನಮಳಾಂಗ ಲಿಂಗ ಘನಯೋಗ ಸಮಾಹಿತ ತೋಂಟದಾರ್ಯನೀ
ಸುಜನ ಜನಾಳಿ ಮೆಚ್ಚಲೊಡನಿಂತೊರೆದೆಂ ಸಲೆ ಸರ್ವಮಂಗಳೆ ॥ ೧೦೮ ॥
॥ ಸರ್ವಮಂಗಳೆ ಶತಕ ಸಮಾಪ್ತಂ ॥ ಅಂತೂ ಶತಕ ॥ ೨೦ ॥ ಕ್ಕಂ ಪದನು ॥ ೨೦೬೧ಕ್ಕಂ ॥ ಮಂಗಳ ಮಹಾ ಶ್ರೀ ಶ್ರೀ ಶ್ರೀ. ಶ್ರೀಗುರು ಚಂನಮಲ್ಲೇಶ್ವರಾಯನಮಃ । ಸರ್ವೇಶ್ವರ ಶತಕ । ಶ್ರೀಗುರು ಬಸವ ಲಿಂಗಯ ನಮ । ಯಸ್ಯ ನಾಸ್ತಿ ಸೋಯಂ ಪ್ರಜ್ಞಾ ಶಸ್ತ್ರಂ ತಶ್ಯ ಕರೋತಿ ಕಿಂ ॥

ವಿಷಯ: ಸರ್ವಮಂಗಳೆಯ ಸ್ತೋತ್ರ.

ವಿಶೇಷ: ಎಲ್ಲಾ ಪದ್ಯಗಳ ಕೊನೆಯಲ್ಲಿ 'ಸರ್ವಮಂಗಳೆ' ಎಂಬ ಅಂಕಿತವಿದೆ. ಇದೇ ಕಟ್ಟಿನಲ್ಲಿ ಇದಲ್ಲದೆ 'ಸಂಗಮೇಶ್ವರ ಶತಕ' ಮೊದಲಾದ ೧೯ ಶತಕಗಳಿವೆ.

—ಎಸ್‌ಬಿ

81

ಕೆ.ಎ. ೫೯೬/೪	ಸರ್ವಸಾರ ಸಂಗ್ರಹ ಶ್ಲೋಕಲೇಖನ	ಶ್ಲೋಕ, ಗದ್ಯ
೧೦.೨″ × ೭.೯″	?	?
೪೫–೪೮ ಪತ್ರ	೨೧ ಪಂಕ್ತಿ	೨೮ ಅಕ್ಷರ

ಆದಿ: ಶ್ರೀಮತೇ ಶಠಗೋಪ ಮಹಾದೇಶಿಕಾಯ ನಮಃ ॥ ಸರ್ವಸಾರಸಂಗ್ರಹ ಶ್ಲೋಕಲೇಖನಸ್ಯ ನಿರಂತರಾಯೋಸ್ತು । ಮಾತಃ ಕಿಂ ಯದುನಾಥ ದೇಹಿಚಷಕಂ ಕಿಂ ತೇನ ಪಾತುಂ ಪ....ಸ್ತನ್ಯಾ....ಕದಾಪ್ಯಸ್ತಿ ವಾನಿಶಿಕಾ ವಂಧಕಾರೋದಯೇ । ಆವಿಸಾಲ್ಯಾಕ್ಷಿಯುಗಂ ನಿಶಾಪ್ಯುಪಗತಾ ದೇಹಿ

ಶಿವಾತುರ್ಕ್ಕ ಹುರ್ವಕ್ಷ್ಲೋಃಜಾಂಬರ ಕಷ್ಮ . . ಣೋದ್ಯತಕರಃ ಕೃಷ್ಣ ಸ್ಸವುಷ್ಣಾಶುನಃ ॥ ೧ ॥

ಅಂತ್ಯ : ಯುಧಿಷ್ಠಿರೊ ವಿಕ್ರಮು ಶಾಲಿವಾಹನ ಶಕೋಽನೃಪಸ್ಯಾದ್ವಿ ಜಯಾಭಿ ನಂದನಃ । ನಾಗಾರ್ಜುನಾಖ್ಯಃ ಕಲಿ ಭೂಪತಿಶ್ಚ ಕಲೌಯುಗೆ ಷಟ್ಯಕ ಸಂಯಕಾಖ್ಯಾಃ । ಯಿಾ ೬ ಕಲಿಯುಗ ಶಕ ಪುರುಷರು ॥ ಅನ್ನಂ ವಸ್ತ್ರಂ ತಥಾಗಂಧಂ ಪುಷ್ಪಾಣಿ ಶಯನಾನಿಚ । ತಾಂಬೂಲಂ ವನಿತಾ ಗೀತಂ ಅಷ್ಟಭೋಗಾಃ ಪ್ರಕೀರ್ತಿತಾಃ ॥ ೧ ॥

ವಿಷಯ : ಸರ್ವಸಾರ ಸಂಗ್ರಹ

ವಿಶೇಷ : ಅಸಮಗ್ರ. ಪತ್ರಗಳಿಗೆಲ್ಲಾ ಹುಳು ಹೊಡೆದಿದೆ. ಇದೇ ಪುಸ್ತಕದಲ್ಲಿ ತಿರುವೆಂಕಟಾಚರ್ಯ ಚರಿತ್ರೆ, ಕರ್ಣಾಟಕ ನಿಘಂಟು, ಅಂಬಾ ನವರತ್ನ ಮಾಲಿಕಾ ಮೊದಲಾಗಿ ಒಟ್ಟು ಎಂಟು ಕೃತಿಗಳಿವೆ.

—ಕೆಆರ್ ಎಸ್

82

ಕೆ. ೧೦೦೪/೭	ಸರ್ವಾಂಗಲಿಂಗಸ್ಥಲದ ವಚನ	ವಚನ
೭.೩″ × ೧.೮″	ಚೆನ್ನಬಸವೇಶ್ವರ	ಸು. ೧೧೬೦
೫೩ ಪತ್ರ	೭ ಪಂಕ್ತಿ	೩೦ ಅಕ್ಷರ

ಆದಿ : ಶ್ರೀಗುರುವೆತಿ ॥ ಸರ್ವಂಗಲಿಂಗಸ್ಥಲದ ವಚನ ॥ ಶರಣನ ಸರ್ವಾಂಗ ವೆಲ್ಲವು ಲಿಂಗವದ ಕ್ರಮುವೆಂತೆಂದೊಡೆ ಶ್ರೀಗುರುನ ತನುವುಪದೇಸಿಸಿದ ಯಿಷ್ಟಲಿಂಗವೆ ತಂನ ಸರ್ವಂಗದಲ್ಲಿ ಭಿಂನನಾಮುಂಗಳಿಂ ಪ್ರಕಾಶಿಸು ತಿಹುದು ಅದು ಹೆಂಗೆಂದೊಡೆ ಸ್ಥೂಲಾಂಗದಲ್ಲಿ ವಿಷ್ಟಲಿಂಗವೆಂದು ಸೂಕ್ಷ್ಮಾಂಗದಲ್ಲಿ ಪ್ರಣಲಿಂಗವೆಂದು ಕರಾಣಂಗದಲ್ಲಿ ಭಾವಲಿಂಗವೆಂದು × ×

ಅಂತ್ಯ : ಗಂಧಕ್ಕೆ ವಿಸರ್ಜನಕ್ಕೆ ಭೇಧವಿಲ್ಲ ಯಿಂನು ಶ್ರೀಕತ್ರವೇ ಭಗ್ಣಿ ನಿಂದ್ರಿಯಕ್ಕೆ ವಕ್ಕೆಂಭಕರ್ಮೇಂದ್ರಿಯಕ್ಕು ಶಬ್ದವೆ ವಿಷಯವುಊಲ ಭುತಾಕ ಶಮಿತ್ರನ್ಯಪೂರ್ತಿಯೆ ಅಧಿದೈವತೆ ತ್ವ ನೀನೆಂಬ ಜ್ಞಾನೇಂದ್ರಿ ಯಕ್ಕೆ ಪಾಣಿಮುಭಕರ್ಮೇಂದ್ರಿಯಕ್ಕು ಸ್ಪರಶ ವಿಷಯವು.

ವಿಷಯ : ವೀರಶೈವಸಿದ್ಧಾಂತ.

ವಿಶೇಷ: ತುಂಬ ಅಶುದ್ಧ. ಇದೇ ಕಟ್ಟಿನಲ್ಲಿ ಷಡುಚಕ್ರದ ವಚನ ಮುಂತಾದ ಇತರ ೬ ಕೃತಿಗಳಿವೆ.

—ಜಿಜಿಎಂ

83

ಕೆ. ಎ. ೫೩೧/೨	**ಸರ್ವಾಂಗಲಿಂಗಸ್ಥಲದ ವಚನ**	ವಚನ
೯''×೧೦.೪''	ಚೆನ್ನಬಸವೇಶ್ವರ	ಸು. ೧೧೬೦
೫೦–೬೧ ಪುಟ	೨೦ ಪಂಕ್ತಿ	೧೯ ಅಕ್ಷರ

ಆದಿ: ಸರ್ವಾಂಗಲಿಂಗಸ್ಥಲದ ವಚನ || ಶ್ರೀಗುರುಬಸವಲಿಂಗಾಯ ನಮಃ || ಚೆನ್ನಬಸವೇಶ್ವರದೇವರು ನಿರೂಪಿಸಿದ ಸರ್ವಾಂಗಲಿಂಗಸ್ಥಲದ ವಚನ||

ಶರಣನ ಸರ್ವಾಂಗವೆಲ್ಲವು ಲಿಂಗವಾದ ಕ್ರಮವೆಂತೆಂದಡೆ—ಶ್ರೀಗುರು ಬಸವಣ್ಣನು ಉಪದೇಶಿಸಿದ ಇಷ್ಟಲಿಂಗವೆ ತನ್ನ ಸರ್ವಾಂಗದಲ್ಲಿ ಭಿನ್ನ ನಾಮಂಗಳಿಂದ ಪ್ರಕಾಶಿಸುತ್ತಿಹುದು. ಅದು ಹೇಗೆಂದಡೆ ಸ್ಥೂಲಾಂಗದಲ್ಲಿ ಇಷ್ಟಲಿಂಗವೆಂದು ಸೂಕ್ಷ್ಮಾಂಗದಲ್ಲಿ ಪ್ರಾಣಲಿಂಗವೆಂದು ಕಾರಣಾಂಗದಲ್ಲಿ ಭಾವಲಿಂಗವೆಂದು ತ್ರಿಭೇದವಾಗಿಪ್ಪುದು. ಇನ್ನು ಅಂಗವ ಕುರಿತು ಮೂಱು ತೆಱನಾಯಿತು. ಇನ್ನು ಇಂದ್ರಿಯಂಗಳ ಕುರಿತು ಆಱು ತೆರನಾಯಿತ್ತು. ಅದು ಹೇಗೆಂದಡೆ ಹೃದಯದಲ್ಲಿ ಮಹಾಲಿಂಗವೆಂದು, ಶ್ರೋತ್ರದಲ್ಲಿ ಪ್ರಸಾದಲಿಂಗವೆಂದು, ತ್ವಕ್ಕಿನಲ್ಲಿ ಚರಲಿಂಗವೆಂದು ದೃಕ್‌ನಲ್ಲಿ ಶಿವಲಿಂಗವೆಂದು ಜಿಹ್ವೆಯಲ್ಲಿ ಗುರುಲಿಂಗವೆಂದು ಘ್ರಾಣದಲ್ಲಿ ಆಚಾರಲಿಂಗವೆಂದು ಇಂತೀ ಷಡಾಂಗದಲ್ಲಿ ಷಡುಲಿಂಗವಾಗಿ ತೋರುತ್ತಿಹುದು. ಈ ಮರ್ಯಾದೆಯಲ್ಲಿ ಕರ್ಮೇಂದ್ರಿಯಗಳೊಳಗೆಲ್ಲಿಯೂ ಲಿಂಗವೆ ಪ್ರಕಾಶಿಸುತ್ತಿಹುದು.

ಅಂತ್ಯ: ಐಕ್ಯಂಗೆ ಆತ್ಮನೆ ಅಂಗ, ಆ ಅಂಗಕ್ಕೆ ಸದ್ಭಾವ ಹಸ್ತ, ಆ ಹಸ್ತಕ್ಕೆ ಮಹಾಸಾದಾಖ್ಯ, ಆ ಸಾದಾಖ್ಯಕ್ಕೆ ಚಿತ್ಶಕ್ತಿ, ಆ ಚಿತ್ಶಕ್ತಿಗೆ ಮಹಾಲಿಂಗ, ಆ ಲಿಂಗಕ್ಕೆ ಶಾಂತಾತೀತೋತ್ತದಿಯೆ ಕಲೆ (?) ಆ ಕಲೆಗೆ ಹೃದಯೇಂದ್ರಿಯವೆ ಮುಖ, ಆ ಮುಖಕ್ಕೆ ಸುತೃಪ್ತಿ ಪದಾರ್ಥ. ಆ ಪದಾರ್ಥವನು ರೂಪು ರುಚಿ ತೃಪ್ತಿಯನಱಿದು, ಓಂಕಾರಮಂತ್ರಯುಕ್ತವಾಗಿ ಸಮರಸಭಕ್ತಿಯಿಂದರ್ಪಿಸಿ ಆ ಸುತೃಪ್ತಿಪ್ರಸಾದವನು ಭೋಗಿಸಿ ಸುಖಿಸುತಂವಿಹನು ಕೂಡಲಚೆನ್ನಸಂಗಾ ನಿಮ್ಮ ಐಕ್ಯನು || ೯ ||

ವಿಷಯ : ಸರ್ವಾಂಗಲಿಂಗಸ್ಥಲದ ವಿವರ.

ವಿಶೇಷ : ಶಕಟರೇಫದ ಪ್ರಯೋಗವಿದೆ. ಇದೇ ಪುಸ್ತಕದಲ್ಲಿ ಚಿತ್ಕಲಾಲಿಂಗ ಚಿತ್ರ್ರವಣ ಸಂಯೋಗ ಚಿದಮೃತಸಾರ ಎಂಬ ಕೃತಿಯಿದೆ. 1948 ರಲ್ಲಿ ಪ್ರತಿ ಮಾಡಲಾಗಿದೆ.

—ವೈಸಿಬಿ

84

ಕೆ ಎ. ೪೦೧ **ಸರ್ವೇಶ್ವರ ನಿರೂಪಣೆ** ಗದ್ಯ

೧೦.೫″ × ೯.೫″ ? ?

೧–೫೫ ಪುಟ ೨೦ ಪಂಕ್ತಿ ೨೧ ಅಕ್ಷರ

ಆದಿ : ಶ್ರೀ ಸರ್ವೇಶ್ವರ ನಿರೂಪಣ .... ಯಿಲ್ಲ ಗುಣಗಳು ಯಿಲ್ಲದಕ್ಕೆ ಅರ್ಥವೇನೆಂದರೆ ಹೇಳುತ್ತೇನೆ । ಅದು ಅ .... ಯೆಂದು ಯಿನ್ನೊಂದು ಕಾರ್ಯವೆಂದು ಹೇಳಬೇಕಾಗಿ ಅದೆ । ಅದೇನೆಂದರೆ ಯೆರಡು ಬಗ ವಸ್ತುವುಂಟು । ಒಂದು ಸ್ವಭಾವ, ಬೇರೊಂದು ಗುಣವೆಂದು ಹೇಳ ಹೇಳಬಹುದು । ಇದಕ್ಕೆ . . . ಯೇನು ಯೆಂದರೆ ಕೋಳಿ ಮೊದಲಾದುವುಗಳಲ್ಲಿರುವ ಬಿಳಿದು ಯಂಬ ರೂಪವು.ಘಟ್ಟಿಯಾಗಿ ಯಿರೊದು ನೀಳವಾಗಿ ಯಿರೋದು । ಸೂತ್ರವಾಗಿ ಯಿರೋದು ಇವು ಮೊದಲಾದದ್ದು ಗುಣಗಳೆಂದು ಹೇಳುವರು.

ಅಂತ್ಯ : ಮನಸ್ತಾಪದಿಂದಾ .... ರದಿಂದಲೂ ಹೇಳೋರು ಅವರ ಪರಿ . . . . . ಕ . . . ಮಾ .... ವಾಗಿ ಪೈತ್ಯ . . . . . ವು ಆವರ ನಡೆತೆಯು .... ಅವ . . . ವಿಚಾರಿಸ್ತೇವಲ್ಲಾ । ಯಿದುಕೊ ಸರ್ವೇಶ್ವರನಿಗೆ ಪ್ರಿಯವಾದ ಮಕ್ಕಳೊಳಗೆ ಯೆಣಿಸಬಾರದ ಅರ್ಜಿ . . . . . . ದರೆಂದು.... ಗಳಾದ ಮಂದಿಗಳು ಅತ್ತುಕೊಂಡು ಹೇಳುವರು ಪುಣ್ಯವಂತರು . . .

ವಿಷಯ : ದೇವರ ಸ್ವರೂಪ ವಿವರ.

ವಿಶೇಷ : ಅಸಮಗ್ರಪ್ರತಿ. ಇದನ್ನು ಮದರಾಸು ಪ್ರಾಚ್ಯಕೋಶಾಗಾರದಲ್ಲಿ 1949–50ರಲ್ಲಿ ಡಿ. 613 ರಿಂದ ಪ್ರತಿಮಾಡಲಾಗಿದೆ. ಪ್ರತಿಮಾಡಿದವರು ' ಶ್ರೀ ಎನ್. ನಾರಾಯಣ ಮಧ್ಯಸ್ಥ '.

— ಬಿಎಸ್ಎಸ್

85

ಕೆ.ಬಿ. ೫೭೯ | ಸಲಿಕೆಗಣಿತ ವಗ್ಗೈರೆ | ಗದ್ಯ, ಕಂದ
೮.೨″ × ೬.೬″ | ? | ?
೧-೨೨೧ ಪುಟ | ೧೫ ಪಂಕ್ತಿ | ೧೮ ಅಕ್ಷರ

ಆದಿ: ಶ್ರೀ ಗಣಾಧಿಪತಯೇ ನಮಃ ಸಲಿಕೆಯ ವಟ್ಟ ನಿಂತುದಕ್ಕೆ ಸೂತ್ರ.
ನಿಲುಕಡೆಯೊಳು ವಟ್ಟಿಸಲು
ಸಲಿಕೆಯ ಪೊನ್ನರ್ಘ ಮೊದಲೊಳರಿಕೆಯವೆನಿತುಂ
ಸಲಿಕೆಯ ದರ್ಘಂ ನಡುವಿರೆ
ಸಲಿಕೆಯ ವಟ್ಟಕ್ಕೆ ದೊಡ್ಡರಾಜನ ಮತದಿಂ ‖ ೧ ‖

× × ×

ವೊಡ್ಪೊ‖ ಕೀಳು ಚಿನ್ನ ಗ ೧೦$\frac{೧}{೨}$ ಗೆ ಮೇಲು ಚಿನ್ನ ಗ ೭ [ರ] ಲ್ಲೂ ಕೀಳು ಚಿನ್ನ ಗ ೧ ಹ ೨ಕ್ಕೆ ಲಬ್ಧ ಮೇಲು ಚಿನ್ನ ಗ $\frac{೧}{೨}$ ಹ ೩ ಹಾರ ೧೦೫.

ಟೀಕು‖ ಕಡೆಯ ರಾಶಿಯ ಹಣವ ಮಾಡಲು ೧೨. ನಡುವಣ ರಾಶಿಯ ಹಣವ ಮಾಡಲು ೭೦. ಈ ಎರಡನ್ನೂ ಗುಣಿಸಲು [೭೦×೧೨] =೮೪೦ ವೊದಲ ರಾಶಿಯ ಹಣವ ಮಾಡಲು ೧೦೫. ಇದರಿಂ [೮೪೦ನ್ನು] ಭಾಗಿಸಲು ಲಬ್ಧ ಸರಿ.

ಅಂತ್ಯ: ಇದು ಬಟ್ಟಿಗರಲ್ಲಿ ಹೋದದನ ಮತ್ತಂ ೧೦೩೯೫ನಿಕ್ಕಿ ೭ರಿಂ ಭಾಗಿಸಲು ೧೪೮೫. ಇದು ಬೆಟ್ಟ ೧ಕ್ಕೆ ಹೋದದನ ಮತ್ತಂ ೧೦೩೯೫ನಿಕ್ಕಿ ೯ರಿಂ ಭಾಗಿಸಲು ೧೧೫೫ ಮತ್ತಂ ೧೦೩೯೫ನಿಕ್ಕಿ.

× × ×

ಶುಭಕೃತ್ ಸಂವತ್ಸರದ ಮಾರ್ಗಶಿರ ಶುದ್ಧ ೬ ಗುರುವಾರಕ್ಕೆ ಲೆಕ್ಕದ ಪುಸ್ತಕ ಮುಗಿದುದು. ಇದನು ವುಜ್ಜನಿ ಕಗ್ಗಲ್ಲ ಮಠದ ಲಿಂಗಪ್ಪನವರ ಗರ್ಭಾಬ್ಧಿಚಂದ್ರನಾದಂಥ ಸಿದ್ಧಲಿಂಗಪ್ಪಯ್ಯನು ಮಂಗನಹಳ್ಳಿ ಮಲ್ಲನಗೌಡನ ಮಗ ಲಿಂಗನಗೌಡಗೆ ಧನಕನಕ ವಸ್ತುವಾಹನ ಸಮೃದ್ಧಿಯಾಗಲೆಂದು ಹರಸಿ ಬರದು ಕೊಟ್ಟ ಪೈಮಾಷಿ ಲೆಕ್ಕ ನಾನಾ ಬಗೆ ಲೆಕ್ಕವು ಶ್ರೀ.

ವಿಷಯ: ತ್ರೈರಾಸಿ, ಪಂಚರಾಸಿಸೂತ್ರ, ವರ್ಗಮೂಲ ಕೋಷ್ಠಕಗಳನ್ನೊಳಗೊಂಡ ಗಣಿತ.

ವಿಶೇಷ : ಈ ಕೃತಿಯ ಕರ್ತೃ ಯಾರೆಂದು ತಿಳಿಯದಿದ್ದರೂ "ದೊಡ್ಡರಾಜನ ಮಃತದಿಂ" ಎಂದು ಆರಂಭದ ಪದ್ಯದಲ್ಲಿದೆ; ೧೫ನೆಯ ಪುಟದ ಅಂತ್ಯ ದಲ್ಲಿ "ಇತಿ ಭಾಸ್ಕರದೇವ ವಿರಚಿತನುಪ್ಪ ತ್ರೈರಾಶಿಕಕ್ಕೆ ಸಮಾಪ್ತ ಮಂಗಳ ಮಹಾ ಶ್ರೀ" ಎಂದಿದ್ದು ಮುಂದೆಲ್ಲಿಯೂ ಭಾಸ್ಕರದೇವನ ಹೆಸರು ಕಾಣಿಸದು; ಆದರೆ ೧೫೭ನೆಯ ಪುಟದ ಆರಂಭದ ಪಂಕ್ತಿ ಗಳಲ್ಲಿ 'ಗಣಿತ ಪೀಠಿಕಾ ಪ್ರಕರಣ' ವೆಂಬ ಅಧ್ಯಾಯಕ್ಕೆ "ಇತೀ ಸಾರ ಸಂಗ್ರಹೇ ಗಣಿತ ಸಹಸ್ರವರ್ಗಂ ಸಮಾಪ್ತಂ" ಎಂದು ಉಲ್ಲೇ ಖಿಸಿರುವುದು ಮಹಾವೀರಾಚಾರ್ಯನ ಕರ್ತೃತ್ವವನ್ನು ಕೊಡುತ್ತದೆ. ಪ್ರಸ್ತುತ ಕಾಗದದ ಹಸ್ತಪ್ರತಿಯು "ಶ್ರೀ ಜಗದ್ಗುರು ತರಳಬಾಳು ಮಠದ ಶ್ರೀ ರುದ್ರಯ್ಯ ಏಜೆಂಟ್ ಸಿರಿಗೆರೆ. ಚಿತ್ರದುರ್ಗ ತಾಲ್ಲೂಕು, ಇವರ ಓಲೆ ಪುಸ್ತಕದ ಮೇಲೆ" ಕಾಪಿಯಾಗಿರುತ್ತದೆ. ಪ್ರತಿಮಾಡಿ ದವರು ಶ್ರೀ ಎಸ್. ಎನ್. ಕೃಷ್ಣ ಜೋಯಿಸರು ಎಂದು ೨೨೧ನೆಯ ಪುಟದಲ್ಲಿ ನಮೂದಿಸಿದೆ. ಗ್ರಂಥದ ಸ್ಥಿತಿಯು ಉತ್ತಮ; ಬರಹ ಸುಂದರವಾಗಿದೆ.

—ಕೆಆರ್‌ಎಸ್

86

ಕೆ. ೬೭೮/೨	ಸಹದೇವೀನಿಮಿತ್ತ ಇತ್ಯಾದಿ	ಗದ್ಯ
೭.೮" × ೧.೭"	?	?
೬೫-೭೨ ಪತ್ರ	೧೧ ಪಂಕ್ತಿ	೪೫ ಅಕ್ಷರ

ಆದಿ: ಸಹದೇವಿ ನಿಮಿತ್ಯ । ಯಿಾ ನಿಮಿತ್ಯ ನೋಡು ವಕ್ರಮುವೆಂತೆಂದೊಡೆ । ಅಕ್ಕಿನಿದಿಯಮಾಡಿ ೪ ವ್ಯಾಳ್ಯದಲ್ಲು ೩ ಬೆರಳಲ್ಲಿ ಬಂದಷ್ಟು ತೆಗೆದು ಕೊಂಡು ಬೇರೆ ಬೇರೆ ಯಿಂಗಡಿಸಿ ಯಿರಿಸಿ ೪ ರಲ್ಲು ಭಾಗಿಸಲು । ಮಿಕ್ಕ ಶೇಷಕ್ಕೆ ಸರಿ ಬಂದರೆ ಸೊನ್ನೆ । ಬೆಸ ಬಂದರೆ ರೇಖೆ । ಯಿಾ ಪ್ರಕಾರ ಬರಕೊಂಡು ನೋಡುವದು. ಯಿದಕ್ಕೆ ಚಕ್ರ । ಯಿದರ ಫಲ ॥ ದೇವರು ಯುಂಬಲ್ಲಿ! ನಿಂಮ ಮನಿದೇವರ ಹರಿಕೆವುಂಟು ನೀ ನೆನದ ಕಾರ‍್ಯ ತಂಸಿಂದ ತಾನೆ ಆದೀತು । ನಿಂಮ ಮನಿದೇವರ ಕೃಪೆಯಿಂದ ಸಕಲ ಕಾರ‍್ಯವು ಸಿಧಿಯಾದಿತು । ದೇವರ ಪೂಜೆಯಂ ಮಾಡುವುದು । ಶುಭ ॥ ೧ ॥

ಅಂತ್ಯ : ಅಕಾರ ಮೊದಲಾಗಿ ೧೬ ಅಕ್ಷರಕ್ಕೆ ಗರುಡ ಮೊದಲಾದ ೪ ಅಕ್ಷರಕ್ಕೆ ಮಾರ್ಜಾಲಚ ಮೊದಲಾದ ೩ ಕ್ಷರಕ್ಕೆ ೪೦ ಹ್ಮಟ । ಮೊದಲಾದ ೫

ಅಕ್ಷರಕ್ಕೆ ಶ್ವಾನ । ತಮೊದಲಾದ ೫ ಅಕ್ಷರಕ್ಕೆ ಸರ್ಪ । ಪ ಮೊದಲಾದ ೫ ಅಕ್ಷರಕ್ಕೆ ಮೂಷಕ । ಯ ಮೊದಲಾದ ೫ ಅಕ್ಷರಕ್ಕೆ ಗಜ । ಶ ಮೊದಲಾದ ೬ ಅಕ್ಷರಕ್ಕೆ ಶಶಕ ॥

ವಿಷಯ : ಇದರಲ್ಲಿ ಅಡಲಭ್ರಮಣನೋಡುವ ಬಗೆ, ಗರ್ಭಪ್ರಶ್ನೆ, ಸಕಲ ಕಾರ್ಯಕ್ಕೆ ಹೋರಾ ಮುಹೂರ್ತ । ಕೂಪಶಾಸ್ತ್ರ । ಪಂಚಪಕ್ಷಿ ಶಕುನ, ಅಕ್ಕಿಯ ಕಾಳಿನಿಂದ ಶಕುನ ಇವುಗಳ ಫಲ ವಿವರಣೆ.

ವಿಶೇಷ : ಈ ಕೃತಿಯೊಡನೆ ರತ್ನ ಪರೀಕ್ಷೆ, ಜ್ಯೋತಿಷ್ಯಶಾಸ್ತ್ರ, ಅಕ್ಷರಮಾಲಿಕಾ ಶಕುನ, ನರಪಿಂಗಳಿ, ಮೂತ್ರಪರೀಕ್ಷೆ, ಸ್ವರ ಚಿಂತಾಮಣಿ, ಪಂಚಾಕ್ಷರೀಸ್ತವ ಎಂಬ ಕೃತಿಗಳೂ ಇವೆ.

—ಎಸ್‌ಎನ್‌ಕೆ

87

ಕೆ. ೬೭೬/೨	**ಸಹದೇವೀ ಮುಹೂರ್ತ**	ಚಕ್ರ, ಫಲ
೧೩" × ೨"	?	?
೨ ಪತ್ರ	೧೩ ಪಂಕ್ತಿ	೪೫ ಅಕ್ಷರ

ಆದಿ : ಸಹದೇವೀ ಮುಹೂರ್ತ (ಮುಂದಿನ ಪುಟ ನೋಡಿ)

ಅಂತ್ಯ : ಸಹದೇವ ಮುಹೂರ್ತ ನೋಡು ವಿವರ । ಹಂನ್ನೆರಡು ತಿತಿಯ ಹೆಸರನು ಹಂನೆರಡು ಲೆಕ್ಕತನಕ ನೋಡುವದು ತ್ರಯೊದಸಿ ಆದರೆ ಮೂರನೆ ಅಂಕೆಯ ನೊಡುವದು । ಚತುರ್ದಶಿಯಾದರೆ ನಾಲ್ಕನೆ ಅಂಕೆಯ ನೋಡುವದು । ಪಉರ್ನೊಮಿ ಅಮಾವಾಸೆಯಾದರೆ ಅಯದನೆ ಅಂಕೆಯ ನೊಡುವದು । ಹಂನೆರಡು ಮಾಸಕ್ಕು ಹಂನೆರಡು ಸಾಲ ವಿಡಿದು ನೊಡುವದು । ತಾ ಹೊಗುವ ದಿಕ್ಕ ವಿಚಾರಿಸಿ । ಆ ದಿಕ್ಕಿನ ಸಾಲಿನಲ್ಲಿ ಯಿದ್ದುದೆ ಫಲವೆಂದರಿಉದು । ಯಿಾ ಮುಹೂರ್ತವ ಯೆಂಟುದಿಕ್ಕು ನಾಲ್ಕುಪಾಲು ಮಾಡಿಯಿದ್ಧಿತು । ಅಮಾವಾಸೆ ಪಉರ್ನೊಮಿ ಶೂನ್ಯಮಾಸ ವಂದನು ಯೋಚಿಸಬೇಡ । ಶುದ್ಧಪಕ್ಷ ಬಹುಳಪಕ್ಷ ವಂಪೆ ಅಂಕೆಯನು ನೊಡುವದು । ಯೊಗಕರಣ ಸ್ವಾಡ ದ್ವಾಡಚಂದ್ರ ಬಹಳ ತಿತಿಯ ನೊಡಬೆಡ । ಯಿಾ ಮುಹೂರ್ತವು ಸಮಾಪ್ತ ಫಯಃಣಧಿಗಳಿಗೆ ಸಿಧಿಯೆಂದು ತಿಳಿದಿರಬೇಕು ॥ ಸಹದೇವ ಮುಹೂರ್ತ ಸಮಾಪ್ತ ಮಂಗಳ ಮಹಾ ಶ್ರೀ.

ಚೈ	ವೈ	ಜೆ	ಆ	ಶ್ರಾ	ಬಾ	ಆ	ಕಾ	ಮಾ	ಪು	ಮಾ	ಪಾ	ಪೂರ್ವ ಅಗ್ನಿಫಲ	ದಕ್ಷಿಣ ನೈರುತ್ಯ ಫಲ	ಪಶ್ಚಿಮ ವಾಯುಫಲ	ಪುತ್ತರಯಾ ಈಶಾನ್ಯಫಲ
೧	೨	೩	೪	೫	೬	೭	೮	೯	೧೦	೧೧	೧೨	ಲಾಬವಾದಿತು	ದೊಡಕೆಲಸ ವಾದೀತು	ಮಾರ್ವರ್ತೆಆದೀತು	ಶುಭಕಾರ್ಯ ವಾದೀತು
೨	೩	೪	೫	೬	೭	೮	೯	೧೦	೧೧	೧೨	೧	ಶಿಗ್ರಪ್ಪುಸಿಗೆ ಬಂದಾನು	ವಳಿದಲ್ಲಾ	ನಾಶವಾದಿತು	ಹಾದಿಯಲ್ಲಿ ಸತ್ತಾನು
೩	೪	೫	೬	೭	೮	೯	೧೦	೧೧	೧೨	೧	೨	ಲಾಬವಾದಿತು ಮಾತುಹೊದಿತು	ಶುಭಕಾರ್ಯ ವಾದೀತು	ಶಿಗ್ರಪೂರಿಗೆ ಬಂದಾನು	ಸರ್ವಕಾರ್ಯ ವಾದಿತು
೪	೫	೬	೭	೮	೯	೧೦	೧೧	೧೨	೧	೨	೩	ಕ್ಲೆಶವಾದಿತು	ಮನೋರಥ ಸಿದಿಸಿತು	ಅಥವಲಾಭ ವಾದಿತು	ಸರ್ವಸಿದಿ ಆದಿತು
೫	೬	೭	೮	೯	೧೦	೧೧	೧೨	೧	೨	೩	೪	ಲಾಬವಾದಿತು	ಅರ್ಥಲಾಬ ವಾದಿತು	ಲಾಬವಾದಿತು	ಕ್ಲೇಶವಾದಿತೂ
೬	೭	೮	೯	೧೦	೧೧	೧೨	೧	೨	೩	೪	೫	ಅರ್ತಲಾಬ ವಾದಿತು	ಬಹುಲಾಬ ವಾದಿತು	ದುಕವಹೇಳುವದು	ದೂರ್ವಾರ್ತೆ ಆದಿತು
೭	೮	೯	೧೦	೧೧	೧೨	೧	೨	೩	೪	೫	೬	ಕ್ಲೇಶವಾದಿತು	ಕ್ಲೇಶವಾದಿತು	ಹಾದಿಯಲ್ಲಿ ಸತ್ತನು	ಸರ್ವಸಿದಿಆದೀತೂ
೮	೯	೧೦	೧೧	೧೨	೧	೨	೩	೪	೫	೬	೭	ಲಾಬವಾದಿತು	ಬಹುಲಾಬ ವಾದಿತು	ಭಯವಾದಿತು	ಸರ್ವಸಿದಿ ಆದೀತೂ
೯	೧೦	೧೧	೧೨	೧	೨	೩	೪	೫	೬	೭	೮	ಶ್ರಿಯುಆದಿತು	ಲಾಬವಾದಿತು	ಅರ್ತಲಾಬ ವಾದಿತು	ಹಾದಿಯಲ್ಲಿ ಲಾಭವ ಹೇಳುವದು
೧೦	೧೧	೧೨	೧	೨	೩	೪	೫	೬	೭	೮	೯	ಬಹಳಲಾಬ ವಾದಿತು	ಸರ್ವಕಾರ್ಯ ವಾದಿತು	ಬಹುಲಾಬ ವಾದಿತೂ	ಕ್ಲೇಶವಾದಿತೂ
೧೧	೧೨	೧	೨	೩	೪	೫	೬	೭	೮	೯	೧೦	ಕ್ಲೇಶವಾದಿತು	ವಳಿತಾಗಿ ಪೂರಿಗೆ ಬಂದಾನು	ಅರ್ಥಲಾಬ ವಾದಿತು	ಸರ್ವಕಾವ್ಯ ವಾದಿತೂ
೧೨	೧	೨	೩	೪	೫	೬	೭	೮	೯	೧೦	೧೧	[illegible]	[illegible]	[illegible]	[illegible]

ವಿಷಯ : ಮುಹೂರ್ತ ಚಕ್ರ.

ವಿಶೇಷ : ಇದೇ ಕಟ್ಟಿನಲ್ಲಿ ಶರಣಲೀಲಾಮೃತವೆಂಬ ಕೃತಿ ಇದೆ.

—ಎಸ್‌ಎಸ್‌ಕೆ

88

ಕೆ. ೧೩೫೭/೧	**ಸಹಸ್ರಗಣನಾಮ**	ಗದ್ಯ, ಪದ್ಯ
೬.೫" × ೧.೬"	ಪಾಲ್ಕುರಿಕೆ ಸೋಮನಾಥ	ಸು. ೧೧೯೦
೧–೧೪ ಪತ್ರ	೯ ಪಂಕ್ತಿ	೩೮ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ॥ ಸಹಸ್ರಗಣನಾಮ ಬರವುದಕ್ಕೆ ಶುಭಮಸ್ತು × × ×
ಶ್ರೀಮಲ್ಲಿಕಾರ್ಜುನಾರ್ಯ್ಯ
ಧೀಮಂತಂ ಪಾಪರಹಿತ ಗಣಸಂಕುಳವಂ
ಪ್ರೇಮದಿ ಸ್ತುತಿಪೆಂ ಸಾವಿರ
ನಾಮವ ಜಪವೆಂದು ಪೊಗಳ್ದು ವಿಸ್ತರಿಪೆಂ ॥

ಅಂತ್ಯ : ಸುರತರುವಂ ಸುರಧೇನು
ವರ ಚಿಂತಾಮಣಿಗಳೆಂದು ಪೆಸರಂ ಪೇಳ್ವರು
ಹರಗಣಮಾಲೆಯ ಜಪಿಸಲು
ಭರದಿಂದಂ ಸಿದ್ಧಿಯಕ್ಕು ಬಸವೇಶಾ ॥
ಪಾಲ್ಕುಱಿಕೆ ಆರಾಧ್ಯರು ನಿರೂಪಿಸಿದ ಸಹಸ್ರಗಣನಾಮ ಸಮಾಪ್ತಿ ಮಂಗಳ ಮಹಾಶ್ರೀ

ವಿಷಯ : ಶಿವಗಣಗಳ ಸ್ತುತಿ.

ವಿಶೇಷ : ಸಮಗ್ರ. ಶಕಟರೇಫದ ಪ್ರಯೋಗವಿದೆ. ಇದೇ ಕಟ್ಟಿನಲ್ಲಿ ಸಿದ್ಧೇಶ್ವರ ಪವಾಡದ ವಚನ, ಸರ್ವಜ್ಞ ಪದಗಳು ಮತ್ತು ಏಕಾದಶ ಪಟಲ ಎಂಬ ಗ್ರಂಥಗಳಿವೆ.

—ವೈಸಿಬಿ

89

ಕೆ. ಎ. ೫೬೮/೩	**ಸಹಸ್ರಗಣನಾಮ**	ವೃತ್ತ
೧೨" × ೯.೮"	ಪಾಲ್ಕುರಿಕೆ ಸೋಮನಾಥ	ಸು. ೧೧೯೦
೭.೫–೩೦ ಪುಟ	೨೪ ಪಂಕ್ತಿ	೧೯ ಅಂಕ್ಷ

ಆದಿ: ಸಹಸ್ರಗಣನಾಮ

ಶ್ರೀಮಲ್ಲಿಕಾರ್ಜುನಾಯ್ಯದ್ಧಿ ಮಂತ್ರಪಾಪರಹಿತ ಗಣ(ಶಂ) ಕುಳಮಂ
ಪ್ರೇಮದಿ ಸ್ತುತಿಯಿಪೆ ಸಾವಿರ ನಾಮಜಪವೆಂದು ವಿಸ್ತರಿಪೆಂ
ಪ್ರಮಥಗಣ ರುದ್ರಗಣ ಭಕ್ತಮಹಾಗಣ ದಿವ್ಯನಾಮಸಂಕೀರ್ತನಮಂ
ಸಮಂತಮಂ ಸುವೊಡ್ಯುಗಾಚಾರ್ಯರೆನಿಪತಿಶಿಟ್ಟಗಣಮಂ

ಅಂತ್ಯ: ಕಂದ ॥ ಸುರತರುವಂ ಸುರಧೇನುವಂ
ವರಚಿಂತಾಮಣಿಗಳೆಂದು ಪೆಸರಂ ಪೇಳ್ವರೂ
ಹರಗಣಮಾಲೆಯು ಜಪಿಸಲು
ಭರದಿಂದ ಸಿದ್ಧಿಯಕ್ಕು ಶಿವಬಸದಿವಶಾ ॥

ಸಹಸ್ರಗಣನಾಮಾಸಂಪುರ್ನ ಮಂಗಳ ಮಹಾ ಶ್ರೀಶ್ರೀ × × × ಬೆಂಗಳೂರ ದೊಡ್ಡ ಬಸವೇಶ್ವರ ದೇವರ ಪಾದಕೆ ನಾನು ನಮಸ್ಕಾರ ಮಾಡಿ ಬರವೆ ॥ ಶಾನಾಮಾನಾಮ ಸಮಂಗಳಾಮಸ್ತು ಶ್ರೀಶ್ರೀ.

ವಿಷಯ: ಶಿವಗಣಗಳ ಸ್ತುತಿ.

ವಿಶೇಷ: ಸಮಗ್ರ. ಪ್ರತಿ ಚೆನ್ನಾಗಿದೆ ತಪ್ಪುಗಳು ಬಹಳ. ಈ ಪುಸ್ತಕದಲ್ಲಿ ಶಿವಶರಣಾಷ್ಟಕ ಮೊದಲಾದ ೨೪ ಕೃತಿಗಳಿವೆ.

—ಜಿಜಿಎಂ

90

ಕೆ. ೧೬೭೭/೨	**ಸಹಸ್ರನಾಮ**	ವೃತ್ತ, ಗದ್ಯ
೭ ೫" × ೧.೩"	?	?
೧–೨೩ ಪತ್ರ	೭ ಪಂಕ್ತಿ	೩೨ ಅಕ್ಷರ

ಆದಿ: ಶುಭ .... ರನಾಮ ಬರೆಉದಕ್ಕೆ ನಿರ್ವಿಘ್ನಮಸ್ತು ॥ ಓಂ ಶ್ರೀ ಮಲ್ಲಿಕಾರ್ಜುನಾರ್ಯಂ

ಧೀಮಂತನ ಪಾಪರಹಿತ ಗಸಂಕುಳನಂ
ಪ್ರೇಮದಿ ಸ್ತುತಿಪೆಂ ಸಾಸಿರ
ನಾಮದ ಜಪನೆಂದು ಪೊಗಳ್ದು ವಿಸ್ತರಿಸಿದಪೆಂ ॥
ಪ್ರಮತಗಣ ರುದ್ರಗಣ ಭಕ್ತಮಹಗಣ ದಿವ್ಯನಾಮಸಂಕೀರ್ತನಮಂ
ಸಮಂತನಮಂ ಸುಸುಹೋದ್ಯೋಗಚಾರ್ಯರೆನಿಪ

ಅಂತ್ಯ : ...ಪ್ರಮಾದಿತ ರೆಶಿಯಂ ಪೇಳ್ವ ಸುಮಹೋತ್ಸವ...
ಸುರದೆನಂವರ ಬಾತಮಣಿಗಳೆಂದು ಪೆಸರಂ ಪೇಳ್ವ....
ಭರದಿಂದಂ ವಿಧಿಯಕ್ಕಾ ಶಿವಬಸವೇಶ ಸಹಸ್ರಗಣನಾಮ . . .
ಮಂಗಳ ಮಹಾ ಶ್ರೀ ಶ್ರೀ.

ವಿಷಯ : ಶಿವಗಣಗಳ ಸ್ತುತಿ.

ವಿಶೇಷ : ಸಮಗ್ರ. ಇದೇ ಕಟ್ಟಿನಲ್ಲಿ ಮಾದೇಶ್ವರನ ಸಾಂಗತ್ಯ ಎನ್ನುವ ಕೃತಿಯೂ ಇದೆ.

—ಜಿಜಿಎಂ

91

ಕೆ. ೧೧೪೪/೪ | **ಸಾನಂದ ಗಣೇಶ್ವರ ರಗಳೆ** | ರಗಳೆ

೧೩.೧೦" × ೨.೧" | ? | ?

೧೮೩–೧೯೨ ಪತ್ರ | ೧೪ ಪಂಕ್ತಿ | ೯೦ ಅಕ್ಷರ

ಆದಿ : ಸಾನಂದಗಣೇಶ್ವರನ ರಗಳೆ ||

ವರ ಸಾನಂದಗಣೇಶ್ವರಂ ಯಿಮಪುರಕ್ಕೈತಂದು ಕಾರುಂಣ್ಯದಿಂ
ಚಿರಕಾಲಂಗಳೊಳ್ಳೈದಿ ನೊಂದ ನರಕಿವ್ರಾತಂಗಳಂ ಕಂಡು ವಿ
ಸ್ತರ ಪಂಚಾಕ್ಷರೀಮಂತ್ರದಿಂ ರಜತಶೈಲಕ್ಕೆ ತಂದೂ
ಗುರುಪ್ರವಾಹಿಂದು ಸದಾಶಿವ ನಿಗಮದಂ ಬಿಂನವಿಪೆಂನಾನಂದದಿಂ
|| ೧ ||

ಕಂದ|| ಸಾನಂದಮುನಿವರಂ ರವಿ
ಸೂನುವಿನಾಪುರಕೆ ಪೋಗಿ ನರಕದ ನರಕಿಗ
ಳಾನನವ ನೀಕ್ಷಿಸಿಯೆ ಪಂ
ಚಾನನಗಿರಿಗವರನೊಯ್ದು ಪರಿಯದನುಸುರ್ವೆ |

× × ×

ರಗಳೆ| ಶ್ರೀಮನ್ಮಹಾ ಸಿದ್ಧಶಿದ್ಧವ ಮೂರ್ತಿ ಗುರುನಾಥಸ್ವಾಮಿ
ತ್ರೈಭುವನ ಜನವಂದಿತ ದಯಾಭರಿತ |
ಮಿಸುನಿಗಿರಿ ಶಿಖರ ಸಿಂಹಾಸನಸ್ಥಿರಪೀಠ
ವೃಷಭ ರಾಜಾರೂಢ ಶಶಿರವಿ ಜಟಾಜೂಟ |

ಅಂತ್ಯ : ಮಂದಪವನಾಹಾರ ಹಾರನಿರತೊಪ್ಪಿದಂ
ನಂದೀಶ್ವರ ಪ್ರೀಯ್ಯಮಹಾಮಹಿಮನೊಪ್ಪಿದಂ

ಶಿವೆ ಜಾಂಹ್ನವಿಯರ ನಿವಾಸನಿಂತೊಪ್ಪಿದಂ
ಭವರಹಿತ ಗುರು ಸದಾಶಿವಲಿಂಗನೊಪ್ಪಿದಂ

× × ×

ಶ್ರೀಮತ್ಪಂಚಾಕ್ಷರಿಯಂ
ಪ್ರೇಮದೊಳನವರತ ಅವಗಂ ಜಪಿಸುವಗಂ
ಸೋಮಧರಗುರು ಸದಾಶಿವ
ತಾ ಮುದದಿಂದತ್ತನವರ್ಗ್ಗ ಸುಖಸಂಪದವಂ
ಸಾನಂದ ಗಣೇಶ್ವರನ ರಗಳೆ ಸಂಧಿ ೫೪ಕಂ ಮಂಗಳ ಮಹಾಶ್ರೀ.

ವಿಷಯ : ಸಾನಂದ ಗಣೇಶ್ವರನ ಚರಿತೆ.

ವಿಶೇಷ : ಸಮಗ್ರ. ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಮೋಳಿಗಯ್ಯಗಳ ಪುರಾಣ, ಲಿಂಗಚಿದಾಮೃತ ಬೋಧೆ, ಗಣಭಾಷ್ಯರತ್ನಮಾಲೆಗಳೆಂಬ ಇನ್ನು ಮೂರು ಕೃತಿಗಳಿವೆ.

—ಕೆಆರ್‌ಎಸ್

92

ಕೆ. ೬೮೯ | **ಸಾನಂದಗಣೇಶ್ವರ ಸಾಂಗತ್ಯ** | ಸಾಂಗತ್ಯ

೮.೬″ × ೧.೭″ | ಓದುವಗಿರಿಯ | ಸು. ೧೫೨೫

೧-೪೬ ಪತ್ರ | ೭ ಪಂಕ್ತಿ | ೩೮ ಅಕ್ಷರ

ಆದಿ : × × × ಸಾನಂದಗಣೇಶ್ವರನ ಸಂಗೀತ್ಯ ಬರೆಯುವದಕ್ಕೆ ನಿರ್ವಿಗ್ನ ಮಸ್ತು. ರಾಗಸಂಗೀತ್ಯ ॥
ಶ್ರೀಮದಮರಾಗಣ ಮಕುಟಸುರಂಜಿತ
ತಾಮರಸಾಂಘ್ರಿಯುಗಳಕ್ಕೇ ।
ಪ್ರೇಮದೋಳ್ನೆರಗುವೆ ಗಿರಿಜಾವರನೆ
ಸ್ವಾಮಿ ಸಲಹೋ ಶಶಿಧರನೇ ॥ ೧ ॥

× × ×

ಮಲುಹಾಣ ಮಯೂರನುದ್ಭಟ್ಟಯನುದೇವಾ
ಹಲಭಾರಿಯ ತಾಳಿದನಾ ।
ಸುಲಭ ಹಂಪೆಯ ಹರೀಶ್ವರ ರಾಗವಾಂಕನ
ಬಲಗೊಂಡು ಪೇಳ್ವೆನೀ ಕೃತಿಯಾ ॥ ೯ ॥

ಅಂತ್ಯ : ತೋಳು ತೊಡೆಯ್ಯಮೇಲಾಡುವಾ ಪುತ್ರನಾ
ನೀಲಾಕಂಧರನು ಬೇಡಿಥಶ್ರೀ ।
ಬಾಳದಿಂಥಲೆಯರಿದು ನೀಡೀದಸತ್ತಿಯಾಳಾ
ದೇವ ಜಂಗಮಯ ಚಿತ್ತ್ರೈಸೂ ॥ ೨೫ ॥

ವಿಷಯ : ಸಾನಂದಗಣೇಶನ ಕಥೆ

ವಿಶೇಷ : ಗ್ರಂಥ ಅಪೂರ್ಣವಾಗಿದೆ. ಓಲೆಗಳಿಗೆ ಅಲ್ಲಲ್ಲಿ ಹುಳು ಹೊಡೆದಿದೆ. ೨೭, ೩೭, ೪೨ ಇತ್ಯಾದಿ ಹಲವು ಓಲೆಗಳು ಮುರಿದುಹೋಗಿವೆ. ೩೯ನೆಯ ಓಲೆಯಲ್ಲಿ ಅಂತೂ ಸಂಧಿ ೫ಕಾಂ ಪಧನೂ ೩೬೫ಕಾಂ ಮಂಗಳ ಮಹಾ ಶ್ರೀಶ್ರೀಶ್ರೀ ಎಂದಿದೆ. ಅಲ್ಲಿಂದ ಮುಂದಿನ ೬೦ ಪದ್ಯಗಳಿರುವ ಓಲೆಗಳ ಅಂಚು, ಒಡಲೆಲ್ಲ ಮುರಿದಿದೆಯಾದ್ದರಿಂದ ಹೆಚ್ಚಿನ ವಿಷಯ ತಿಳಿಯಬರದು. ಅಕ್ಷರಗಳು ಗುಂಡಾಗಿವೆ. ಶಕಟ ರೇಫದ ಪ್ರಯೋಗವಿಲ್ಲ. ಕಾಗುಣಿತದ ತಪ್ಪುಗಳು ಹೆಚ್ಚಾಗಿವೆ.

—ಶ್ರೀನಂತ

93

ಕೆ. ೮೯೦/೨	**ಸಾನಂದಗಣೇಶ್ವರ ಸಾಂಗತ್ಯ**	ಸಾಂಗತ್ಯ
೧೪" × ೧.೮"	ಓದುವಗಿರಿಯ	ಸು. ೧೫೨೫
೧-೨೨ ಪತ್ರ	೮ ಪಂಕ್ತಿ	೬೦ ಅಕ್ಷರ

ಆದಿ : ಶ್ರೀಗಣಾಧಿಪತಯೇ ನಮಃ ॥
ಶ್ರೀಮದಾಮಾರಣಾ ಮಕುಟಾ ಸುರಂಜಿತ
ಕಾಮಾಸಂನಿಭ ಭಾಳನೇತ್ರಾ
ಪ್ರೇಮಾದಿಂದಾನೆರಗುವೆ ಗಿರಿಜಾವರಾ
ಸ್ವಾಮಿ ಶಂಕರ ಸಾಲಾಹೆಂನಾ ॥ ೧ ॥

× × ×

ಕೃತಿವಾಉದೆಂತೆನೆ ಪೇಳ್ವೆನು ನಿಂಮಯ
ಪತಿಯ ಪಟ್ಟಣದಾ ಕಾಳ್ಕ್ಯೊಂಡೂ
ಸಿತಿಕಂಟನಿದ ಕೈಲಾಸಕ್ಕೆ ಕೊಂಡ್ಯೊವ
ಯಿತಿ ಸಾನಂದೇಶ ಸೂಚರಿತಾ ॥ ೧೦ ॥

ಅಂತ್ಯ : ಯಿಾ ಪರಿಯಲಿ ದಿಗುಪಾಲರೊಂದಾ . . ಗಿಯೆ
ಕೋಪಾದಿ ಕಡೆವಾ(ರ)ಲಲಿ

ಕಾಪಾಲಧರನ ಕಾಣ್ಬರೆ ಪೋಪಾಸಮಯಕ್ಕೆ
ಲಾಕ್ಷಣದೊಳಗ್ಯ ಸಂಧಿ ॥ ೫ ॥

ವಿಷಯ : ಸಾನಂದಯತಿಯ ಚರಿತ್ರೆ.

ವಿಶೇಷ : ಅಪನುಗ್ರ. ಇದೇ ಕಟ್ಟಿನಲ್ಲಿ ಹರಿಭಕ್ತಿಸಾರವೆಂಬ ಗ್ರಂಥವಿದೆ.

—ವೈಸಿಬಿ

94

ಕೆ. ೧೦೪೧/೨	**ಸಾನಂದಗಣೇಶ್ವರ ಸಾಂಗತ್ಯ**	ಸಾಂಗತ್ಯ
೧೩.೯" × ೨"	ಓದುವಗಿರಿಯ	ಸು. ೧೫೨೫
೧–೨೭ ಪತ್ರ	೯ ಪಂಕ್ತಿ	೭೮ ಅಕ್ಷರ

ಆದಿ : ಸಾನಂದಗಣೇಶ್ವರನ ಪುಸ್ತಕದ ಸಂಗೀತ ಬರಯುುವ ಬಗ್ಯೆ ಶುಭಮಸ್ತು
॥ ಸಂಗೀತ್ಯ ವರ್ನ ॥

ಶ್ರೀಮದಮರಮಣಿ ಮಕುಟ ವಿರಾಜಿತ
ತಾಮರಸಾಂಘ್ರಿ ಯುುಗಳಕ್ಕೆ
ಪ್ರೇಮದಿಂದನೆರಗುರುವೆ ಗಿರಿಜಾವರ
ಸ್ವಾಮಿ ಸಾಲಹು ಶಶಿಧರನೆ ॥ ೧ ॥ × × ×
ಕೃತಿನಾಮವೆಂತೆನೆ ಪೇಳ್ವೆನು ನಿರೆಯಾದಿ
ಪತಿಯ ಪಟ್ಟಣವ ಕೋಳ್ಗೊಂಡು
ಶಿತಿಕಂಟ್ಟನಿರುವ ಕೈಲಾಸಕ್ಕೆ ಕೊಂಡೊಯ್ದ
ಯತಿ ಸಾನಂದ ಚರಿತಯನು ॥ ೧೨ ॥

ಅಂತ್ಯ : ಧರೆಯೊಳತ್ಯಧಿಕ ಶ್ರೀಗಿರಿಯ ಮಲ್ಲೇಶನ
ಚರಣಕಮಲ ಮಧುಕರನೂ
ವರಕವೀಶ್ವರದಿ ಚಂದ್ರಮ ನೆರೆಯೊಪ್ಪಿದ
ಗಿರಿಯಪ್ಪ ಪೇಳ್ದನೀಕೃತಿಯಾ ॥ ೮೭ ॥ × × ×
ಯಿಂದ್ರನ ಭೋಗ ಧನೇಂದ್ರಾನ ಭಾಗ್ಯವು
ಚಂದ್ರನ ಕಾಂತ್ತಿ ರಂಜಿಸುವ
ಯಿಂದಿರವರನಿಗೆ ಸಕಲ ಸಂಪದವಿತ್ತ
ಮಂದಾಕಿನಿಧರ ಜಯತು ॥ ೯೧ ॥
ಅಂತು ಸಂಧಿ ೬ ಕ್ಕಂ ಪದನು ೫೪೬ ಕ್ಕಂ ಮಂಗಳ ಮಾಹ ಶ್ರೀ
× × ×

ಪ್ಲವಂಗನಾಮ ಸಂವತ್ಸರದ ಪುಷ್ಯಬ ೨೦ ಮು ಸ್ತಿರವಾರದಲ್ಲು ಸಾನಂದ ಗಣೇಶ್ವರನ ಕಥೆ ಸಂಪೂರ್ಣ ಮಂಗಳ ಮಾಹ ಶ್ರೀ.

ವಿಷಯ : ಸಾನಂದಯತಿಯ ಚರಿತ್ರೆ.

ವಿಶೇಷ : ಸಮಗ್ರ. ಬರಹ ಚೆನ್ನಾಗಿದೆ. ಇದೇ ಕಟ್ಟನಲ್ಲಿ ವಿವೇಕ ಚಿಂತಾಮಣಿ ಎಂಬ ಇನ್ನೊಂದು ಕೃತಿ ಇದೆ.
[ಕ.ಹ.ಪ್ರ.ವ. ಸೂಚೀ. ಚತುರ್ಥಸಂಪುಟ ಪುಟ ೩೭೫–೩೭೭. ಕ್ರಮಾಂಕ 1891–1894 ನೋಡಿ.]

—ಕೆಆರ್‌ಎಸ್

95

ಕೆ. ೧೩೬೯/೧ | **ಸಾನಂದಗಣೇಶ್ವರ ಸಾಂಗತ್ಯ** | ಸಾಂಗತ್ಯ

೯.೩" × ೧.೫" | ಓದುವಗಿರಿಯ | ಸು. ೧೫೨೫

೧–೧೩ ಪತ್ರ | ೯ ಪಂಕ್ತಿ | ೩೮ ಅಕ್ಷರ

ಆದಿ : ಶ್ರೀಗಣಾಕಾರರ ಗುರುಭ್ಯೋ ನಮಃ ‖ ಸಾನಂದ ಗಣೇಶ್ವರನ ಸಂಗತ್ಯ ಬರಉದಕ್ಕೆ ಶುಭಮಸ್ತು ‖
ಶ್ರೀಮದಮರಗಾಣ ಮಕುಟಸೂರಂಜಿತ
ತಾಮಾರಸಾಂಘ್ರಿ ಯುಗಳಕ್ಕೆ
ಪ್ರೇಮದೊಳಾನೆರಗುವೆ ಗಿರಿಜಾವರ
ಸ್ವಾಮಿ ಸಲಹು ಶ. ಧರನೆ ‖ ೧ ‖

ಅಂತ್ಯ : ಕಾಣಿಯ ಘಳಿಸುವರಾಣೆ ಭಾಷಿಗೆ ತಪ್ಪಿ
ಕೇಣವಿಲ್ಲದೆ ಕೂಡಿರ್ಧವಾ
ಸ್ಥಾಣು ಬಪಂತೆ ಬಪ್ಪರು ನಡೆನುಡಿಯೊಳು
ಕಾಣೆವೆಳಪಿತು ಧರ್ಮವನೂ ‖ ೩೩ ‖
ತಾವುಂಣರು ತಂಮ ಸತಿಸುತರ್ಗಿಕ್ಕರೂ
ಸಾವೀರ ಶಂಚಿಯ ಘಳಿಸ
ತಾವಣುಮಾತ್ರ ಧರ್ಮಕೀಯದೆ ಬ

ವಿಷಯ : ಸಾನಂದಯತಿಯ ಚರಿತ್ರೆ.

ವಿಶೇಷ : ಅಸಮಗ್ರ. ಅತ್ಯಂತ ಶಿಥಿಲ ಪ್ರತಿ. ಅಶುದ್ಧ. ಇದೇ ಕಟ್ಟನಲ್ಲಿ ಐರಾವತ ಎಂಬ ಮತ್ತೊಂದು ಗ್ರಂಥವಿದೆ.

—ವೈಸಿಬಿ

96

ಕೆ. ೧೩೭೦ **ಸಾನಂದಗಣೇಶ್ವರ ಸಾಂಗತ್ಯ** ಸಾಂಗತ್ಯ

೮.೧" × ೧.೭" ಓದುವಗಿರಿಯ ಸು. ೧೫೨೫

೧-೪೦ ಪತ್ರ ೭ ಪಂಕ್ತಿ ೩೦ ಅಕ್ಷರ

ಆದಿ : ಶ್ರೀ ವಿರೂಪಾಕ್ಷಯೇ ನಮಃ ॥ ಮುರಿಗೆ ಶಾಂತವೀರೇಶ್ವರನ ಪಾದವೇ ಗತಿ ನಂಜನಗೂಡ ನಂಜುಂಡೇಶ್ವರನ ಶ್ರೀ ಪಾದವೆ ಗತಿ ॥ ಐಮಂಗಲದ ಮರಗುಂಟೆ ಸ್ವಾಮಿಯವರ ಶ್ರೀಪಾದವೇ ಗತಿ ॥ ಸಾನಂದಗಣೇಶ್ವರನ ಸಾಂಗತ್ಯ ಬರವುದಕ್ಕೆ ಶುಭಮಸ್ತು ॥ × × ×

ಪದ ॥ ಶ್ರೀಮದಮರಗಣ ಮಕುಟಸುರಂಜಿತ
ತಾಮರಸಾಂಘ್ರಿ ಯುಗಳಕೆ
ಪ್ರೇಮದೊಳಾನೆರಗುವೆನು ಶ್ರೀಶೈಲಾದ
ಸ್ವಾಮಿ ಮಲ್ಲೇಶ ರಕ್ಷಿಪುದೂ ॥ ೧ ॥

ಅಂತ್ಯ : ಇಂದ್ರನ ಭೋಗ ಮುಕುಂದನ ಸೋಜಿಗರ
ವಿಂದಭವನ ಚಾತುರ್ಯಾ
ಚಂದ್ರನ ಕಾಂತಿಯಹುದು ಕೇಳಿದವರಿಗೆ
ಸಂದೆಹಾರಾಯಿತೀ ಕೃತಿಗೆ ॥ ೭೫ ॥

ಅಂತು ಸಂಧಿ ೬ ಕ್ಕಂ ಪದನು ೪೩೫ ಕ್ಕಂ ಸಾನಂದಗಣೇಶ್ವರನ ಸಂಗ ಸಮಾಪ್ತ ಮಂಗಳ ಮಹಾ ಶ್ರೀ ।

ಪ್ಲವನಾಮ ಸಂವತ್ಸರದ ಕಾರ್ತೀಕ ಶು ೧೨ ಸೋಮವಾರದ ಸಹಂಕಾಲದಲ್ಲು ಮುಗೀತೂ । ಐಮಂಗಲದ ಪಂಡಿತಾರಾಧ್ಯ ಮಠದ ಗುರುಲಿಂಗಪ್ಪನವರು ಸಂನ್ನೇಸಿ ಕೊಡಮಗೆಗೌಡ ಹನುಮಣ್ಣನ ತಮ್ಮ ಹನುಮಂತಪ್ಪಗೆ ಬರದುಕೊಟ್ಟ ಸಾನಂದ ಗಣೇಶ್ವರನ ಸಂಗತ್ಯ ಧನಕನಕ ವಸ್ತುವಹನ ಪುತ್ರ ಸಂತನ ಸಹ ಸಂಪ್ರಿದಿಯಾಗಲೆಂದು ಹರಸಿ ಬರಕೊಟದೂ

ವಿಷಯ : ಸಾನಂದಯತಿಯ ಚರಿತ್ರೆ.

ವಿಶೇಷ : ಸಮಗ್ರ. ಅಶುದ್ಧ. ಕೆಲವು ಗರಿಗಳ ಅಂಚು ಮುರಿದಿದೆ.

—ವೈಸಿಬಿ

97

ಕೆ. ೧೬೯೦	**ಸಾನಂದಗಣೇಶ್ವರ ಸಾಂಗತ್ಯ**	ಸಾಂಗತ್ಯ
೧೫.೩" × ೧.೬"	ಓದುವಗಿರಿಯ	ಸು. ೧೫೨೫
೧-೯೩ ಪತ್ರ	೬ ಪಂಕ್ತಿ	೫೪ ಅಕ್ಷರ

ಆದಿ : ಶ್ರೀ ಶಿವಾಯನಮಃ । ಸಾನಂದಗಣೇಶ್ವರನ ಸಂಗೀತ್ಯಾ ಬರೆಯುದಕ್ಕೆ
ನಿರ್ವಿಘ್ನಮಸ್ತು ॥
ಶ್ರೀಗುರೂವಾರ್ಯನಂಗ್ರಿಗಳೀರಡನು ನೀಘಾ
ಮಾಗವೋಕ್ತಿಯೊಳೂಪಾಚರಿಸಿ
ಬಾಗೀಮಸ್ತಕವ ಸಾಸಲಸೋಮಾಥೂರಗಾನೂ
ರಾಗದಿಂದೆರಗಿ ಭಕ್ತಿಯಲೀ
ವರ ಪೀರಾಶೈವ ಸಿದ್ಧಾಂತ ಸಾಗರವನು
ದ್ದರಿಸಿದಾ ಚಾರ್ಯ್ಯಮೂರ್ತಿಗಳಾ
ಚರಣಾಕಮಲಕಾ ನಾರಡಿಯಾಗೀ ಪುಟವೆದ್ದುಂ
ಹರನಾಡಿಗಭಿನಮಿಸುವೆನೂ॥ ೨ ॥

ಅಂತ್ಯ : ಸಾಸಲಾಪುರವಾರಾದೀಶನೀ ಕೃತಿಗೆ ಸಂ
ತೋಷವ ಕೊಡಲೆಂನ್ನಾ ಕವಿಗೆ
ದೋಷವೆಳ್ಳೆನಿತಿಲ್ಲದಂತೆ ಮಾಡಲಿಯೆಂದೆಂ
ಬಾಸೆಗೀಯಲಿ ಸ್ವಶ್ರೀಯಸನು ॥
ಇಂತೂ ಸಂಧಿ ೧೧ ಕ್ಕಂ ಪದನು ೧೦೧೨ ಕ್ಕಂ ಮಂಗಳ ಮಹಾ ಶ್ರೀ
ಶ್ರೀ ಮ್ನಂತಸಂವಸ್ತರ ಕಾರ್ತೀಕ ಬವುಳ ೭ ಗುರುವಾರದಲು ಸಾನಂದ
ಗಣೇಸ್ವರನ ಸಂಗೀತ್ಯ ಸಂಪೂರ್ನ ಮಂಗಳ ಮಹಾ ಶ್ರೀಶ್ರೀ.

ವಿಷಯ : ಸಾನಂದಗಣೇಶನ ಚರಿತ್ರೆ

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ

— ಜಿಜಿಎಂ

98

ಕೆ. ಬಿ. ೬೫೯/೧	**ಸಾನಂದಗಣೇಶ್ವರ ಸಾಂಗತ್ಯ**	ಸಾಂಗತ್ಯ
೯.೫" × ೭"	ಓದುವಗಿರಿಯ	ಸು. ೧೫೨೫
೧-೪೯ ಪುಟ	೧೫ ಪಂಕ್ತಿ	೨೨ ಅಕ್ಷರ

ಆದಿ : ....ಬಲ್ಲ ರಸಿಕ ತಾನೀವು ನಮ್ಮಕಂದ....
ಮಲುಹಣ ಮಯೂರಮ ಉದ್ಭಟದೇವರು
ಹಲಾಯುಧ ಕವಿ ಕಾಳಿದಾಸ
ಸುಲಭ ಹಂಪೆಯ ಹರೀಶ್ವಾರ ರಾಘವಾಂಕರ
ಬಲಗೊಂಡು ಪೇಳ್ವೆನೀ ಕೃತಿಯ ॥ ೧೪ ॥

ಕೃತಿನಾಮವೆಂತೆನೆ ಪೇಳ್ವೆನು ನಿಶಿಯದಾದ
ಪತಿಯಪಟ್ಟಣವ ಕೊಳ್ಗೊಂಡ
ಸಿತಿಕಂಠನಿಪ್ಪ ಕೈಲಾಸಕ್ಕೆ ಕೊಂಡೊಯ್ದ
ಯತಿ ಸಾನಂದ ಸಾಂಗತ್ಯಾ ॥ ೧೫ ॥

ಅಂತ್ಯ : ಪರಮ ಶ್ರೀಗಿರಿಯಮಲ್ಲೇಶನ....
........ಲಮಧುಕರನು
ವರಕವಿ ಶರಧಿ ಚಿದ್ರೂಪ........
ನೆರೆ ವೊದುವಗಿರಿಯ ಪೇಳ್ದನೀ ಕೃತಿಯ

ಸಂಧಿ ಆರಕ್ಕಂ ಪದನು ೫೨೭ ಕ್ಕಂ ಮಂಗಲ ಮಹಾ ಶ್ರೀಶ್ರೀಶ್ರೀ.

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀ ಚಿದಾನಂದಗುರು ವರ್ಯ ಚರಣಪದಾದ್ವಿಭಾಶಿತ ಶಿವಾನಂದದೂತಫಲಚಿತ್ತಾ ಶ್ರೀ ಸಾನಂದಗಣಚರಿತ ಸಂಪೂರ್ಣಂ

ವಿಷಯ : ಸಾನಂದಗಣೇಶ್ವರನ ಚರಿತ್ರೆ.

ವಿಶೇಷ : ಶಿಥಿಲ ಪ್ರತಿ, ಅಸಮಗ್ರ. ೪೯ನೇ ಪುಟದ ನಂತರ ಲೆಕ್ಕಪತ್ರದ ಕೆಲವು ಹಾಳೆಗಳಿವೆ.

—ಹಕರಾ

99

ಕೆ. ಎ. ೩೯೦	**ಸಾನಂದ ಚರಿತೆ**	ಷಟ್ಪದಿ
೧೩.೩" × ೮.೫"	ಕುಮಾರ ಪದ್ಮರಸ	ಸು. ೧೬೦೦
೧–೨೩೮ ಪುಟ	೨೭ ಪಂಕ್ತಿ	೧೨ ಅಕ್ಷರ

ಆದಿ : ಕುಮಾರಪದ್ಮರಸ ವಿರಚಿತ ಸಾನಂದ ಚರಿತ್ರೆ. × ×
ಯತ್ಕಟಾಕ್ಷನಿಪಾತೇನ ಮಲಿನೋ ವಿಮಲಾಯತೇ
ವಂದೇ ಶ್ರೀ ಮಾಚಿದೇವಾರ್ಯಂ ಕೃಪಾನಿರ್ಭರ ಚೇತನಾಂ ॥

ವೃತ್ತ || ಉ || ದೋರಸಮುದ್ರವೆಂಬ ಪೆಸರಿಂದೆಸೆದೊಪ್ಪುವ ರಾಜಧಾನಿಯೊಳ್
ಧೀರ ನೃಸಿಂಹಭೂವರನಿರುತ್ತಿರೆ ದೇಶವ ಪಾಲಿಸುತ್ತು ವಿಾ
ಪೂರ್ರಮಣೀಯ ರಾಜನ ಸವಿಾಪಕೆ ಬಂದು ಸುಮಾಂಧ್ರ ದೇಶದಿಂ
ನಾರಣ ಭೃತ್ಯ ತಾತನೆನಿಪ್ಪನದೊರ್ವ ವೈಷ್ಣವಂ ||೧||

ಮ. ವಿ || ಶಿವಭಕ್ತಿಯಿಲ್ಲ ಶಿವಸಿದ್ಧಾಂತಂ ದಿಟಂ ಮುನ್ನ ಮಿ
ಲ್ಲವಿಚಾರಂ ಪುಸಿತಥ್ವಮಂ........ ವನಜಾಕ್ಷಂ ದೈವವಾ
ಸುವಿಶಾಲಂ ನಿಜಭಕ್ತಿಗೆಂದೆನುತ ಪತ್ರಾಲಂಬನಂಗೈಯಲಾ
ಭವಿಯೊಳ್ ಭಾವಿಸಿ ಗೆಲ್ದ ಪದ್ಮರಸನೀ ಸಾನಂದ ಚಾರಿತ್ರದಿಂ || ೨ ||

ಅಂತ್ಯ : ತರದ ವೈದಿಕ ಕರ್ಮ
ನೆರವಿಯೊಳು ರುದ್ರಾಕ್ಷಿ
ಧರಿಪುದೇ ವಿಧಿ ದ್ವಿಜರ್ಗಂತಲ್ಲದೇ
ಯಿರೆ ನೆಗಳ್ದ ಕರ್ಮವಂ
ತುರಿದು ನಿಃಫಲವಾಗಿ
ಹರೆವುದೆಂದೊರೆದ ಶಾಸ್ತ್ರೋಕ್ತಿಗಳವಂ (ಪುಟ. ೨೩೪)

× × × ×

ಗೃಹ್ಣೀಯಾತ್ಸ್ವಯಂ ಚಾರು ಚರೋಪಿ ವಾ....
ನಚಾಯುಕ್ತ ಕರೇದದ್ವಾಸ್ನೈವಾ ಶುಚಿತಳೇಕ್ಷಿಪೇತ್
ನಸಂ ಸ್ಪ್ರಶೇಚ ನಿಜಾಂಗ್ನೈನೋಳಪೇಕ್ಷೇತನಲಂಘಯೇತ್
.........ವಿನಿಯುಂಜೀತ ಮಂತ್ರತಃ ||

ವಿಷಯ : ಸಾನಂದ ಶಿವಯೋಗಿಯ ಚರಿತ್ರೆ.

ವಿಶೇಷ : ಅಸಮಗ್ರ. ಇರುವ ಭಾಗದಲ್ಲೂ ಕೆಲವು ಭಾಗ ಮೂಲದಲ್ಲಿ ತ್ರುಟಿತವಾಗಿ ಬಿಟ್ಟುಹೋಗಿದೆ. ಮದರಾಸು ಡಿ. 2134ನೆಯ ಮೂಲಪ್ರತಿಯಿಂದ ಪ್ರತಿಮಾಡಿದ್ದಾರೆ.

—ಬಿಎಸ್‌ಎಸ್

100

ಕೆ.ಎ. ೪೪೬ **ಸಾನಂದ ಚರಿತೆ** ಷಟ್ಪದಿ

೧೦.೫" × ೬" ಕುಮಾರ ಪದ್ಮರಸ ಸು. ೧೩೦೦

೨೩೯–೩೮೮ ಪುಟ ೨೦ ಪಂಕ್ತಿ ೧೮ ಅಕ್ಷರ

ಆದಿ : ಕಾಲಹಸ್ತೇಷು ನಾನ್ಯತ್ರ ನಯೋಗ್ಯೇಭ್ಯಃ ಪ್ರದಾಪಯೇತ್‌ಯಿವು
ಹತ್ತು ಇತ್ಯಾದಿ.
ಗಾರು ಹಸ್ತಬ್ರಹ್ಮ...
ಚಾರಿ ಅತ್ಯಾಶ್ರಾ....
............ವನವಾಸಿಯಂ
ಚಾರುತರಭಸಿತವಿದ
ನೇರಂತೆ ಧರಿವುದೆಂ
ದಾರೈದು ಸಾರುವ ವುಪನಿಷದಾದಿಯಂ ||

ಅಂತ್ಯ : ಇದು ಪರಮನಂದೀರ ದೊರೆಯಿಂ
ಪುದಿದ ಸಾನಂದೇಶಚರಿತದೊ
ಳಿದು ಮಹೇಶಾಸ್ಥಾನದುತ್ತಮ ವರ್ಣನದ ಸಂಧಿ
ಇದು ಶರಣಕವಿ ಪದುಮದೇವಂ
ಪದೆದು ಕನ್ನಡದಿಂದ ಮುದ್ರಿಸಿ
ಯೊದವಿದೊಂಬತ್ತನೆಯ ಸಂಧಿ ಸಮಾಪ್ತಂ.

ಅಂತು ಈ ಪುರಾಣದ ಷಟ್ಪದಿಗಳು ೭೯೧ ರಗಳೆ ೨ ಇದಕ್ಕೆ ಗ್ರಂಥ ಗಳು ೪೩೦೦. ಶ್ರೀಮನ್ಮಗ್ಗಿಯ ಮಾಚಿದೇವಗುರುಭ್ಯೋನಮಃ ಸದಾಸಂಖ್ಯಾಕ ಗಣೇಭ್ಯೋನಮಃ ಶ್ರೀ ಶ್ರೀ ಶ್ರೀ ಪ್ಲವ ಸಂವತ್ಸರದ ಮಾರ್ಗಶಿರ ಬಹುಳ ೧೦ರಲ್ಲು ಶ್ರೀಮನ್ಮಹಾನಂದಪ್ರಭು ಬಿಜ್ಜಾವರದ ಇಮ್ಮಡಿ ಚಿಕ್ಕಪ್ಪಗೌಡರು ಬರೆಸಿದ ಸಾನಂದಪುರಾಣ × × × ಶ್ರೀಕೈಲಾಸವಾಸಿನೇ ನಮಃ ಪಿ. ರಾಮಕೃಷ್ಣಭಟ್ ಪಂಡಿತ್, 17.5.49

ವಿಷಯ : ಸಾನಂದಯತಿಯ ಚರಿತ್ರೆ.

ವಿಶೇಷ : ಕಾವ್ಯದ ಬಹುಭಾಗ ಲುಪ್ತವಾಗಿದೆ.

—ಹಕರಾ

101

ಕ. ೬೯೪ **ಸಾಗಾರ ಧರ್ಮಾಮೃತ (ಸಟೀಕು)** ಶ್ಲೋಕ, ಟೀಕು

೧೪.೦" × ೦.೬" ? ?

೧–೧೧೦ ಪತ್ರ ೭ ಪಂಕ್ತಿ ೬೭ ಅಕ್ಷರ

ಆದಿ: ಶ್ರೀವರ್ಧಮಾನ ಮಾನಮ್ಯ ಮಂದಬುದ್ಧಿ ಪ್ರಬುದ್ಧಯೇ ಧರ್ಮಾ ಮೃತೋಕ್ತ ಸಾಗಾರ ಧರ್ಮೇ ಟೀಕಾಂತರೋಮ್ಯಹಂ ||
ಅಥನತ್ವಾರ್ಹರೋಕ್ಷೂಣ ಚರಣಾನ್ ಶ್ರವಣಾನಪಿ
ತದ್ಧರ್ಮರಾಗಿಣಾಂ ಧರ್ಮಸಾಗಾರಾಣಾಂ ಪ್ರಣೇಷ್ಯತೇ || ೧ ||
ಅಥಾಯತ್ಯಾಚಾರ ವ್ಯಾಖ್ಯಾನಾಂತರದಲ್ಲಿ ಅಕ್ಷೂಣಚರಣಾನ್– ಯಥಾಖ್ಯಾತಚಾರಿತ್ರವನುಳ್ಳ, ಅರ್ಹತ–ತೀರ್ಥಕರ ಪರಮ ದೇವರುಗಳನು, ಸತ್ವಾ–ನಮಸ್ಕರಿಸಿದ, ಪಕ್ಷದಲ್ಲಿ ಸಿದ್ಧಪರಮೇಷ್ಠಿಗಳನು, ನತ್ವಾ–ನಮಸ್ಕರಿಸಿ, ಅಪಿ–ಮತ್ತೆ, ಅಕ್ಷೂಣಚರಣಾನ್–ನಿರತಿಚಾರವಹ ಚಾರಿತ್ರವನು, ಶ್ರವಣಾನ್, ಆಚಾರ್ಯೋಪಾಧ್ಯಾಯ ಆ ಸರ್ವ ಸಾಧುಗಳನು, ನತ್ವ–ನಮಸ್ಕರಿಸಿ ತಧರ್ಮರಾಗಿಣಾಂ–ಆ ತಪಸ್ವಿಗಳ, ವಿರತಿ ಸ್ವರೂಪವಹ ಧರ್ಮದಲ್ಲಿ ಅನುರಾಗವನುಳ್ಳ ಸಾಗಾರಾಣಾಂ– ಅಪ್ರತ್ಯಾಖ್ಯಾನ ಕ್ರೋಧಮಾನ ಮಾಯಾಲೋಭಂಗಳ ಕ್ಷಯೋಪಶಮನವನುಳ್ಳ ಗೃಹಸ್ತರುಗಳ ಧರ್ಮಾ–ಧರ್ಮವು, ಪ್ರಣೇಷ್ಯತೇ– ಹೇಳಲುಪಡುತಂ ಯಿದ್ಧಿತು. || ೧ ||

ಅಂತ್ಯ: ಸಂಲಿಖ್ಯೇಶಿವಪು: ಕಷಾಯವದಲಂ ಕರ್ಮಿಣನಿರ್ಯಾಪಕಾ ಸ್ತಾತ್ಮಾ ಶ್ರವಣಸ್ತದೇವಕು ಲಯಲ್ಲಿಂಗಂ ತದೀಯ ಪರಸದ್ರತ್ನತ್ರಯ ಭಾವನೋ ಪರಿಣಾತಃ ಪ್ರಾಣಾನ್ ಶಿವಾಶಾದರಃ ಸ್ತ್ಯಕ್ತ್ವಾವ ಪಂಚೀ ನಮಸ್ಕ್ರಿಯಾ ಸ್ಮೃತಿ ಶಿವಿಸ್ಯಾದೃಷ್ಟ ಜನ್ಮಾತರೇ || ೧೧೧ ||
ಯಿತ್ಯಾಶಾಧರ ವಿರಚಿತೇ ಸೋಜ್ಞಃ ಧರ್ಮಾಮೃತೇ ಸಾಗರಧರ್ಮೇ ಅಷ್ಟಯೋಧ್ಯಾಯಃ ಸಮಾಪ್ತಿ || ಶ್ರೀ.

× × ×

ಶಾಲಿವಾಹನ ಶಖಾಬ್ಧಾ ೧೭೯೦ ನೇ ವಿಭವ ಸಂವತ್ಸರದ ಮಾಘ ಶುದ್ಧ ೧೫ ಬುಧವಾರ ದಿವಸಕ್ಕೆ ಮಲೆಯೂರ ದೇವಚಂದ್ರೈಯ್ಯನವರ ತೃತೀಯ ಭಾರ್ಯ್ಯೆಯ ಚತುರ್ಥಪುತ್ರನಾದ ಶ್ರೀಮತ್ಪಂಡಿತಯ್ಯನು ತಂನ ದ್ವಿತೀಯ ಅಂಣನಾದ ಶ್ರೀಚಂದ್ರೈಯ್ಯನವರ ಅಧ್ಯಯನಕ್ಕೆ ಬರೆದಂತ್ಹಾಯಿ ಸಾಗಾರ ಧರ್ಮ ಸಂಪೂರ್ಣ ಮಂಗಲ ಮಹಾ ಶ್ರೀ.

ವಿಷಯ : ಆಶಾಧರನ ಕಾವ್ಯಕ್ಕೆ ಕನ್ನಡದಲ್ಲಿ ವ್ಯಾಖ್ಯಾನ ನೀಡಿರುವ ಜೈನಗ್ರಂಥ ಗೃಹಸ್ಥನ ವ್ರತನಿಯಮಗಳನ್ನು ವಿವರಿಸಿದೆ.

ವಿಶೇಷ : ಸಮಗ್ರವಾಗಿದೆ. ೬೮, ೯೨ನೆಯ ಪತ್ರಗಳಲ್ಲಿ ಒಂದು ಕಡೆ ಮಾತ್ರ ಬರೆದಿದೆ.

—ಕೆಆರ್‌ಎಸ್

102

ಕೆ. ೭೦೧/೧ ಸಾಗಾರ ಧರ್ಮಾಮೃತ (ಸಟೀಕು) ಶ್ಲೋಕ, ಟೀಕು

೮″ × ೧.೫″ ? ?

೧–೧೧೬ ಪತ್ರ ೮ ಪಂಕ್ತಿ ೩೨ ಅಕ್ಷರ

ಆದಿ : ಶ್ರೀವೀತರಾಗಾಯನಮಃ
ಶ್ರೀವರ್ಧಮಾನಮಾನಮ್ಯ । ಮಂದಬುದ್ಧಿ ಪ್ರಬುದ್ಧಯೇ ।
ಧರ್ಮಾಮೃತೋಕ್ತಸಾಗಾರ ಧರ್ಮಟೀಕಾಂ ಕರೋಮ್ಯಹಂ ॥
ಅಥನತ್ವಾರ್ಹತಿಕ್ಷೀಣಚರಣಾನ್ ಶ್ರವಣಾನಪಿ ।
ತದ್ಧರ್ಮರಾಗಿಣಾಂ ಧರ್ಮಃ ಸಾಗಾರಾಣಾಂ ಪ್ರಣೇಷ್ಯತೇ ॥ ೧ ॥
ಅಥ–ಯತ್ಯಾಚಾರ ವ್ಯಾಖ್ಯಾನಾನಂತರದಲ್ಲಿ, ಅಕ್ಷೀಣಚರಣಾನ್– ಶ್ರವಣಾನಪಿ–ಯಥಾಖ್ಯಾತಚಾರಿತ್ರವನುಳ್ಳ, ಅರ್ಹತ–ತೀರ್ಥ–ಕರ ಪರಮದೇವರುಗಾನು, ನತ್ವಾ–ನಮಸ್ಕರಿಸಿ, ಪಕ್ಷದಲ್ಲಿ ಸಿದ್ಧಪರಮೇಷ್ಠಿ ಗಳನು ನತ್ವಾ–ನಮಸ್ಕರಿಸಿ, ಅಪಿ–ಮತ್ತೆ, ಅಕ್ಷೀಣಚರಣಾನ್– ವಿರತಿಚಾರವಹಚಾರಿತ್ರವನುಳ್ಳ, ಶ್ರವಣಾ–ಆಚಾರ್ಯೋಪಾಧ್ಯಾಯ ಸರ್ವಸಾಧುಗಳನು, ನತ್ವಾ–ನಮಸ್ಕರಿಸಿ ತದ್ಧರ್ಮರಾಗಿಣಾಂ–ಆ ತಪಸ್ವಿಗಳ ವಿರತಿಸ್ವರೂಪವಹಧರ್ಮದಲ್ಲಿ ಅನುರಾಗವುಳ್ಳ, ಸಾಗಾರಾ ಣಾಂ–ಅಪ್ರತ್ಯಾಖ್ಯಾನಕ್ರೋಧಮಾನ, ಮಾಯಾಲೋಭಂಗಳ ಕ್ಷಯೊ ಪಶಮನವನುಳ್ಳ ಗಲಹಸ್ಥರುಗಳ, ಧರ್ಮಃ–ಧರ್ಮಾವು ಪ್ರಣೇಷ್ಯತೇ– ಹೇಳಲುಪಡುತಂ ವಿದ್ದುದು ॥ ೧ ॥

ಅಂತ್ಯ : ಸಂಲಿಖ್ಯೇತಿವಪುಃ ಕಷಾಯಪದಲಂಕರ್ವಿಣನೀಯರ್ಾಪಕ ಕಸ್ವಾ ತ್ಮಾಶ್ರವಣಷ್ಟದೇವಕಲಯಲ್ಲಿಂಗಂ ತದೀಯಂ ಪರಃ
ಸವ್ರತ್ನತ್ರಯಭಾವನಾ ಪರಿಣತಃ ಪ್ರಾಣಾನ್ ಶಿವಾ
ಶಾಸ್ತ್ರೈಕ್ತ್ವಾಪಂಚ ನಮುಕ್ರಿಯಾ ಸ್ಮೃತಿ ಶಿವಿಸ್ಸಾದಷ್ಟ
ಜನ್ಮಾಂತರೇ ॥ ೧೧೧ ॥

ಸುತನು ಶ್ರೀಶಲನಾಥನಂದನ
ಸುತನು ಬಸವ ಶುಭಾಂಗನಾತನ ಗುರುಪದಾಂಬುಜಪಾ
ಮಥನದಿಂದಲಿ ಮಾಂಸಪಿಂಡವ
ನತಿಗಳದ ಅಧ್ಯಾತ್ಮಿ ನುಡಿದನು
ಶ್ರುತಿಗೆ ನಿಲುಕದ ಬೊಮವಿದ್ಯ ಸುಶೀಲರತ ಧರಿಸಿ ॥ ೪ ॥

ಅಂತ್ಯ : ಅಣು ಕೇಳಧ್ಯಾತ್ಮಚಿಂತಾ
ಮಣಿಯದೊಂದು ಮಹಾತ್ಮೆಯೆಂಬುದು
. ಣವು ಕಾಣದು ಕರ್ಮಕೋಟಲೆಗೊಂಡು ತಿರುಗುತಿಹಾ
ಭಣಿತೆಯಲ್ಲಿದು ಜೀವಪರಮರ
ಹೊಣಿಕೆಯಿದು ಅಮಲಾತ್ಮಸುಖಿ
ಥಣಿಯೊಳಿರಿಸಿದನೆಂನ ಪೊಂಪಾಪುರದ ವಿರುಪಾಕ್ಷ ॥ ೩೧ ॥

ಅಂತು ಸಂಧಿ ಲಕ್ಕೆ ಪದನು ೩೪೩ಕ್ಕೆ ಮಂಗಳ ಮಹಾ ॥

ಮಂಗಳಂ ಭಗವಾರ್ ವಿಷ್ಣು ಮಂಗಳಂ ಮಧುಸೂದನ
ಮಂಗಳಂ ಪುಂಡರೀಕಾಕ್ಷೋ ಮಂಗಳಂ ಗರುಡಧ್ವಜಃ ||
ಶ್ರೀ || ಶ್ರೀ || ಶ್ರೀ ||

ಯಾದೃಶೀ ಪುಸ್ತಕಂ ದೃಷ್ಟ್ವಾ ತದೃಶೀ ಲಿಖಿತಂ ಮಯಾ |
ಅಪದ್ಧೋವಾ ಸುಪದ್ಧೋವಾ ಮಮದೋಷೋ ನವಿದ್ಯತೆ || = ೧ ||
ಶ್ರೀ ||

ವಿಷಯ : ಅಧ್ಯಾತ್ಮಬೋಧೆ.

ವಿಶೇಷ : ಸ್ಫುಟಾಕ್ಷರ. ಗ್ರಂಥ ಸಮಗ್ರ. ಸುದೃಢಪ್ರತಿ.

—ಎಸ್‌ಎನ್‌ಕೆ

163

ಕೆ. ಬಿ. ೬೯೭/೧೭ **ಸುಜ್ಞಾನ ಚಿಂತಾಮಣಿ** ಭಾಮಿನೀಷಟ್ಪದಿ

೬" × ೮.೫" ಬಸವೇಶ ಸು. ೧೬೦೦

೧–೫೯ ಪುಟ ೧೮ ಪಂಕ್ತಿ ೨೦ ಅಕ್ಷರ

ಆದಿ : ಶ್ರೀಗುರುಭ್ಯೋ ನಮಃ × × × || ಸುಗ್ನಾನಚಿಂತಾಮಣಿ
ಪೂಸ್ತಕ ಬರವದಕ್ಕೆ ಶುಭಮಸ್ತು || × × × ||
ಪಲ್ಲ || ಭಾಮಿನಿ ||

ನಿತ್ಯವರಿಯದೆ ಜನರೂ ಧರೆಯೊಳು
ಸತ್ತು ಪುಟ್ಟುತ್ತಿರಲೂ ಪರಮಗು
ರೊತ್ತು ಮನೂ ಬೋಧಿಸಿಯ ಮುಕ್ತಿಯ ಪದಕೇ ನಿಲಿಸಿದನೂ ||

ಅಂತ್ಯ : ಅಣೂಗ ಕೇಳಧ್ಯಾತ್ಮಚಿಂತಾ
ಮಣಿಯದೊಂದು ಮಹಾತ್ಮೆಯಂಬದೊ
ಪ್ರಣಮ ಕಾಣದೂ ಪರಪು ಕೋಟಲೆಗೊಂಡೂ ತಿರುಗುತಿಹಾ
ಭಣತಿ ಅಲ್ಲದೂ ಜೀವ ಪರಮರ
ಹಣತಿಯಿದೂ ಅಮಲಾತ್ಮಸುಖ ತಿಂ
ಥಿಣಿಯೊಳಿರಿಸಿದನೆಂನ್ನ ಪೊಂಪಾಪುರದ ವಿರೂಪಾಕ್ಷ || ೩೧ ||

ಅಂತೂ ಸಂಧಿ ೮ಕ್ಕೆ ಪದನೂ ೩೪೯ಕ್ಕೆ ಮಂಗಳ ಮಹಾಶ್ರೀ || ಶ್ರೀ
ನೃಪ ಶಾಲಿವಾಹನ ಶಕೆ | ೧೭೪೨ ವರುಷ ವಿಕ್ರಮನಾಮ ಸಂ||ದ
ಅಧಿಕ ಜೇಷ್ಟ ಬ|| ೧೨ ಬುಧವಾರ ಅಶ್ವಿನಿನಕ್ಷತ್ರ ಘಳಿಗಿ ೧೯ ಘಳಿಗೆ
ಲೇಖನ ಸಮಾಪ್ತಃ ಕಲ್ಲಿಸಾಳದ ಸತ್ಯಪ್ಪನ ಬರಹಃ || ಶ್ರೀ.

ವಿಷಯ : ಅಧ್ಯಾತ್ಮ ವಿಚಾರ

ವಿಶೇಷ : ಕೃತಿ ಸಮಗ್ರ. ಪ್ರತಿ ಸುದೃಢ. ಮೋಡಿ ಅಕ್ಷರ. ಇದರೊಂದಿಗೆ ‘ಲಿಂಗಾರ್ಚನೆ’ ಮುಂತಾದ ಕೃತಿಗಳಿವೆ.

—ಎಂಪಿಎಂ

164

ಕೆ. ಬಿ. ೬೯೭/೧೯	**ಸುಜ್ಞಾನ ಚಿಂತಾಮಣಿ**	ಭಾಮಿನೀಷಟ್ಪದಿ
೬" × ೮.೫"	ಬಸವ	ಸು. ೧೬೦೦
೧೨ ಪತ್ರ	೧೫ ಪಂಕ್ತಿ	೨೨ ಅಕ್ಷರ

ಆದಿ : ಶ್ರೀ ಗುರುಭ್ಯೋ ನಮಃ ‖ × × × × ‖ ಸುಗ್ನಾನ ಚಿಂತಾಮಣಿ
ಪುಸ್ತಕ ಬರವದಕ್ಕೆ ಶುಭಮಸ್ತು ‖ × × × ‖
‖ಪಲ್ಲ‖ ಭಾಮಿನಿ ‖

ನಿತ್ಯವರಿಯದೆ ಜನರೂ ಧರೆಯೊಳು
ಸತ್ತು ಪುಟ್ಟುತ್ತಿರಲೂ ಪರಮಗು
ರೊತ್ತುಮನೂ ಬೋಧಿಸಿಯ ಮುಕ್ತಿಯ ಪದಕೇ ನಿಲಿಸಿದನೂ ‖

ಅಂತ್ಯ : ವಚಿಹಾತಿ ಕುಲವಚ್ಚಿಯಂಬೊದೂ ।
ಆಶ್ಚರ್ಯ ನಿಂನಲ್ಲಿ ಕಂಡೆನೂ ।
ಮೆಚ್ಚಿದೆವೂ ನಿಂನಾಣೆ ಸೂತ ವೈದಡವಿ ಬಾಳ್ಕೆಸಿ ।
ಅಚ್ಚ ಸೂ ....
....
.... ‖

ವಿಷಯ : ಅಧ್ಯಾತ್ಮ ವಿಚಾರ.

ವಿಶೇಷ : ಕೃತಿ ಅಸಮಗ್ರ. ಪ್ರತಿ ಶಿಥಿಲ. ಮೋಡಿ ಅಕ್ಷರ. ಸಮಗ್ರವಾದ ಇದೇ ಕೃತಿಯ ಬೇರೊಂದು ಪ್ರತಿ ಇದೇ ಕಟ್ಟಿನಲ್ಲಿದೆ. ಇದರೊಂದಿಗೆ ‘ಕುಸ್ತಿ ಆಗಮ’ ಮುಂತಾದ ಇತರ ಕೃತಿಗಳಿವೆ.

—ಎಂಪಿಎಂ

165

ಕೆ. ೧೭೯೭ | **ಸುದರುಶನ ಮುಂತಾದ ಕಥೆಗಳು** | ಗದ್ಯ, ಪದ್ಯ

೧೧" × ೧.೮" | ? | ?

೧–೪೩ ಪತ್ರ | ೧೦ ಪಂಕ್ತಿ | ೫೪ ಅಕ್ಷರ

ಆದಿ : ಶ್ರೀ ವೀತರಾಗಾಯ ನಮಃ ॥ ಸುದರುಶನನ ಕಥೆ ॥

ವೃತ್ತ ॥

ಪ್ರಾಣಿಹಿತೋಪದೇಶಮಿದು ಸಾಲದೆ ವಂದೇ ಪದಂ ನವೋ ಅರಹಂ
ತಾಣಮೆನಿಪ್ಪುದುಂತದನೇ ಗೋಕುಲರಕ್ಷಕನೊರ್ವನೋದುತಂ
ಪ್ರಾಣದಲ್ಮೆಯೊಳ್ಪಯಸಿ ತಾನೆ ಸುದರುಶನನಾದನಿಂದಡ
ಕ್ಷೂಣ ಪದಂಗಳಂ ನೆಲೆವ ಭವ್ಯರ ಸ್ವೈಪನದೇನನೆಂಬುದೋ ॥

ಅಂತ್ಯ : ಮಗುಳ್ದು ಅಯೋಧ್ಯೆಗೆ ಬಂದು ಸುಖದಿಂ ರಾಜ್ಯಂಗೆಯ್ಯುತ್ತು ಮಿರ್ದ ರಿತ್ತಲು × × × ವಂದುದಿನಂ ಸನ್ಯಸನಮುಂ ಕೈಕೊಂಡು ಕಡೆಯೊಳ್ಮುಡುಪಿಯಚ್ಯುತಕಲ್ಪದೊಳು ಸ್ವಯಂಪ್ರಭನಿಂ ಪ್ರತೀಂದ್ರನಾಗಿ ಪುಟ್ಟಿದರೀ ವಿಧದಿಂ ಸ್ತ್ರೀಬಾಲೆ ಸೀಲ ಸಾಮರ್ಥ್ಯದಿಂದನುಮಿಷವಲ್ಲಭನಿಂ ಪೂಜೆವಡೆದಳೆಂದ ಡೇನಿರವದ್ಯು ಮಾರ್ಗದೊಳಿರ್ದ ಭವ್ಯಜನಂಗಳ ಸೀಲದ ಮಹಿಮೆಯ ಬಂಣಿಸಲು ಬಲ್ಲನಾವನೆಂದು ಮತ್ತಮಿಂತೆಂದರೂ ॥ ಶ್ರೀ ಶ್ರೀ.

ವಿಷಯ : ಸುದರುಶನ, ಕರಕಂಡು ಮುಂತಾದ ನೀತಿಬೋಧಕ ಕಥೆಗಳು.

ವಿಶೇಷ : ಇರುವ ಕಥೆಗಳು ಸಮಗ್ರವಾಗಿವೆ. ಪ್ರತಿ ಚೆನ್ನಾಗಿದೆ. ಬರವಣಿಗೆ ಸುಂದರವಾಗಿದೆ.

—ಎಂಪಿಎಂ

166

ಕೆ. ಬಿ. ೭೧೯/೨ | **ಸುಧಾಮಚರಿತೆ** | ಹಾಡು

೭" × ೪.೫" | ? | ?

೧೧ ಪುಟ | ೧೭ ಪಂಕ್ತಿ | ೧೫ ಅಕ್ಷರ

ಆದಿ : ಸುಧಾಮಚರಿತೆ ಬರೆಯುವದಕ್ಕೆ ಶುಭಮಸ್ತು ॥

ಶ್ರೀ ಪದ್ಮನಾಭನೆ ಪದ್ಮಸಖನೆ ಪದ್ಮಾಯತಾಕ್ಷನೆ ಪದ್ಮಭಸಿತನೆ ಪದ್ಮ ಪೋಲುವ ನಿಂನ ಪಾದಯುಗಳಂನ ಮುದದಿಂ ಪೂಜಿಪೆನೊ ಮುದದಿಂದ

ಮೆನ್ನ ವುಧಾರ ಮಾಡ್ಯೆ . . . . . . ಧಾರುಣಿವಳಗೆ ನಿನ್ನ ಸಖನಾದ
ಆ ಸುಧಾಮುನ ಕತೆಯಿಂ ಸೇರಿ ತೂಗಿ ರಚನ ಮೊರಿಸೊಲೊ....ಸು
ಚರಿತೆಯಾಗಿ × × × × ಶ್ರೀ ನರಶಿಂಹ್ಮನ ಸ್ತೋತ್ರವಂ ಮಾಡಿ
. . . . . . ಪೇಳುವುದೆಂತೆನೆ ॥

ಅಂತ್ಯ : ಸಿಂಹ ಶಾರ್ದೂಲಗಳೊ ಶ್ಯಾನೆ ಗರ್ಜಿಸಲು
. . . .
ಶಿಕಿತ್ತು ವಲ್ಲಿ ವೃಕ್ಷವಾಧಾರವಾಗಿ
ಮುಕುತ ನೀ ಕೇಳು ನಿಂತಿರಲಾಗಿ
ಆ ಪೊತ್ತಿಗಾಗುರಿಳಲ್ಲಲ್ಲಿ ಹುಡುಕಿ ಕೃಷ್ಣ ಸುಧಾಮುನೆನ್ನುತ ತೂಗೆ
× × × ×
ಚೆನ್ನುಗಳ ಬರಿಶಿ ಭಲಿವು ಬಿಡಿರಿಯೆಂದು ತಮ್ಮ

ವಿಷಯ : ಸುಧಾಮುನ ಚರಿತ್ರೆ.

ವಿಶೇಷ : ಅಸಮಗ್ರ. ಶಿಥಿಲಪ್ರತಿ. ಇದೇ ಕಟ್ಟಿನಲ್ಲಿ ಕೃಷ್ಣ ಚರಿತೆ, ಹರಿಭಕ್ತಿ ಸಾರ ಮತ್ತು ವೈದ್ಯಶಾಸ್ತ್ರ ಎಂಬ ಗ್ರಂಥಗಳಿವೆ.

—ವೈಸಿಬಿ

167

ಕೆ. ಎ. ೪೭೫/೩	**ಸುಭಾಷಿತ**	ಕಂದ
೧೦.೫" × ೯.೬"	?	?
೧೮–೨೦ ಪುಟ	೨೦ ಪಂಕ್ತಿ	೨೨ ಅಕ್ಷರ

ಆದಿ : ಶ್ರೀ ಮರುಳುಸಿದ್ಧೇಶ್ವರನ ಶ್ರೀ ಪಾದವೇ ಗತಿ.
ರುಜೆಯ ಪರಿದವನೆ ವೈದ್ಯಂ
ಗಜಗಮನಾದಿ ಮುರಿದ ಹ್ಯೊಲ ತಡದನೆ ವೀರಂ
ಭುಜಗಾಭರಣಂ ದೇವಂ
ಪ್ರಜೆಗಳ ಪಾಲಿಪನೆ ಅರಸು ಶ್ರೀ ವಿಶ್ವಪತೀ ॥ ೧ ॥

ಚಿಂತೆ ಬಡತನಕೆ ಸಲ್ಲದು
ಬೊಂತಿನ ಸತಿಸುತರ ನೆಚ್ಚಿಕೊಂಡಿರಸಲ್ಲದೂ
ಪಂತಿಯೊಳು ಭೇದ ಸಲ್ಲದು
ಸಂತೆಯೊಳೇಕಾಂತ ಸಲ್ಲ ಶ್ರೀ ವಿಶ್ವಪತೀ ॥ ೨ ॥

ಅಂತ್ಯ : ಕಂಡದನಾಡಲಿ ಸಲ್ಲದು
ದಿಂಡೆಯರ ಮನೆಯೊಳಗಿರಿಸಿಕೊಂಡಿರ ಸಲ್ಲದೂ
ಮುಂಡಿಗೆ ಕೂಡಲು ಸಲ್ಲದು
ಬಂಡಾಟದ ಬದುಕು ಸಲ್ಲ ಶ್ರೀ ವಿಶ್ವಪತೀ ॥ ೨೬ ॥
ಮಂಗಳ ಮಹಾಶ್ರೀ.

ವಿಷಯ : ನೀತಿಬೋಧೆ.

ವಿಶೇಷ : ಈ ಗ್ರಂಥದಲ್ಲಿ ೨೬ ಪದ್ಯಗಳಿವೆ. ಇದೇ ಪುಸಕ್ತದಲ್ಲಿ ಸಿದ್ಧೇಶ್ವರನ ತ್ರಿಪದಿ, ಸಿರಿಯಾಳ ಸೆಟ್ಟಿಯ ವಾರ್ಧಿಕ, ಹಾಡುಗಳು, ನಿಜಲಿಂಗ ಶತಕಗಳೆಂಬ ಇತರ ಕೃತಿಗಳಿವೆ.

—ಕೆಆರ್‌ಎಸ್

168

ಕೆ. ಎ. ೫೪೬/೪	ಸುಭಾಷಿತ	ಶ್ಲೋಕ, ಟೀಕು
೧೨.೩" × ೯.೮"	?	?
೫೩–೫೪ ಪುಟ	೨೪ ಪಂಕ್ತಿ	೩೩ ಅಕ್ಷರ

ಆದಿ : ಚಂದ್ರೇ ಲಾಂಛನತಾ ಹಿಮಂ ಹಿಮಗೀತಾ ಕ್ಷಾರಂ ಜಲೇ ಸಾಗರಂ
ಗ್ರಸ್ತಾ ಚಂದನ ಪಾದ ಪೇಷು ಫಣಿನಾ ಪದ್ಮೇಷು ವೈಕಂಟಕಂ
ಸ್ತ್ರೀ ರತ್ನೇಷು ಜರಾ ಕುಚೇಷು ಪತನಂ ವಿದ್ವತ್ಸು ದಾರಿದ್ರತಾ
ಸರ್ವಂ ರತ್ನಮುಪದ್ರವೇಷು ರಹಿತಂ ನಿರ್ದೋಷಮೇಕಂ ಯಶಃ ॥
ಟೀಕಾ॥ ಚಂದ್ರನಿಯಂದು ಲಾಂಛನಮು ದೋಷಮು,
ಹಿಮಗಿರಿಯಂದು ಮಂಚೀ ದೋಷಮು, ಸಮುದ್ರನಿಯಂದು
ಉಪ್ಪುನೀಳ್ಳೆ ದೋಷಮು, × × × × ಕೀರ್ತಿ....
ಕೀರ್ತಿಕಿ ದೋಷಂ ಲೇದೂ ॥ ೧ ॥

ಅಂತ್ಯ : ಟೀಕಾ॥ ಅಭ್ಯಾಗತರ ಮೇಲೆ ಉಪೇಕ್ಷೆ ಮಾಡಿದರೆ ಕಾರ್ಯಹಾನಿ, ಹಿರಿಯರ ಮೇಲೆ ಉಪೇಕ್ಷೆ ಮಾಡಲು ಕಾರ್ಯಹಾನಿ, ಅರಸರ ಸೇವೆಯಲ್ಲಿ ಉಪೇಕ್ಷೆ ಮಾಡಲು ಕಾರ್ಯಹಾನಿ, ಬೆಂಕಿ ಮೇಲೆ ಉಪೇಕ್ಷೆ ಮಾಡಲು ಕಾರ್ಯಹಾನಿ, × × × ಸೇವಕನ ಮೇಲೆ, ಗೃಹಚ್ಛಿದ್ರದ ಮೇಲೆ, ಸಾಲದ ಮೇಲೆ, ರೋಗದ ಮೇಲೆ, ಲೋಕ ವಾರ್ತೆಯ ಮೇಲೆ, ಇಂದ್ರಿಯಂಗಳ ಮೇಲೆ ಕ್ಷಣ ಮಾತ್ರ ಉಪೇಕ್ಷೆ ಮಾಡಿದರೆ ಕಾರ್ಯಹಾನಿಯಾಗುವುದು.

ಗತೌ ಬಹುತ್ಸರಂ ಕಾಲಂ
ಕಾಲಃ ಸ್ವಲ್ಪೋಪಿವರ್ತತೇ
ಕ್ಷಮ ಚಿತ್ತ ಸಮಾಧಾನಂ
ಬುಪತ್ತಿ ಜನರಂಜಿತಂ ॥ ಸಂಪೂರ್ಣಂ.

ವಿಷಯ : ನೀತಿಬೋಧೆ.

ವಿಶೇಷ : ಮೂರು ಶ್ಲೋಕಗಳ ಟೀಕು ಈ ಕೃತಿಯಲ್ಲಿದೆ. ಮೊದಲನೆಯ ಶ್ಲೋಕಕ್ಕೆ ತೆಲುಗು ಭಾಷೆಯಲ್ಲಿ ವಿವರಣೆ ಇದೆ. ಇದರ ಸಂಪ್ರತಿಯನ್ನು ಶ್ರೀ ಯು. ಲಕ್ಷ್ಮೀನಾರಾಯಣ ಆಚಾರ್ ಅವರು 3-11-52 ರಂದು ಮಾಡಿರುವಂತೆ ಅಂತ್ಯದಲ್ಲಿ ತಿಳಿಯುತ್ತದೆ. ಇದೇ ಪುಸ್ತಕದಲ್ಲಿ ಜಿನವಚನಾಮೃತ ಶರಧಿ, ವಿರೂಪಾಕ್ಷ ಸ್ತೋತ್ರ. ಮಲ್ಲೇಶ್ವರ ಸ್ತೋತ್ರಗಳೆಂಬ ಕೃತಿಗಳಿವೆ.

—ಕೆಆರ್‌ಎಸ್

169

ಕೆ. ಎ. ೫೬೬/೧	**ಸುಭಾಷಿತ (?)**	ವೃತ್ತ
೧೩.೧" × ೮"	?	?
೧-೯ ಪುಟ	೨೬ ಪಂಕ್ತಿ	೨೦ ಅಕ್ಷರ

ಆದಿ : . . . . ತಿ
ಮುನಿಸಿಂತೀ ಕಾಂಸೆಯಿಂತೀ ವೆಸನದೆಸಕವಿಂತೀ ವೃಥೋವ್ಯಾಹವಿಂತೀ ।
ತನುಮೋಹಂ ಸಾತ್ವಿಕಂ ಭಕ್ತನನಿವು ಪಿರಿದ....
. . . . ವರ್ಥೇಂದು ಮೌಳಿ ॥ ೪೦ ॥
ಮದದಿಂ ಮಾತ್ಸರ್ಯ ಮಾಮತ್ಸರದಿನೊದವುಗುಂ ದ್ವೇಷಮಾ
ದ್ವೇಷಕೋ । ಪದಗುರ್ಬುರ್ಬೆಳ್ಗುಮಾ ಕೋಪದಿ....
ಲರ್ಮುಮರ್ಥ್ವಯಿಸಂ ಪೆ । ರ್ಚಿದರಾಗಂಕಾಮ ಭೋಗಂಗುಣ
ಗಣಮದಜಿಂದೆಯ್ದುಹಂಕಾರಮುಂ ಪೊಂ ।
ದಿದ ಪುತ್ತಂ.... ಕೆರೆ ವಿಷುಮದೊಳೀಚಿತ್ತವರ್ಥೇಂದು ಮೌಳೀ ॥ ೪೧

ಅಂತ್ಯ : ಬೇಗಂ ಕೈಗೂಡಿ ಬರ್ಕುಂ ಶಿವರತಿಮತಯೋಗಾಮೃತಾಭ್ಯಾಸ...
ಯೋಗಾಭ್ಯಾಸಂ ತಪ್ರೋವೃತ್ತಿಯಿಂ ನಮ...ವೃತ್ತಿವೈರಾಗ್ಯದಿಂ ವೈ
ರಾಗಂ ಸಂಸಾರದೋಷಜ್ಞತೆಯಿನರಿವುತುತ್ಸಂಗದಿಂದಕ್ಕು ಮೆಂ . .
. . ೪ ಸತ್ಸಂಗದಿಂದಂ ನೆನಸೆನನುದಿನಂ ನಿಮ್ಮನತ್ಯಂತಶುದ್ಧಾ ॥ ೮೭

ನಾನಾ ದಾನೋಪವಾಸ ವ್ರತನಿಯಮ ತಪೋಯಜ್ಞ ಗಂಗಾದಿ ತೀರ್ಥ ಸ್ನಾನ....

ವಿಷಯ : ನೀತಿಬೋಧೆ.

ವಿಶೇಷ : ಅಸಮಗ್ರ. ಇದರಲ್ಲಿ ಅರ್ಧೇಂದುಮೌಳಿಶತಕ ೪೧-೫೩ ಮತ್ತು ಅತ್ಯಂತ ಶುದ್ಧ ಎನ್ನುವ ಅಂಕಿತದ ಪದ್ಯಗಳು ೫೪–೮೭ರವರೆಗಿವೆ. ಅಲ್ಲದೆ ಈ ಪುಸ್ತಕದಲ್ಲಿ ಸುಭಾಷಿತ, ಕಾಲಜ್ಞಾನ ವೊದಲಾದ ಕೃತಿಗಳಿವೆ.

—ಜಿಜಿಎಂ

170

ಕೆ. ೮೦೩	**ಸುಭಾಷಿತಗಳು (ಸಟೀಕು)**	ಗದ್ಯ
೧೨.೫" × ೧.೨"	?	?
೧–೧೨೩ ಪತ್ರ	೭ ಪಂಕ್ತಿ	೫೬ ಅಕ್ಷರ

ಆದಿ : ಶ್ರೀ ಗುರುಭ್ಯೋ ನಮಃ । ಭರ್ತೃಹರಿಶ್ಲೋಕ ॥ ದಿಕ್ಕಾಲಾದ್ಯನವ ಛಿನ್ನಾನಂತ ಚಿನ್ಮಾತ್ರ ಮೂರ್ತಯೇ । ಸ್ವಾನುಭೂತ್ಯೇಕ ಮಾನಾಯಾ ನಮಶ್ಯಾಂತಾ ತೇಜಸಿ ॥ ದಿಕ್ಕಾಲಾದ್ಯನವಛಿನ್ನಾನಂತ ಚಿನ್ಮಾತ್ರ ಮೂರ್ತಯೇ । ದಿಕ್ । ದಶ ದಿಕ್ಕುಗಳಿಂದ । ಕಾಲ । ತ್ರಿಕಾಲಾಗಳಿಂದ । ಆದಿ । ಇವು ವೊದಲಾದಂಥ ವತಿಯಿಂದ । ಅನವಛಿನ್ನ । ಕೂಡದೆ ಯಿದ್ದಂಥಾ । ಅನಂತ । ಅಪರಿಮಿತವಾಗಿದ್ದಂಥ । ಚಿನ್ಮಾತ್ರ । ಚಿನ್ಮಾತ್ರವೆನೆ । ಮೂರ್ತಯೇ । ಆ ಕ್ರತಿಯುಳ್ಳಂಥಾ । ಸ್ವಾನು ಭೂತ್ಯೈಕಮಾನಾಯ । ಸ್ವ ತನ್ನ ಅನುಭೂತಿ । ಅನುಭವವೇನೆ । ಏಕ । ಮುಖ್ಯವಾಗಿದ್ದಂಥ । ಮಾನಾಯ । ಪ್ರಮಾಣರೂಪವಾಗಿದ್ದಂಥ । ಶಾಂತಾಯ । ಶಾಂತಸ್ವರೂಪವಾಗಿದ್ದಂಥ । ತೇಜಸೆ । ತೇಜಸ್ಸಿಗೋಸ್ಕರ । ನಮಃ । ನಮಸ್ಕಾರವು । ॥ ೧ ॥

ಅಂತ್ಯ : ... ಹುಟ್ಟಿದಂಥ । ವಿಕಲ್ಪ । ಸಂಶಯವಿಲ್ಲದಂಥ । ಜಲ್ಪ । ಮಾತು ಆಡುತ್ತಿದಂಥ । ಮುಖರೈಃ । ಬಾಯಿಬಡುಕರಾದಂಥ । ಜನೈಃ । ಜನರಿಂದ । ಆ ಭಾವ . . .. ವೃದ್ಧಾರ್ಥ । ಕೋಪಿಷ್ಟರಲ್ಲದವೆನೆ । ಪಥಿ । ಮಾರ್ಗದಲ್ಲಿ । ತುಷ್ಟಮನಸಃ । ಸಂತುಷ್ಟವಾದ ಮನಸ್ಸುಳ್ಳಂಥವರುಗಳಾಗಿ । ಸ್ವಯಂ । ತಮಗೆ ತಾವೇನೆ . . . . .

ವಿಷಯ : ನೀತಿಬೋಧೆ.

ವಿಶೇಷ : ಗ್ರಂಥ ಅಸಮಗ್ರ. ಸಂಸ್ಕೃತ ಭಾಷೆಯಲ್ಲಿರುವ ಸುಭಾಷಿತ ಶ್ಲೋಕಗಳಿಗೆ ಕನ್ನಡ ಟೀಕು ೧೧೬ನೆಯ ಪತ್ರದಿಂದ ಮುಂದಕ್ಕೆ ಇರುವ ಪತ್ರಗಳ ಬಲಭಾಗದ ಅಂತ್ಯದಲ್ಲಿ ಸ್ವಲ್ಪ ಸ್ವಲ್ಪ ಭಾಗ ತ್ರುಟಿತವಾಗಿವೆ.

—ಎಸ್‌ಬಿ

171

ಕೆ. ೧೦೦೨/೫	**ಸುಭಾಷಿತ ಗ್ರಂಥ**	ಶ್ಲೋಕ, ಟೀಕು
೧೨.೬" × ೨.೪"	?	?
೭೨–೮೧ ಪತ್ರ	೯ ಪಂಕ್ತಿ	೫೮ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ॥ ಸುಭಾಷಿತ ಗ್ರಂಥ ಬರಉದಕ್ಕೆ ಶುಭಮಸ್ತು । ಗ್ರಂಥ

ಪ್ರಣಂಮ್ಯಶಿರಸಾದೇವಂ ತ್ರೈಲೋಕ್ಯಾಧಿಪತಿ ಪ್ರಭೋ
ನಾನಾಶಾಸ್ತ್ರಧೃತಂವಕ್ಷೆ ನೀತಿಶಾಸ್ತ್ರಸಮುಚ್ಚಯೇತ್ ॥

ಟೀಕು ॥ ತ್ರೈಲೋಕ್ಯಕ್ಕೆ ಅಧಿಪತಿಯಾದಂಥ ದೇವಂಗೆ ನಮಸ್ಕಾರವಂ ಮಾಡಿ ಅನೇಕ ಶಾಸ್ತ್ರದೊಳಗುಳ್ಳ ಸಾರವಂ ತೆಗದು ನೀತಿಶಾಸ್ತ್ರಮಂ ಪೇಳ್ವೆನೂ ॥ ೧

ಅಂತ್ಯ : ಶಾರ್ವರಿದೀಪಕೋ ಚಂದ್ರಪ್ರಭಾತೇರವಿದೀಪಕಂ
ತ್ರೈಲೋಕ್ಯದೀಪಕೋ ಧರ್ಮಂ ಸುಪುತ್ರಃ ಕುಲದೀಪಕಂ ॥ ೯೦

ಟೀಕು : ಯಿರುಳಿಗೆ ಚಂದ್ರನೆ ಬೆಳಕು ಹಗಲಿಗೆ ಸೂರ್ಯನೆ ಬೆಳಕು ಮೂರುಲೋಕಕ್ಕೆ ಧರ್ಮಸ್ತನೆ ಬೆಳಕು ಕುಲಕ್ಕೆ ಸುಪುತ್ರನೆ ಬೆಳಕೆಂದರಿವುದು ॥ ೯೦ ॥ ಗ್ರಂಥ.

ವಿಷಯ : ನೀತಿ ಪ್ರತಿಪಾದನೆ.

ವಿಶೇಷ : ೯೦ ಶ್ಲೋಕಗಳಿಗೆ ಅರ್ಥ ಬರೆದ ಮೇಲೆ ಬೇರೆಯ ೫ ಶ್ಲೋಕಗಳಿವೆ. ಇದೇ ಕಟ್ಟಿನಲ್ಲಿ ಮಲುಹಣ ಸ್ತೋತ್ರ, ಮಹಿಮ್ನ ಸ್ತೋತ್ರ, ನಾನಾರ್ಥ ರತ್ನಾಕರ, ಧನಂಜಯ ನಿಘಂಟು, ಸುಭಾಷಿತ ಗ್ರಂಥ ಮತ್ತು ಅಕ್ಷರಾಂಕನ ಗದ್ಯಗಳಿವೆ.

—ಜಿಜಿಎಂ

172

ಕೆ. ೮೧೫ ಸುಭಾಷಿತ ಸಭಾರತ್ನಂ ಶ್ಲೋಕ, ಟೀಕು

೬.೪" × ೧.೩" ? ?

೧–೫೩ ಪತ್ರ ೬ ಪಂಕ್ತಿ ೨೪ ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಮಃ ... ಭದ್ರೇಶ್ವರಸ್ವಾಮಿಯವರ ಪಾದ ಪದ್ಮಂಗಳೆ ಗತೀ. ಶೋಭಕೃತ ಸಂವತ್ಸರದ ಶ್ರಾವಣ ಬ ೮ ಯಲು ಶುಭಾಷಿತ ಗ್ರಂಥ ಬರವುದಕ್ಕೆ ನಿರ್ವಿಘ್ನಮಸ್ತು ॥ ಶುಭಾಷಿತ ಸಭಾ ರತ್ನಂ ॥

ಅಗ್ನಾನಂ ವಿಶನಾಶನಂ । ಪುರಾಣೆ ಭಾರತೇಕಾವ್ಯಂಯತ್ಸರಂ । ತ .... ॥ ಟೀಕೂ ॥ ೧ ॥ ಶುಭಾಷಿತವೆಂಬ ನೀತಿ ಗ್ರಂಥವು ಸಭಾ ಮದ್ಯಕ್ಕೆ ರತ್ನವೆಂಬಂತ್ತಿಹುದೂ ॥ ಅಗ್ನಾನವೆಂಬ ವಿಶವಂನ್ನು ನಾಶ ನವಂ ಮಾಡುವದು । ಯಿದು ಪುರಾಣ । ಭಾರತದಲ್ಲಿ ತೆಗೆದು ಲಿಂಗ ...ದ ಸಾರವೆಂದರಿವದೂ ॥ ೨ ॥

ಅಂತ್ಯ : ಪವ . . ತಗಳು ದೂರದಿಂದ ನೋಡಿದರೆ ರಂಮ್ಯೆವಾಗಿ ಯಿರುವದೂ। ವೇಶ್ಯಾ ಸ್ತ್ರೀಯಾದವಳ ಮುಖ ರಂಮ್ಯುವಾಗಿ ಯಿರುವದೂ । ರಣಾ ಗ್ರದ ಜಗಳದ ಮಾತು ಕೇಳುವದಕ್ಕೆ ರಂಮ್ಯುವಾಗಿರುವದೆಂದರಿವುದೂ ॥ ೨೦೨ ॥

ಶನಿಃ ಕಂದಾ ಶನಿಃ ಪ್ಪರಥಾ । ಶನಿಃ ಪರ್ವತಾ ತಸ್ಮಕೆ ।
ಶನಿರ್ವಿಧ್ಯ . . ಶನಿರ್ವಿತಾ । ಪಂಚೈತಾನಿ ಶನಿಃ....

....ದೂ ॥ ಪತನ ವನದಸುವದೂ ॥ ಪರ್ವ್ವ . . . ॥ ವಿಧ್ಯಾ ಕಲಿವದೂ ॥ ಹಣವಾ ಸಂಪಾದಿಸುವದೂ ॥ ಯಿವು ೫ ಬರಿದೂ ॥ ೨೦೪ ॥

ಪೌರ್ನಮಾಸ್ಯಂ . . ರುಹಂತಿ ಶಿಷ್ಯಂ ಹಂತ್ತಿ ಚತುರ್ದಶೀ ।
ಅಮಯವು . . ಯೋರ್ವಂತ್ತೆ । ಪ್ರತಿಪಾಠ ವಾಶನಂ ॥
ಟೀಕೂ ॥ ೨೦೫ ॥ ಪೌರ್ನೇಮಿ ದಿವಸ ವ್ಪೋದಿದರೆ.

ವಿಷಯ : ನೀತಿಬೋಧೆ.

ವಿಶೇಷ : ಅಸಮಗ್ರ. ಪತ್ರಗಳ ಅಂಚುಗಳು ಹಲವು ಕಡೆಗಳಲ್ಲಿ ಮುರಿದು

ಹೋಗಿವೆ. ೫೨ನೆಯ ಪತ್ರವು ಲುಪ್ತವಾಗಿದೆ. ಪ್ರತಿಮಾಡಿದವನ ವಿವರ ತಿಳಿಯುವುದಿಲ್ಲ.

—ಕೆಆರ್‌ಎಸ್

173

ಕೆ.ಎ. ೫೧೨	**ಸುಯೋಗ ಚರಿತ್ರೆ (ವೈರಾಗ್ಯ ಪುರಾಣ)**	ವಾರ್ಧಕಷಟ್ಪದಿ
೧೦.೪" × ೮.೪"	ಗುರುಪ್ರಸಾದ	ಸು. ೧೬೫೦
೧–೨೭೬ ಪುಟ	೧೫ ಪಂಕ್ತಿ	೨೧ ಅಕ್ಷರ

ಆದಿ: ಸುಯೋಗ ಚರಿತ್ರ ಪ್ರಾರಂಭಾ । ಶುಭಮಸ್ತು. × × ×
ಸೂಚನೆ ॥
ಧರ್ಮಸ್ವರೂಪ ನಿಜಧರ್ಮನೆ ಧರಿತ್ರಿಯಲಿ
ಧರ್ಮರಾಜೆನಿಸಿ ಚಲಿಸದೆ ಧರ್ಮಪಾಂಡವರ
ಧರ್ಮಭಾರತಪರ್ವ ಧರ್ಮವ್ವನಾಶ್ವಕೇಳ್ಧರ್ಮ ತಪವನಕೆ ನಡದಾ
ಪದನೂ ॥ ಆಲಿಪುದು ಮಹಾಭಾರತದ ಕಥೆಯ ಪಾಂಡುವರ
ಮೇಲಾದ ಸಂಗತಿಯ ಸುಯೊಗನಿಗೆ ವಲಿದು
ಲೋಲಭಾರದ್ವಾಜ ಸುಲಭದಲಿ ತಿಳುಪಿಸಿದ ಮೂಲವನು ಸಾರಸದಲಿ
. . . . ಮಂತ್ರಚಿತ್ರಬೆಂಚಲ ಹೂರಗೊಡದೆಕ
ಸಲುವೆಣುಬುಧಿಯಲಿ ಫಲವ ಪಡದರೆ ನಿಮಗೆ
ಜಲಜಾಕ್ಷಕೈವಲ್ಯ ಕುಡುವ ಜಂಜಡ ಹರಿಸಿ ಪಾಲಿಸುವನೆಂದ ಸೂತಾ ॥ ೧ ॥

ಅಂತ್ಯ: ಜನನರಕ್ಷಕ ಜಾನ್ಹುಃವಿಯ ಪಡನ ಜಗಭರಿತ
ಸನಕಾದಿವಂದ್ಯಸಾಕ್ಷಾತ ಭೂವೈಕುಂಠ
ಯೆನಿಪ ಶೇಷಾಚಲ ನಿವಾಸ ಮೂಡಲಗಿರಿಯದಾ . . . . ರಖಿಲಾಸನೆನಿಸಿ
ತಾನಂದವರಿಗೆ ಮಿಗೆ ವಲಿದು ಬಯಿಕಿಯ ಸಲಿಸಿ
ಭೂನಾಥಸೂಯೊಗಚರಿತ ವಿಸ್ತಾರವನು
ನ್ಯುನ ಮಾಡದೆ ಲಕ್ಷ್ಮಿವೆಂಕಟೆಶನೆ ಸಾಗಿಸಿದನನ ಬಂಣ್ಣಿಸುವೆನೂ ॥ ೬೬ ॥

ಆನೇನು ಬುದ್ಧಿನರಿಕವನಲ್ಲನೆಂಬುದಕೆ
ಸೀನೆ ವ್ಯಾಪಿಸಿ ಮುಖದಿ ವೈರಾಗ್ಯಸಿರೊಮಣಿ
ಪಾನವಂಮ್ರುತದಂತೆ ಮಂಗಳತರಂಗದಲಿ ಲೇಸಾಗಿ ಕಡೆಗಾಣಿಸಿ

ದೀನರಿಗೆ ಬಂಧು ಅಭಿಮಾನಿ ನಿಂನ್ಮದುದಾಸ
ಹೀನ ಗುಣದಲೆ ಸಲಹೊ ಮುದ್ಗಲಸುತನನೊಡ
ಲಾನು ಬೆಡುವದಿಲ್ಲ ನಾಮನಾಲಿಗೆಯಿತ್ತು ಪೊರೆಯೊ ಲಕ್ಷ್ಮಿ
ವೆಂಕಟೇಶಾ ॥ ೬೭ ॥

ಯಿತಿ ಶ್ರೀವೈರಾಗ್ಯೆ ಪುರಾಣೆ ಸುತಶೌನಿಕಸಂವಾದೆ ಶ್ರೀಮದ್ಗುರು ಪ್ರಸಾದ ವಿರಚಿತೆ ಸೂಯೊಗಸುಚರಿತ್ರೆ ಸಂಧಿ ೧೧ಕಂ ಪದನೂ ೫೫೫ಕಂ ಮಂಗಳಂ ಮಹಾ ಶ್ರೀ. ಸಂಪೂರ್ಣ.

ವಿಷಯ: ಯೌವನಾಶ್ವ ಪ್ರಭಾವತಿ ಇವರ ಮಗನಾದ ಸುಯೋಗನಿಗೆ ಭಾರದ್ವಾಜನು ವೈರಾಗ್ಯಸ್ಥಿತಿಯನ್ನು ಬೋಧಿಸಿದ ಕಥೆ.

ವಿಶೇಷ: 'ಇದಕ್ಕೆ ವೈರಾಗ್ಯ ಪುರಾಣ ಎಂಬ ಹೆಸರೂ ಉಂಟು' ಎಂದು ಕವಿ ಚರಿತೆಕಾರರು ಹೇಳುತ್ತಾರೆ. ಈ ಪ್ರತಿಯನ್ನು ಮದರಾಸು ಪ್ರಾಚ್ಯ ಕೋಶಾಗಾರದಲ್ಲಿ ಶ್ರೀ. ಯು. ಶಿವರಾವ್ ಅವರು 1891ರಲ್ಲಿ ಪ್ರತಿ ಮಾಡಿದ್ದಾರೆ. ಆದಿಯಲ್ಲಿ ನಾಲ್ಕನೆಯ ಪದ್ಯದ ನಂತರ ಸ್ವಲ್ಪಭಾಗ ಲುಪ್ತವಾಗಿದೆ. ೧೦೯-೧೧೨ ಪತ್ರಗಳು ಖಾಲಿ ಇವೆ.

—ಬಿಎಸ್ಎಸ್

174

ಕೆ. ೧೦೯೧	**ಸುವಿಚಾರ ಚರಿತೆ**	ಸಾಂಗತ್ಯ
೧೪.೯″ × ೧.೫″	ನೇಮಣ್ಣ	ಸು. ೧೫೦೦
೧೦೭–೧೮೧ ಪತ್ರ	೬ ಪಂಕ್ತಿ	೬೪ ಅಕ್ಷರ

ಆದಿ: ಮನ್ಮಥ ಸಂವತ್ಸರ ಮಾಘ ಶು ೫ ಗುರುವಾರ ಸುವ್ವಿಚಾರ ಪ್ರಾರಂಭ ॥
ಶ್ರೇಣಿಕ ದೇವಿ ಪಾದವೇ ಗತಿ ॥
ಸುರಭಿ ತರಂಗದಿವಾಕರ ಶಶಿಕೋಟಿ
ಕಿರಣ ಸ್ವರೂಪ ಸ್ವಭಾ . . .
. . . . . ನೇಮಿಜಿನೇಶನ
ಚರಣಕಮಲಕೆರಗುವೆ ॥ ೧ ॥

ಅಂತ್ಯ: ಶ್ರೀಮದುಜ್ಯಂತ ಗಿರಿಯೊಳ....
ನೇಮಿಜಿನರ ದಿವ್ಯಾಂಗ್ರಿಗಳಾ
ನಾಮದ ಬ್ರಂಹ್ಮಚಾರಿಯು ಪೇಳ್ದ ಚರಿತೆಯಿಂ
ದೀ ಮನುಜರಿಗೆ ಸಂತೋಷಾ ॥ ೮೯ ॥

× × × ×
ಜಿನರುಗಳನು ಸರ್ವಸಿದ್ಧರುಗಳನು ಸು
ಜನರ ಬೋಧಿಸುವಚಾಯ್ರ್ಯರನೂ
ಸುನಯದುಪಾಧ್ಯಾಯರನು ಸಾಧುಗ
ಳನೆಲ್ಲ ಸ್ಮರಿಯಿಸುವುದು ಸಜ್ಜ....

ಅಂತು ಸಂಧಿ ೧೦ ಕಂ ಪದನೂ ಮಂಗಳ ಮಹಾ ಶ್ರೀ.

ವಿಷಯ : ಜೈನಧರ್ಮ ಪ್ರತಿಪಾದನೆ.

ವಿಶೇಷ : ಸಮಗ್ರ. ಆದಿಯ ಹಾಗೂ ಕೊನೆಯ ಗರಿಗಳು ಸ್ವಲ್ಪಮಟ್ಟಿಗೆ ತ್ರುಟಿತವಾಗಿವೆ. ಬರಹ ಚೆನ್ನಾಗಿದೆ.

—ಕೆಆರ್‌ಎಸ್

175

ಕೆ. ೧೩೮೮	**ಸುವಿಚಾರ ಚರಿತೆ**	ಸಾಂಗತ್ಯ
೯.೭" × ೧.೫"	ನೇಮಣ್ಣ	ಸು. ೧೫೦೦
೧–೧೦೫ ಪತ್ರ	೭ ಪಂಕ್ತಿ	೩೯ ಅಕ್ಷರ

ಆದಿ : ಶ್ರೀ ನೇಮಿಚಂದ್ರಾಯ ನಮಃ ॥ ಸುವಿಚಾರ ಚರಿತೆ ಬರೆವುದಕ್ಕೆ ನಿರ್ವಿಘ್ನಮಸ್ತು ॥
ಸುರಭಿ ತರಂಗ ದಿವಾಕರ ಸಸಿಕೋಟಿ
ಕಿರಣ ಸ್ವರೂಪ ಸ್ವಭಾವಾ
ವರಬೋಧಮಯನಾದ ನೇಮಿಜಿನೇಶನ
ಚರಣಕಮಲಕೆರಗುವೆನೂ ॥ ೧ ॥

ಅಂತ್ಯ : ಜಿನಗುರುಗಳನು ಸರ್ವಸಿದ್ಧರುಗಳನು ಸು
ಜನರ ಬೋಧಿಸುವಾಚಾರ್ಯರನೂ
ಸುನಯದುಪಾಧ್ಯಾಯರನು ಸಾಧುಗಳನೆಲ್ಲ
ರನು ಸ್ಮರಿಸುವುದು ಸಜ್ಜನರೂ ॥ ೧೦೨

ಅಂತು ಸಂಧಿ ೧೦ಕ್ಕಂ ಪದನು ೧೧೩ಕ್ಕಂ ಮಂಗಳ ಮಹಾ ಶ್ರೀ ಶ್ರೀ ವೀತರಾಗಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥ ಮೂಲೋತ್ತರ ಗುಣಾಢ್ಯಾಯ ಸರ್ವಸ್ಮೈಮುನಯೆ ನಮಃ ॥ ಭಧ್ರಂ ಭೂಯಾದ್ವ ರ್ದ್ಧಣಂ ಜಿನಶಾಸನಂ ॥ ಸುವಿಚಾರ ಚರಿತಂ ಸಮಾಪ್ತಂ ॥ × × ×

ವಿಷಯ : ಜೈನಧರ್ಮದ ತತ್ತ್ವಗಳು.

ವಿಶೇಷ : ಸ್ಫುಟಾಕ್ಷರ. ಉತ್ತಮ ಪ್ರತಿ. ಪ್ರತಿಯ ಕೊನೆಯಲ್ಲಿ ವಿಷಯ ಸೂಚಿ ಕೊಟ್ಟಿದೆ.

—ವೈಸಿಬಿ

176

ಕೆ. ೧೫೨೫ ಸೂಕ್ತಿ ಮುಕ್ತಾವಳಿ ಶ್ಲೋಕ, ಟೀಕು

೧೦.೫″ × ೨″ ವಿಮಲಸೂರಿ ?

೧–೫೯ ಪತ್ರ ೭ ಪಂಕ್ತಿ ೩೨ ಅಕ್ಷರ

ಆದಿ : ಶ್ರೀ ಆದಿನಾಥಾಯ ನಮಃ । ನಮೋ ಪರಮಾತ್ಮನೆ ನಮೋನೇ ಕಾಂತಾಯ ಶಾಂತಯೆ ॥ ಶ್ರೀ ಶ್ರೀ ॥

ಸಿಂದೂರ ಪ್ರಕರಸ್ತಪಃಕರಿಶಿರಃ ಕ್ರೋಡೆ ಕಷಾಯಯದು ವಿದಾವಾರ್ಚ್ಚಿರ್ನ್ನಿರ್ಚಯಃ ಫ್ರಬೋಧ ದಿವಸ ಪ್ರಾರಂಭ ಸೂರ್ಯೋದಯಃ ॥

ಅಂತ್ಯ : ಅಜಿತ ದೇವಾಚಾರ್ಯರ್ತಪ ಚಕ್ರವರ್ತ್ತಿಯ ಪಟೋದ್ಘಯಾದ್ರಿದ್ಯುಮಣಿ ಪಟ್ಟವೆಂಬ ವುದಯ ಪರ್ವತದೊಳು । ಸೂರ್ಯನೆನಿಸಿದ್ದರ । ವಿಜಯ ಸಿಂಹಾಚಾರ್ಯರ ಪಾದಾರವಿಂದ । ವಿಜಯಸಿಂಹಾಚಾರ್ಯ್ಯರ ಪದಕಮುಲದೊಳು । ಯಃ ಆವನಾನೊರ್ವ್ವಂ । ಮಧುಕರ ಸಮತಾಂ ತುಂಬಿಯೊಳು ಸಮಾನತೆಯುಂ × × × ಸೋಮಪ್ರಭನೆಂಬ । ಮುನಿಪರಾಜ್ಞಾ । ಮುನಿರಾಜನಿಂದಂ । ಯಿಯಂ । ಸೂಕ್ತಿಮುಕ್ತಾವಲಿಯೆಂಬ ಪೆಸರನುಳ್ಳ ॥ ಗ್ರಂಥವು ರಚನೆ ಮಾಡಲ್ಪಟ್ಟುದು ॥ ಲ ॥ ಭದ್ರಂ ಭೂಯಾತ್ । ವರ್ದ್ಧತಾಂ ಜಿನಶಾಸನಂ ॥ ಲ ॥ ಶ್ರೀ ॥

ವಿಷಯ : ಜೈನತತ್ತ್ವ.

ವಿಶೇಷ : ಬರವಣಿಗೆ ಸುಂದರವಾಗಿದೆ. ಗ್ರಂಥ ಸಮಗ್ರ. ಮಧ್ಯದಲ್ಲಿ ಕೆಲವು ಗರಿಗಳು ತ್ರುಟಿತವಾಗಿವೆ.

—ಎಂಪಿಎಂ

177

ಕೆ. ೮೨೧ **ಸೂಪಶಾಸ್ತ್ರ** ವಾರ್ಧಕಷಟ್ಪದಿ

೧೧.೧″ × ೨.೧″ ಮಂಗರಸ ೧೫೦೮

೧-೫೦ ಪತ್ರ ೯ ಪಂಕ್ತಿ ೬೪ ಅಕ್ಷರ

ಆದಿ : ಶ್ರೀ ಜ್ಯೋತಿರ್ಮಹೇಶ್ವರಾಯನಮಃ ||
. . . ಯಲಂಪಟತ್ವಮಳಿಯಲ್ಕಾನಂದವೆತ್ತಿರ್ದ
ಪಿಂಗಳವಾಥ್ಯಸ್ಥಿತಮಾದ ತತ್ವವಿಧಿಯಿಂ ಮಾಯಾ ಪ್ರಪಂಚಾದಿ
ಕಂಗಳಗೆಲ್ಲಿದ್ದುರ್ಮನನ್ಯ . . . ಳ್ಪಿಂ ಪಾಗಲೊಪ್ಪಿರ್ದ
ಮಂಗಳ ಕಾಶ್ಮೀರದೆ ಮಲ್ಲಿಕಾರ್ಜುನ ಪರಾಬ್ಜಂ ಮಾಡುಗಿಷ್ಟಾರ್ಥ
ಮಂ ||

ಅಂತ್ಯ : ಬಟ್ಟ ಬದಣೆಯ ಕಾಯ ಸುಗಿದು ತಿಳಿದುಪ್ಪವ
ಬಿಟ್ಟು ವುಕ್ಕರಿಸಿ ಮತ್ತೆ ಆ ಕಾಯ
ತೊಟ್ಟು ಬೀಳದ ತೆರದಿ ಶತ ಛಿದ್ರವಂ ಮಾಡಿ ಮತ್ತತಿ ಸಂಭಾರವ
ಪೊಟ್ಟಣಿಸಿ ತುಂಬಿ ತಿಳಿಂದುಪ್ಪಮಂ
ಬಿಟ್ಟು ಪೊಡಣಿಗೆಯಂ ಕೊಡೆ ತುಪ್ಪಗಾಯಿಯಾಯಿದ
ಕಟ್ಟಳೆಯೊಳಗೆ ವಗ್ಘರಿಸೆ ಬದಣೆಯ ಹೆಸರಾಯಿತು ||
ಹಲಸಿನ ಕಾಯಂ ನೀರ ಹೊಯ್ದು ಬೇಯಿಸಿ
ಮುಳಂ ಕೆತ್ತಿ ಹಾಕಿ ವಗ್ಘರಿಸಿದವಳಗಣ ದಿಂಡಂ ತೆಗೆದು
ಹುಳಿ ನೀರಿಂ ತೊಳೆದು ಹಾಲು ನೀರಿಂಗು ನೀರುಳ್ಳಿ ಕಾರ ಗೆಣಸುಕರಿ...

ವಿಷಯ : ಅಡಿಗೆ ಮಾಡುವ ವಿಧಾನ.

ವಿಶೇಷ : ಇರುವಷ್ಟು ಭಾಗ ಸುಭದ್ರವಾಗಿದೆ. ಅಕ್ಷರವು ಚೆನ್ನಾಗಿದೆ.

—ಕೆಆರ್‌ಎಸ್

178

ಕೆ. ೬೫೧ **ಸೃಷ್ಟಿಯ ವಚನ** ವಚನ

೧೦″ × ೨″ ಮಹಾದೇವಿಯಕ್ಕ ?

೧-೨೧ ಪತ್ರ ೯ ಪಂಕ್ತಿ ౩೪ ಅಕ್ಷರ

ಆದಿ : ಶ್ರೀ ಅಕ್ಕಗಳ ಸೃಷ್ಟಿಯ ವಚನ । ಆದಿ ಅನಾದಿ ನಿತ್ಯಾನಿತ್ಯವ
ತಿಳಿಯಲಱಿಯದೆ ದಾಯಕ್ಕೆ ಪರಬ್ರಹ್ಮವ ನುಡಿವ ವಾಯು ಪ್ರಾಣಿ

ಗಳವರೆತ್ತ ಬಲ್ಲರೋ ಆ ಪರಬ್ರಹ್ಮದ ನಿಜದ ನಿಲವೆಂತೆಂದೊಡೆ ಆದಿಯೆ ದೇಹ ಅನಾದಿಯೆ ನಿರ್ದೇಹ ಆದಿಯೆ ಸಕಲ ಅನಾದಿಯೆ ನಿಃಕಲ

ಅಂತ್ಯ : ಆ ಯಿನ್ನೂಱ ಹದಿನಾಱು ವಿಶ್ರಪಿಂಡಾಂಡದಲ್ಲಿ ಪರಿಪೂರ್ಣವಾಗಿ ಬೆಳಗಿ ತೋಱುತೆಂಬುದಂ ಕಂಡು ಕಡೆಗೆ ಸೂಸಿ ಅಱುದರಳ್ದು ಬೆಱಗು ನಿಬ್ಬೆಱಗಾಗಿ ಪಿಂಡಂಡದಲ್ಲಿ ತೋಱುವ ಪರಿಪೂರ್ಣ ಪ್ರಭೆಯನು ಆಯಿ .... (ಗ್ರಂಥ ಅಪೂರ್ಣ)

ವಿಷಯ : ಅಕ್ಕಮಹಾದೇವಿ, ಅಲ್ಲಮಪ್ರಭು, ಚೆನ್ನಬಸವಣ್ಣ ಮುಂತಾದ ಶಿವ ಶರಣರ ವಚನಗಳ ವ್ಯಾಖ್ಯಾನ ರೂಪದ ಪ್ರಸ್ತಾಪ.

ವಿಶೇಷ : ಅಸಮಗ್ರ. ಗ್ರಂಥದ ಆದಿಯಲ್ಲಿ ಪಂಚೀಕರಣದ ಎರಡು ಓಲೆಗಳು ಸೇರಿಕೊಂಡಿವೆ. ಒಂದು ಓಲೆಯ ಕೊನೆಯಲ್ಲಿ 'ಪಂಚೀಕರಣ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ' ಎಂದಿದೆ.

—ಶ್ರೀಸಂತ

179

ಕೆ. ೬೬೦/೩	**ಸೃಷ್ಟಿಯ ವಚನ**	ವಚನ, ಟೀಕು
೧೯.೩" × ೨.೩"	ಮಹಾದೇವಿಯಕ್ಕ	ಸು. ೧೧೬೦
೩೦–೩೩ ಪತ್ರ	೧೨ ಪಂಕ್ತಿ	೧೦೫ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ। ಅಕ್ಕಗಳು ನಿರೂಪಿಸಿದ ಶ್ರುಷ್ಟಿಯ ವಚನ। ಆದಿ ಅನಾದಿ ನಿತ್ತ್ಯಾನಿತ್ತ್ಯವ ತಿಳಿಯಲರಿಯದೆ॥ ಟ್ಕೊ॥ ಎಂದರೆ ದೇಹ। ಅನಾದಿ ಯೆಂದರೆ ಆತ್ಮನು। ನಿತ್ತ್ಯ ಆ ಯರಡರೊಳಗೆ ಆತ್ಮನೆ ನಿತ್ಯ। ಅನಿತ್ತ್ಯವ ತಿಳಿಯಲರಿಯದೆ। ದೇಹವೆ ಅನಿತ್ತ್ಯಸ್ವರೂಪವೆಂದರಿದು ಶ್ರೀಗುರೂಗವಸ್ತೆಯ ಮಾಡಿ ಗುರು ಕರುಣಮಂ ಪಡೆದು। ದೇಹಾತ್ಮರಲ್ಲಿ ಯಿಷ್ಟ ಪ್ರಾಣಲಿಂಗವ ಸಂಬಂಧವ ಮಾಡಿಕೊಂಡು। ಜ್ಞಾನಕ್ರಿಯಿಂದೆ ಆಚರಿಸಲರಿಯದೆ। ವಾಯಕ್ಕೆ ಪರಬ್ರಂಹ್ಮವ ನುಡಿವ ವಾಯುಪ್ರಾಣಿಗಳವರೆತ್ತ ಬಲ್ಲಿರೊ। ಆ ಪರ ಬ್ರಹ್ಮದ ನಿಜದನಿಲವ। ವಾಯಕ್ಕೆ ಬರಿಯ ಅರಿವಿನಿಂದೆ। ಪರ ಬ್ರಂಹ್ಮವ ನುಡಿವ। ನಿರವಯ ಪರಬ್ರಂಹವನೆ। ಕುರುಹಿಟ್ಟು। ಅಹಂ ಬ್ರಂಹ್ಮವೆಂದು ನುಡಿವ। ವಾಯಪ್ರಾಣಿಗಳು। ಮಿತ್ತ್ಯಜೀವರುಗಳು। ಅವರು ಆ ವಾಗದ್ವೈತಿಗಳು ಯತ್ತ ಬಲ್ಲಿರೋ॥ ಆ ಪರಬ್ರಂಹ್ಮದ ನಿಜದ

ನಿಜದ ನಿಲವ । ಅನಿಃಕಲಪರಬ್ರಂಹ್ಮದ ಸ್ವಾನುಭಾವದ ನಿಲುಕಡೆಯಃನು ಅರಿಯರೆಂಬುದರ್ಥ ॥ ಅದೆಂತೆಂದೆಡೆ ॥

ಅಂತ್ಯ : ಅಷ್ಟವಿದ ಸಕಲವು ಸತ್ತುಚಿತ್ತು ಆನಂದದಲ್ಲಿ ಅಡಗಿದ ಭೇದವನು ಶಿವನ ಚಿದ್ರೂಪನಾದ ಶರಣಬಲ್ಲಸಲ್ಲದೆ ಮಿಕ್ಕಿನ ದ್ವೈತಾದ್ವೈತಿಗಳು ಮೊದಲಾದವರು ಆರು ಅರಿಯರು ಎಂಬುದೀಗ ಸಕೀಲ ಸಂಮಂದವ ಚೆಂನಮಲ್ಲಿಕಾರ್ಜುನೈಯ್ಯ ನಿಂಮ ಶರಣರೆ ಬಲ್ಲರೊ ಎಂಬ ಶಬ್ದ ಕ್ಕರ್ಥ. ಅಕ್ಕಗಳ ಶ್ರುಷ್ಟಿವಚನ ಸಮಾಪ್ತ ಮಂಗಳ ಮಹಾ ಶ್ರೀಶ್ರೀ.

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಸಮಗ್ರಕೃತಿ. ಷ್ಪಟಾಕ್ಷರ. ಇವರೊಡನೆ ಪಂಚೀಕರಣ, ಮಿಶ್ರಾರ್ಪಣ. ಪ್ರಭುದೇವರ ಸೃಷ್ಟಿಯ ವಚನ, ಏಕೋತ್ತರ ಶತಸ್ಥಲದ ಟೀಕೆ, ಹಿರಿಯ ಮಂತ್ರಗೋಪ್ಯ ಈ ಕೃತಿಗಳೂ ಇವೆ.

—ಎಸ್‌ಎನ್‌ಕೆ

180

ಕೆ. ೭೪೮/೪ ಸೃಷ್ಟಿಯ ವಚನ ವಚನ

೧೨.೫″ × ೨.೨″ ಅಕ್ಕಮಹಾದೇವಿ ಸು. ೧೧೬೦

೧೦ನೇ ಪತ್ರ ೧೩ ಪಂಕ್ತಿ ೭೬ ಅಕ್ಷರ

ಆದಿ : ಶ್ರೀಗುರು ಬಸವಲಿಂಗಾಯ ನಮಃ । ಅಕ್ಕಗಳು ನಿರೂಪಿಸಿದ ಶೃಷ್ಟಿಯ ವಚನ । ಆದಿಯನಾದಿ ನಿತ್ಯಾನಿತ್ಯವ ತಿಳಿಯಲಱಿಯದೆ । ವಾಯಕ್ಕೆ ಪರಬ್ರಹ್ಮನ ನುಡಿವ । ವಾಯುಪ್ರಾಣಿಗಳವರಿತ್ತ ಬಲ್ಲರೂ । ಆ ಪರ ಬ್ರಹ್ಮದ ನಿಜದ ನಿಲವೆಂತೆಂದೊಡೆ । ಆದಿಯೆ ದೇಹ । ಅನಾದಿಯೆ ನಿರ್ದೇಹ । ಆದಿಯೆ ಸಕಲ । ಅನಾದಿಯೆ ನಿಃಕಲ । ಆದಿಯೆ ಜಡ । ಅನಾದಿಯೆ ಅಜಡ । ಆದಿಯೆ ಕಾಲ । ಅನಾದಿಯೆ ಪ್ರಾಣ । ಯಿಾ ಯರಡರ ಯೋಗವ ಭೇದಿಸಿ । ತಂನಿಂದ ತಾನೆ ತಿಳಿದು ನೋಡಲು । ಆದಿಸಂಬಂಧವಪ್ಪ ಭೂತಂಗಳು ನಾನಲ್ಲ ।

ಅಂತ್ಯ : ಇಂತೀ ತ್ರಿವಿಧ ಪ್ರಸಾಧವು ಯೇಕಾರ್ತ್ಥವಾಗಿ । ಮಹಾಘನ ಪರಿ ಪೂರ್ನ ಪ್ರಸಾದವಳವಟ್ಟ ಶರಣ । ಜ್ಞಾನಿಯಲ್ಲ । ಅಜ್ಞಾನಿ ಮುಂನವೆ ಅಲ್ಲ । ಶೂನ್ಯನಲ್ಲ ನಿಃಸೂನ್ಯ ಮುಂನವೆ ಅಲ್ಲ । ದ್ವೈತಿಯಲ್ಲ । ಅದ್ವೈತಿ ಮುಂನವೆ ಅಲ್ಲ । ಯಿಂತೀ ಉಭಯಾತ್ಮಕ ತಾನೆಯಾಗಿ ।

ಯಿದು ಕಾರಣ ಯಿದಱಾಗುಹೋಗು ಸಕೀಲ ಸಂಬಂಧವ ಚೆಂನಮಲ್ಲಿ ಕಾಜ್ಝುರ್ನೈಯ್ಯ ನಿಂಮ ಶರಣರೆ ಬಲ್ಲರೂ ॥ ಅಕ್ಕಗಳ ಸೃಷ್ಟಿಯ ವಚನ ಸಮಾಪ್ತ ಮಂಗಳ ಮಹಾ ಶ್ರೀ.

ವಿಷಯ : ವೀರಶೈವ ತತ್ತ್ವ.

ವಿಶೇಷ : ಇದರೊಡನೆ ಕರಣಹಸಿಗೆ, ಏಕೋತ್ತರ ಶತಸ್ಥಲ ಮೊದಲಾದ ೨೯ ಗ್ರಂಥಗಳಿವೆ ಕೊನೆಯಲ್ಲಿ ೯ ಸಂಕೀರ್ಣಓಲೆಗಳಿವೆ. ಕೆಲವು ಗ್ರಂಥಗಳಲ್ಲಿ ಶಕಟರೇಫದ ಬಳಕೆ ಇದೆ. ಕೆಲವು ಗರಿಗಳ ಅಂಚು ಮುರಿದು ಶಿಥಿಲವಾಗಿವೆ.

—ಎಸ್‌ಎನ್‌ಕೆ

181

ಕೆ. ೧೧೫೪/೪	**ಸೃಷ್ಟಿಯು ವಚನ**	ವಚನ
೧೦.೭" × ೨.೧"	ಅಕ್ಕಮಹಾದೇವಿ	ಸು. ೧೧೬೦
೧೧೧–೧೧೨ ಪತ್ರ	೧೩ ಪಂಕ್ತಿ	೫೦ ಅಕ್ಷರ

ಆದಿ : ಅಕ್ಕಗಳು ನಿರೂಪಿಸಿದ ಸೃಷ್ಟಿಯ ವಚನ । ಆದಿಯನಾದಿಯ । ನಿತ್ಯಾನಿತ್ಯವ । ತಿಳಿಯಲಱಿಯದೆ । ವಾಯಕ್ಕೆ ಪರಬ್ರಹ್ಮವ । ನುಡಿವ । ವಾಯು । ಪ್ರಾಣಿಗಳವರೆತ್ತ ಬಲ್ಲರು । ಆ ಪರಬ್ರಹ್ಮವ ನಿಜದ ನಿಲವೆಂತೆಂಡೊಡೆ ಆದಿಯ ದೇಹ । ಅನಾದಿಯೆ ನಿರ್ದೇಹ । ಆದಿಯೆ ಸಕಲ ಅನಾದಿಯೆ ನಿಷ್ಕಲ । ಆದಿಯೆ ಜಡ । ಅನಾದಿಯೆ ಅಜಡ । ಆದಿಯೆ ಕಾಯ । ಅನಾದಿಯೆ ಪ್ರಾಣ । ಈ ಯರಡರ ಯೋಗವ ಭೇದಿಸಿ । ತಂನಿಂದ ತಾನೆ ತಿಳಿದು ನೋಡಲು । ಆದಿ ಸಂಬಂಧವಪ್ಪ । ಭೂತಂಗಳು ನಾನಲ್ಲ

ಅಂತ್ಯ : ಯೇಕಾರ್ಥವಾಗಿ । ಮಹಾ ಘನಪರಿಪೂರ್ಣ ಪ್ರಸಾದವಳವಟ್ಟ ಶರಣ । ಜ್ಞಾನಿಯು । ಅಜ್ಞಾನಿ ಮುಂನವೆ ಅಲ್ಲ । ಶೂನ್ಯವಲ್ಲ । ನಿಃಶೂನ್ಯ ಮುನ್ನವೆ ಅಲ್ಲ । ದ್ವೈತಿಯಲ್ಲ । ಅದ್ವೈತಿ ಮುನ್ನವೆ ಅಲ್ಲ । ಇಂತೀ ವುಭಯಾತ್ಮಕ ತಾನೆಯಾಗಿ । ಯಿದು ಕಾರಣ । ಯಿದರಾಗು ಹೋಗ । ಸಕೀಲ ಸಂಬಂಧವ ಚೆಂನಮಲ್ಲಿಕಾರ್ಜುನಯ್ಯ ನಿಂಮ ಶರಣರೆ ಬಲ್ಲರೂ । ಅಕ್ಕಗಳು ನಿರೂಪಿಸಿದ ಸೃಷ್ಟಿಯ ವಚನ ಸಮಾಪ್ತ ಮಂಗಳ ಮಹಾ ಶ್ರೀ.

ವಿಷಯ : ಜಗತ್ಸೃಷ್ಟಿಕ್ರಮದ ವಿವರ (ವೀರಶೈವ).

ವಿಶೇಷ : ಸಮಗ್ರ. ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಕರಣಹಸಿಗೆ, ಮಿಶ್ರಾರ್ಪಣ, ಪಂಚೀಕರಣಗಳೇ ಮೊದಲಾಗಿ ಒಟ್ಟು ಏಳು ಕೃತಿಗಳಿವೆ. [ಕಹಪ್ರವಸೂ ಪ್ರಥಮ ಸಂಪುಟ ಪುಟ ೩ ಕ್ರಮಾಂಕ 4-5 ನೋಡಿ]

—ಕೆಆರ್‌ಎಸ್

182

ಕ. ೧೧೮೬/೪ **ಸೃಷ್ಟಿಯ ವಚನ** ವಚನ

೧೦.೫" × ೨.೩" ಅಕ್ಕಮಹಾದೇವಿ ಸು. ೧೧೬೦

೧೧–೧೨ ಪತ್ರ ೧೨ ಪಂಕ್ತಿ ೫೬ ಅಕ್ಷರ

ಆದಿ : ಅಕ್ಕಗಳು ನಿರು . . . ದ ಶ್ರುಟ್ಟಿ ವಚನ ॥ ಆದಿಯನಾದಿಯ । ನಿತ್ಯ ನಿತ್ಯವ ತಿಳಿಯಲರಿಯದೆ । ವಾಯುಕ್ಕೆ ಪರಬ್ರುಂಹದ ನಿಜದ ನಿಲವೆಂತೆಂದೊಡೆ । ಆದಿಯೆ ದೇಹ । ಅನಾದಿಯೆ ನಿರ್ದೇಹ । ಆದಿಯೆ ಸಕಲ ಅನಾದಿಯೆ ನಿಃಕಲ । ಆದಿಯೆ ಜಡ । ಅನಾದಿಯೆ ಜಡ । ಆದಿ ಕಾಯ । ಅನಾದಿಯೆ ಪ್ರಾಣ ।

ಅಂತ್ಯ : ಜ್ಞಾನಿಯಲ್ಲ । ಅಜ್ಞಾನಿಯು ಮುಂನವೆ ಅಲ್ಲ । ಶೂಂನ್ಯನಲ್ಲ । ನಿಃಶೂಂನ್ಯ ಮುಂನವೆ ಅಲ್ಲ । ದ್ವೈತಿಯಲ್ಲ । ಅದ್ವೈತಿ ಮುಂನವೆಯಲ್ಲ । ಯಿಂತಿ । ವುಭಯಾತ್ಮಕ ತಾನೆಯಾಗಿ । ಯಿದು ಕಾರಣ । ಯಿದರಾಗು ಹೋಗು । ಸಹೀಲ ಸಂಬಂಧವ । ಚಂನಮಲ್ಲಿಕಾರ್ಜುನಯ್ಯ ನಿಂಮ ಶರಣರೆ ಬಲ್ಲರೂ ॥ ಅಕ್ಕಗಳು ನಿರೂಪಿಸಿದ ಶೃಷ್ಟಿ ವಚನ ಸಮಾಪ್ತ ಮಂಗಳ ಮಹಾ ಶ್ರೀ ॥

ವಿಷಯ : ಜಗತ್ಸೃಷ್ಟಿಕ್ರಮದ ವಿವರ (ವೀರಶೈವ).

ವಿಶೇಷ : ಸಮಗ್ರ. ಇದೇ ಕಟ್ಟಿನಲ್ಲಿ ಪ್ರಭುದೇವರ ಪುರಾಣದ ನಾಂದ್ಯ, ಕರಣಹಸಿಗೆ, ಮಿಶ್ರಾರ್ಪಣ, ಪಂಚೀಕರಣದ ಪದ ಎಂಬ ಕೃತಿಗಳಿವೆ. [ಕಹಪ್ರವಸೂ ಪ್ರಥಮ ಸಂಪುಟ. ಪುಟ ೩, ಕ್ರಮಾಂಕ 4–5 ನೋಡಿ]

—ಕೆಆರ್ ಎಸ್

183

ಕೆ. ೧೩೧೦/೪ ಸೃಷ್ಟಿಯ ವಚನ ವಚನ, ಟೀಕು

೧೦" × ೨.೩" ಅಕ್ಕಮಹಾದೇವಿ ಸು. ೧೧೬೦

೫೩–೫೮ ಪತ್ರ ೧೪ ಪಂಕ್ತಿ ೫೬ ಅಕ್ಷರ

ಆದಿ : ಶ್ರೀಗುರು ಬಸವಲಿಂಗಾಯ ನಮಃ ॥ ಮಹಾದೇವಿಯಕ್ಕಗಳು ನಿರೂಪಿ ಸಿದ ಶೃಷ್ಟಿಯ ವಚನಾ ॥
ಆದಿ ಅನಾದಿ ನಿತ್ಯಾನಿತ್ಯವ ತಿಳಿಯಲರಿಯದೆ
ಆದಿಯಂದಡೆ ದೇಹ ಅನಾದಿಯೆಂದಡೆ ಆತ್ಮನು
ಯೀಯರಡರೊಳಗೆ ಅತ್ಮನೆ ನಿತ್ಯಾಪ್ಸರೂಪವೆಂದು ಅರಿದು
ಶ್ರೀಗುರುವುಪಾಸ್ತೆಯಂ ಮಾಡಿ ಗುರುಕರುಣಮಂ ಪಡೆದು
ದೇಹಾತ್ಮದಲ್ಲಿಯಿಪ್ಪ ಪ್ರಾಣಸಂಮಂಥವ ಮಾಡಿಕೊಂಡು

ಅಂತ್ಯ : ಶಿವನ ಚಿತ್ರಭಾವ ಸ್ವರೂಪನಾದ ಶರಣ ಬಲ್ಲನಲ್ಲದೆ ಮಿಕ್ಕನದ್ವೈತಾ ದ್ವೈತಿಗಳು ಮೊದಲಾದವರಾರು ಅರಿಯರೆಂಬುದೀಗ ಸಕೀಲ ಸಂಮಂಥವನು ಚೆಂನಮಲ್ಲಿಕಾರ್ಜುನ್ಯೆಯ ನಿಂಮ ಶರಣರೆ ಬಲ್ಲರೆಂಬ ಶಬ್ದಕ್ಕರ್ಥ ॥ ಮಹಾದೇವಿಯಕ್ಕಗಳು ನಿರೂಪಿಸಿದ ಶೃಷ್ಟಿಯವಚನ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ.

ವಿಷಯ : ವೀರಶೈವಸಿದ್ಧಾಂತ.

ವಿಶೇಷ : ಸಮಗ್ರ. ಇದೇ ಕಟ್ಟಿನಲ್ಲಿ ಕರಣಹಸಿಗೆ, ಪಂಚೀಕರಣ, ಮಿಶ್ರಾರ್ಪಣ ಕೃತಿಗಳಿವೆ.

—ಜಿಜಿಎಂ

184

ಕೆ. ೧೭೫೧/೪ ಸೃಷ್ಟಿಯ ವಚನ ವಚನ

೧೩.೮" × ೨.೨" ಅಕ್ಕಮಹಾದೇವಿ ಸು. ೧೧೬೦

೧೨–೧೩ ಪತ್ರ ೯ ಪಂಕ್ತಿ ೫೨ ಅಕ್ಷರ

ಆದಿ : ಶ್ರೀಗುರು ಚನ್ನವೀರೇಭ್ಯೋ ನಮಃ ॥ ಅಕ್ಕಗಳು ನಿರೂಪಿಸಿದ ಸೃಷ್ಟಿಯ ವಚನ ॥
ಆದಿಯನಾದಿ ನಿತ್ಯಾನಿತ್ಯವ ತಿಳಿಯಲರಿಯದೆ
ವಾಯಕ್ಕೆ ಪರಬ್ರಹ್ಮನ ನುಡಿವ ವಾಯು

ಪ್ರಾಣಿಗಳವರೆತ್ತ ಬಲ್ಲರೊ ॥ ಆ ಪರಬ್ರಹ್ಮದ ನಿಜದನಿಲವೆಂತೆಂದಡೆ ಆದಿಯೆ ದೇಹ ಅನಾದಿಯೆ ನಿರ್ದೇಹ ಆದಿಯೆ ಸಕಲ ಅನಾದಿಯೆ ನಿಷ್ಕಲ ಆದಿಯೆ ಜಡ ಅನಾದಿಯೆ ಅಜಡ

ಅಂತ್ಯ: ಅಜ್ಞಾನಿ ಮುಂನವೆ ಅಲ್ಲ ಶೂನ್ಯನಲ್ಲ ನಿಸೂಂನ್ಯನಲ್ಲ ಮುನ್ನವೆ ಅಲ್ಲ ದ್ವೈತಿಯಲ್ಲ ಅದ್ವೈತಿ ಮುನ್ನವೆ ಅಲ್ಲ ಯಿಂತೀ ವುಭಯ ತಾನೆ ತಾನೆಯಾಗಿ ಯಿದಕಾರಣ ಯಿದರಾಗುಹೋಗು ಸಕೀಲಸಂಬಂಧ ಚಂನಮಲ್ಲಿಕಾರ್ಜುನ್ನೈಯ್ಯ ನಿಂಮ ಶರಣರು ಬಲ್ಲರು ಅಕ್ಕಗಳು ನಿರೂಪಿಸಿದ ಸೃಷ್ಟಿಯ ವಚನ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ.

ವಿಷಯ: ವೀರಶೈವಸಿದ್ಧಾಂತ.

ವಿಶೇಷ: ಸಮಗ್ರ. ಪ್ರತಿ ಚೆನ್ನಾಗಿದೆ. ಇವರ ಜೊತೆಯಲ್ಲಿ ಸೃಷ್ಟಿಯವಚನ ಮೊದಲಾದ ಇತರ ೮ ಕೃತಿಗಳಿವೆ.

—ಜಿಜಿಎಂ

185

ಕೆ. ೧೨೪೫/೩	ಸೃಷ್ಟಿಯ ವಚನ (ಸಟೀಕು)	ವಚನ, ಗದ್ಯ
೭.೮" × ೧.೪"	ಅಕ್ಕಮಹಾದೇವಿ	ಸು. ೧೧೬೦
೬೯–೮೨ ಪತ್ರ	೮ ಪಂಕ್ತಿ	೪೨ ಅಕ್ಷರ

ಆದಿ: ಅಕ್ಕಗಳು ನಿರೂಪಿಸಿದ ಸೃಷ್ಟಿಯ ವಚನ ॥ ಶಾಂಭುಲೋಕದಲ್ಲಿದ್ದಂಥಾ ಮುಕ್ತಾಂಗನೆ ತಾನೆ ಮರ್ತ್ಯಲೋಕದ ಉಡುತಡಿಯಂಬ ಶಿವಪುರದಲ್ಲಿ ಮಹಾದೇವಿಯಕ್ಕಗಳಾಗಿ ಬಂದು ತಂಮ ವಂಶೀಭೂತವಾದ ಮರ್ತ್ಯಲೋಕದ ಮಹಾಗಣಂಗಳಿಗೆ ಬಂದು ವೋದಿ ಹಾಡಿ ಕೇಳಿ ಅರಿದು ಆನಂದಿಸಿ ನಿತ್ಯ ಶಿವಸುಖಿಗಳಾಗಲಿಯೆಂದುದೆ ಆದಿಯೆಂದೊಡೆದೇಹ ಅನಾದಿಯೆಂದೊಡೆ ಆತ್ಮನು × ×

ಅಂತ್ಯ: ಅದಲ್ಲದೆ ಅಷ್ಟವಿಧ ಸಕೀಲವು ಸತ್ತುಚಿತ್ತಾನಂದದಲ್ಲಿ ಅಡಗಿದ ಭೇದವನು ಶಿವನ ಸದ್ರೂಪುಚಿದ್ರೂಪು ಆನಂದರೂಪವಾದ ಶರಣ ಬಲ್ಲನಲ್ಲದೆ ಮಿಕ್ಕಿನ ದ್ವೈತಾದ್ವೈತಿಗಳು ಮೊದಲಾದವರಾರು ಅರಿಯರೆಂಬುದೀಗ ಸಕೀಲಸಂಬಂಧವ ಚೆನ್ನಮಲ್ಲಿಕಾರ್ಜುನಯ್ಯಾ ನಿಮ್ಮ ಶರಣರೆ ಬಲ್ಲರು ಯೆಂಬ ಶಬ್ದಕ್ಕರ್ಥ ಮಹಾದೇವಿಯಕ್ಕಗಳ ಸೃಷ್ಟಿಯ ವಚನ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ.

ವಿಷಯ : ವೀರಶೈವಸಿದ್ಧಾಂತದ ಪ್ರಕಾರ ಜಗತ್ಸೃಷ್ಟಿ.

ವಿಶೇಷ : ಇದೇ ಕಟ್ಟಿನಲ್ಲಿ ಮಿಶ್ರಾರ್ಪಣ, ವರತೆ ಸೋಮಣ್ಣನ ಪಂಚೀಕರಣ, ಅಲ್ಲಮಪ್ರಭುವಿನ ಸೃಷ್ಟಿಯ ವಚನಗಳಿವೆ.

— ಜಿಜಿಎಂ

186

ಕೆ. ೧೫೬೧/೪	**ಸೃಷ್ಟಿಯ ವಚನ (ಸಟೀಕು)**	ವಚನ, ಗದ್ಯ
೧೩.೫" × ೨.೨"	ಅಕ್ಕಮಹಾದೇವಿ	ಸು. ೧೧೬೦
೮೯-೯೪ ಪತ್ರ	೧೩ ಪಂಕ್ತಿ	೭೦ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ಅಕ್ಕಗಳು ಉಡುತಡಿಯೆಂಬ ಪಟ್ಟಣದಲ್ಲಿ ನಿರ್ಮಲ ಸುಮತಿಯರೆಂಬ ಶಿವಭಕ್ತರ ಗರ್ಭದಲ್ಲಿಹುಟ್ಟಿ ತನಗೆ ಮನವಿಟ್ಟ ಭವಿಯಾದ ಕೌಸಿಕರಾಯನಂ ತೆಜಿಸಿ ವೈರಾಗ್ಯದಿಂದ ನಿರ್ವಾಣಗುಣಶೀಲೆಯರಾಗಿ ಕಲ್ಯಾಣಪಟ್ಟಣಕ್ಕೆ ಬಂದು ಅಲ್ಲಿ ಬಸವ ಮೊದಲಾದ ಪ್ರಮಥಗಣಂಗಳ ದರುಸನವಮಾಡಿ ಅಲ್ಲಿಂದ ಶ್ರೀಶೈಲಕ್ಕೆ ಹೋಗಿ ಚೆಂನಮಲ್ಲಿಕಾರ್ಜುನಲಿಂಗದ ಕರುಣವ ಪಡದು ಅಲ್ಲಿಂದ ಅಲ್ಲಮಪ್ರಭುಸ್ವಾಮಿಗಳೆಂಬ ಕದಳಿಯಲ್ಲಿ ನಿರ್ವಯಲಾಗಿ ಹೋದ ಮಹಾದೇವಿಯಕ್ಕಗಳೆಂಬ ಚಿತ್ಶಕ್ತಿಯರು ನಿರೂಪಿಸಿದ ಶೋಡಶಸ್ಥಲ ಪರಿಕ್ರಮವಿಡಿದು ಉಪದೇಶಿಸಿದ ಶ್ರುಷ್ಟಿಯವಚನ

ಅಂತ್ಯ : ಯೆಲೆ ಲಿಂಗವೆ ನಿಂಮ ಸ್ವಾಮಿಗಳಪರಾವತಾರ ಮೂರ್ತಿಗಳಾದ ಶರಣರೆ ಶಿವಶರಣರೆ ಬಲ್ಲರು ತಿಳಿದಿಪ್ಪರು ಅಲ್ಲದೆ ಅದರಿಂದ ಹೊರತಾಗಿ ಮಿಕ್ಕಿನ ಅಗ್ನಾನ ಜೀವಿಗಳೊರ್ವಂಗು ತಿಳಿಯಬಾರದುಯೆಂಬ ಶಬ್ದಕ್ಕರ್ಥ ॥ ಅಕ್ಕಗಳು ನಿರೂಪಿಸಿದ ಶ್ರುಷ್ಟಿಯವಚನ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ.

ವಿಷಯ : ವೀರಶೈವಸಿದ್ಧಾಂತದಂತೆ ಲೋಕದರಚನೆ.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ. ಇದೇ ಕಟ್ಟಿನಲ್ಲಿ ಕರಣಹಸಿಗೆ(ಸಟೀಕು) ಮೊದಲಾದ ೭ ಕೃತಿಗಳಿವೆ.

— ಜಿಜಿಎಂ

187

ಕೆ. ೬೬೦/೪	**ಸೃಷ್ಟಿಯ ವಚನ (ಸಟೀಕು)**	ವಚನ, ಟೀಕು
೧೯.೩" × ೨.೩"	ಪ್ರಭುದೇವ	ಸು. ೧೧೬೦
೩೩–೩೪ ಪತ್ರ	೧೨ ಪಂಕ್ತಿ	೧೦೫ ಅಕ್ಷರ

ಆದಿ: ಶ್ರೀಗುರುಬಸವಲಿಂಗಾಯ ನಮಃ ॥ ಪ್ರಭುದೇವರು ನಿರೂಪಿಸಿದ ಶ್ರುಷ್ಟಿಯವಚನ । ಪ್ರಥಮದಲ್ಲಿ ವಸ್ತು ಎನು ಎನುಯಿಲ್ಲದಂದು । ಮಹಾಘನಶೂಂನ್ಯ ಬ್ರಂಹವಾಗಿದ್ದಿತ್ತು ।

ಟ್ಕೂ॥ ಪ್ರಥಮದಲ್ಲಿ । ವೊಟ್ಕವೊದಲಲ್ಲಿ ॥ ವೊಸ್ತು । ಪರಬ್ರಂಹ್ಮವು॥ ಯೆನು ಎನುಯಿಲ್ಲದ । ಗ್ರಂಥ ॥ ನಬ್ರಂಹ್ಮದಯೊ ವಿಷ್ಣುಶ್ಚ । ನರುದ್ರೋ ನಾಶವಿರ್ವಿಮಃ । ನಾಗ್ನಿರ್ವ್ಯವಸವಿಮಾರಾಂಬ । ನಭೂಮಿ ನಗ್ರಹೋದಿಶಃ । ನತತ್ವಪ್ರಚಯಾ ಕಾಲೆ । ಶಿವಯೇಕೋಸ್ತಿ ಕೇವಂ ॥ ಟ್ಕೂ॥ ಬ್ರಂಹ್ಮ ವಿಷ್ಣುರುದ್ರ ಸೂರ್ಯ ಚಂದ್ರ ಅಷ್ಟ ತನುಗಳು । ನವಗ್ರಹಂಗಳು । ದಶದಿಕ್ಕುಗಳು । ಮುವತ್ತಾರು ತತ್ವಂಗಳು ತೋರುವ ತೋರಿಕೆಗಳು ಎನು ಎನು ಯಿಲ್ಲದಂದು । ಮಹಾಘನ ಶೂಂನ್ಯ ಬ್ರಂಹ್ಮವಾಗಿದ್ದಿತ್ತು ।.

ಅಂತ್ಯ: ನಂಮ ಗೊಹೇಶ್ವರಲಿಂಗವು । ಮಹತ್ । ಅಧಿಕವಾದ । ಘನ । ಅಖಂಡಿತವಾದ ಶೂಂನ್ಯ ಬ್ರಂಹ್ಮವಾಗಿರಬಲ್ಲನಯ್ಯಾ ನಂಮ ಗುಹೇಶ್ವರ ಲಿಂಗವು । ನಿಃಕಲ ನಿರವಯ ನಿರಾಳ ನಿರಾಕಾರ ಸ್ವರೂಪವಾದ ನಿಃಕಲಪರವೊಸ್ತುವೆಂಬುದೀಗ । ಮಹಾಘನ ಶೂಂನ್ಯ ಬ್ರಂಹ್ಮವಾಗಿರ ಬಲ್ಲನೈಯ್ಯಾ ನಂಮ ಗುಹೇಶಲಿಂಗವು ಎಂಬ ಶಬ್ದಕ್ಕರ್ಥ ॥ ಪ್ರಭುದೇವರು ನಿರೂಪಿಸಿದ ಸೃಷ್ಟಿಯ ವಚನ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ.

ವಿಷಯ: ವೀರಶೈವಸಿದ್ಧಾಂತ.

ವಿಶೇಷ: ಸಂಪೂರ್ಣಕೃತಿ. ಅಕ್ಷರಗಳು ಮುದ್ದಾಗಿವೆ. ಇದರೊಡನೆ ಪಂಚೀಕರಣ, ಮಿಶ್ರಾರ್ಪಣ, ಅಕ್ಕಗಳ ಸೃಷ್ಟಿಯ ವಚನ, ಏಕೋತ್ತರ ಶತ ಸ್ಥಲಟೀಕೆ, ಹಿರಿಯಮಂತ್ರಗೋಪ್ಯ ಈ ಕೃತಿಗಳೂ ಇವೆ.

—ಎಸ್‌ಎನ್‌ಕೆ

188

ಕೆ. ೭೪೮/೫	**ಸೃಷ್ಟಿಯ ವಚನ**	ವಚನ
೧೨.೫" × ೨.೨"	ಪ್ರಭುದೇವ	ಸು. ೧೧೬೦
೧೦–೨೧ ಪತ್ರ	೧೩ ಪಂಕ್ತಿ	೭೬ ಅಕ್ಷರ

ಆದಿ : ಗುರುಬಸವಲಿಂಗಾಯ ನಮಃ । ಪ್ರಭುದೇವರು ನಿರೂಪಿಸಿದ ಶೃಷ್ಟಿಯವಚನ । ಪ್ರಥಮದಲ್ಲಿ ವಸ್ತುಯೇನೂ ಯೆನುಯಿಲ್ಲದಂದು ಸೂನ್ಯ ಬ್ರಹ್ಮವಾಗಿದ್ದಿತ್ತೂ ಅಂತಿರ್ದವರ ವೊಸ್ತು ತಾನೆ ತಂನ ದಿವ್ಯಾನಂದ ಸ್ವಲೀಲಾ ಸ್ವಭಾವದಿಂದಾದುದು । ಆತ್ಮನೆಂಬ ಲಿಂಗ ಸ್ಥಲ । ಅಂತಪ್ಪ ಚಿದಾತ್ಮನೆಂಬ ಅಂಗಸ್ಥಲಕ್ಕೆ । ಸೇರಿದ ತತ್ವಂಗಳಿ ಪ್ಪತ್ತೈದು । ಅವಾವಾವೆಂದೊಡೆ । ಶ್ರೋತ್ರಾದಿಜ್ಞಾನೇಂದ್ರಿಯಂ ಗಳು ಐದು । ವಾಗಾದಿ ಕರ್ಮೇಂದ್ರಿಯಂಗಳೈದು । ಶಬ್ದಾದಿ ವಿಷ ಯಂಗಳೈದು । ಪ್ರಾಣಾದಿ ವಾಯುಗಳೈದು । ಮನ ಬುದ್ಧಿ ಚಿತ್ತ ಅಹಂಕಾರ ಜೀವಂಗಳೈದು । ಇಂತೀ ಅಂಗತತ್ವವಿಪ್ಪತ್ತೈದು ।.

ಅಂತ್ಯ : ಅಂಗತತ್ವವಿಪ್ಪತ್ತೈದು ಲಿಂಗತತ್ವ ಹಂನೊಂದು । ಯಿಂತಿವುಭಯ ತತ್ವ ಮೂವತ್ತಾರು ಯೇಕಾರ್ಥವಾಗಿ ಸರ್ವಸೂನ್ಯವನೆಯ್ದಿದ ಪರಿ ಶ್ರಮದ ನಿರ್ಣಯದ ಬೆಡಗು । ತತ್ವಮಸ್ಯಾದಿ ವಾಕ್ಯಾರ್ಥಂಗಳಲ್ಲಿಯು ಕಾಣಲಾಯಿತ್ತು । ಅದೆಂತೆಂದೊಡೆ । ತತ್ಪದವೆಲಿಂಗ । ತ್ವಂಪದವೆ ಅಂಗ ಎರಡರ ಐಕ್ಯವೆ ಅಸಿ ಎಂದುದಾಗಿ । ಯಿಂತು ಸಕಲನಾಗಬಲ್ಲ ನಿಃಕಲನಾಗಬಲ್ಲ । ಸಕಲನಿಃಕಲಾತೀತನಾಗಿಯೇನೂ ಯೇನೂಯಿಲ್ಲದ ಮಹಾಘನಸೂನ್ಯ ಬ್ರಹ್ಮವಾಗಿರಬಲ್ಲನಯ್ಯಾ ನಮ್ಮ ಗೊಹೇಶ್ವರ ಲಿಂಗವೂ ॥ ಪ್ರಭುದೇವರು ನಿರೂಪಿಸಿದ ಶೃಷ್ಟಿಯವಚನ ಸಮಾಪ್ತ ಮಂಗಳ ಮಹಾ ಶ್ರೀ ॥

ವಿಷಯ : ವೀರಶೈವತತ್ವ.

ವಿಶೇಷ : ಇದರೊಡನೆ ಕರಣಹಸಿಗೆ, ಏಕೋತ್ತರ ಶತಸ್ಥಲ ಮೊದಲಾದ ೨೯ ಗ್ರಂಥಗಳಿವೆ. ಕೊನೆಯಲ್ಲಿ ೯ ಸಂಕೀರ್ಣ ಓಲೆಗಳಿವೆ. ಕೆಲವು ಗ್ರಂಥಗಳಲ್ಲಿ ಶಕಟರೇಫದ ಬಳಕೆ ಇದೆ. ಕೆಲವು ಗರಿಗಳ ಅಂಚು ಮುರಿದು ಶಿಥಿಲವಾಗಿವೆ.

—ಎಸ್ ಎನ್ ಕೆ

189

ಕೆ. ೧೧೮೪/೫ ಸೃಷ್ಟಿಯ ವಚನ ವಚನ

೧೦.೭" × ೨.೧" ಪ್ರಭುದೇವ ಸು. ೧೧೬೦

೧೧೨ನೆಯ ಪತ್ರ ೧೩ ಪಂಕ್ತಿ ೫೦ ಅಕ್ಷರ

ಆದಿ : ಪ್ರಭುದೇವರು ನಿರೂಪಿಸಿದ ಸೃಷ್ಟಿಯ ವಚನ ॥ ಪ್ರಥಮದಲ್ಲಿ ವಸ್ತು ಯೇನು ಯೇನು ಯಿಲ್ಲದಂದು ಮಹಾಘನ ಶೂನ್ಯ ಬ್ರಹ್ಮವಾಗಿರ್ದಿತ್ತು। ಅಂತಿರ್ದ ಪರವಸ್ತು ತಾನೆ। ತಂನ ದಿವ್ಯಾನಂದ ಸ್ವಲೀಲಾ ಸ್ವಭಾವ ದಿಂದಾದುದು। ಆತ್ಮನೆಂಬ ಅಂಗಸ್ಥಲ। ಅಂತಪ್ಪ ಚಿದಾತ್ಮನೆಂಬ ಅಂಗಸ್ಥಲಕ್ಕೆ ಸೇರಿಸಿದ ತತ್ವಂಗಳಿಪ್ಪತ್ತೈದು।

ಅಂತ್ಯ : ತತ್ಪದವೆ ಲಿಂಗ ತ್ವಂ ಪದವೆ ಅಂಗ। ಯಿಾಯರಡರ ಐಕ್ಯವೆ। ಅಸಿ ಯೆಂದುದಾಗಿ। ಯಿಂತು ಸಕಲನಾಗಬಲ್ಲ। ನಿಷ್ಕಲ್ಮನಾಗಬಲ್ಲ। ಸಕಲ ನಿಷ್ಕಲಾತೀತನಾಗಿ। ಯೇನು ಯೇನುಯಿಲ್ಲದ। ಮಹಾಘನ ಶೂನ್ಯ ಬ್ರಹ್ಮವಾಗಿರಬಲ್ಲನಯ್ಯ। ನಂಮ ಗುಹೇಶ್ವರ ಲಿಂಗವೂ ಪ್ರಭು ದೇವರು ನಿರೂಪಿಸಿದ ಸೃಷ್ಟಿಯ ವಚನ ಸಮಾಪ್ತ ಮಂಗಳ ಮಹಾ ಶ್ರೀ.

ವಿಷಯ : ಜಗತ್ಸೃಷ್ಟಿಕ್ರಮದ ವಿವರ (ವೀರಶೈವ).

ವಿಶೇಷ : ಸಮಗ್ರ. ಇದೇ ಕಟ್ಟಿನಲ್ಲಿ ಕರಣಹಸಿಗೆ, ಮಿಶ್ರಾರ್ಪಣ, ಪಂಚೀ ಕರಣಗಳೇ ಮೊದಲಾದ ಒಟ್ಟು ಏಳು ಕೃತಿಗಳಿವೆ.

[ಕಹಪ್ರವಸೂ. ದ್ವಿತೀಯ ಸಂಪುಟ. ಪುಟ ೪೭೦–೪೭೧ ಕ್ರಮಾಂಕ 958–959 ನೋಡಿ].

—ಕೆಆರ್‌ಎಸ್

190

ಕೆ. ೧೧೮೬/೫ ಸೃಷ್ಟಿಯ ವಚನ ವಚನ

೧೦.೫" × ೨.೩" ಪ್ರಭುದೇವ ಸು. ೧೧೬೦

೧೨–೧೩ ಪತ್ರ ೧೨ ಪಂಕ್ತಿ ೫೬ ಅಕ್ಷರ

ಆದಿ : ಪ್ರಭುದೇವರು ನಿರುಪಿಸಿದ ಶ್ರುಷ್ಟಿ ವಚನ ॥ ಪ್ರಥಮದಲ್ಲಿ ವಸ್ತು ಯೇನು। ಯೇನುಯಿಲ್ಲದಂದು। ಮಹಾಘನ ಶೂನ್ಯ ಬ್ರಂಹ್ಮವಾಗಿ ರ್ದಿತ್ತು। ಅಂತಿರ್ದ ಪರವಸ್ತು ತಾನೆ। ತಂನ ದಿವ್ಯಾನಂದ। ಸ್ವ

ಲೀಲಾ ಸ್ವಭಾವದಿಂದಾದುದು । ಆತ್ಮನೆಂಬ ಅಂಗಸ್ಥಲ ಅಪ್ಪ ಚಿದಾತ್ಮನೆಂಬ ಅಂಗಸ್ಥಲಕ್ಕೆ ಸೇರಿಸಿದ ತತ್ವಂಗಳಿಪ್ಪತ್ತೈದು ।

ಅಂತ್ಯ : ಅದೆಂತೆಂಪೊಡೆ ॥ ಶ್ರುತಿ ॥ ತಪ್ಪದೇನೋಕ್ಷ್ತತೇಲಿಂಗಂ । ತ್ವಂ ಪದೇನಂಗ ಮಿಾತಿತಂ । ಅನೆಯೋಶ್ಶೈಕ್ಯಭಾವೆನಾಂ । ಸಂಬಂಧೋ ಶಿವ ಪದೇಮಹೀ । ಯೆಂದುದಾಗಿ । ಯಿಂ । ತತ್ಪದವೆ ಲಿಂಗ । ತ್ವಂ ಪದವೇ ಅಂಗ । ಯೆರಡರ ಆಕ್ಯವೆ ಅಸಿಯೆಂದುದಾಗಿ । ಯಿಂತು ಸಕಲನಾಗಬಲ್ಲ ನಿಃಕಲನಾಗಬಲ್ಲ । ಸಕಲ ನಿಃಕಲತೀತನಾಗಿ ಯೇನುಯೇನುಯಿಲ್ಲದ ಮಹಾಘನಶೂನ್ಯ ಬ್ರಂಹ್ಮವಾಗಿರಬಲ್ಲನಯ್ಯ । ನಂಮ ಗೊಹೇಶ್ವರಲಿಂಗವು ಪ್ರಭುದೇವರ ಶ್ರುಷ್ಟಿಯ ವಚನ ಸಮಪ್ತ ಮಂಗಳ ಮಹಾ ಶ್ರೀ.

ವಿಷಯ : ಜಗತ್ಸೃಷ್ಟಿಕ್ರಮದ ವಿವರ(ವೀರಶೈವ).

ವಿಶೇಷ : ಸಮಗ್ರ. ಇದೇ ಕಟ್ಟಿನಲ್ಲಿ ಪ್ರಭುದೇವರ ಪುರಾಣದ ನಾಂದ್ಯ, ಕರಣಹಸಿಗೆ, ಮಿಶ್ರಾರ್ಪಣ, ಪಂಚೀಕರಣದ ಪದಗಳೆಂಬ ಕೃತಿಗಳಿವೆ.

[ಕಹಪ್ರವಸೂ. ದ್ವಿತೀಯ ಸಂಪುಟ ಪುಟ. ೪೭೨–೪೭೧ ಕ್ರಮಾಂಕ 958–959 ನೋಡಿ]

—ಕೆಆರ್‌ಎಸ್

191

ಕೆ. ೧೨೪೮/೪	**ಸೃಷ್ಟಿಯ ವಚನ**	ವಚನ, ಗದ್ಯ
೭.೮″ × ೧.೪″	ಪ್ರಭುದೇವ	ಸು. ೧೧೬೦
೮೨–೯೦ ಪತ್ರ	೮ ಪಂಕ್ತಿ	೪೨ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ॥ ಪ್ರಭುದೇವರು ನಿಂತರೆ ನೆರಳಿಲ್ಲ ಸುಳಿದರೆ ಹೆಜ್ಜೆಯಿಲ್ಲ ಬಯಲ ಬೆಳಗೆನ್ನೊಂದು ಪೊಬ್ಬುಳಿಯಾಗಿ ತೋರುವ ನಿರಂಜನ ಗಣಾಧೀಶ್ವರರಾದ ಅಲ್ಲಮಾಪ್ರಭುಸ್ವಾಮಿಗಳು ಮರ್ತ್ಯಲೋಕಕ್ಕೆ ಬಂದು ನಿರೂಪಿಸಿದ ತಂಮ ವಂಶೀಭೂತವಾದ ಮರ್ತ್ಯಲೋಕದ ಮಹಾಗಣಂಗಳು ಬರದು ವೋದಿ ಹಾಡಿ ಕೇಳಿ ಅರಿದು ಆನಂದಿಶಿ ನಿತ್ಯ ಶಿವಸುಖಿಗಳಾಗಲಿಯೆಂದು ಬೋಧಿಶಿದ ಶೃಷ್ಟಿಯ

ಅಂತ್ಯ : ಶ್ರೀಯೆಂದರೆ ಜ್ಞಾನಕ್ಕೆ ಹೆಸರು ಯಿಾಶಾಸ್ತ್ರವ ವೋದಿ ಹಾಡಿ ಕೇಳಿ

ದವರು ನಿಜಮೋಕ್ಷದ ನಿರತಿಶಯ ಜ್ಞಾನವನ್ನೈದಿ ನಿತ್ಯರಾಗಿ ಬಾಳ್ವ ರೆಂಬುದೀ ಶಾಸ್ತ್ರದುಪಕೃತಿಉಯೆಂಬುದೀಗ ಪ್ರಭುದೇವರು ನಿರೂಪಿಸಿದ ಶೃಷ್ಟಿಯುವಚನ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ × × ಅಲ್ಲಮಾಪ್ರಭುದೇವರು ಬಸವೇಶ್ವರದೇವರು ಚೆನ್ನಬಸವೇಶ್ವರದೇವರು × × ಅಕ್ಕಮಹಾದೇವಿತಾಯಿ ಯಿಂತೀಮಹಾಲಿಂಗದಲ್ಲಿ ಐಕ್ಯವಾದ ಜಗಂಣ್ಣ ಮುಕ್ತಾಯಿಮುಖ್ಯವಾದ ಮಹಾಗಣಂಗಳೆಯೆಂನ್ನ ರಕ್ಷಿಸಿ ನಿಂಮ ಷಡುಗಪಾದಸಾಕ್ಷಿಯಿಂ ಪಿಡಿಸಿ ನಿಂಮ್ಮವಕ್ಕ ಮಿಕ್ಕ ಪ್ರಸಾದಕ್ಕೆ ಯನ್ನಯೋಗ್ಯನ ಮಾಡಿಶಿದ ಗುರುಶಾಂತ ಬಸವಪ್ರಭುವಿನೊಳು ಯನ್ನ ಅಯಿಕ್ಯನ ಮಾಡಿದಿರೈಯ್ಯ ನಿಂಮ ಧರ್ಮ ಶ್ರೀ ಶ್ರೀ.

ವಿಷಯ : ವೀರಶೈವಸಿದ್ಧಾಂತದ ಪ್ರಕಾರ ಜಗತ್ಸೃಷ್ಟಿ.

ವಿಶೇಷ : ಇದೇ ಕಟ್ಟಿನಲ್ಲಿ ಮಿಶ್ರಾರ್ಪಣ, ವರತೆ ಸೋಮಣ್ಣನ ಪಂಚೀಕರಣ ಮತ್ತು ಅಕ್ಕಮಹಾದೇವಿಯ ಸೃಷ್ಟಿಯ ವಚನಗಳಿವೆ.

— ಜಜಿಎಂ

192

ಕೆ. ೧೭೫೧/೫	ಸೃಷ್ಟಿಯ ವಚನ	ವಚನ
೧೩.೮″ × ೨.೨″	ಪ್ರಭುದೇವ	ಸು. ೧೧೬೦
೧೩–೧೫ ಪತ್ರ	೯ ಪಂಕ್ತಿ	೫೨ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯನಮಃ ॥ ಪ್ರಭುದೇವರು ನಿರೂಪಿಸಿದ ಸೃಷ್ಟಿಯ ವಚನ ॥

ಪ್ರಥಮದಲ್ಲಿ ಸೂನ್ಯ . . . ಅಂತಿರ್ದ ಪರವಸ್ತು ತಾನೆ ತನ್ನ ವಿದ್ಯಾನಂದ ಸ್ವಲೀಲಾಭಾವದಿಂದಾದುದು. ಅತನೆಂಬ ಅಂಗಸ್ಥಲ ಅಂತಪ್ಪ ಚಿದಾತ್ಮನೆಂಬ ಅಂಗಸ್ಥಲಕ್ಕೆ ಸೇರಿದ ತತ್ವಂಗಳಿಪ್ಪತ್ತೈದೂ ಅವಾವೆಂದಡೆ ಶ್ರೋಕಾದಿಗ್ಜ್ಞಾನುರ್ವಿಂಗಳೈದುಗಾದಿ ಕರ್ಮೇಂದ್ರಿಯಂಗಳೈದು ಶಬ್ದಾದಿ ವಿಷಯಂಗಳೈದು ಪ್ರಾಣಾದಿವಾಯುಗಳೈದು.

ಅಂತ್ಯ : ಯಿಂತು ಸಕಲನಾಗಬಲ್ಲ ಸಕಲ ನಿಷ್ಕಲಾತೀತನಾಗಿಯೇನೂಯೇನು ಯಿಲ್ಲದಂದು ಮಹಾಘನ ಶೂಂನ್ಯಬ್ರಹ್ಮವಾಗಿರಬಲ್ಲನಯ್ಯ ನಂಮ ಗೊಹೇಶ್ವರಲಿಂಗವು ಪ್ರಭುಸ್ವಾಮಿಗಳೂ ನಿರೂಪಿಸಿದ ಶ್ರುಷ್ಟಿಯ ವಚನ ಸಮಾಪ್ತಮಂಗಳ ಮಹಾ ಶ್ರೀ ಶ್ರೀ.

ವಿಷಯ: ವೀರಶೈವ ಸಿದ್ಧಾಂತ.

ವಿಶೇಷ: ಸಮಗ್ರ. ಪ್ರತಿ ಚೆನ್ನಾಗಿದೆ. ಇದರ ಜೊತೆಯಲ್ಲಿ ಏಕೋತ್ತರ ಶತಸ್ಥಲ ಮೊದಲಾದ ಇತರ ೮ ಕೃತಿಗಳಿವೆ.

—ಜಿಜಿಎಂ

193

೧೩೧೦/೫	ಸೃಷ್ಟಿಯು ವಚನ (ಸಟೀಕು)	ವಚನ
೧೦″ × ೨.೩″	ಪ್ರಭುದೇವ	ಸು. ೧೧೬೦
ಕ. ೫೮-೬೦ ಪತ್ರ	೧೪ ಪಂಕ್ತಿ	೫೬ ಅಕ್ಷರ

ಆದಿ: ಶ್ರೀಗುರುಬಸವಲಿಂಗಾಯನಮಃ ॥ ಪ್ರಭುದೇವರು ನಿರೂಪಿಸಿದ ಶೃಷ್ಟಿಯ ವಚನ ॥
ಪ್ರಥಮದಲ್ಲಿ ವಸ್ತು ಯೇನು ಯೇನೂಯಿಲ್ಲದ ಮಹಾಘನಸೂನ್ಯ ಬ್ರಹ್ಮ ವಾಗಿದ್ದಿತ್ತು ಪ್ರಥಮದಲ್ಲಿ ಮೊದಲಲ್ಲಿ ವಸ್ತುಪ್ರರಬ್ರಹ್ಮವು ಯೇನು ಯೆನಲು ಯೇನೂಯಿಲ್ಲದ ನ ಬ್ರಹ್ಮೋನದ್ವಯೋರ್ವಿಷ್ಣು ನ ರುದ್ರೋ ನಾರವಿರ್ವಿದುಃ ಅಗ್ನಿಯೋರ್ಮಸವಿರಾರಾಂಬು ನ ಭೂಮಿ ನ ಗ್ರಹೋದಿಶಃ ನ ತತ್ವಪ್ರಚಯಾಕಾಲೆ ಶಿವಮೇಕೋಸ್ತಿ ಕೇವಲಂ

ಅಂತ್ಯ: ಮಹತ್ । ಅಧಿಕವಾದ । ಘನ ಅಘಟಿತವಾದ ಸೂನ್ಯ ಬ್ರಹ್ಮವಾಗಿರ ಬಲ್ಲನಯ್ಯ ನಂಮ ಗೊಹೇಶ್ವರಲಿಂಗಳು ನಿಃಷ್ಕಳನಿರವಯ ನಿರಾಳ ನಿರಾಕುಳ ಸ್ವರೂಪವಾಗಿರಬಲ್ಲನು ನಿಃಕಲಪರವಸ್ತು ವೆಂಬುದೀಗ ಮಹಾಶೂನ್ಯ ಬ್ರಹ್ಮವಾಗಿರಬಲ್ಲನಯ್ಯ ನಮ್ಮ ಗುಹೇಶ್ವರಲಿಂಗಳು ॥ ಪ್ರಭುಸ್ವಾಮಿಗಳು ನಿರೂಪಿಸಿದ ಶೃಷ್ಟಿಯ ವಚನ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ.

ವಿಷಯ: ವೀರಶೈವ ಸಿದ್ಧಾಂತದ ಪ್ರಕಾರ ಜಗತ್ಸೃಷ್ಟಿ.

ವಿಶೇಷ: ಸಮಗ್ರ. ಇದೇ ಕಟ್ಟಿನಲ್ಲಿ ಪಂಚೀಕರಣ, ಕರಣಹಸಿಗೆ ಮುಂತಾದ ೫ ಕೃತಿಗಳಿವೆ.

—ಜಿಜಿಎಂ

194

ಕೆ. ೧೫೬೧/೫ **ಸೃಷ್ಟಿಯ ವಚನ (ಸಟೀಕು)** ವಚನ, ಗದ್ಯ

೧೩.೫" × ೨.೨" ಪ್ರಭುದೇವ ಸು. ೧೧೬೦

೯೪–೯೮ ಪತ್ರ ೧೩ ಪಂಕ್ತಿ ೭೦ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯನಮಃ ॥ ಪ್ರಭುದೇವರು ಸ್ವತಂತ್ರ ಕರ್ತು ವಾದ ಅಲ್ಲಮಾಪ್ರಭುಸ್ವಾಮಿಗಳೆಂಬ ನಿರಂಜನಗಣಾಧೀಶ್ವರನು ನಿರೂಪಿಸಿದ ಉಪದೇಶಿಸಿದ ಶ್ರಿಷ್ಟಿಯ ವಚನ ಊರ್ಧ್ವ ಅಧೋಶ್ರುಷ್ಟಿಗಳ ಕ್ರಮವನು ಹೇಳುವಂಥಾ ವಚನ ವಾಖ್ಯಾನುಭಾವಯಂಬುದು ಸರಿ ಮತ್ತಂತುಮಲ್ಲದೆ.

ಅಂತ್ಯ : ಯಿಂತಪ್ಪ ಗ್ನಾನಶಾಸ್ತ್ರವನು ಬರದು ಪಾಠವಮಾಡಿಕೊಂಡು ಗ್ನಾನ ಗುರುಗಳಿದ್ದೆಡೆಗೆ ಹೋಗಿ ದೀರ್ಘದಂಡ ನಮಸ್ಕಾರ ವೊದಲಾದ ಭಕ್ತಿ ಉಪಚಾರಗಳಿಂದ ಯಿದರ ಅರ್ಥ ಅಭಿಪ್ರಾಯಂಗಳನು ಶ್ರೋತ್ರಮುಖದಲ್ಲಿ ಕೇಳಿ ಮನೋಮುಖದಲ್ಲಿ ಹಾರೈಸಿ ಹ್ರುದಯಮುಖದಲ್ಲಿ ಯಿಂಬುಗೊಂಡು ಆಲಿಂಗನ ಮಾಡಿಕೊಂಡು ಆಚರಿಸುವಂಥಾ ಶಿವಶರಣರುಗಳೆಲ್ಲರು ನಿರತಿಶಯಗ್ನಾನದ ನಿಜೈಶ್ವರ್ಯವನೆ ಪಡದು ಸುಖದಿಂದ ಬಾಳುತ್ತಿಹರೆಂಬುದೀಶಾಸ್ತ್ರದ ಫಲಶ್ರುತಿಯು ಯಂಬುದರ್ಥಂ ॥ ಶ್ರೀ ಶ್ರೀ.

ವಿಷಯ : ವೀರಶೈವ ಸಿದ್ಧಾಂತದ ಪ್ರಕಾರ ಲೋಕಾಕಾರ.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ. ಇದೇ ಕಟ್ಟನಲ್ಲಿ ಕರಣಹಸಿಗೆ (ಸಟೀಕು) ವೊದಲಾದ ೭ ಕೃತಿಗಳಿವೆ.

—ಜಿಜಿಎಂ

195

ಕೆ. ೧೮೦೩/೧೧ **ಸೋಮೇಶ್ವರ ಶತಕ** ವೃತ್ತ

೧೦.೯" × ೨" ಪಾಲ್ಕುರಿಕೆ ಸೋಮನಾಥ ಸು. ೧೧೯೫

೩ ಪತ್ರ ೭ ಪಂಕ್ತಿ ೪೮ ಅಕ್ಷರ

ಆದಿ : ಶ್ರೀಶಿವಸೋಮೇಶ್ವರಾಯನಮಃ ॥ ಶುಭಮಸ್ತು ॥

ಶ್ರೀಮತ್ಕೈಲಾಸವಾಸಂ ಸ್ಮಿತಮೃದುವಚನಂ ಪಂಚವಕ್ತ್ರಂತ್ರಿಣೇತ್ರಂ
ಪ್ರೇಮಾಂಬ್ಧಂ ಪೂರ್ಣಕಾಯಂ ಪರಮಪರಶಿವಂ ಪಾರ್ವತೀಶಂ
ಮಹೇಶಂ
ಧೀಮತಂ ದೇವದೇವಂ ಪುಲಿಗರಿನಗರೇಶಾಸನಾಕಂ ಮೃಗಾಂಕಂ
ಸೋಮೇಶಂ ಸರ್ಪಭೂಷಂ ಸಲಹುಗೆಯನ್ನಂ ಸರ್ವದಾಸುಪ್ರಸನ್ನಂ ||
ಶಾರ್ದುಲವೃತ್ತಾ ||
ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಿಂ ಕೇಳಿ ತಾ
ಕೆಲವಂ ಮಾಳ್ಪವರಿಂದ ಕಲ್ತು ಕೆಲವಂ ಸುಜ್ಞಾನದಿಂ
ಕೆಲವಂ ಸಜ್ಜನಸಂಗದಿಂದ ಸರಿಯಲ್ ಸರ್ವಜ್ಞನಪ್ಪಂ ನಿಜಂ
ಪಲವಂ ಪಳ್ಳ ಸಮುದ್ರವೈ ಹರ ಹಾರಾ ಚಂನಸೋಮೇಶ್ವರಾ || ೧

ಅಂತ್ಯ : ಪುರಗಳ್ ಬಾಣಕೆ ನಿಂತುದಿಲ್ಲ ದಶಕಂಠಂಗಾಯಿತ್ತೆ ಲೆಕ್ಕೆ ಸಾ
ಗರದೊಳ್ ಪೋದುದು ದ್ವಾರಕಾನಗರಿ ಬಿಲ್ಲಂಗಾದುದು ಗೋಪುರಂ
ದುರುಳಗಾದುದು ಷಟ್ಪುರಂ ಮಧುರೆಯೊಳ್ಕಂಸಾಸುರಂ ಬಾಲ್ದನೆ
ಸಿರಿ ಬಂದುಂ ನೆರೆಪುಂಣ್ಯವೈ ಹರಹರಾ ಶ್ರೀಚಂನಸೋಮೇಶ್ವರಾ || ೧೪

ವಿಷಯ : ಈಶ್ವರಸ್ತುತಿ.

ವಿಶೇಷ : ಅಸಮಗ್ರ. ಪ್ರತಿ ಚೆನ್ನಾಗಿದೆ. ಇದರ ಜೊತೆಗೆ ಬಾಣತಯಾರಿಕೆ ಮುಂತಾದ ೧೨ ಕೃತಿಗಳಿವೆ.

—ಜಿಜಿಎಂ

196

ಕೆ. ೧೧೩೦	**ಸೌಂದರಪುರಾಣ**	ವಾರ್ಧಕಷಟ್ಪದಿ
೮" × ೧.೫"	ಬೊಮ್ಮರಸ	ಸು. ೮೪೫೦
೧–೧೭೩ ಪತ್ರ	೧೧ ಪಂಕ್ತಿ	೪೦ ಅಕ್ಷರ

ಆದಿ : ಗಣಾಧಿಪತಯೇ ನಮಃ ಶ್ರೀ ಶಾರದಾಂಬಾಯೇ ನಮಃ ಶ್ರೀ ಪೊಂಪಾ
ವಿರೂಪಾಕ್ಷನೇ ಗತಿ || ೧
ಶ್ರೀಬಸವಲಿಂಗಾಯನಮಃ ಶುಭಮಸ್ತು ಆಯುರಾರೋಗ್ಯಮಸ್ತು
ಶ್ರೀರಸ್ತು ಶ್ರೀಗುರುಪರಮಾನಂದಾಯನಮಃ ಸೌಂದಪುರಾಣದ
ಪುಸ್ತಕವು ||

ರಾಗನಾಡಿ ॥ ಪಲ್ಲವ ॥

ಶ್ರೀಮದನುಪಮ ಪುಣ್ಯನಿಧಿ ಪುಷ್ಪದತ್ತನೀ
ಭೂಮಿಯೊಳು ಜನಿಸುವಡೆ ಪಡದನು ಸದಾಶಿವನ
ನೇಮವನು ಕನಕಲತೆ ಕಾಂತಿಮತಿಯೆನಿಸುತಿಹರುದ್ರಕನ್ನೆಯರು ಸಹಿತಾ ॥
ನಾಂದ್ಯದ ಪದನು ॥

ಅಂತ್ಯ : ಶಿವನೊಡನಾಡಿ ಶಂಕರನ ಸಂಗಡಿಗಂ ಭವನೊಲ್ಮೆಕಾರನೆಂ
ದವಕಲೆದಾಳಿದಾತಾನಸಖಪರಮೇಶನ ಬಂದು ಪಾರ್ವತಿ
ದವಸತಿಮಿತ್ರನಾಶ್ವರ ಬಿದ್ದಿನದೆಂದೆ ಕೀರ್ತಿವೆತ್ತ ಶಾಂ
ಭವ ವರಮೂರ್ತಿ ಸೌಂದರವಪಾದಪಯೋರುಹವೀಗೆ ಸೌಖ್ಯಮಂ ॥

ವಿಷಯ : ಸೌಂದರ ನಂಬಿಯಣ್ಣನ ಕಥೆ.

ವಿಶೇಷ : ಅಕ್ಷರ ಚೆನ್ನಾಗಿದೆ. ಪ್ರತಿಯ ಕೊನೆಯಲ್ಲಿ ಸರ್ವಜಿತು ಸಂವತ್ಸರದ ಮಾರ್ಗಶಿರ ಶುದ್ಧ ೧೨ ಬುಧವಾರ ವಂಬತ್ತು ತಾಸಿಗೆ ಸೌಂದರ ಪುರಾಣ ಪುಸ್ತಕ ಸಂಪೂರ್ಣ ಮಂಗಳ ಮಹಾ ಎಂದಿದೆ.

—ಎಂಸಿಪಿ

197

ಕೆ. ೧೧೫೩/೧	**ಸೌಂದರಪುರಾಣ**	ವಾರ್ಧಕಷಟ್ಪದಿ
೧೧" × ೨.೫"	ಬೊಮ್ಮರಸ	ಸು. ೧೪೫೦
೧-೬೯ ಪತ್ರ	೧೩ ಪಂಕ್ತಿ	೫೭ ಅಕ್ಷರ

ಆದಿ : ಶ್ರೀಗುರು ಬಸವಲಿಂಗಾಯ ನಮಃ ॥ ಸೌಂದರ ಪುರಾಣ ಬರವುದಕ್ಕೆ ಶುಭಮಸ್ತು ।
ಶ್ರೀಮದನುಪಮ ಪುಣ್ಯನಿಧಿ ಪುಷ್ಪದತ್ತನೀ
ಭೂಮಿಯೊಳು ಜನಿಸುವೊಡೆ ಪಡೆವನು ಸದಾಶಿವನ
ನೇಮವನು ಕನಕಲತೆ ಕಾಂತಿಮತಿಯೆನಿಸುತಿಹ ರುದ್ರಕನ್ನೆಯರು ಸಹಿತಾ

ಪದ॥ ಶ್ರೀವರ ಸರೋಜಭವ ದೇವೇಂದ್ರ ಮುಖ್ಯನಾ
ವಿಭುದ ಮಕುಟಮಣಿಮಯರತ್ನ ವಿಮಳ ಪ್ರ
ಭಾವಿರಾಜಿತ ಚರಣನಮೃತಕರಶೇಖರನು ಶಂಕರನು ಸೌಖ್ಯ ಕರನೂ ॥

ಪಾವನಚಜಾತ್ರನುಜ್ವಳ ಭಾಳನೇತ್ರನಗ
ಜಾವಲ್ಲಭನು ನಿಗಮಧುರ್ಲ್ಲಭನು ರಕ್ಷಿಸುಗೆ
ಭೂವಳೆಯುವನು ನೀಲಕಂಠಲಿಂಗನು ಸುಜನಜನಹೃದಯ
ಸರಸಿಜ ಭೃಂಗನೂ ॥ ೧ ॥

ಅಂತ್ಯ : ಪರಶಿವನ ಗನಗರ್ಭಕುಹರ ಪರಮೇಷ್ಠಿ ಪಂ
ಕರುಹದಳನಯನ ರುದ್ರೇಶ್ವರಾ ಸದಾಶಿವಾ
ದ್ಯರಿಗಾಶ್ರಯಸ್ತಾನ ವಾದುದೆಂತಂತೆ ನಾನಾ ಶಿವಪುರಾಣಗಳಿಗೆ
ನಿರುತವಾಶ್ರಯ ವಾಯಿತು ಸೌಂಧರಪುರಾಣವೀ
ಪರಮ ಪ್ರಸನ್ನ ಕೃತಿಗೇಳ್ದರಿಗೆ ನೀಲಕಂ
ಥರಸೊಲಿದು ಧರ್ಮಾರ್ಥಕಾಮ ಮೋಕ್ಷಂಗಳಂ ಕರಣಿಸುವನಿದು
ನಿಶ್ಚಯಾ ॥ ೩೭ ॥
ಅಂತು ಸಂಧಿ ೧೯ಕ್ಕಂ ಪದನು ೧೧೧೭೬ಕ್ಕಂ ಸಮಾಪ್ತ ಮಂಗಳ
ಮಹಾ ಶ್ರೀ.

ವಿಷಯ : ತ್ರಿಷಷ್ಟಿ ಪುರಾತನರಲ್ಲಿ ಒಬ್ಬನಾದ ಸೌಂದರ ನಂಬಿಯ ಕಥೆ.

ವಿಶೇಷ : ಸಮಗ್ರ. ಶಕಟರೇಫದ ಬಳಕೆ ವಿರಳವಾಗಿ ಇದೆ. ಇದೇ ಕಟ್ಟಿನಲ್ಲಿ
ಶಿವಾಧಿಕ್ಯ ಪುರಾಣ ಮತ್ತು ವೈಷ್ಣವವಾದಖಂಡನ ಎಂಬ ಗ್ರಂಥಗಳವೆ.

—ವೈಸಿಬಿ

198

ಕೆ. ೧೨೫೭/೧	**ಸೌಂದರಪುರಾಣ**	ವಾರ್ಧಕಪಟ್ಪದಿ
೧೩.೩" × ೨.೪"	ಬೊಮ್ಮರಸ	ಸು. ೧೪೫೦
೧-೯೨ ಪತ್ರ	೧೨ ಪಂಕ್ತಿ	೬೨ ಅಕ್ಷರ

ಆದಿ : ಶ್ರೀಗುರು ಬಸವಲಿಂಗಾಯ ನಮಃ × × × ಸೌಂದರಪುರಾಣ ॥
ರಾಗ ನಾಟಿ ॥ ಪಲ್ಲವ ॥

ಶ್ರೀಮದನುಪಮ ಪುಣ್ಯನಿಧಿ ಪುಷ್ಪದತ್ತನೀ
ಭೂಮಿಯೊಳು ಜನಿಸುವಡೆ ಪಡೆವನು ಸದಾಶಿವನ
ನೇಮವನು ಕನಕಲತೆ ಕಾಂತಿನುತಿಯೆನಿಸುತಿಹ ರುದ್ರಕನ್ನೆಯರು
ಸಹಿತಾ

ಪದ||

ಶ್ರೀವರ ಸರೋಜಭವ ದೇವೇಂದ್ರ ಮುಖ್ಯನಾ
ನಾವಿಘುಧ ಮಕುಟಮಣಿ ರತ್ನ ಗಣ ವಿಮಳ ಪ್ರ
ಭಾವಿರಾಜಿತ ಚರಣನಮೃತಕರಶೇಖರನು ಶಂಕರನು ಸೌಖ್ಯಕರನೂ
ಪಾವನಚರಿತ್ರನುಜ್ವಳ ಭಾಳನೇತ್ರನಗ
ಜಾವಲ್ಲಭನು ನಿಗಮ ದುರ್ಲಭನು ರಕ್ಷಿಸುಗೆ
ಭೂವಳಿಯುವನು ನೀಲಕಂಠಲಿಂಗನು ಸುಜನಹೃದಯ ಸರಸಿಜ
ಭೃಂಗನು || ೧

ಅಂತ್ಯ : ಶ್ರಗ್ಧರವೃತ್ತ ||
ದಾರಿದ್ರೋದ್ರೇಕ ಭದ್ರದ್ವಿಭವಿದಳನ ಕಂಠೀರವಂ ಸರ್ವವಿದ್ಯಾ
ಧಾರಂಶ್ರೀನೀಲಕಂಠೇಶರ ಕರುಣಲಶತ್ಪಾರದುಗ್ಧಾಭ್ಧಿ ಸಮ್ಯ.
ಕ್ಸಾರಾಧೀಶ ಪ್ರಭಾಸಂಚಯ ವಿಧುವಿದಿತಂ ಸೌಂದರಾಧೀಶನೆಂದೆಂ
ಬೀರಮ್ಯಂಬೆತ್ತ ಪಂಚಾಕ್ಷರವನವರತಂ ಭಾವಿಸಲ್ ಶ್ರೀನಿವಾಸಂ ||

ಅಂತು ಸಂಧಿ ೧೯ಕ್ಕಂ ಪದನು ೧೧೯ಳಕ್ಕಂ ಮಂಗಳ ಮಹಾ ಶ್ರೀ ಶ್ರೀ × × × ಸೌಮ್ಯನಾಮ ಸಂವತ್ಸರದ ವೈಶಾಖ ಸಪ್ತಮಿ ಶುದ್ಧ ಶಶಧರವಾರದ ಪ್ರಾತಕ್ಕಾಲದಲ್ಲು ಸಕಲವೀರಮಾಹೇಶ್ವರರ ಶ್ರೀಪಾದ ಕಮಲಭೃಂಗನಾಗಿವಪ್ಪಲ್ಪಟ್ಟಂತಾ ಬೋಳಮಲ್ಲಿಕಾರ್ಜುನದೇವರು ಬರದ ಸೌಂದರ ಪುರಾಣ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ.

ವಿಷಯ : ನಂಬಿಯಣ್ಣನ ಕಥೆ.

ವಿಶೇಷ : ಸಮಗ್ರ. ಪ್ರತಿ ತುಂಬ ಚೆನ್ನಾಗಿದೆ. ಇದೇ ಕಟ್ಟಿನಲ್ಲಿ ಚೇರಮಕಾವ್ಯ ಮತ್ತು ವಿವೇಕ ಚಿಂತಾಮಣಿ ಎನ್ನುವ ಕೃತಿಗಳಿವೆ.

—ಜಿಜಿಎಂ

199

ಕೆ. ೧೭೧೪	**ಸೌಂದರಪುರಾಣ**	ವಾರ್ಧಕಷಟ್ಪದಿ
೧೬.೧" × ೧.೪"	ಬೊಮ್ಮರಸ	ಸು. ೧೪೫೦
೧-೨೦೧ ಪತ್ರ	೫ ಪಂಕ್ತಿ	೬೫ ಅಕ್ಷರ

ಆದಿ : ಶ್ರೀಗಣಾಧೀಶಾಯನಮಃ × × × ರಾಗ | ನಾಟ | ಪಲ್ಲ

ಶ್ರೀಮದನುಪಮ ಪುಣ್ಯನಿಧಿ ಪುಷ್ಪದತ್ತನೀ
ಭೂಮಿಯೊಳು ಜನಿಸುವಡೆ ಪಡೆದನು ಸದಾಶಿವನ
ನೇಮವನು ಕನಕಲತೆಕಾಂತಿಯೆನಿಸುತಿಹ ರುದ್ರಕಂನ್ಯೆಯರು ಸಹಿತಾ।

ಪದ ॥ ಶ್ರೀವರ ಸರೋಜಭವ ದೇವೇಂದ್ರಮುಖ್ಯ ನಾ
ನಾವಿಬುಧ ಮಕುಟರತ್ನಾವಳೀ ವಿಮಳಪ್ರ
ಭಾವಿರಾಜಿತ ಚರಣನಮೃತಕರಸೇಖರನು ಶಂಕರನು
ಸೌಖ್ಯಕರನೂ
ಪಾವನಚರಿತ್ರನುಜ್ವಳಭಾಳನೇತನಗ
ಜಾವಲ್ಲಭನು ನಿಗಮದುರ್ಲಭನು ರಕ್ಷಿಸುಗೆ
ಭೂವಳಿಯುವನು ನೀಲಕಂಠಲಿಂಗನು ಸುಜನಹೃದಯಸರಸಿಜ
ಭೃಂಗನು ॥ ೧

ಅಂತ್ಯ : ಸೌಂದರಪುರಾಣದೀ ಕೃತಿಯುವನಿಯೊಳಂದ
ಚಂದಮಂ ಪಡೆವಂತೆ ಸಂಪೂರ್ನಮಾಗಿ ರಚಿ
ಸೆಂದು ಚೊಕದೇವಪಾರ್ಯನಗರ್ಭಜಾತ ಚಿಕವೀರಣ್ಯೈಯ್ಯ ಬೆಸಸಲೂ
ಪೊಂದೇಗುಲಕ್ಕನರ್ಘ್ಯರತ್ನದ ಕಳಸವಂ
ತಂದು ಸೇರಿಸುವಂ ವರತೆವಡೆದೊಪ್ಪೇ
ಳ್ವಂ ದಿವ್ಯ ಶಿವಕವೀಂದ್ರರ ಭೃತ್ಯನೆನಿಪ ಕರ್ನಾಟಕವಿ
ಬೊಂಮರಸನೂ ॥ ೩೬

ವೃ ॥ ದಾರಿದ್ರದ್ರೇಕ ಭದ್ರದ್ವಿಪ ವಿದಳನ ಕಂಠೀರವಂ ಸರ್ವವಿದ್ಯಾ
ಧಾರಂ ಶ್ರೀನಲಕಂಠೇಶ್ವರನ ಕರುಣಾಪಾರ ದುಗ್ಧಾಬ್ಧಿಸಮ್ಯ
ಕ್ಪಾರಾಧೀಶ ಪ್ರಭಾಸಂಚಯಮಿದು ವಿಧಿತಂ ಸೌಂದರಾಧೀಶನೆಂ
ದೀ ರಮ್ಯಂಬೆತ್ತ ಪಂಚಾಕ್ಷರವನನವರತಂ ಚಿತ್ಸುಖಂ
ಶ್ರೀನಿವಾಸಂ ॥ ೪೦

ಅಂತು ಸಂಧಿ ೧೯ಕ್ಕಂ ಪದನು ೧೧೯೩ಕ್ಕಂ ಮಂಗಳಮಸ್ತು.

ವಿಷಯ : ನಂಬಿಯಣ್ಣನ ಕಥೆ.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ.

—ಜಿಜಿಎಂ

200

ಕೆ.ಎ. ೫೭೪/೧ | ಸೌಂದರಪುರಾಣ | ವಾರ್ಧಕಷಟ್ಪದಿ
೧೦.೫" × ೯.೫" | ಬೊಮ್ಮರಸ | ಸು. ೧೪೫೦
೧-೧೦೧ ಪುಟ | ೨೦ ಪಂಕ್ತಿ | ೨೯ ಅಕ್ಷರ

ಆದಿ: ವೀರಭದ್ರಾಯನಮಃ
ಪರವೆಯ ಪಯೋಧರದೊಳೋಯೆಂದು ನುಡಿಸಿ ಶಂ
ಕರನನೆಂದಿನಂತೆ ಆದಿ ಪಡಿವೊನ್ನ ಪಡೆದು ಸೌಂ
ಧರನು ವನಕೇಳಿಯಲಿ ಕುಸುಮದಾಮದೊಳು ಶಿವಲಿಂಗಮುಂ
ಕಾಣಿಸಿದನು
ಅನಘನಾಪತ್ಸಖ ನೀನೆಂದು ಪಿಪಿನಯುನವೀ
ಶನುಮೇಶ ನೂದೃತೀತನು ರುಷಿಸ್ತು ತ್ಯಾರೂಪಕಗಾಲ
ಯನುಲು ಆಭಯು ಊನಭವರೇಣಚರ್ಮಧರನಯಿಲಬಲಯೂ
ಯಿನಯನೊಲಕಾರ ಪರಿಯೌಧಯುಳಸುಗುಣಮುಂ
ಪನನಂತಕಧ್ವಂಸಿಯು ಸ್ತೋತ್ರಮಹಿಮನೆಂ
ದೆನಿಪ ದೇವಾಧಿಪ ಶ್ರೀನೀಲಕಂಠನೆಗಿಷ್ಟಫಲವನೊಲಿದು ॥ ೧ ॥

ಅಂತ್ಯ: ಧ್ವನಿಸುತಿಹ ಜಂತ್ರಕಿನ್ನರಿ ವೀಣೆಗಳನು ಪು
ರ್ವನ ಜರ್ವನಿಂ ನಿಲಿಸಿ ಪಾಡುವಿಂಚರಕೆ ಕಡು
ಕನಲಿ ಬಿತ್ತರಿಪ ಕಬ್ಬವಕೆ ಕೆಟ್ಟಬ್ಬರಿಸಿ ....
ಅನುನಯದೊಳುಪಚಾರಿಯ ಮಾತುಗಳಿರ್ಮ ಸು
ಮ್ಮನೆ ಮರ್ತ್ಯದೊರ್ವ್ವಳಿನೆಂ ಮನವಗಲಿ ದುಃಖಿಸಿ ಸೀತೆಯು
ತಾನಾಕೆ ಸರ್ವಮಸಹ್ಯವೆಂಬ ವಾಕ್ಯವನುದಾಹರಿಸಿದಳದೊಂದೆಡಿಯೆ

ವಿಷಯ: ಶಿವಪುರಾಣ. ಸೌಂದರನಂಬಿಯ ಕಥೆ.

ವಿಶೇಷ: ಗ್ರಂಥ ಅಸಮಗ್ರ. ಇವರೊಡನೆ ಹರಿಹರನ ರಗಳೆಗಳು ಎಂಬ ಕೃತಿಯೂ ಇದೆ.

—ಹಕರಾ

201

ಕೆ. ೧೦೯೩/೧೪ | ಸೌಂದರಪುರಾಣದ ನಾಂದ್ಯ | ವಾರ್ಧಕಷಟ್ಪದಿ
೧೦.೪" × ೧.೯" | ಬೊಮ್ಮರಸ | ಸು. ೧೪೫೦
೭೫-೮೦ ಪತ್ರ | ೧೩ ಪಂಕ್ತಿ | ೭೦ ಅಕ್ಷರ

ಆದಿ : ಸೌಂಧರಪುರಾಣದ ನಾಂದ್ಯಗಳು ||
ಶ್ರೀವರ ಸರೋಜಭವ ದೇವೇಂದ್ರ ಮುಖ್ಯ ನಾ
ನಾವಿಬುಧ ಮಕುಟಮಣಿರತ್ನ ಗಣ ವಿಮಳ ಪ್ರ
ಭಾವಿರಾಜಿತ ಚರಣನಮೃತಕರ ಶೇಖರನು ಶಂಕರನು ಸೌಖ್ಯಾಕರನೂ
ಪಾವನಚರಿತ್ರನುಜ್ವಳಭಾಳನೇತ್ರನಗ
ಜಾವಲ್ಲಭನು ನಿಗಮ ದುರ್ಲ್ಲಭನು ರಕ್ಷಿಸುಗೆ
ಭೂವಳಿಯಮನು ನೀಲಕಂಠ ಪಿಂಗ ಸುಜನಹೃದಯಸರಸಿಜ
ಭೃಂಗನೂ || ೧ ||

ಅಂತ್ಯ : ಭಸಿತ ಲೇಪನದ ವಜ್ರಾಂಗಮುಂ ತೊಟ್ಟ ರಂ
ಜಿಸುವ ಪಂಚಾಕ್ಷರಿಯ ವಾಘೆ ಭಕ್ತಿಯ ನಿಷ್ಠೆ
ಯೆಸಕಮೆ ಸುಖಾಸನಂ ರುದ್ರಾಕ್ಷೆ ಹಕ್ಕರಿಕೆಯಾಗೆ ಪಕ್ಕಂಗಳುಳ್ಳಾ
ಪಸುರ್ವ್ವರ್ಣದಶ್ವಮಂ ಸಿಂಗರಿಸಿ ಪುತ್ರಮಿ
ತ್ರಸಮುಹವಾದಿಯಾಗಿದ್ದರ್ಜನ ಸಹಿತ ಗಮ
ನಿಸುವಡುದ್ಯೋಗಿಸಿದನಂಬಿಕಾಪತಿಯ ಪಟ್ಟಣಕಾ ಮಹೀ
ಪಾಲನೂ || ೨೫ ||
ಸೌಂದರಪುರಾಣದ ನಾಂದ್ಯಂಗಳು ಸಮಾಪ್ತ ಮಂಗಳ ಮಹಾ ಶ್ರೀ.

ವಿಷಯ : ಸೌಂದರಪುರಾಣದ ನಾಂದಿಪದ್ಯಗಳು.

ವಿಶೇಷ : ಶಕಟರೇಫವನ್ನು ಬಳಸಿದೆ. ಬರಹ ಚೆನ್ನಾಗಿದೆ. ಇದೇ ಕಟ್ಟಿನಲ್ಲಿ ಶಬ್ದಮಣಿ ದರ್ಪಣ, ಕರ್ಣಾಟಕ ಶಬ್ದಮಂಜರಿ ಮೊದಲಾಗಿ ಒಟ್ಟು ೧೬ ಕೃತಿಗಳಿವೆ.

—ಕೆಆರ್‌ಎಸ್

202

ಕೆ. ೧೫೪೩/೫	ಸೌಂದರಪುರಾಣದ ನಾಂದ್ಯ	ವಾರ್ಧಕಷಟ್ಪದಿ
೧೧.೨" × ೧.೯"	ಬೊಮ್ಮರಸ	ಸು. ೧೪೫೦
೧೩–೧೭ ಪತ್ರ	೯ ಪಂಕ್ತಿ	೫೬ ಅಕ್ಷರ

ಆದಿ : ಸೌಂದರಪುರಾಣದ ನಾಂದ್ಯದ ವಾರ್ಧಿಕಪದ ||
ಶ್ರೀವರ ಸರೋಜಭವ ದೇವೇಂದ್ರ ಮುಖ್ಯನಾ
ನಾವಿಭುದ ಮಕುಟಮಣಿ ರತ್ನ ಗಣ ವಿಮಳ ಪ್ರ
ಭಾವಿರಾಜಿತ ಚರಣನಮ್ರುತಕರ ಶೇಖರನು ಶಂಕರನು ಸೌಖ್ಯಕರನೂ

ಪಾವನಚರಿತ್ರನುಜ್ವಳ ಭಾಳನೇತ್ರನಗ
ಜಾವಲ್ಲಭಂ ನಿಗಮದುರ್ಲ್ಲಭಂ ರಕ್ಷಿಸುಗೆ
ಭೂವಳೆಯವನು ನೀಲಕಂಠಲಿಂಗಂ ಸುಜನ ಹೃದಯ ಸರಸಿಜ
ಭೃಂಗನೂ ॥ ೧ ॥

ಅಂತ್ಯ : ವೃತ್ತ॥ ದಾರಿದ್ರೋದ್ರೇಕ ಭದ್ರದ್ವಿಪಭವಿದಳನ ಕಂಠೀರವಂ ಸರ್ವ ವಿದ್ಯಾ
ಧಾರಾಶ್ರೀನೀಲಕಂಠೇಶ್ವರನ ಕರುಣ ಸತ್ಪಾವರದುಗ್ಧಾಬ್ಧಿ ಸಮ್ಯ
ಕ್ತಾರಾಧೀಶ ಪ್ರಭಾಸಂಚಯ ವಿದು ವಿಧಿತಂ ಸೌಂದರಾಧೀಶನೆಂದೆಂ
ಬೀ ರಂಮ್ಯಂಬೆತ್ತ ಪಂಚಾಕ್ಷರನನವರತಂ ಭಾವಿಸಲ್ ಶ್ರೀನಿವಾಸಂ
॥ ೩೦ ॥

ಸೌಂದರಪುರಾಣದನಾಂದ್ಯದ ಪದಂಗಳು ಸಂಪೂರ್ನ್ನ· ಮಂಗಳ
ಮಹಾ ಶ್ರೀ

ವಿಷಯ : ಸೌಂದರ ಪುರಾಣದ ಮಂಗಳ ಪದ್ಯಗಳು.

ವಿಶೇಷ : ಇದರಲ್ಲಿ ೩೦ ಪದ್ಯಗಳಿವೆ. ಶಕಟರೇಫವಿದ್ದು ಬರಹ ಚೆನ್ನಾಗಿದೆ. ಇದೇ ಕಟ್ಟಿನಲ್ಲಿ ನೀಲಾಂಬಿಕಾ ಲಲಿತಸ್ತೋತ್ರ, ನೀಲಮ್ಮನ ಸ್ತೋತ್ರ ಇತ್ಯಾದಿ ೩೧ ಗ್ರಂಥಗಳಿವೆ.

—ಕೆಆರ್‌ಎಸ್

203

ಕೆ. ೯೧೭/೩ **ಸೌಂದರ್ಯ ಕಥಾರತ್ನ** ವೃತ್ತ, ಕಂದ, ಷಟ್ಪದಿ, ತ್ರಿಪದಿ

೧೭.೭″ × ೧″ ರಾಮೇಂದ್ರ ?

೧೧೯ ಪತ್ರ ೫ ಪಂಕ್ತಿ ೫೦ ಅಕ್ಷರ

ಆದಿ : .... ಸುಪರೀಕಕ್ಷರು ವಿಚಾರಿಸಿ ॥ ೨೭ ॥
ಬಿಡೆಯೊಂದರಿಮಾತ್ರೆ ಪೆಚ್ಚುಗವಲ್ಲದೆ
ಕಡಮೆಯಾದಡೆ ರಾಗರಸದಿಂದಾ ॥
ಕಡಮೆಯಾದಡೆ ರಾಗರಸದಿಂದ ನೆರೆಕೂಡಿ
ನಡದೀ ಕೃತಿ ಸುಜಸರು ಮೆ ....
.... ವೆಂಬ ಸೂತ್ರಗಳರಿಸುದೆ
ಕ್ರುತಿವೇಳಿನು ರಾಘವಾಂಕಾದಿ
ಕ್ರುತಿವೇಳಿನು ರಾಘವಾಂಕಾದಿಗಳು ಪ್ರಾಸತಗಿಟ್ಟರಜಲಳಗಳು
ದ್ರುಷ್ಟಾ ॥ ೨೮ ॥

× × ×

ಪರ್ಯಾಯವೀ ಕಬ್ಬಕೆ ನಾಮರೂಪ
ಸೌಂದರ್ಯಕಥಾರತ್ನ ವೆಂಬದೂ
ಸೌಂದರ್ಯ ಕಥಾರತ್ನ ವೆಂಬುದ ನಿ .... ಕ್ಷಿಸಿ ॥ ೩೧ ॥
ನುತ ಚೆಂನ್ನಪಾಖ್ಯಾನ್ರುಪಾತ್ಮಜ ರಾಮಭೂಪತಿ ಗರ್ಭಾಂಬುಧಿ
ಚಂದ್ರಮಾಪತಿಗರ್ಭಾಂಬುಧಿಚಂದ್ರಮ ರಾಮೇಂದ್ರ ಕೃತಿವೇಳ್ದನು
ಸುಜನರು ....

ಅಂತ್ಯ : ಧಾರಾಪುರದೊಳು ಭೋಜಮಹೀಶ ಗ
ಭೀರದೊಡ್ಡೋಲಗದಿಂದಿರೆ ಗ
ಭೀರದೊಡ್ಡೋಲಗದಿಂದಿರೆ ವರರುಚಿ
ಸಾರಕವಿ ....
ಭೂವರ ಕಾಳಿದಾಸನು ಮುಖ್ಯಾ
ಭೂವರ ಕಾಳಿದಾಸನು ಮುಖ್ಯರೊಡನಾಗ
ನೀವಿಂನು ಕೇಳಿ ಪೇಳುವೆನೊಂದು ॥ ೫ ॥
ಕ್ಲೇಶಂದು: ....
.... ದರ್ಯಾ ವಿಳಾಸಗಳಾದ ಕಾಲದಿಧೈರ್ಯದಲಿ
ಸಂತೋಷಿಪ .... ಯಿಲ್ಲಾ ॥ ೬ ॥
ಯೆಂದಾಮಾತನು ಕೇಳುತ ವರರುಚಿ
ಯಾನಂನದಿ ....

ವಿಷಯ : ಬೇತಾಳ ಕಥೆಗಳು.

ವಿಶೇಷ : ಅಸಮಗ್ರ. ಶಿಥಿಲ. ಗರಿಗಳ ಅಂಚು ಮುರಿದು ಗ್ರಂಥ ಲುಪ್ತವಾಗಿದೆ. ಇದೇ ಕಟ್ಟಿನಲ್ಲಿ ಕಂಠಿ ಹಂಪರ ಸಮಸ್ಯೆಗಳು ಮತ್ತು ಧರ್ಮನೀತಿ ಎಂಬ ಕೃತಿಗಳಿವೆ.

—ವೈಸಿಬಿ

204

ಕೆ. ೬೦೨	**ಸೌಗಂಧಿಕಾ ಪರಿಣಯು**	ಗದ್ಯ
೨೫.೧″ × ೨″	ಮುಮ್ಮಡಿ ಕೃಷ್ಣರಾಜ	೧೮೫೦
೧–೪೫೧ ಪತ್ರ	೮ ಪಂಕ್ತಿ	೧೦೦ ಅಕ್ಷರ

ಆದಿ : ಶ್ರೀ ಚಾಮುಂಡಿಕಾಂಬಾಯೈ ನಮಃ ॥ ಶುಭಮಸ್ತು ॥ ಶ್ರೀಮಹಿಶೂರ ಪುರವರಾಧೀಶ ಶ್ರೀಕೃಷ್ಣರಾಜವಡಯರವರಿಂದ ನಿರ್ಮಿತವಾದ

ಸೌಗಂಧಿಕಾ ಪರಿಣಯವೆಂಬ ನೂತನ ಕೃತಿಯಂ ಬರೆಯುವದಕ್ಕೆ ನಿರ್ವಿಘ್ನಮಸ್ತು ||

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ
ಪ್ರಸನ್ನವದನಂ ಧ್ಯಾಯೇತ್ಸರ್ವವಿಘ್ನೋಪಶಾಂತಯೇ ||

× × × ×

ಕಲಿಯುಗದಾದಿಯೊಳ್ ಜನಿಶಿ ನಂದನಮಂದಿರದಲ್ಲಿ ಗರ್ವದಿಂ
ಬಲಿದನಿಶುಂಭಶುಂಭರನು ಭಂಜಿಶಿ ಯಾದವವಂಶಲಕ್ಷ್ಮಿಯಂ
ಬೆಳೆಯಿಸವಂದದಿಂದ ಮಹಿಶೂರ ಮಹಾಬಲಶೈಲ ಶೃಂಗದೊಳ್
ನೆಲಸಿದ ಲೋಕಮಾತೆ ಪರದೇವತೆ ಪಾಲಿಸುಯಂನಭೀಷ್ಟಮಂ || ೧ ||

ಅಂತ್ಯ : ಶ್ರೀಮನ್ಮಹಿಶೂರ ರಾಜಾಧಿರಾಜ ಮಹಾರಾಜ ಚಾಮರಾಜ ವಡೆಯರವರ ಧರ್ಮಪತ್ನಿ ಕೆಂಪನಂಜಮಾಂಬಾ ಗರ್ಭಸುಧಾಂಬುಧಿರಾಕಾ ಸುಧಾಕರಾಯಮಾಣರಾದ ಶ್ರೀ ಚಾಮುಂಡಿಕಾವರಪ್ರಸಾದೋದ್ಭವರಾದ ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಲ ದೇಶಾವತಂಸ ಕರ್ನಾಟಕ ಜನಪವ ಸಂಪದಧಿಷ್ಠಾನ ಭೂತ ಶ್ರೀಮನ್ಮಹಿಶೂರ ಮಹಾಸಂಸ್ಥಾನ ಮಧ್ಯ ದೇದೀಪ್ಯಮಾನ × × × ಭೂಮಂಡಲಾಧಿಪತ್ಯ ಸತ್ಯಪ್ರತಾಪ ಸಕಲಭಾಷಾ ಸಾಮ್ರಾಜ್ಯ ಸರ್ವಂಕಷ ಚತುರ್ವಿಧ ಸರಸಕವಿತಾ ನಿಸ್ಸಹಾಯ ನಿರ್ಮಾಣ ಧಾರೇಯ ಘಟಿಕಾ ಶತಗ್ರಂಥ ದಿನದಿನ ಪ್ರಬಂಧ ನಿಬಂಧನ ಧುರಂಧರ ತ್ರಿಭುವನ ಪವಿತ್ರಾತ್ರೇಯಗೋತ್ರ ಸುಚರಿತ್ರ ಚಾಮರಾಜಮಹಾರಾಜ ಪುತ್ರ ನರಪತಿ ಬಿರುದ ಮಹಿಶೂರ ಪುರವರಾಧೀಶ ಶ್ರೀಕೃಷ್ಣರಾಜವಡೆಯರವರಿಂದ ರಸಿಕಜನಾನಂದಕರಮಾಗಿ ವಿರಚಿತಮಾದ ಸೌಗಂಧಿಕಾ ಪರಿಣಯವೆಂಬ ಯಿಾ ನವೀನಕೃತಿಯೊಳ್ ಮಹೇಂದ್ರಪಟ್ಟಾಭಿಷೇಕ ವರ್ಣನವಮಂ ಅನುಕ್ರಮಣಿಕಾ ನಿರೂಪಣವಂ ಫಲಶೃತಿಯಂ ಬಂಣಿಸುವ ಯಿಾ ಸಕಲ ಕಥೆಗಳಿಂದ ಸಂಪೂರ್ಣವಾಗಿ ಸರ್ವಮಂಗಳಕರಮಾಗಿರುತ್ತ ನಿರುಉದೆಂಬ ಮೂವತ್ತಾರನೆ ಆಶ್ವಾಸಕ್ಕೆ ಮಂಗಳಮಹಾಶ್ರೀ ||

ವಿಷಯ : ದೂರ್ವಾಸಮುನಿಯಿಂದ ಶಾಪಗ್ರಸ್ತನಾದ ಇಂದ್ರನು ಸುಗಂಧನೆಂಬ ರಾಜನಾಗಿ ಜನಿಸಿ ಸೌಗಂಧಿಕೆಯಾಗಿ ಹುಟ್ಟಿದ ಶಚೀದೇವಿಯನ್ನು ವರಿಸಿ ತನ್ನ ಪದವಿಯನ್ನು ಪಡೆದ ಕಥೆ.

ವಿಶೇಷ : ಸುಂದರ ಬರಹ. ಸಮಗ್ರ. ಪ್ರತಿ ಚೆನ್ನಾಗಿದೆ, ಶುದ್ಧವಾಗಿದೆ.

—ವೈಸಿಬಿ

205

ಕೆ. ಬಿ. ೫೨೩/೫ ಸೌಗಂಧಿಕಾಪರಿಣಯ ಸಾಂಗತ್ಯ

೮" × ೬.೫" ಮುಮ್ಮಡಿ ಕೃಷ್ಣರಾಜ (?) ೧೮೫೦

೬೭–೭೧ ಪತ್ರ ೧೫ ಪಂಕ್ತಿ ೧೮ ಅಕ್ಷರ

ಆದಿ : ಪೀಠಿಕೆ-ಶ್ರೀವಿನಮದಖಿಲ ದಿಕ್ತಟಾಗತ ನೃಪಕೂಟ ಕಿರೀಟತಟಘಟಿತ ಮಣಿಪಟಲ ಚಟುಲರುಚಿರ ರುಚಿನಿಚಯ ನಿಚಿತ ಚರಣನಖ ಪ್ರಭಾ ವಿಭಾಸಿತ × × × × ಕಂಠೀರವಾದ್ಯನೇಕ ಬಿರುದಾಂಕಿತ ರಾಜಾಧಿ ರಾಜ ಕವಿಭೋಜ ದೀನಸುರಭ್ಯಜ ಧರಾ ಬಿಡೌಜಃ ಶ್ರೀ ಕೃಷ್ಣರಾಜ ಸಾರ್ವಭೌಮರ ರಂಮ್ಯಾಜ್ಞಾ ಬಲದಿಂ ಭೂಭಾಮಿನೀ ಫಾಲರತ್ನ ತಿಲಕದಂತೊಪ್ಪುವ ಮಹಿಶೂರ ಪುರದಲ್ಲಿ ಹೃದ್ಯಮಾದ ಶ್ರೀಮದ್ಭಾರತೀ ವಿರಾಜಿತ ಜ್ಞಾನೋದಯವೆಂಬ ಮುದ್ರಾಕ್ಷರ ಶಾಲೆಯಲ್ಲಿ ಗ್ರಂಥವಂ ನಚ್ಚುಹಾಕಿಸಿ ಪ್ರಸಿದ್ಧಂ ಮಾಡಲ್ಪಟ್ಟುದಿಧೆ.

ಶ್ರೀ ಚಾಮುಂಡಾಂಬಾಯ್ಯೆ ನಮ । ಸೌಗಂಧಿಕಾಪರಿಣಯ ಸಾಂಗತ್ಯಾ । ಶ್ರೀರಸ್ತು ॥

ಶುಕ್ಲಾಂಬರಧರಂವಿಷ್ಣುಂ × × × × × ನಮೋಸುತ್ತೆ ॥

ಶ್ರೀ ಗೌರಿಯನು ಕೂಡಿ ಗರಳಪುರಿಗೆ ಬಂದು ಬೇಗದಿ ಭಕ್ತರ ಸಲಹಿ ।
ನಾಗಭೂಷಣನಾಗಿ ನಲಿಯುತಲೊಪ್ಪುವ ಭೋಗನಂಜುಂಡನ ನೆನೆವೆ ॥ ೧ ॥. × × × ×

ಧರಣಿಯನಾಳ್ವ ಶ್ರೀಕೃಷ್ಣರಾಜೇಂದ್ರನು । ವಿರಚಿಸಿರುವ ಸೌಗಂಧಿ ಕೆಯಾ ।
ಪರಿಣಯವೆಂಬ ಕಥೆಯನು ಸಂಕ್ಷೇಪದೊ । ಳೊರೆವನು ಬಲ್ಲಂತೆ ನಾನು ॥ ៥ ॥

ಅಂತ್ಯ : ಮುನಿಗೆ ವೃಷ್ಟಾಂನವನ್ನಿಕ್ಕಲವನು । ನಿಂನ್ನ ತನಯನ ಕರೆಯೆಂದು ಪೇಳೆ । ಮನದೊಳು ಚಿಂತೆಯನಾಂತು.

ವಿಷಯ : ಸೌಗಂಧಿಕಾವಿವಾಹ.

ವಿಶೇಷ : ೨೯ ಪದ್ಯಗಳು ಮಾತ್ರ ಇವೆ. ಇದರೊಡನೆ ಕೃಷ್ಣದಾನ, ಗೀತ ಗೋವಿಂದ, ಸೌಗಂಧಿಕಾಪರಿಣಯ (ಸಾಂಗತ್ಯ), ಶೋಭಾನೇ ಪದ ಗಳು, ವೆಂಕಟೇಶಸ್ತವ, ರುಕ್ಮಿಣೀಕಲ್ಯಾಣ, ಹಾಡುಗಳು, ಸೀತಾ ಕಲ್ಯಾಣ ಹಾಡುಗಳು ಈ ಕೃತಿಗಳಿವೆ.

—ಎಸ್‌ಎನ್‌ಕೆ

206

ಕೆ. ಎ. ೫೬೬/೨ | ಸೌಗಂಧಿಕಾಪರಿಣಯ | ಸಾಂಗತ್ಯ
೮" × ೧೧.೩" | ನಂಜುಂಡ | ಸು. ೧೮೪೦
೧-೪೯ ಪತ್ರ | ೨೪ ಪಂಕ್ತಿ | ೧೮ ಅಕ್ಷರ

ಆದಿ : ಶುಕ್ಲಾಂಬರದರಂ ವಿಷ್ಣುಂ ॥ × × × × ॥ ಶ್ರೀವೀರಭದ್ರಾಯ ನಮಃ ॥
ಶ್ರೀಗೌರಿಯನು ಕೂಡಿ ಗರಳಪುರಿಗೆ ಬಂದು
ಜೇಗದಿ ಭಕ್ತರ ಸಲಹಿ ।
ನಾಗಭೂಷಣನಾಗಿ ನಲಿಯುತಲೊಪ್ಪುವ
ಭೋಗನಂಜುಂಡನ ನೆನೆವೆ ॥ ೧ ॥

× × × ×

ಧರಣಿಯನಾಳ್ವ ಶ್ರೀಕೃಷ್ಣರಾಜೇಂದ್ರನು
ವಿರಚಿಸಿರುವ ಸೌಗಂಧಿಕೆಯಾ
ಪರಿಣಯುವೆಂಬ ಕಥೆಯನು ಸಂಕ್ಷೇಪದೊ
ಳೊರವೆನು ಬಲ್ಲಂತೆ ನಾನು ॥ ೪ ॥

ಅಂತ್ಯ : ಧರಣಿಪಾಲ ಕೃಷ್ಣರಾಜೇಂದ್ರನಾಜ್ಞೆಯ
ಶಿರದೊಳಗಿರಿಸಿ ಚಿತ್ತದೊಳೂ ।
ಗರಳಪುರೇಶನ ನೆನದು ನಂಜುಂಡನು
ವಿರಚಿಸಿದನು ಕೃತಿಯನ್ನೂ । ೫೨ ॥

× × × ×

ಅಂತು ಸಂಧಿ ೧೮ಕ್ಕಂ ಪದನು ೭೨೬ಕ್ಕ ಮಂಗಳ ಮಹಾ ಶ್ರೀ ಶ್ರೀ.

ವಿಷಯ : ಸೌಗಂಧಿಕಾ ವಿವಾಹದ ಕಥೆ.

ವಿಶೇಷ : ಸಮಗ್ರಕೃತಿ. ನೋಡಿ ಅಕ್ಷರ. ಪ್ರತಿ ಸುದೃಢ. ಇದರೊಂದಿಗೆ 'ರಾಜಶೇಖರವಿಳಾಸ'ವೆಂಬ ಇನ್ನೊಂದು ಕೃತಿ ಇರುತ್ತದೆ.

—ಎಂಸಿಎಂ

207

ಕೆ. ಬಿ. ೫೧೭ | ಸೌಗಂಧಿಕಾಪರಿಣಯ | ಸಾಂಗತ್ಯ
೫.೧" × ೭.೩" | ನಂಜುಂಡ | ಸು. ೧೮೪೦
೧-೧೮೭ ಪುಟ | ೧೪ ಪಂಕ್ತಿ | ೧೩ ಅಕ್ಷರ

ಆದಿ : ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ × × ×
ಶ್ರೀಗೌರಿಯನು ಕೂಡಿ ಗರಳಪುರಿಗೆ ಬಂದು
ಬೇಗದಿ ಭಕ್ತರ ಸಲಹಿ
ನಾಗಭೂಷಣನಾಗಿ ನಲಿಯುತಲೊಪ್ಪುವ
ಭೋಗನಂಜುಂಡನ ನೆನೆವೆ ॥ ೧ ॥

× × × ×

ಧರಣಿಯನಾಳ್ವ ಶ್ರೀಕೃಷ್ಣರಾಜೇಂದ್ರನು
ವಿರಚಿಸಿರುವ ಸೌಗಂಧಿಕೆಯಾ
ಪರಿಣಯವೆಂಬ ಕಥೆಯನು ಸಂಕ್ಷೇಪದೊ
ಳೊರೆವೆನು ಬಲ್ಲಂತೆ ನಾನೂ ॥ ೪ ॥

ಅಂತ್ಯ : ಧರಣಿಪಾಲ ಕೃಷ್ಣರಾಜೇಂದ್ರನಾಜ್ಞೆಯ
ಶಿರದೊಳಗಿರಿಸಿ ಚಿತ್ತದೊಳು
ಗರಳಪುರೀಶನ ನೆನೆದು ನಂಜುಂಡನು
ವಿರಚಿಸಿದನು ಕೃತಿಯನ್ನು ॥

× × × ×

ವರ ಸೌಗಂಧಿಕಾಪರಿಣಯವೆನ್ನುವ
ಸರಸವಾದೀ ಕೃತಿಯನ್ನು
ಬರದೋದಿ ಕೇಳಿದ ಜನರುಗಳೆಲ್ಲರ
ಪೊರೆವ ಶ್ರೀಕೃಷ್ಣರಾಜೇಂದ್ರ ॥
ಅಂತು ಸಂಧಿ ೧೪ಕ್ಕಂ ಪದನು ೭೨೬ಕ್ಕಂ ಮಂಗಳ ಮಹಾ ಶ್ರೀ.

ವಿಷಯ : ಸೌಗಂಧಿಕಾ ವಿವಾಹೋತ್ಸವ.

ವಿಶೇಷ : ಗುಂಡಾದ ಅಕ್ಷರ, ಕಲ್ಲಚ್ಚಿನ ಮುದ್ರಣ. ಪ್ರತಿಯೊಂದು ಸಂಧಿಯ ಆದಿಯಲ್ಲೂ 'ಶ್ರೀ ಚಾಮುಂಡಾಂಬ ಪ್ರಸನ್ನಾ' ಎಂಬ ನುಡಿ ಇದೆ.

—ಶ್ರೀನಂತ

208

ಕೆ. ೮೭೭/೨	ಸೊಬಗಿನ ಸೋನೆ	ಸಾಂಗತ್ಯ
೧೧.೨" × ೧.೨"	ದೇಪರಾಜ	ಸು. ೧೪೨೦
೧–೭೯ ಪತ್ರ	೫ ಪಂಕ್ತಿ	೬೪ ಅಕ್ಷರ

ಆದಿ : ಸೊಬಗಿನ ಸೋನೆ ॥

ಶ್ರೀಮದ್ದೇವರದೇವ ವಂದಿತ ಜನಕ್ಲಾನಂದವಾರಾಂನಿಧಿ
ದೀಮಾಂನಾರದ ಗಾನತೋಷಿತ ಮನ ನಾಗಾಸುರಚ್ಛೇದ ಕಾ
. . . ಡ ವಿಘಾತದಕ್ಷ ಕಲಂಕಾಂಕನೆ ರಕ್ಷಿಸಾ
ಸಾಮಾಮ್ನಾಯ ಪಯಃ ಪಯೋಧಿಗು . . . . . ಧೂಟಿವರಾ ॥
ಕಂಜಜ ಕಂಜಾಕ್ಷ ನತ ಮಂಜುಳಪಾದ
ಕಂಜ ಕುಂಜರದೈತ್ಯಭಂಜನಾ
ನಂಜುಭಾಜನ ಕಂಜ ಬಾಂಧವರಾಥ
ನಂಜೆಯಂಬಕ ತ್ರ್ಯಂಬಕಜಯಾ ॥ ೧ ॥

× × × ×

ಚಂದನದಂಪುತಾವರೆಗೊಳ ಪೂವಲ್ಲಿ
ಕಂದನ ತೊದಲೊಂದಿದ ನುಡಿ
ಪೊಂದಿಸಗಲ ಕೂಡುವ ನಲ್ಲಳ ಸ್ನೇಹ
ದಂದದೇಪುಗನ ಕಾವ್ಯದರಸಾ ॥ ೬ ॥

ಅಂತ್ಯ : ಆ ನುಡಿಗಳಿ ಪೆಚಿ ಜಸಗಂಪು ಬಂದ
ಸುನಂದ ಅಧಿಗತರಿರಿತ್ತಾ
ಬಾನೆಡೆ ಮರುನೋಳ್ಪ ಜಗದಿಂದ ವಿ
ಮಾನ ದೊಳ್ಳೈತಂದರಸೆಯೊಳೆ ॥ ೪೬ ॥
ನುಡಿದೆ ನಿಂನಡಿ . . . ದುವಜುರಿದಾ ನಿಂನ್ನಾನು
ನುಡಿಸೂವೆನೆಂದು ನಾಲಲಿತ್ತೆಗೆ ॥
ವಡನೇನಂಬೆಂದಾಡೆಯರಿ ನೂಡಿ ಯರಡಾಗೆ
ಪೊಡವಿ . . . .

ವಿಷಯ : ಶೃಂಗಾರಕಥೆ.

ವಿಶೇಷ : ಶಕಟರೇಫವನ್ನು ಬಳಸಿದೆ. ಅಸಮಗ್ರಪ್ರತಿ. ೯ನೆಯ ಸಂಧಿಯಲ್ಲಿ ೪೬ನೆಯ ಪದ್ಯದವರೆಗೆ ಮಾತ್ರವಿದೆ. ೬೮ನೆಯ ಪತ್ರದವರೆಗೆ ಕ್ರಮಾಂಕವಿದೆ. ಮುಂದೆ ಇರುವ ೧೧ ಪತ್ರಗಳಿಗೆ ಕ್ರಮಾಂಕವಿಲ್ಲ. ಕೆಲವು ಪತ್ರಗಳಿಗೆ ಹುಳು ಹೊಡೆದಿದೆ. ಇದರೊಡನೆ ಆರೋಗ್ಯ ಚಿಂತಾಮಣಿ ಎಂಬ ಸಂಸ್ಕೃತ ಗ್ರಂಥವಿದೆ.

—ಕೆಆರ್‌ಎಸ್

209

ಕ. ೯೯೫ **ಸೊಬಗಿನ ಸೋನೆ** ಸಾಂಗತ್ಯ

೯.೫″ × ೨″ ದೇಪರಾಜ ಸು. ೧೪೧೦

೧೩೩ ಪತ್ರ ೧೦ ಪಂಕ್ತಿ ೪೮ ಅಕ್ಷರ

ಆದಿ : ಸೊಬಗಿನ ಸೋನೆಯ: ಪುಸ್ತಕಕ್ಕೆ ಶುಭಮಸ್ತು ||

ಪಲ್ಲವ | ನವಿಲೆ ನಂದನವನವೆ ನವಿಲೆ

ಪದನೂ || . ಸಹಿತಬುಜಾಕ್ಷನನೆಡದಲಿವಾಗೀ
ಶ್ವರಿಸಹಿತಜನನು ಬಲದಲಿ
ಗಿರಿಜೆಪತಿ ರುದ್ರನುರದಲಿ ಪೆತ್ತ
ಪರಶಿವನಡಿಗಳ್ಗೆ ಶರಣೆಂಬೆ || ೧

ಅಂತ್ಯ : ಪರಿಮಳದಿಕ್ಕೆ ಮಂದಾನಿಲ ಚಾವಡಿ
ಮಜಿದುಂಬಿ × ×
× × ಮನ್ಮಥರಿಹ ಠಾವೆನೆ
ಪುರವನು ಬಣ್ಣಿ ಪರರಿದಲ್ತು || ೫೩
ಏನೆಂದುಪಮಿಸಬಹುದು ಪಟ್ಟಣದೊಳು
× ×

ವಿಷಯ : ಶೃಂಗಾರಕಥೆ.

ವಿಶೇಷ : ಪ್ರತಿ ತುಂಬ ಶಿಥಿಲ, ಪ್ರತಿಯ ಎಡಭಾಗದ ಎಲ್ಲ ಗರಿಗಳೂ ಮುರಿದಿವೆ.

—ಜಿಜಿಎಂ

210

ಕ. ೧೫೧೪ **ಸೊಬಗಿನ ಸೋನೆ** ಸಾಂಗತ್ಯ

೧೩.೫″ × ೧.೭″ ದೇಪರಾಜ ಸು. ೧೪೦೦

೧–೧೨೫ ಪತ್ರ ೫ ಪಂಕ್ತಿ ೬೮ ಅಕ್ಷರ

ಆದಿ : ಶ್ರೀಮತ್ಕಾರಾಪುರದ ಬ್ರಹ್ಮದೇವರ ಪಾದಾರವಿಂದವೆ ಗತಿ . ಬಗಿನ ಸೋನೆಯ . . . ಸ್ತು || ಸುರಭಾವತಿ ಕಥೆ.

ಉತ್ತ್ರಾ || ಶ್ರೀಮದ್ದೇವರ ದೇವವಂದಿತ ಜನಕ್ಯಾನಂ ....
.... ತಮನಂ ನಾಗಾಸುರಚ್ಛೇದಕಾ

ಕಾವೋದ್ದಂಡ ವಿಘಾತದಕ್ಷನಕಲಂಕಾಂಕಾ ....
ಯೋದಿಗುಡುಪಾಂ ಪಂಪಾವಘೂಟಿವರಾ ॥ ೧

ಪದನೂ ॥ ಪದನೂ ॥ ಕಂ ... .
ಕಂಜರದೈತ್ಯಾಭಂಜನ ನಂಜುಭಾಜನ
ಕಂಜಬಾಂಧವರಾಜಥ
ನಂಜೆಯೆಂಬಕತ್ರಿಯ ....

ಅಂತ್ಯ : ಪೊಯ್ವುಜಾಲೆಭಕರದ ಸೀರ್ಪನಿಯಿರ್ದ
ವೈವೆಚ್ಚಿ ತೋರ್ಪವಾಗಸದಲ್ಲಿ
ಜ . . . ಶ್ರಣಗೆದೆಡೆಯನು ನೋಡಲುಡುಗಣ
ವೈಯಾಂತುಯಿಳೆಗೈತಪ್ಪಂತೆ ॥
ಮತ್ತೆತ್ತಲು ಮುಗುವಜಿಂದಗಿಗ್ಗೂಳ
ಪೋಳಾಪೊತ್ತೆಳ . . . .

ವಿಷಯ : ಶೃಂಗಾರ ಕಥೆ.

ವಿಶೇಷ : ಅಸಮಗ್ರ. ಆದಿಯ ಕೆಲವು ಗರಿಗಳನ್ನು ಹುಳು ತಿಂದಿದೆ.

—ಜಿಜಿಎಂ

211

ಕೆ. ಎ. ೩೫೯/೩	ಸೋಗಾನಿ ಅಗ್ರಹಾರದ ಕೈಫಿಯತ್ತು	ಗದ್ಯ
೧೩.೫" × ೮.೬"	?	?
೩೭–೪೦ ಪತ್ರ	೨೭ ಪಂಕ್ತಿ	೨೩ ಅಕ್ಷರ

ಆದಿ : ಸೋಗಾನಿ ಅಗ್ರಹಾರದ ಕೈಫಿಯತ್ತು।
ಶಾಲಿವಾಹನಶಕ ೧೧೩೫ [ರಲ್ಲು] (ನೆಯ) ಶ್ರೀಮುಖಸಂವತ್ಸರದ ಮಾಘಶುದ್ಧ ೧೫ ಇಂದುವಾರ ಚಂದ್ರೋಪರಾಗಪರ್ವ [ಣಿ] (ದ) ಪುಣ್ಯಕಾಲದಲ್ಲು ತುಂಗಭದ್ರಾತೀರ ದೂರ್ವಾಸಕ್ಷೇತ್ರ ಶಿವಮುಗ್ಗೆ, ಶಿವಮುಗೆ (ಶಿವಮೊಗ್ಗೆ) ಭೀಮೇಶ್ವರನ ಸನ್ನಿಧಿಯಲ್ಲು, ಆರಗದ ವೇಂಠ್ಯಕ್ಕೆ ಸಲುವ [ಗಂಗೆಮಂಡಲ] (ಗಂಗಮಂಡಲ) ನಾಡ ಒಳಗಣ ಹೊಳೆಹೊನ್ನೂರವಳಿತವಾದಯ್ಗಡತೊರೆ (ಶೀ) ಮೆ (ಸೀ) ಸೋಗಾನಿ ಅಗ್ರಹಾರ ೧ಕ್ಕೆ ವೀರಬಲ್ಲಾಳರಾಯನು [ಹೌಂಸಳ] (ಹೌಸಳ) ಪುರದಲ್ಲು ಸಿಂಹಾಸನಾರೂಢನಾಗಿ ರಾಜ್ಯವನಾಳುತ್ತಿದ್ದಲ್ಲಿ, ಒಂದಾ

ನೊಂದು ದಿವಸ [ಸ್ವ್ಯಾರಿ] (ಸವಾರಿ) ಮಾರ್ಗವಾಗಿ ಹೊರಟು ತುಂಗ ಭದ್ರಾ ಸರಹದ್ದು [ಹಿಡದು] (ಹಿಡಿದು) ಬರುತ್ತಾ.

ಅಂತ್ಯ : ಹೈದರನಾಯಿಯುಕ ಎಂಬವನು ದಂಡುಕಟ್ಟಿಕೊಂಡು ಬಂದು ಈ ರಾಜ್ಯ ತೆಗೆದುಕೊಂಡು ನವಾಬ ಎಂತ ಹೆಸರ ಮಾಡಿಕೊಂಡು ರಾಜ್ಯವ ಆಳಿದ. ಆತನ ಮಗ ಟೀಪುಸುಲ್ತಾನನು ಬಾದಶಹಾ ಎಂಬ ಹೆಸರಿನಿಂದ ರಾಜ್ಯವ ಆಳಿದ। ಆಮೇಲೆ ಇಂಗ್ರೇಜಿಯವರಿಗೆ ಸಂಸ್ಥಾನವಾಯಿತು.

ಈ ಅಗ್ರಹಾರದಲ್ಲು ಇತರವ ದೊಡ್ಡಕೆರೆ ೧॥ ವಿಟ್ಠಲದೇವರ ಗುಂಡಿ (ಗುಡಿ) ೧ ಊರ ಮುಂದೆ ಶಂತರೇಶ್ವರ ೧॥ ನದೇವರ ಗುಡಿ ಕೆರೆ ಹಿಂದೆ ತೋಟಸ್ಥಳ ೧ ಶ್ರೀ.

ವಿಷಯ : ಸೋಗಾನಿ ಅಗ್ರಹಾರದ ವಿಷಯ ನಿರೂಪಣೆ.

ವಿಶೇಷ : ಇದನ್ನು ೧೯೫೬ರಲ್ಲಿ ಮದರಾಸಿನ D 1966 ಹಸ್ತಪ್ರತಿಯಿಂದ ಪ್ರತಿ ಮಾಡಲಾಗಿದೆ. ಇದರೊಡನೆ ಅಷ್ಟಗ್ರಾಮಗಳ ಕೈಫಿಯತ್ತು, ಮೈಸೂರು ನಗರದ ಪೂರ್ವೋತ್ತರ ಸಂಗತಿ ಎಂಬ ಇತರ ಎರಡು ಗ್ರಂಥಗಳಿವೆ. ಪತ್ರದ ಒಂದು ಕಡೆ ಮಾತ್ರ ಬರವಣಿಗೆಯಿದೆ.

—ಬಿಎಸ್ಎಸ್

212

ಕೆ. ೧೨೫೩/೨ | ಸೋಬನದ ತ್ರಿವಿಧಿ | ಹಾಡು

೭.೮″ × ೨″ | ? | ?

೩೭–೭೨ ಪತ್ರ | ೧೧ ಪಂಕ್ತಿ | ೩೮ ಅಕ್ಷರ

ಆದಿ : ॥ ಶ್ರೀ ॥ ಸೋಬನ ತ್ರಿವಿಧೆ ॥
ತಂನ್ನಾ ತಾನಿದರಿಟ್ಟು ಚಿಂನಾದೋರುವೆನೆಂದು ।
ಕಂನೆರಾರತಿಯ ಮೊಳೆದೋರಿ ॥
ದಂದದೊಳಿಪ್ಪ ಸಂನಹಿತ ಗುರುವೆ ಶರಣೆಂಬೆ ॥ ೧ ॥

ಅಂತ್ಯ : ಆರ ಸಿರಿಯು ಆರ ಬಲುಹು ಆರ ಶರೀರ ನಿತ್ಯವೆಂದು ।
ಕೇಳಿ ನೆಲೆಯು ತಿಳಿದುದಂನು ಅರಿದ ಮೇಲೆ ಗರ್ವವೆ ।
ಮಾರವೈರಿ ಶಂಕರೇಶ್ವರನ ಚರಣ ಕಮಲವಂನು ಜಪಿಸಿ
ಸಿರಿ ಸಕಲ ಭಕ್ತರೆಲ್ಲ ನಿತ್ಯ ಮುಕ್ತರಪ್ಪುದೈ ॥ ೭ ॥ ಶ್ರೀ ॥

ವಿಷಯ: ಗೌರಿ, ಗಣೇಶ, ಶಿವ, ಶಾರದೆ–ಮುಂತಾದ ದೇವದೇವತೆಗಳನ್ನು ಸ್ತುತಿಸುವ ಹಾಡುಗಳು.

ವಿಶೇಷ: ವಿವಿಧ, ಛಂದ, ರಾಗ, ತಾಳಗಳಲ್ಲಿ ಹಾಡುಗಳು ರಚಿತವಾಗಿವೆ. ಶಕಟರೇಫದ ಬಳಕೆ ಇದೆ. ಈ ಕಟ್ಟಿನಲ್ಲಿ ವಚನಗಳು ಇತ್ಯಾದಿ ಇತರ ೮ ಕೃತಿಗಳಿವೆ.

—ಎಂಪಿಎಂ

213

ಕೆ. ೧೭೫೩/೧	**ಸೋಬನದ ತ್ರಿವಿಧಿ**	ತ್ರಿಪದಿ
೮″ × ೨.೪″	ಕರಸ್ಥಲದ ನಾಗಲಿಂಗ (?)	?
೧–೨ ಪತ್ರ	೧೩ ಪಂಕ್ತಿ	೪೬ ಅಕ್ಷರ

ಆದಿ: ಶ್ರೀಗುರು ಬಸವಲಿಂಗಾಯ ನಮಃ ॥ ಸೋಬಾನದ ತ್ರಿವಿಧಿ ॥
ತನ್ನ ತಾನಿದಿರಿಟ್ಟು ಚಿಂನದೋಱುವೆನೆಂದು
ಕಂನೆಯರಾರತಿಯ ವೊಳೆದೋಱಿ
ಕಂನೆರಾರತಿಯ ವೊಳೆದೋಱಿಯುಂದದೊಳಿರ್ಪ
ಸಂನಹಿತ ಗುರುವೆ ಶರಣೆಂಬೆ ॥ ೧

ಶ್ರಿಷ್ಟಿಗೆ ಶಿವಭಕ್ತಿಯ ವಿಸ್ತರಿಸಬಲ್ಲವರಾರೊ
ಯಿಷ್ಟಪ್ರಾಣಗಳನಱುಹಿಸಿ
ಯಿಷ್ಟಪ್ರಾಣಗಳನಱುಹಿಸಿ ಶಿವಭಕ್ತಿಯ
ಕೊಟ್ಟಾತನೆಂನ ಗುರುರಾಯಾ ॥ ೨ ॥

ಅಂತ್ಯ: ಪರಿಮಳವ ಕೊಂಬಂತ ವರಭೃಂಗನಂದದಿ
ಪರಮಹಂಸನೊಳು ವೊಡವೆರದು
ಪರಮಹಂಸನೊಳುವೊಡವೆರದು
ಕರಸ್ಥಲದ ಗುರುಶಾಂತನೊಡನೆ ಬಯಲಾದೆ.

ವಿಷಯ: ಗುರುವಿನ ಸ್ತುತಿ, ವೀರಶೈವಸಿದ್ಧಾಂತ.

ವಿಶೇಷ: ಸಮಗ್ರ. ಪ್ರತಿ ಚೆನ್ನಾಗಿದೆ. ಇದರ ಜೊತೆಯಲ್ಲಿ ವಿಭೂತಿಯ ಮಹತ್ವದ ತ್ರಿವಿಧಿ ವೊದಲಾದ ೪೭ ಕೃತಿಗಳಿವೆ.

—ಜಿಜಿಎಂ

214

ಕೆ. ೧೧೩೧/೫	ಸೋಮನಾಥ ಕಾವ್ಯದ ನಾಂದ್ಯ	ವಾರ್ಧಕಪಟ್ಪದಿ
೭.೨" × ೧.೫"	ರಾಘವಾಂಕ	ಸು. ೧೨೫೦
೧೧–೧೬ ಪತ್ರ	೯ ಪಂಕ್ತಿ	೩೬ ಅಕ್ಷರ

ಆದಿ : ಸೋಮನಾಥನ ಕಾವ್ಯದ ಪದನು ‖ ವಾರ್ಧಿಕ ‖
ದೇವಸಭೆಯೊಳಗಿಂದುಧರನ ಬೆಸನಂ ಪಡೆದು
ಭೂವಳೆಯಕೆಸೆವ ಸೌರಾಷ್ಟ್ರದೊಳು ಜನಿಸಿ ಬೆಳ
ದಾವಗಂ ವ್ಯವಹಾರ ರೂಪಿಂದೆ ಹುಲಿಗೆಱೆಗೆ ನಡೆತಂದ
ನಾದ್ಯೈಯ್ಯನೂ ‖ ೧ ‖
ಶ್ರೀಮದಗಜಾಹರುಷ ರತ್ನಾಕರೇಂದು ಗೌ
ರೀಮನೋವನ ವಸಂತಂ ಭವಾನೀವದನ
ತಾಮರಸದಿನಕರನುಮಾ ಕಲ್ಪಲತೆ ವೃಕ್ಷಪ್ರಭಲ ಬಲಸುರಭೂರುಹಂ
ಭೂಮಿಭೃತ್ಯನೆಯಾಕ್ಷಿ ಕುಮುದನುತ ಚಂದ್ರಿಕಾ
ನಾಮನೆಂನಂ ಸಲಹುಗನುದಿನಂ ಹುಲಿಗೆಱೆಯ
ಸೋಮನಾಥಂ ಸೋಮಶೇಖರಂ ಸೋಮದಯಾಳುಪಮೂರ್ತಿ
ವಿಲಾಸನೂ ‖ ೨ ‖

ಅಂತ್ಯ : ಮಿಾಱೆ ಕಂಡಂ ಕಂಡ ತನುವಿನೊಳು ಪುಳುಕಮಂ
ಹೇಱಿದಂ ಸಂತೋಷವೇಱಿದಂ ಜನನಮಂ
ಮಾರಿದಂ ಕಳೆಗಳಂ ಬೀಱಿದಂ ವಿಪುಳದೆಗೆಯಾಱಿದಂ
ಸಂಸಾರದಿಂದಂ
ಜಾಱಿಪಂ ನಿಷ್ಠೆಯಂ ಸಾಱಿದಂ ಭಕ್ತಿಯಂ
ತೋಱಿದಂ ಹಗೆಗಳಂ ಕೇಱಿದಂ ಚಿತ್ತಮಂ
ಮಾರಿದಂ ಶಿವನಡಿಗೆ ಸೂಱೆಗೊಟ್ಟಂ ಮನವನಪ್ರತಿಮ
ನಾದಯ್ಯನೂ ‖ ೨೨ ‖
ಆದ್ಯೈಗಳ ಕಾವ್ಯದ ನಾಂದ್ಯ ಸಮಾಪ್ತ ಮಂಗಳ ಮಹಾ ಶ್ರೀ.

ವಿಷಯ : ಸೋಮನಾಥಕಾವ್ಯದ ಆದಿಯಲ್ಲಿ ಬರುವ ಮಂಗಳ ಪದ್ಯಗಳು.

ವಿಶೇಷ : ಶಕಟರೇಫವಿದೆ. ಬರಹ ಚೆನ್ನಾಗಿದೆ. ಇದೇ ಕಟ್ಟಿನಲ್ಲಿ ಹಾಡುಗಳು, ಪಂಚವಿಂಶತಿಸ್ತೋತ್ರಗಳೇ ಮೊದಲಾಗಿ ಒಟ್ಟು ೧೭ ಕೃತಿಗಳಿವೆ. [ಕಹಪ್ರವಸೂ. ಪ್ರಥಮ ಸಂಪುಟ ಪುಟ ೧೨೫. ಕ್ರಮಾಂಕ 121 ಚತುರ್ಥ ಸಂಪುಟ ಕ್ರಮಾಂಕ 1966 ನೋಡಿ]

—ಕೆಆರ್‌ಎಸ್

215

ಕೆ. ೭೮೩	ಸೋಮನಾಥ ಚರಿತೆ	ವಾರ್ಧಕಷಟ್ಪದಿ
೧೩.೮" × ೧.೬"	ರಾಘವಾಂಕ	ಸು. ೧೭೫೦
೧-೫೭ ಪತ್ರ	೭ ಪಂಕ್ತಿ	೬೮ ಅಕ್ಷರ

ಆದಿ: ಸೋಮನಾಥ ಚಾರಿತ್ರ . . . . . .
. . . . ಲಿಗೆಜಿಗೆ ನಡೆತಂದನಾದಯ್ಯಾ
ಪದ॥ ಶ್ರೀಮದಗಜಾಹರುಷ ರತ್ನಾಕರೇಂದು ಗೌ
ರೀಮನೋವನವಸಂತಂ ಭವಾಸಿವದನ
ತಾಮರಸದಿ . . . . ಹಾ।
ಭೂಮಿಭೃತ್ಯನೆ ಯಕ್ಷಿ ಕುಮುದ ಚಂದ್ರಿಕಾ
ನಾಮನೆಂಮಂ ಸಲಹುಗನುದಿನಂ ಪುಲಿಗೆಜಿಯ
ಸೋಮನಾಥಂ ಸೋಮಶೇಖರಂ ಸೋಮಂ.... . . ॥ ೧ ॥

× × × ×

ಕೃತಿವೆಸರು ಸೋಮನಾಥಚಾರಿತ್ರವೀ
ಕೃತಿಗೊಡೆಯ ಸೋಮನಾಥನಿದಕ್ಕೆ ಸಹಾಯಿಗಳು
ಭಕ್ತತತಿಯಿದಂ ಪೇಳ್ದ ಕವಿಹಂಪೆಯ ಹರೀಶ್ವರನ ಸತ ರಾಘವಾಂಕನೆನಲೂ
ಕ್ಷಿತಿಯೊಳಿಂನೀ ಕಾವ್ಯಮಂ ಮಹಾಕವಿಗಳೊಳು
ಚತುರರೊಳು ರಸಿಕರೊಳು ಬುಧರೊಳತ್ಯದಿಕ ಪಂ
ಡಿತರೊಳಾರೊದರಾಕ್ಕೆರ್ೕಳ ರಾವ್ಮೆರ್ಚ್ಚ ರಾರಾದೊಡೆವೊಗಳ್ವೆ ನಯ್ಯಾ ॥ ೧೩ ॥

ಅಂತ್ಯ: ಆಳಿಯರದೆ ಕೈದಣಿಯೆ ಪೂಜೆಯಂ ಮಾಡಿ ಬಾಯಿ
ದಣಿಯೆ ನಾನಾ ತೆಱದಿ ಹಾಡಿ ಕೊಂಡಾಡಿ ಕಂ
ಣ್ದಣಿವಂತಿರಾಸುರದಿ ಬಾಜ್ಜುಲುಗೆ ನೋಡಿ ತನುದಣಿವಂತಿರೆಱಗಿ ಚರಣಾ ॥

ದಣಿವಂತೆಱಂ ಗಣಗುಣಿದುಮಾಣದೆ ಮನಂ
ದಣಿವಂತೆ ಹಾರೈಸಿಹ . . . . . .

ವಿಷಯ: ಶಿವಶರಣ ಆದಯ್ಯನ ಕಥೆ.

ವಿಶೇಷ: ಅಸಮಗ್ರ. ೫ನೆಯ ಸಂಧಿಯಲ್ಲಿ ೬೪ನೆಯ ಪದ್ಯದವರೆಗೆ ಮಾತ್ರವಿದ್ದು

ಶಕಟರೇಫ ಪ್ರಯೋಗವಿದೆ. ಕೆಲವು ಪತ್ರಗಳಿಗೆ ಹುಳು ಹೊಡೆದು ರಂಧ್ರಗಳಾಗಿವೆ.

—ಕೆಆರ್‌ಎಸ್

216

ಕೆ. ೧೨೭೨/೯	**ಸೋಮನಾಥ ಪುರಾಣದ ನಾಂದ್ಯ**	ವಾರ್ಧಕಷಟ್ಪದಿ
೧೧" × ೧.೯"	?	?
೨೫–೨೭ ಪತ್ರ	೧೦ ಪಂಕ್ತಿ	೪೮ ಅಕ್ಷರ

ಆದಿ : ಶ್ರೀಗುರು ಬಸವಲಿಂಗಾಯ ನಮಃ ॥ ಸೋಮನಾಥನ ಪುರಾಣದ ನಾಂದ್ಯ ಬರವುದಕ್ಕೆ ಶುಭಮಸ್ತು ॥

ಪ। ಶ್ರೀಮಾದವಿರಳ ಶಾಶ್ವತಾನಂದ ಭೂಮ ನಿ
ಸ್ಕಾಮ ನಿರ್ಮಲ ನಿರಾಂತಕ ನಿರ್ಗುಣ ಪುಣ್ಯ
ನಾಮ ನಿಶ್ಚಿಂತ ನಿಸ್ಸೀಮ ನಿಗಮಾಗಮಾತೀತ ಮಹಿಮಾಭಿ
ರಾಮ
ವಾಮದೇವ ವ್ಯೋಮಕೇಶ ಶಾಕ್ವರಪತಿ ಲ
ಲಾಮ ಕೈಲಾಸಗಿರಿಧಾಮ ಪಾಲಿಸು ಸೋಮ
ನೇಮಾವತಂಸ ಚಿದ್ಘೃಣಿ ನಿರಂಜನಲಿಂಗ ಪ್ರೇಮದಿಂ ಮೂ
ಜಗವನೂ ॥ ೧ ॥

ಅಂತ್ಯ : ಶ್ರೀಮಾದವಿರ. ಪುಣ್ಯನಾಮ ಭವಭಯ ನಿಕರ
ಭೀಮಶಾಕ್ವರಪತಿಲಲಾಮ ಗಿರಿವರಸುತಾ
ವಾಮಭಾಗೋನ್ನತ ವ್ಯೋಮಕೇಶ ವಿಶೇಷ ಭೂಮ ಸುಜ್ಞಾನ ತೇಜಾ
ಕಾಮಹರಶರಣ ಸುಪ್ರೇಮ ವಿಶ್ರುತ ಸುಖ
ಸ್ತೋಮ. ಹಿತ ಸೋಮನೇಮವರ ಶ್ರೀಶೈಲ
ಧಾಮ ಗಾಂಡೀವ ಸಂಗ್ರಾಮಲಂಪಟ ಲಸತಿ ಶ್ರೀ ಮಲ್ಲಿಕಾರ್ಜುನ
ಜಯಾ ॥ ೧೮ ॥
ಸೋಮನಾಥ ಪುರಾಣದ ನಾಂದ್ಯ ಸಮಾಪ್ತ ಮಂಗಳ ಮಹಾ ಶ್ರೀ.

ವಿಷಯ : ಸೋಮನಾಥ ಕಾವ್ಯದ ಮಂಗಳ ಪದ್ಯಗಳು.

ವಿಶೇಷ : ೨೭ನೆಯ ಪತ್ರದ ಬಲಭಾಗದ ಅಂಚು ಮುರಿದಿದೆ. ಇದೇ ಕಟ್ಟಿನಲ್ಲಿ ಶಿವಲಿಂಗ ನಾಂದ್ಯ, ದೇವೀ ನಾಂದ್ಯ, ಸಿದ್ಧೇಶ್ವರ ಪುರಾಣದ ನಾಂದ್ಯ,

ಭಾವಚಿಂತಾರತ್ನ, ವೈರಾಗ್ಯ ಷಟ್ಪದಿ, ಲಿಂಗ ಷಟ್ಪದಿ ಮೊದಲಾದ ೧೭ ಕೃತಿಗಳಿವೆ.

—ವೈಸಿಬಿ

217

ಕ. ೧೭೧೨ | **ಸೋಮನಾಥಭಾಷ್ಯ (ಸಟೀಕು)** | ಶ್ಲೋಕ, ಟೀಕು

೧೪.೩" × ೧.೮" | ಪಾಲ್ಕುರಿಕೆ ಸೋಮನಾಥ | ಸು. ೧೧೯೫

೧–೧೭೩ ಪತ್ರ | ೧೧ ಪಂಕ್ತಿ | ೮೫ ಅಕ್ಷರ

ಆದಿ: ಶ್ರೀಗುರುಬಸವಲಿಂಗಾಯನಮಃ × × × ಸೋಮನಾಥಭಾಷ್ಯಃ ಭಾಷಾ ಭೂಷಾ ಭುಭೂಷಾವನತ ಸುಜನತಾದಿ ನವಿದ್ಯಾನದಾನಃ × × × ಪಾಲ್ಕುಜಿಕೆ ಸೋಮನಾಥಾರ್ಯಸ್ತೇಷು ಭಾಮುವಾ ಚಯಃ ತದ್ವದ್ವೇಥಾರ್ತ್ಥವಾಖ್ಯಾತುಂ ನ ಭೂತೋ ನ ಭವಿಷ್ಯತಿ ॥ × × × ಸ್ಥೌಲ್ಯನೈರ್ಮಲ್ಯಃ। ಬಾಹ್ಯಾಭ್ಯಂತರ ಸಂಬಂಧವಾದ। ಪೂಜಾಃ ಶಿವಪೂಜೆವುಳ್ಳಾತನಾಗಿ। ಪ್ರಮಥಗಣ ವೀರಕವೀರಭದ್ರಾದಿ ಪ್ರಮಥಗಣಂಗಳ

ಅಂತ್ಯ: ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀನಂದಿನಾಥ ಭೃಂಗಿನಾಥ ಶ್ರೀವೀರ ಭದ್ರದೇವರು ಮುಖ್ಯವಾದ ಸಜ್ಜನಶುದ್ಧ ಶಿವಾಚಾರಸಂಪನ್ನರು ಮಪ್ಪ ಕರ್ಮಾರಣ್ಯದಹನದಾವಾನಲಕಮೋಭ ಪಂಚಾನನ ಗುರುಕುಲ ಜ್ಯೋತಿರೂಪ ಪಂಚಾಚಾರ ಪ್ರತಿಷ್ಠಾಚಾರ್ಯ ಷಟ್ಸ್ಥಲಸಂಪಂನ ರುಂಪುಪ್ಪ ಶ್ರೀಸೋಮನಾಥಭಾಷ್ಯ ಸಂಗ್ರಹಕ್ಕೆ ಶುಭಮಸ್ತು ಮಾಂಗಲ್ಯಮಸ್ತು ಆಯುರಾರೋಗ್ಯಮಸ್ತು ವಿಳಂಬಿಸಂವತ್ಸರದ ಕಾರ್ತಿಕ ಬಹುಳ ಸೋಮವಾರದಲ್ಲು ಸೋಮನಾಥಭಾಷ್ಯ ಸಂಪೂರ್ನ್ನಂ ಮಗಳ ಮಹಾ ಶ್ರೀ ಶ್ರೀ.

ವಿಷಯ: ವೀರಶೈವಸಿದ್ಧಾಂತ ಪ್ರತಿಪಾದನೆ.

ವಿಶೇಷ: ಸಮಗ್ರ. ಪ್ರತಿ ಚೆನ್ನಾಗಿದೆ. ಇದರ ಜೊತೆಗೆ ಗುರುತಿಸಲಾಗದ ಸಂಸ್ಕೃತ ಭಾಷೆಯ ೯ ಪತ್ರಗಳಿವೆ.

—ಜಿಜಿಪಂ

218

ಕೆ. ಬಿ. ೫೧೮	**ಸೋಮವಾರವ್ರತ ಕಥೆ**	ಗದ್ಯ
೨೫.೬″ × ೨.೩″	ಕಳಲೆ ನಂಜರಾಜ	ಸು. ೧೭೪೦
೪-೧೦೦ ಪತ್ರ	೯ ಪಂಕ್ತಿ	೧೦೬ ಅಕ್ಷರ

ಆದಿ : ಸರ್ಗದಲ್ಲಿ । ನಿಯೋಗಿಸಲ್ಪಟ್ಟಂತ್ಹಾ । ದಕ್ಷನು ತಾನೆ ಸ್ವತಂತ್ರ ಮಾನಸ ಸೃಷ್ಟಿಕ್ರಮದಿಂದ ದೇವದಾನವ ಗರುಡ ಗಂಧರ್ವೊರಗ ಮುನಿ ಮನುಷ್ಯಾದಿಗಳಂ ನಿರ್ಮಿಶಿ ಅವರದ್ವೆಶಿಯಿಂದ್ಹಾ ಪ್ರಜಾಭಿ ವೃದ್ಧಿ ಆಗದೆ ಯಿರುವಂತ್ಹಾದ್ದಂನ್ನೂ ನೋಡಿ × × · × · × ಯಿಂತ್ತು ಕರ್ನಾಟಕಭಾಷಾ ವಿರಚಿತವಾಗಿ ಶ್ರೀಮಹೀಶೂರ ಸೇನಾಧಿಪ ದೊಡ್ಡರಾಜ ಪೌತ್ರ ವೀರರಾಜ ತನೂಜ ದಳಪತಿ ದೇವ ರಾಜಾನುಜ ಕಳುಲೆ ನಂಜರಾಜ ವಿರಚಿತವಾದ । ನಂಜರಾಜ ವಾಣೀ ವಿಲಾಸವೆಂಬ್ಬ ಮಹಾಭಾರತ ತಾತ್ಪರ್ಯ್ಯ ಟೀಕಿನಲ್ಲಿ ವ್ಯಾಸಕೃತ

ವಾದ ಲಕ್ಷ ಗ್ರಂತ್ಥ ಸಂಖ್ಯೆವುಳ್ಳ ಸಂಹಿತೆಯಲ್ಲಿ ಹರಿವಂಶದಲ್ಲಿ ನಾಲ್ಕನೆಯ ಅಧ್ಯಾಯದ ಅರ್ಥ ನಿರೂಪಣಕ್ಕೆ ಮಂಗಳ ಮಹಾ ಶ್ರೀ.
(೭ನೆಯ ಪತ್ರದಿಂದ ಉದ್ಧರಿಸಿದ್ದು)

ಅಂತ್ಯ : ಅಂಸ್ನಂಗಳಂ ಕೊಟ್ಟು ಬೇಕಾ . . . . . ತರಾಗಿ ನವಲುಗಳಂನ್ನೂ ಶಿರಸ್ಸಿನಲ್ಲಿ ಧರಿಶಿ ಅಧಿಕವಾಗಿ ಪ್ರಕಾಶಿಸ್ತಲಿದ್ದರೂ ಆ ಸಮಯದಲ್ಲಿ ಗೋ ಸಮೂಹಗಳಿಗೆ ಕೊಂಬುಗಳಲ್ಲಿಯೂ ಕೊರಳುಗಳಲ್ಲಿಯೂ ಮಯೂರ ಪಿಂಛಗಳಂನ್ನೂ ಘಂಟೆಗಳಂನ್ನೂ ನಾರೆ ಚೌರಿಗಳಂನ್ನೂ...

ವಿಷಯ : ವಿಷ್ಣುವಿನ ಅವತಾರಗಳ ವಿವರ.

ವಿಶೇಷ : ಅಸಮಗ್ರ. ಬರಹ ಸುಂದರ. ೪ನೆಯ ಅಧ್ಯಾಯದ ಕೊನೆಯ ಭಾಗದಿಂದ ಗ್ರಂಥಾರಂಭವಾಗಿದೆ. ೭೨ನೆಯ ಅಧ್ಯಾಯ ಪೂರ್ತ ಗ್ರಂಥವಿದ್ದು ಅನಂತರ ಒಂದು ಪತ್ರದಲ್ಲಿ ೭೩ನೆಯ ಅಧ್ಯಾಯದ ವಿಷಯವಿದೆ. ಅಲ್ಲಲ್ಲಿ ಹುಳುಹೊಡೆದಿದೆ. ೧೦೦ನೆಯ ಪತ್ರ ತುಂಡಾಗಿದ್ದು ತ್ರುಟಿತವಾಗಿದೆ.

—ಕೆಆರ್‌ಎಸ್

276

ಕೆ.ಎ. ೪೮೬	**ಹರಿವಂಶ (ಭಾಗ ೨)**	ಗದ್ಯ
೧೦.೬" × ೯.೪"	ಕಳಲೆ ಸಂಜರಾಜ	ಸು. ೧೭೪೦
೧–೬೦೬ ಪುಟ	೨೦ ಪಂಕ್ತಿ	೨೨ ಅಕ್ಷರ

ಆದಿ : ವಾಗ ಅರ್ಜುನನ ನಿಮಿತ್ತವಾಗಿ ಪಾಂಡವರಿಗೆ ಹಾನಿಯಿಲ್ಲದ ಹಾಗೆ ಮಾಡಿ ನನಿಗೆ ಸೋದರತ್ತೆಯಾದ ಕುಂತೀದೇವಿಗೆ ಅವರನ್ನು ಪೊಪ್ಪಿಸ್ತಲಿರ್ಧೇನೆ. ಯಲೈ ಸುರೇಂದ್ರನೇ ನಿನಿಗೆ ಹಿತವು ಯಾವುದೋ ಅದನ್ನೂ ಮಾಡಿ ಭೃತ್ಯನೋಪಾದಿಯಲ್ಲಿ ಆಚರಿಸ್ತಲಿದ್ದೇನೆ.

ಅಂತ್ಯ : ಸೂರ್ಯನು ರಾಹುವಿನಿಂದ ನುಂಗಲ್ಪಟ್ಟನು. ಆ ಶಂಬರಾಸುರನ ಯೆಡದ ಕಣ್ಣೂ ಯೆಡದ ಭುಜವೂ ಭಯವನ್ನು ತೋರಿಸುತ ನಡಗಿದವು. ಅವನ ರಥಾಶ್ವಗಳು ಸಮವಾದ ಭೂಮಿಗಳಲ್ಲಿ ಮುಗ್ಗರಿಸಿಬಿದ್ದವು. ವೊಂದುಕಾಗೆಯು ಆ ದಾನವನ ತಲೆ ಮೇಲೆ ಕುಳಿತುಕೊಂಡಿತು. ಪರ್ಜನ್ಯನು ಉದಕ ಧಾರೆಗಳೂ

ವಿಷಯ : ವ್ಯಾಸಮಹಾಭಾರತದಲ್ಲಿ ಉಕ್ತವಾಗಿರುವ ಶ್ರೀಕೃಷ್ಣನ ಮಹತ್ವ ಮಹಿಮೆಗಳು.

ವಿಶೇಷ : ಅಸಮಗ್ರ ಗ್ರಂಥ. ದ್ವಿತೀಯ ಸಂಪುಟವೆಂದು ಆರಂಭವಾಗುತ್ತದೆ. ಅಂದರೆ ಎಪ್ಪತ್ತೊಂಬತ್ತನೆಯ ಅಧ್ಯಾಯದಿಂದ ನೂರಎಪ್ಪತ್ತೆರಡನೆಯ ಅಧ್ಯಾಯದವರೆಗಿದೆ. ಪ್ರತಿ ಅಧ್ಯಾಯದ ಕೊನೆಯಲ್ಲಿ ಕವಿಯು ಹೀಗೆ ಹೇಳಿಕೊಂಡಿದ್ದಾನೆ.

"ಇಂತು ಕರ್ಣಾಟಕ ಭಾಷಾವಿರಹಿತವಾಗಿ ಶ್ರೀಮಹೀಶೂರ ಸೇನಾಧಿಪ ದೊಡ್ಡರಾಜಪೌತ್ರ ವೀರರಾಜ ತನೂಜ ದಳಪತಿ ದೇವರಾಜಾನುಜ ಕಳುಲೆ ನಂಜರಾಜ ವಿರಚಿತವಾದ ನಂಜರಾಜ ವಾಣೀವಿಲಾಸವೆಂಬ ಮಹಾಭಾರತ ತಾತ್ಪರ್ಯ ಟೀಕಿನಲ್ಲಿ ವ್ಯಾಸಕೃತವಾದ ಲಕ್ಷ ಗ್ರಂಥ ಸಂಖ್ಯೆಯುಳ್ಳ ಸಂಹಿತೆಯಲ್ಲಿ ಹರಿವಂಶದಲ್ಲಿ . . . . ಅಧ್ಯಾಯದ ಅರ್ಥನಿರೂಪಣಕ್ಕೆ ಮಂಗಳ ಮಹಾ ಶ್ರೀ." ೯೪, ೧೪೩ನೆಯ ಅಧ್ಯಾಯಗಳಲ್ಲಿ ಅಲ್ಲಲ್ಲಿ ಒಂದೆರಡು ಪಂಕ್ತಿಗಳೂ, ೧೧೧, ೧೧೨, ೧೨೬, ೧೫೮ನೆಯ ಅಧ್ಯಾಯಗಳಲ್ಲಿ ಕೆಲವು ಭಾಗಗಳೂ ಲುಪ್ತವಾಗಿವೆ. ಬರಹವು ಚೆನ್ನಾಗಿದೆ. ಮದರಾಸು ಪ್ರಾಚ್ಯಕೋಶಾಗಾರದಲ್ಲಿ 1940-41ನೆಯ ಸಾಲಿನಲ್ಲಿ ನಕಲುಮಾಡಿಸಿರುವಂತೆ ತಿಳಿದುಬರುತ್ತದೆ.

—ಕೆಆರ್‌ಎಸ್

277

ಕೆ. ಎ. ೩೯೬	ಹರಿವಂಶ (ಭಾಗ ೩)	ಗದ್ಯ
೧೦.೭" × ೯.೪"	ಕಳಲೆ ನಂಜರಾಜ	ಸು. ೧೭೪೦
೧-೪೪೬ ಪುಟ	೨೦ ಪಂಕ್ತಿ	೨೨ ಅಕ್ಷರ

ಆದಿ : ಡನೆ ಕೂಡಿದ ನೆತ್ತರನ್ನು ಕರದನು. ಆ ದುರಾತ್ಮಕನ ರಥದಲ್ಲಿ ಸಾವಿರ ಸಂಖ್ಯೆಗಳುಳ್ಳ ಕೊಳ್ಳಿಗಳು ಬಿದ್ದವು. ಅವನ ಸಾರಥಿಯ ಹಸ್ತದಿಂದ ಮುಳ್ಳುಕೋಲು ಜಾರಿಬಿತ್ತು. ಯಿಂಥಾ ಉತ್ಪಾತಗಳು ಹುಟ್ಟಲು ಆ ಶಂಬಕಾಸುರನು ಮರಣ ಕಾಲವು ಸಮಿಾಪಿಸಿ ಯಿರುವದರಿಂದ ಅವೆಲ್ಲವೂ ಸಡ್ಡೆಮಾಡದೆ ಕೃಷ್ಣಪುತ್ರನನ್ನು ಸಂಹರಿಸಬೇಕೆಂಬ ಯಿಚ್ಛೆಯಿಂದ

ಅಂತ್ಯ : ಸಕಲ ಪ್ರಾಣಿರಕ್ಷಕನಾಗಿ ಜಗದೀಶ್ವರನಾಗಿ ಬ್ರಹ್ಮಾದಿ ವೃಂದಾರಕ ವಂದ್ಯನಾಗಿ ಪಿತಾಮಹಜನಕನಾಗಿ ಶ್ರುತಿನಿಲಯನಾಗಿರುವ ಪುರುಷೋ

ತ್ತಮನೊಬ್ಬನೇ ಮಹೋದಧಿಯಲ್ಲಿ ಪವಡಿಸಿಯಿದ್ದನು ಯೆಂದು ವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆ ಹೇಳಿದ ಅರ್ಥವನ್ನು ಸೂತಪೌರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿ ಋಷಿಗಳಿಗೆ ವಿವರಿಸಿದನು.

ಇಂತು ಕರ್ನಾಟಕ ಭಾಷಾ ವಿರಚಿತವಾಗಿ ಶ್ರೀಮಹೀಶೂರ ಸೇನಾಧಿಪ ದೊಡ್ಡರಾಜಪೌತ್ರವೀರರಾಜತನೂಜ ದಳಪತಿ ದೇವರಾಜಾನುಜ ಕಳುಲೆ ನಂಜರಾಜ ವಿರಚಿತವಾದ ನಂಜರಾಜ ವಾಣೀವಿಲಾಸವೆಂಬ ಮಹಾಭಾರತ ತಾತ್ಪರ್ಯ ಟೀಕಿನಲ್ಲಿ ವ್ಯಾಸಕೃತವಾದ ಲಕ್ಷ ಗ್ರಂಥ ಸಂಖ್ಯೆ ಉಳ್ಳ ಸಂಹಿತೆಯಲ್ಲಿ ಹರಿವಂಶದಲ್ಲಿ ಯಿನ್ನೂರಯಿಪ್ಪತ್ತೆರಡನೆ ಅಧ್ಯಾಯದ ಅರ್ಥನಿರೂಪಣಕ್ಕೆ ಮಂಗಳ ಮಹಾ ಶ್ರೀ.

ವಿಷಯ : ಹರಿವಂಶ ವರ್ಣನೆ.

ವಿಶೇಷ : ಇದು ಮೂರನೆಯ ಸಂಪುಟ. ನೂರಎಪ್ಪತ್ತ ಮೂರನೆಯ ಅಧ್ಯಾಯದಿಂದ ಇನ್ನೂರಎಪ್ಪತ್ತೆರಡನೆ ಅಧ್ಯಾಯಕ್ಕೆ ಮುಗಿಯುತ್ತದೆ.

—ಬಿಎಸ್‌ಎಸ್

278

ಕೆ. ಎ. ೫೨೪	**ಹರಿವಂಶ**	ಗದ್ಯ
೯.೧" × ೧೦.೫"	ಕಳಲೆ ನಂಜರಾಜ	ಸು. ೧೭೪೦
೧–೪೫೦ ಪುಟ	೨೦ ಪಂಕ್ತಿ	೨೦ ಅಕ್ಷರ

ಆದಿ : .... ಸರ್ಗದಲ್ಲಿ ನಿಯೋಗಿಸಲ್ಪಟ್ಟಂಥಾ ದಕ್ಷನು ತಾನೇ ಸ್ವತಂತ್ರನಾಗಿ ಮಾನಸ ಸೃಷ್ಟಿಕ್ರಮದಿಂದ ದೇವ ದಾನವ ಗರುಡ ಗಂಧರ್ವೋರಗಮಾದಿ ಮನುಷ್ಯಾದಿಗಳಂ ನಿರ್ಮಿಸಿ ಅವರ ದೆಸೆಯಿಂದ ಪ್ರಜಾಭಿವೃದ್ಧಿ ಆಗದೆ ಯಿರುವಂಥಾದನ್ನು ನೋಡಿ ಯಿನ್ನು ಮೇಲೆ ಪ್ರಜಾಭಿವೃದ್ಧಿಯು ಯಾವ ರೀತಿ . . . . ಸೃಷ್ಟಿಯಂ ಮಾಡಬೇಕೆಂದು ಯೆಣಿಸಿ ವೀರಣ ಪ್ರಭಾವತಿಯ ಮಗಳಾಗಿ ತಪಸ್ವಿಯಾಗಿ ಮಹಾಮಹಿಮಾನ್ವಿತೆಯಾಗಿ ಲೋಕಧಾರಿಣಿಯಾದ ಅಸಿಕ್ನೀದೇವಿಯಂ ಮದುವೆಯಾಗಿ ಆ ಅಸಿಕ್ನೀದೇವಿಯಲ್ಲಿ ಐದು ಸಾವಿರ ಮಕ್ಕಳಂ ಪಡೆದನು. ಅವರು ಪ್ರಜಾಸೃಷ್ಟಿಗೆ ಉದ್ಯುಕ್ತರಾಗಲು ಆ ಸಮಯದಲ್ಲಿ ದೇವ . . . . .

ಅಂತ್ಯ : ಯೀ ಗೋವುಗಳು ಕರುಗಳೊಡನೆ ಕೂಡಿ ಆಗಾಗ್ಯೆ ಅಭಿವೃದ್ಧಿಯ ನೈದುತಲವೆಯೆಂದು ನುಡಿಯಲು ಆ ಗೋಪಾಲಕರು ಸಂತೋಷದಿಂದ ಬ್ರಾಹ್ಮಣರಿಗೆ ಸಂಪೂರ್ಣವಾಗಿ ಅನ್ನಗಳಂ ಕೊಟ್ಟು ಬೇಕಾದ ಧನ ಧಾನ್ಯಗಳನ್ನೂ ಕೊಟ್ಟು ಸಂತೋಷಪಡಿಸಿ ಗೋ ಸಮೂಹಗಳನ್ನು ವೃಷಭಗಳನ್ನೂ ಕರುಗಳನ್ನೂ ಹೊಡಕೊಂಡು ಗೋವರ್ಧನಪರ್ವತಕ್ಕೆ ಪ್ರದಕ್ಷಿಣವನ್ನು ಮಾಡಿ ತಾವೂ ನಾನಾ ವಿಧಂಗಳಾದ ವಸ್ತ್ರಗಳನ್ನು ಧರಿಸಿ ಗಂಧವನ್ನು ತೊಡಕೊಂಡು ಹೂವ್ವುಗಳಂ ಮುಡುಕೊಂಡು ಸರ್ವಾಭರಣ ಭೂಷಿತರಾಗಿ ನವಿಲುಗಳ ಗರಿಗಳನ್ನು ಶಿರಸ್ಸಿನಲ್ಲಿ ಧರಿಸಿ ಅಧಿಕವಾಗಿ ಪ್ರಕಾಶಿಸ್ತಲಿದ್ದರು. ಆ ಸಮಯದಲ್ಲಿ ಗೋಸಮೂಹಗಳಿಗೆ ಕೊಂಬುಗಳಲ್ಲಿಯೂ ಕೊರಳುಗಳಲ್ಲಿಯೂ ಮಯೂರ ಪಿಂಛಗಳನ್ನೂ ಘಂಟೆಗಳನ್ನೂ ನಾಕಿಚಾರಿಗಳನ್ನೂ

ವಿಷಯ : ಶ್ರೀಕೃಷ್ಣನ ಕಥೆ.

ವಿಶೇಷ : ಅಸಮಗ್ರ. ಪ್ರತಿ ಚೆನ್ನಾಗಿದೆ.

—ವೈಸಿಬಿ

279

ಕೆ. ಎ. ೫೬೦	**ಹರಿವಿಲಾಸ**	ಸಾಂಗತ್ಯ
೯" × ೧೦.೫"	ತಿಮ್ಮಕವಿ	?
೧—೧೩೬ ಪುಟ	೨೦ ಪಂಕ್ತಿ	೧೨ ಅಕ್ಷರ

ಆದಿ : ಶ್ರೀ ಗಣಾಶಾರದಾ ಗುರುಭ್ಯೋಂ ನಮಃ ।
ಹರಿವಿಲಾಸ ಚರಿತೆಯ ಬರಿಯುವುದಕ್ಕೆ ಶುಭಮಸ್ತು ॥
ಶ್ರೀ ವನಿತಾನಯನೋತ್ಪಲ ಹಿಮಕರ
ದೇವನರೋರಗವಂದ್ಯಾ
ಭಾವಜಪಿತಭವ ಮನುಮುನಿವಿನುತತ್ವ
ಪಾವಾರ್ಥಿ ಹರಿ ಶರಣೆನಗೆ ॥ ೧ ॥

ಅಂತ್ಯ : ಹರಸಖಾತ್ಮಜರ ಶಾಪವಿಮೋಚನವಾ ದಾಮೋ
ದರನ ಕಟ್ಟಿನ ಬಿಡುವಿಕೆಯಾ
ಧರಯೊಳಾಲಿಸಿ ಕೇಳ್ವ ನರರಿಗೆ ಭವಬಂಧ
ಪರಿಹರಿಸುವುದಾಕ್ಷಣದೊಳು ॥ ೭೬ ॥
ಅಂತು ಸಂಧಿ ೧೦ಕ್ಕಂ ಪದ ೬೪೮ಕ್ಕಂ ಮಂಗಳ ಮಹಾ ಶ್ರೀ.

ವಿಷಯ : ವಿಷ್ಣುಮಹಿಮೆ.

ವಿಶೇಷ : ಈ ಕೃತಿಯ ಆದಿಭಾಗ 129ನೆಯ ಪುಟದಲ್ಲಿದೆ ಮತ್ತು ಅಂತ್ಯ 128 ನೆಯ ಪುಟದಲ್ಲಿದೆ. ಪ್ರತಿ ಸಮಗ್ರವಾಗಿದೆ. ಅಲ್ಲಲ್ಲಿ ಲುಪ್ತ. ಲುಪ್ತವಾದ ಭಾಗಗಳನ್ನು ಕೆಲವುಕಡೆ ಕೆಂಪುಮಸಿಯಿಂದ ಪೂರ್ಣಗೊಳಿಸಿದೆ.

—ವೈಸಿಬಿ

280

ಕೆ. ೯೩೫ | ಹರಿಶ್ಚಂದ್ರಕಾವ್ಯ | ವಾರ್ಧಕಷಟ್ಪದಿ

೧೧.೬" × ೧.೨" | ರಾಘವಾಂಕ | ಸಂ. ೧೨೫೦

೧–೧೨೫ ಪತ್ರ | ೬ ಪಂಕ್ತಿ | ೬೦ ಅಕ್ಷರ

ಆದಿ : ಶ್ರೀ ಗುರುಭ್ಯೋ ನಮಃ ॥ ಹರಿಶ್ಚಂದ್ರಕಾವ್ಯ ಗುಣಾವಳಿ ॥ ಶ್ರೀಯಿದು ಸಮಸ್ತ ಕಳಾಧರ ಕ್ರಮನಿಷ್ಠರ ಸಂಕ್ರಂದನಾದಿ ಸುರನಿಕರ ಮಣಿಮಕುಟ ಮಯೂರ ಕಮಲಾಂಜರಿರಂಜಿತ ಚರಣ ಕಿಂಜಲ್ಕ ಶುಂಜರಿ ದಿಶಾವಲೆಯಂ ಸಕಲದೈವ ದೀಕ್ಷಾಕತರನಿಖಿಳದೈವ ಶರಾಣಾಗತ ವಜ್ರಪಂಜರ ದರ್ಪಿತ ದೈವಸರ್ಪ ಮಯೂರ ಗರ್ವಿತ ದೈವ ಸರ್ವಾಪಹರಣ ಸಮಸ್ತದೈವ ಸಾರ್ವಭೌಮನೆನಿಪ ಪಂಪಾಪುರಾದೀಶ್ವರ ಮೂರ್ತಿ ಶ್ರೀವಿರೂಪಾಕ್ಷ ವರ್ಮಾನಿ ॥ ೧ ॥

× × × ×

ಶ್ರೀ ಶಾರದಾ ಗುರುಭ್ಯೋಂ ನಮಃ ॥ ನಿರ್ವಿಘ್ನಮಸ್ತು ॥ ಹರಿಶ್ಚಂದ್ರಕಾವ್ಯ ಉದ್ದಂಡ ಷಟ್ಪದ । ಶ್ರೀರಾಗಾ ॥ × × ×

ಕೃತಿನಾಮಂ ಹರಿಶ್ಚಂದ್ರ ಚಾರಿತ್ರ ವೀ
ಕೃತಿಗೊಡೆಯನಮಳ ಪಂಪಾವಿರೂಪಾಕ್ಷ ವೀ
ಕೃತಿಗೆ ಪಾಲಕರು ಲೋಕದ ಭಕ್ತಜನಂಲಿದಂ ಪೇಳ್ದಾತನಾರೆಂದೊಡೆ
ಚತುರ ಕವಿರಾಯ ಹಂಪೆಯ ಹರೀಶ್ವರನ ವರ
ಪುತ್ರನುಭಯಕವಿಕಮಲರವಿ ರಾಘವಾಂಕಪಂ
ಡಿತನೆಂದೊಡೀ ಕಥಾದಲಹರಿಯನು ಬಣ್ಣಿಸುವರಾರೀ ಧರೆಯೊಳು
॥ ೧೪ ॥

(೧೪ನೆಯ ಸಂಧಿಯಲ್ಲಿ)

ಅಂತ್ಯ : ಜನಪತಿಯ ಕೈವಿಡಿದು ಬಂದು ಮನೆಯಂ ಪೊಕ್ಕು
ಘನವೆನಿಪ ಧರ್ಮಾರ್ಥ ಮೋಕ್ಷ ಕಾಮ್ಯವನೀವ
ಮುನಿ ಪಿತಾಮಹನು ಮುನಿ ರಾಜಾಧಿರಾಜನು ಮುನೀಶ್ವರನು ಮುನಿ ಮುಖ್ಯನು
ಮುನಿವರನು ಪುಂಗವನು ಮುನೀಶನು ಮುನೀಂದ್ರ
ಮುನಿವರೇಣ್ಯನು ಮುನಿಶ್ರೇಷ್ಠನತ್ಯಂತ
ಮುನಿಗಳಾದಿತ್ಯನು ಮುನಿಸ್ತುತ್ಯನೆನಿಪ ವಿಶ್ವಾಮಿತ್ರ ಮುನಿನಾಥನು ॥ ೧೭ ॥

ಅರಸನಿನಿರಿಸಿ ಹೋದುದರೊಳೆ ಮುಕುಂದ
ದರೆಯಾಗದಳ ತುಳುಕದಮಗೆಡೆದೆ ಕೇಳಖಿಳ
ಕರಿಗಳಿವೆ ತುರಗವಿವೆ ಭಂಡಾರವಿದೆ ಕೋಠಾರಂಗಳಿವೆ ಹಲವಂದದಾ
ಅರಮನೆ . . .

ವಿಷಯ : ಸತ್ಯಹರಿಶ್ಚಂದ್ರನ ಕಥೆ.

ವಿಶೇಷ : ಬರಹ ಸುಂದರವಾಗಿದೆ. ಶಕಟರೇಫದ ಪ್ರಯೋಗವಿದೆ. ಅಲ್ಲಲ್ಲಿ ಪತ್ರಗಳಿಗೆ ಹುಳು ಹೊಡೆದಿದೆ. ಗ್ರಂಥವು ೧ಳನೆಯ ಸಂಧಿ ೧೭ನೆಯ ಪದ್ಯದವರೆಗಿದೆ. ೧ನೆಯ ಸಂಧಿಯಲ್ಲಿ ೨೬ ರಿಂದ ೩೦ನೆಯ ಪದ್ಯದ ವರೆಗೂ ಲನೆಯ ಸಂಧಿಯಲ್ಲಿ ೨ಲರಿಂದ ೩೦ನೆಯ ಪದ್ಯದವರೆಗೂ ಗ್ರಂಥಲೋಪ; ಆ ಕಡೆಗಳಲ್ಲಿ ಖಾಲಿ ಜಾಗವಿದೆ. ೧೬, ೯೭ನೆಯ ಪತ್ರಗಳ ಸ್ವಲ್ಪಭಾಗ ಮುರಿದಿದ್ದು ಗ್ರಂಥಲೋಪವಾಗಿದೆ.
[ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ಚತುರ್ಥ ಸಂಪುಟ. ಪುಟ ೫೧೩. ಕ್ರಮಾಂಕ 2023 ನೋಡಿ].

—ಕೆಆರ್‌ಎಸ್

281

ಕೆ. ಎ. ೫೪೮ ಹರಿಶ್ಚಂದ್ರ ಚರಿತ್ರೆ ಸಾಂಗತ್ಯ
೧೨೬" × ೭೯" ರಾಮದಾಸ ವಿರೂಪಾಕ್ಷ ೧೫೩೮
೧-೯೬ ಪುಟ ೧೭ ಪಂಕ್ತಿ ೨೦ ಅಕ್ಷರ

ಆದಿ : ಹರಿಶ್ಚಂದ್ರರಾಯನ ಕಥೆ ಬರೆಯುವದಕ್ಕೆ ನಿರ್ವಿಘ್ನಮಸ್ತು ॥
ವೃತ್ತ ॥ ಶ್ರೀವಿರೂಪಾಕ್ಷಲಿಂಗ್ಗ ಕರುಣಾಕರಶಂಕರ ಕೇಳ್ತಡೆಂನ್ನಯ
ಕೇವಲ ತಪ್ಪುತ್ತಿಂದ್ದು ವಿಷವಾಣಿಯೆಂಬುದಕ್ಕೆ ನಿಮ್ಮಯ

ಪಾವನಪುಣ್ಯನಾಮದ ರಸಾಮ್ರುತ ಸೋಂಕಲು ಶುದ್ಧ
ಮಪ್ಪುದುಂ
ದೇವರ ದೇವ ಹಂಪೆಯ ಸದಾಶಿವ ಕಾವುದು ನಿಂಮ್ಮ ಕಂದನ
ಬಿಂನ್ನಪನಂ

ಯಿವಾರಾಗ ||

ಸೂಚನೇ || ಧರಣಿಗೆ ಸತ್ಯನು ಹರಿಶ್ಚಂದ್ರನೆನುತಲಿ
ಸರಿ ಮುನಿ ಮುನಿಗಳು ವಾದಿಸಿದರೂ ||

ಪದನೂ || ಶ್ರೀಮಹಾದೇವನೇ ಕಾಮನಿರ್ಧೂಮ
ಧಾಮವ ಮಾಡಿದ ಶಿವನೇ
ಯೋಮಕೇಶವ ನಿಂಮ್ಮ ನಾಮವ ನೆನೆದರೆ
ಕಾಮಿತ ಫಲವೀಹುದೆನಗೇ || ೧ ||

× × ×

ವಸುಮತಿಯೊಳು ಪಂಚರುಷಯು ಪ್ರಥಮಶಾಕೆ
ಪೆಸರುಳ್ಳ ಶ್ರೀವತ್ಸಗೋತ್ರಾ
ಹಸನಾಗಿ ದ್ವಿಜರಾಮರಸ ವಿರೂಪಾಕ್ಷನ
ಯಸಗಿದ ಕೃತಿಯ ಪಾಲಿಪುದೂ || ೮ ||

ಅಂತ್ಯ: ಹದಿಮೂರು ಸಂಧಿಯು ಪದನಾರುನೂರಕ್ಕೆ
ಹದಿನೆಂಟರೊಳಗೊಂದೆಸೆಯೇ
ಮದನಾರಿಯೂ ತಂನ ಹೃದಯದೊಳತಂಬಟ್ಟು
ಪದದೊಳು ನಾ ಬಲಗೊಂಬೇ || ೪೬ ||

ಅಂತೂ ಸಂಧಿ ೧೩ಕ್ಕಂ ಪದ ೬೧೬ ಕಂ ಮಂಗಳ ಮಹಾ ಶ್ರೀ ಯಿತೀ ಶ್ರೀಹರಿಶ್ಚಂದ್ರೋಪಾಖ್ಯನಂ ಸಂಪೂರ್ಣಂ ಶ್ರೀ.

ವಿಷಯ: ಸತ್ಯಹರಿಶ್ಚಂದ್ರನ ಕಥೆ.

ವಿಶೇಷ: ಸಮಗ್ರ. ಮೋಡಿ ಬರಹ. ಸ್ಥಿತಿ ಉತ್ತಮವಾಗಿದೆ.

—ಕೆಆರ್‌ಎಸ್

282

ಕೆ. ಬಿ. ೬೨೬	**ಹರಿಶ್ಚಂದ್ರ ಚರಿತ್ರೆ**	ಸಾಂಗತ್ಯ
೧೧.೨" × ೫.೫"	ರಾಮರಸ ವಿರೂಪಾಕ್ಷ	೧೫೩೮
೧–೨೩ ಪತ್ರ	೧೮ ಪಂಕ್ತಿ	೩೮ ಅಕ್ಷರ

ಆದಿ: ಹರಿಶ್ಚಂದ್ರನ ಚರಿತ್ರ ಬರವುದಕ್ಕೆ ಸುಭಾವುಸ್ತು ॥ ರಾಗ ॥
ತಂಮಿಚ್ಚಿ ॥ ಪದ ॥ ಸೂ ॥
ಧರಣಿಗೆ ಸತ್ಯಹರಿಶ್ಚಂದ್ರನೆನುತಲಿ
ಸುರಮುನಿಗಳು ವಾದಿಸಿದರು ॥ ಪ ॥
ಶ್ರೀಮಹಾದೇವನೆ ಕಾಮನಿರ್ಧುಮನೆ
ದಾಮುವ ಮಾಡಿಸಿದವನೆ
ಯೋಮತ್ಯೆನೆ ನಿಂಮು . ನಿಂಮುನಾವ ನೆನವೆನು
ಕಾಮಿತ ವರವೀವುದ್ಯನಗೆ ॥ ೧ ॥

× × × ×

ಹಸನಾಗಿ ದ್ವಿಜರಾಮು ರಸವಿರೂಪಾಕ್ಷನು
ಯುಸಗಿದ ಕೃತಿಯು ಪಾಲಿವುದು
ಬೆಸನಿತ್ತು ನಡಸುದು ವಸದಿಯೊಳೀ ಕೃತಿಯನು
ಸಸಿಧರ ನಿಮ್ಮ ಕರುಣದಲಿ ॥ ೮ ॥

ಅಂತ್ಯ: ಛಂದ ವ್ಯಾಕರಣ ವಂದ ಅಲಕಾರ
ಬಂದ ಜಿಂಹಾಗ್ರೆಯ ನುಡಿಯಾ
ವಿದ್ಯ ಸಾದನ ಕವಿ ಯಿದ್ದಯಡ ನುಡಿಗಳಂ
ತಿದ್ದುವದು ಸಜ್ಜನರೂ ॥ ೨೮ ॥
ಶರಣಾರ್ತ್ಥಿ ಸತ್ಯದ ಹರಿಶ್ಚಂದ್ರ ಕೃತಿಗಿಂನ್ನು
ಕರುಣಿ ನಡಸು ಕಾಲದಲಿ
ಹಿರಿಯುರು ಕೂಡಿ ತಿರಿತಿರಿದೋದುವದು
ನರನಲ್ಲಾ ಸತ್ಯಹರಿಶ್ಚಂದ್ರಾ ॥ ೨೯ ॥
ಯಿಂತೀ ಸಂಧಿ ೧೩ಕ್ಕಂ ಪದನು ೬೦೧ಕ್ಕೆ ವೃತ್ತಾಕ್ಕಂ ರಗಳಿ ವಂದಕ್ಕೆ ಮಂಗಳ ಮಹಾ ಶ್ರೀ.

ವಿಷಯ: ವಿಶ್ವಾಮಿತ್ರನ ಕುಟಿಲಕ್ಷ್ಯಕ್ಕೊಳಗಾಗಿ, ತನ್ನ ಸತ್ಯವನ್ನು ಉಳಿಸಿಕೊಂಡ ಹರಿಶ್ಚಂದ್ರರಾಜನ ಕಥೆ

ವಿಶೇಷ: ಸಮಗ್ರ. ದಪ್ಪ ಕಾಗದದಲ್ಲಿ ಕೃತಿಯನ್ನು ಪ್ರತಿಮಾಡಿಸ್ದಾರೆ.

— ಕೆಜಿಆರ್ ಎಸ್

283

ಕೆ. ೧೦೩೨ | **ಹರಿಶ್ಚಂದ್ರ ಸಾಂಗತ್ಯ** | ಸಾಂಗತ್ಯ
೯.೫" × ೧.೮" | ಬೊಂಬೆಯಲಕ್ಕ | ೧೫೩೮
೧೨–೪೩ ಪತ್ರ | ೯ ಪಂಕ್ತಿ | ೫೨ ಅಕ್ಷರ

ಆದಿ: . . . ಲ್ಲರೆಯಂನಾ ಮುಂದೆ ॥ ೧೬
ಹೇಳಲೇನದಾಬೇರಾ ಬಲ್ಲರಿಗೆಲೆಯನು
ಹೇಳಿ ತೋರುವತೆರನಂತೆ
ಆಳುವ ರಾಜ್ಯವು ನಾನರಿಯದಾದಿಲ್ಲಾ ಕಾಲಾಟವಾ
ಬಿಡುಯಂದಾರು ಮುನಿಪಾ ॥ ೧೭ ॥

ಅಂತ್ಯ: ಸತ್ಯಾದಾ ನೆಲೆ ಮುಕ್ತಿಯ ಬೀಡು ಪುಂಣ್ಯದಾ
ಕೀರ್ತಿಯ . . ವನೆಯೆನಿಸಿ
ಕೀರ್ತಿಯ ಕತೆಯ ಕೇಳಿದಾ ಲೋಕಾ ಜನರಿಂಗೆ
ನಿತ್ಯಾವಾಗಲಿ ಸುಕಾದಿಂದ ॥ ೨೦೬ ॥
ಅಂತೂ ಹರಿಚಂದ್ರಾರಾಯನಾ ಸಂಗ ತ್ಯಾಸಂ. ನಾ ೯ಸಂದಿ ೪ಕಂ
ಪದನೂ ೫೪೯ ಕೆ ಮಂಗಳ ಮಹಾ ಶ್ರೀ ಶ್ರೀ.

ವಿಷಯ: ಹರಿಶ್ಚಂದ್ರನ ಕತೆ.

ವಿಶೇಷ: ಅಸಮಗ್ರ. ಇದರ ಜೊತೆಯಲ್ಲಿ ಸೋಮಶೇಖರ ಚಿತ್ರಶೇಖರ ಯಕ್ಷಗಾನವೂ ಇದೆ.

— ಜಿಜಿಎಂ

284

ಕೆ. ೧೦೫೯ | **ಹರಿಶ್ಚಂದ್ರ ಸಾಂಗತ್ಯ** | ಸಾಂಗತ್ಯ
೧೧" × ೧.೬" | ಬೊಂಬೆಯಲಕ್ಕ | ೧೭೩೮
೨–೨೭ ಪತ್ರ | ೧೦ ಪಂಕ್ತಿ | ೬೦ ಅಕ್ಷರ

ಆದಿ: ಕೇಳುವ ಶಿಷ್ಯ ನಿನ್ನ ಯ ಶಿಷ್ಯನಾಗಿ
ಹೇಳಿದಂತೆಯು ಧನವಿನ
ಆಳುವ ರಾಜ್ಯದೊಳಗೆ ಹಂಗುಬಿಟ್ಟಿದು
ಹೇಳಿಹೊಗಳಲದು ಕುಂದೆ ॥ ೧೯ ॥
ನೆಲ ಬಯಲಾಗೆ ಸಮುದ್ರವುಬಿ..ತೆರೆ
ಕುಲಗಿರಿಗಳು ಚರಿಸಿದರೆ

ಕಲಹದಿ ಶಿವ ಸೋತರೆ ಹರಿಶ್ಚಂದ್ರನಾ
ಹೊಲ್ಲೆಯಹುದೆ ನಾಲಗೆಗೆ ॥ ೨೦ ॥

ಅಂತ್ಯ : ಸತ್ಯದ ನೆಲೆ ಮುಕ್ತಿಯ ಬೀಡು ಪುಣ್ಯದ
ಕೀರ್ತಿಯ ನೆಲೆವನೆಯೆನಿಸಿ
ಭಕ್ತಿಯ ಕಥೆಯ ಕೇಳಿದ ಲೋಕಜನರಿಗೆ
ನಿತ್ಯವಾಗಲಿ ಸುಖದಿಂದ ॥ ೨೭೪ ॥

ಅಂತು ಸಂಧಿ ೩ಕ್ಕಂ ಪದನು ೫೫೦ಕ್ಕಂ ಹರಿಶ್ಚಂದ್ರರಾಯನ ಸಂಗತ್ಯ
ಸಮಾಪ್ತಿ ಮಂಗಳ ಮಹಾ ಶ್ರೀ

ವಿಷಯ : ಸತ್ಯಹರಿಶ್ಚಂದ್ರನ ಕಥೆ

ವಿಶೇಷ : ೧ನೆಯ ಗರಿ ಮುರಿದಿದೆ.

—ಜಿಜಿಎಂ

285

ಕೆ. ೮೩೪/೭	**ಹರಿಹರ ಚಾರಿತ್ರ**	ಭಾಮಿನೀಷಟ್ಪದಿ
೧೫" × ೧.೩"	ಚಾಟುವಿಠಲನಾಥ	ಸು. ೧೫೩೦
೧೨-೧೬ ಪತ್ರ	೫ ಪಂಕ್ತಿ	೬೮ ಅಕ್ಷರ

ಆದಿ : ಪೊಂದು ನಿಜವೆರಡೆನಿಸಿ ಹರಿಹರ
ರೆಂದ್ದು ಪಾದಿಸಿ ಭೇದದಲಿ ತೋ
ರ್ಕೆಂದು ಸುರಮುನಿವರರಿಗಸುರಾರಾತಿ ನೇಮಿಸಿದಾ ॥ ಪದನೂ ॥

ಕೃತ್ಯವಾವುದು ತನಗೆ ದೇವರು
ಚಿತ್ತವಿಸಿದುದು ಬರವಿದೇನು ನಿ
ಮಿತ್ತ್ಯಭೃತ್ಯಾನುರುವ ಭೃತ್ತ್ಯನೆನಿಪ್ಪ ತಂನ್ನೆಡೆಗೆ
ಅತ್ಯಧಿಕ ವಿಸ್ಮಯದ ಬೀಜವ
ಬಿತ್ತಿದೆಯಲಾ ತಂನ್ನ ಪದಮುಲ
ಚಿತ್ತದಲಿ ನಿತ್ಯಾತ್ಮ ಸುಖವಿಗ್ರಹನೆ ಹೇಳೆಂದ್ದಾ ॥ ೧ ॥

ಅಂತ್ಯ : ಜನಪ ಕೇಳ್ ದುಃಕರ್ಮ ನಿರ್ಮೂ
ಲನವಿದಖಿಳಾಭ್ಯುದಯ ಸುಖಸಾ
ಧನ ವಿದಚ್ಚುತತುಷ್ಟಿಕರವಘಹರ ಪವಿತ್ರಕರಾ

ಜನನ ಮರಣ ವ್ಯಾಧಿ ಭಯ ಭಂ
ಜನವಿದುತ್ತಮನಜನಮನೋರಂ
ಜನ ಮಹಾಭಾಗವತ ನಿತ್ಯಾತುಮನ ಚಾರಿತ್ರಾ ॥ ೩೫ ॥
ಯಿದು ಭಾಗವತದಲಿ ಹರಿಹರಚಾರಿತ್ರಾ ಸಂಧಿ ೧ಕ್ಕೆ ಮಂಗಳ ಮಹಾ ಶ್ರೀ.

ವಿಷಯ : ವಿಷ್ಣು, ಈಶ್ವರರ ಮಹತ್ವವನ್ನು ತಿಳಿಸುವುದು.

ವಿಶೇಷ : ಒಂದು ಸಂಧಿ ಮಾತ್ರವಿದೆ. ಇದು ಭಾಗವತದಲ್ಲಿ ಬರುವ ಭಾಗ. ಬರಹ ಚೆನ್ನಾಗಿದೆ. ಇದೇ ಕಟ್ಟಿನಲ್ಲಿ ವಿದುರನೀತಿ, ತೊರವೆ ರಾಮಾಯಣ, ಶಕುನ ಫಲಗಳೇ ಮೊದಲಾಗಿ ಎಂಟು ಕೃತಿಗಳಿವೆ.

—ಕೆಆರ್‌ಎಸ್

286

ಕೆ. ೧೨೬೦/೧	ಹರಿಹರನ ರಗಳೆಗಳು	ರಗಳೆ
೧೦ × "೨.೧"	ಹರಿಹರ	ಸು. ೧೨೦೦
೧–೬೪ ಪತ್ರ	೧೦ ಪಂಕ್ತಿ	೬೮ ಅಕ್ಷರ

ಆದಿ : ಉದ್ಭಟದೇವರ ರಗಳೆ ॥

ಕಂ ॥ ಪಟುತನದಿಂ ಸತಿ ನುಡಿದೊಡೆ
ಘಟಿತವನೆ ಘಟಯಿಸುವೆನೆನಲ್ಕೊಂಡೊಯ್ದಂ
ನಿಟಲಾಕ್ಷಂ ಪುರಸಹಿತು
ದ್ಭಟದೇವನನೆಂನು ಹಂಪೆಯ ವಿರೂಪಾಕ್ಷಂ

ರಗಳೆ ॥ ವುರ್ವ್ವಿಯೊಳೊಂದು ಪುರಂ ರಂಜಿಸುವುದು
ಶರ್ವ್ವಕನ ಸದ್ಭಕ್ತಿಯನುದ್ಧರಿಪುದು
ಅಲ್ಲಿಪ್ಪಂ ಶಿವಭಕ್ತ ಸದರ್ತ್ಥಂ
ಸಲ್ಲಲಿತಂ ಶಿವನೊಳಗೇಕಾರ್ತ್ಥಂ

ಅಂತ್ಯ : (೬೪ ನೆಯ ಪತ್ರದಿಂದ)
ಕಮಧರ ನೀಲಕಂಧರನೀಶನೊಪ್ಪಿದಂ
ಅಮಮ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ

ಕಂ ॥ ಗಂಡನನಪ್ಪದ ಮುಂನವೆ
ಕಂಡಾ ಹೇರೂರಹೆಂಣನಂತೊಲವಿಂದಂ

ಗಂಡಂ ಮಾಡಿದನಮರರ
ಗಂಡಂ ಮಾದನಾರಿ ಹಂಪೆಯ ವಿರೂಪಾಕ್ಷಂ ||

ಹೇರೂರ ಹೆಂಣಿನ ರಗಳೆ ಸಮಾಪ್ತಂ ಶ್ರೀ.

ವಿಷಯ : ಶಿವಶರಣರ ಕಥೆ.

ವಿಶೇಷ : ಈ ಕಟ್ಟನಲ್ಲಿ ಉದ್ಭಟದೇವರು, ಕುಂಬಾರಗುಂಡಯ್ಯ, ಪ್ರಭುದೇವರು, ಬಾಣ, ಏಕಾಂತರಾಮಯ್ಯ, ಧಕ್ಷಾಧ್ವರ, ವೀರಭದ್ರ, ಪಂಪಾಕ್ಷೇತ್ರ, ಕಾರಿಕಾಲಮ್ಮೆ, ಸೋಮಾಸಿಮಾರ, ಹೇರೂರ ಹೆಂಗೂಸು ರಗಳೆ ಗಳಿವೆ. ಇವಲ್ಲದೆ ಬಸವಸ್ತೋತ್ರದ ತ್ರಿವಿಧಿ, ಮಿಶ್ರಸ್ತೋತ್ರದ ತ್ರಿವಿಧಿ ಮೊದಲಾದ ಒಟ್ಟು ೩೬ ಕೃತಿಗಳಿದ್ದು ಕೆಲವು ಸಂಸ್ಕೃತ ಗ್ರಂಥ ಗಳಿವೆ. ಶಕಟರೇಫವಿದೆ. ಕೃತಿ ಉತ್ತಮಸ್ಥಿತಿಯಲ್ಲಿದೆ. ಬರಹ ಚೆನ್ನಾಗಿದೆ. ಈ ಕಟ್ಟನ್ನು ಪ್ರತಿಮಾಡಿದ್ದು "ರಕ್ತಾಕ್ಷಿ ಸಂವತ್ಸರದ ಶ್ರಾವಣಶುದ್ಧ ೧೦ ಸೋಮವಾರದ ಉದಯದ ತಾಸಿನಲ್ಲಿ ಮುಗಿಯು ತ್ತದೆ" ಎಂದಿದೆ.

—ಕೆಆರ್‌ಎಸ್

287

ಕೆ. ಎ. ೪೨೫	**ಹರಿಹರನ ರಗಳೆಗಳು**	ರಗಳೆ
೧೧.೪′ × ೯.೩″	ಹರಿಹರ	ಸು. ೧೨೦೦
೧–೨೭೯ ಪುಟ	೨೦ ಪಂಕ್ತಿ	೧೬ ಅಕ್ಷರ

ಆದಿ : ವೀರಶೈವ ಚರಿತ್ರೆ .... ದನೇನನೆಂದಪೆರ ಚೋಳಾದಿಗಳ ಪಡೆಯೆರದ
ನೆಂತು ಬಣ್ಣಿಪೆಂ ।

ಪಾತದಿಂದಪ್ಪ ವಸ್ತುಗಳದಕ್ಕೆ ಪಡಿಯಿಲ್ಲ
ಲೋಕದೊಳ್ಕಾಣೆನಾಂ ಪೇಳ್ವೊಡಂ ಪ್ರತಿಯಿಲ್ಲ ||
ದೇವಾನ್ನ ದಿವ್ಯಾನ್ನವೆಂಬುದನ್ನೆಳಿವುದು
ಭಾವಿಸುವಡಿನ್ನದಂ ಪೆಸರಿಡಲ್ಕೇನರಿದು ||

ಅಂತ್ಯ : ಸುರಚಿರ ಸುಧಾಕರ ಕಳಾಜೂಟನೊಪ್ಪಿದಂ
ಆರರೆ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ
ಕಂದ|| ಕರುಮಿಗ ಮಲ್ಲಣನಂ
ವಿರಹಾನಳದಧಿ ಚಿತ್ತನಂ ಮಲ್ಲಣಿಯೊಡ

ನೆರಪಿನೆರೆ ಮೆರೆದ ಪಂಪಾ
ಪುರಪತಿ ನೀಯೆನಗೆ ಭಕ್ತಿಸುಖಸಂಪದಮಂ ||
ಮಲ್ಲಣನರಗಳೆ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ.

ವಿಷಯ: ಶಿವಶರಣರ ಚರಿತ್ರೆ.

ವಿಶೇಷ: ಈ ಪುಸ್ತಕದಲ್ಲಿ ಚನ್ನಯ್ಯನ ರಗಳೆ, ಕಳಚುಂಗ ಪೆರುಮಾಳೆ ರಗಳೆ, ನಂಬಿಯಣ್ಣನ ರಗಳೆ, ಓಹಿಲಯ್ಯನ ರಗಳೆ, ಉದ್ಭಟದೇವ ರಗಳೆ, ಹಲಾಯುಧ ರಗಳೆ, ಸಾಮವೇದಿಗಳ ರಗಳೆ, ಮಳಯದೇವರಾಜರ ರಗಳೆ, ಬಾಣನ ರಗಳೆ, ಮಲುಹಣನ ರಗಳೆಗಳಿವೆ.

— ಜಿಜಿಎಂ

288

ಕೆ. ಎ. ೫೬೪/೨	ಹರಿಹರನ ರಗಳೆಗಳು	ರಗಳೆ
೧೦.೫" × ೯.೫"	ಹರಿಹರ	ಸು. ೧೨೦೦
೧೧೧–೨೪೭ ಪುಟ	೨೦ ಪಂಕ್ತಿ	೨೯ ಅಕ್ಷರ

ಆದಿ: ಶ್ರೀಕಂಠ ಕಂಠಾಭರಣ ಕಿರಣ ಸಂಘಾತ ಸಂಭೂತಮಾತ್ಮಾದಿತ್ಯಾ ವ್ರಾತಾಂಗಂಗಾಧರ ಪುರಹರ ಪಂಚಾಸ್ಯಾ ಪಂಚಾಕ್ಷಾರೀಶ ಪ್ರತ್ಯಾಕ್ಷ ಸ್ವಾಮಿ ಕಾಮಾಂತಾಕ ನಿಖಿಳ ಮುಖಾಧಾರ ವಿಸ್ತಾರ ಭಕ್ತಗೃ ತ್ಯಂತ ಪ್ರೇಮಿ ಪಂಪಾಪುರದರಸ ವಿರೂಪಾಕ್ಷ ರಕ್ಷಿ ಪುದೆನ್ನ.

ದೇವನದಿಯ ನಿದಿರದೊದವಿಡೆಯ ಜಡೆಯುಮುಡಿಯೊಳಿಟ್ಟ
ದೇವ ಚಂದ್ರಕಳೆಯ ನಿಳಯ ತಳಯಸಲ್ಲಿ ಸಂತವಿಟ್ಟ
ಸಕಳ ರತ್ನ ನಿಕರ ಖಚಿತಾ ಮಕುಟಧರನೆ ಹಂಪೆಯರಸ
ಸುಕರವೆನಿಪನರ್ಘ್ಯ ಕನಕತಪವು ನಿಟಿಲ ಹಂಪೆಯರಸ

ಅಂತ್ಯ: ಮಲುಹಣಿ ಮನವಾವುಗಿ ಬೆರಗಾಗಿ
. . ಬಪರ್ಾಗಾಭರಣನೊಳು ನುಳ್ಳುದೆಂ
. . . ಬೆಳೆಗೊಳಶ್ವರನವೆಸ
. . ರಿಗೆ ಮಲುಹಣಿಂ ವೃಥನಂ
. . ಮುತ್ತುವ ಲಾಹಿಡ ದಿಂದದಂ
. . ಮೇಲೆ ಪರಿ ಪರಿಯ ಪರಿಯ ಹೊಸಹಿಮ
. . ವನೆಯೊಳಗಿರ್ಥ ರವಿಯಾಂತ ದಟ್ಟಸಲು

. . ನೀತೋಪಚಾರವದು ಕೊಲುತಗೆ
. . ಕಣಿ ಹೊಸತಾಗಿರಲು ಕರಡು ಮಲ್ಲಿವ
. . ಪಾಪಿಯಾದೆಂಪಾಪಿಯಾದೆನೆಂ

ವಿಷಯ : ಶಿವಶರಣರ ಚರಿತ್ರೆ.

ವಿಶೇಷ : ಅಸಮಗ್ರ ಹಸ್ತಪ್ರತಿ. ಇದರಲ್ಲಿ ಹಂಪೆಯ ರಗಳೆ, ಕಳಚಂಗ ಪೆರುಮಾಳಯ್ಯನ ರಗಳೆ, ಕಲಿಗಣನಾಥನ ರಗಳೆ, ಮಹಿಮ ರಗಳೆ, ವೈದುನರಾಮಯ್ಯ ರಗಳೆ, ಮಲುಹಣ ರಗಳೆಗಳಿವೆ.

—ಹಕರಾ

289

ಕೆ. ಎ. ೫೬೫	ಹರಿಹರನ ರಗಳೆಗಳು	ರಗಳೆ
೧೦″ × ೯″	ಹರಿಹರ	ಸು. ೧೭೦೦
೧–೩೭೧ ಪುಟ	೨೦ ಪಂಕ್ತಿ	೧೬ ಅಕ್ಷರ

ಆದಿ : ಶ್ರೀ ಶುಭಮಸ್ತು ನಿರ್ವಿಘ್ನಮಸ್ತು ಪುರಾತನರಚರಿತ್ರೆ ರಗಳೆ ಕಾವ್ಯವು. ವೀರಶೈವರ ಚರಿತ್ರೆ
ಚೋಳಾದಿಗಳ್ಪಡೆಯರದನೆಂತು ಬಣ್ಣಿಪೆಂ
ಪಾತಕದಿಂದಪ್ಪಾ ವಸ್ತುಗಳದಕೆ ಪಡಿಯಿಲ್ಲ
ಲೋಕದೋಳ್ಯಾಣೆನಾಂ ಪೇಳ್ವೊಡೆಂ ಪ್ರತಿಯಿಲ್ಲಾ
ದೇವಾನ್ನ ದಿವ್ಯಾಂನ್ನವೆಂಬುಂದಂಗಳಿವುದು
ಬಾವಿಸುವೊಡಿನ್ನದಂ ಪೆಸರಿಡಲ್ಕೆ ಅರಿದು
ಕ್ಷೀರ ಮಧುವಂಗಳ ರುಚಿಯದ ಕೆಳ ಕೀಳ್ಸರಿಯಿಲ್ಲ.

ಅಂತ್ಯ : ಮುರರ ಮುನಿವರರ ಖೇಚರರ ಪತಿಯೊಪ್ಪಿದಂ
ನರರ ಕಿನ್ನರರ ಭೀಕರರ ಪತಿಯೊಪ್ಪಿದಂ
ಸುರುಚಿರ ಸುಧಾಕರ ಕಳಾಭೂಷನೊಪ್ಪಿದಂ
ಅರರೆ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ
ಕಂದ ಕರ್ಮಿ ಮಲ್ಲಿಹಣನಂ ವಿರಹಾನಳದದ ಚಿತ್ತನಂ ಮಲುಹಣಿಯ
ನೆರೆಪಿರೆ ಮೆರೆದ ಪಂಪಾಪುರಪತಿ ನಿಮಗೆ ಭಕ್ತಿಸುಖಸಂಪದಮಂ.
ಇತಿ ಮಲ್ಲಹಣನ ರಗಳೆ ಸಮಾಪ್ತ ಮಂಗಳ ಮಹಾ ಶ್ರೀ.

ವಿಷಯ : ಪುರಾತನರ ಚರಿತ್ರೆ.

ವಿಶೇಷ: ಈ ಪ್ರತಿಯಲ್ಲಿ ೧ ಚನ್ನಯ್ಯನ ರಗಳೆ. ೨ ಅಯ್ಯಡಿಯರ ರಗಳೆ ೩ ಚಂಗಪೆರುಮಾಳೆಯ ರಗಳೆ ೪ ನಂಬಿಯಣ್ಣನ ರಗಳೆ ೫ ಓಹಿಲಯ್ಯನ ರಗಳೆ ೬ ಹಲಾಯುಧ ರಗಳೆ ೭ ಸೋಮವೇದಿಗಳ ರಗಳೆ ೮ ಮಲುಹಣ ರಗಳೆ ಮುಂತಾದುವಿವೆ.

—ಹಕರಾ

290

ಕೆ. ೧೨೫೬/೭	**ಹಲಾಯುಧ ಸ್ತೋತ್ರ (ಸಟೀಕು)**	ಶ್ಲೋಕ, ಗದ್ಯ
೮.೮″ × ೨″	?	?
೪೯-೬೯ ಪತ್ರ	೧೦ ಪಂಕ್ತಿ	೪೬ ಅಕ್ಷರ

ಆದಿ: ಶ್ರೀ ಸಪ್ಪೇಶ್ವರಾಯ ನಮಃ । ಹಲಾಯುದ ಸ್ತೋತ್ರ ॥
ವಿಘ್ನಂನಿರ್ವಿಘ್ನಂ ದ್ವಿರದವರನಾಪ್ತಿತಯೆ ಯೋಸ್ತು ನಿತ್ಯ
ವಾಮೆಕುಂಠಪ್ರಕಟಿತ ಬೃಹದ್ದಕ್ಷಿಣೆ ಸ್ಥೂಲದಂತಃ ॥

× × × × × ×

ಟೀಕು ॥ ವಾಮೆಕುಂಠ । ಯೆಡದ ಕೈ ಸುಂಡಲನುಳ್ಳಂಥಾ ।
ಪ್ರಕಟಿತ ಬೃಹದ್ದಕ್ಷಿಣೆ ಸ್ಥೂಲದಂತಃ । ಲೇಸಾಗಿ
ವೊಪ್ಪುತ್ತಂಯಿಹದಂತವನುಳ್ಳ । ವಿಷ್ಣುಂ ।
ವಿಷ್ಣುವನು । × × × × । ಅರ್ಧನಾರೀಶ್ವರತ್ವಂ
ಅರ್ಧನಾರಿತ್ವವನು । ದಧಾತ್ । ಧರಿಸಿದನು ॥ ೧ ॥

ಅಂತ್ಯ: ಹಾಲಾಯುಧ ಬುಧಃ । ಹಾಲಾಯುಧ ಬುಧನೆಂಬ । ದ್ವಿಜ । ದ್ವಿಜನು । ದಕ್ಷಿಣಾರಾಷ್ಟ್ರೆಯೆ । ದಕ್ಷಿಣದೇಶದಲ್ಲಿ । ಶಂಭೋ । ಶಂಭುವಿಗೆ । × × × × ನವಗ್ರಾಮವನು ಕೊಂಡು ಹೋದನು ॥ ೬೧ ॥ ಇತಿಹಲಾಯುಧ ಸ್ತೋತ್ರ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ॥

ವಿಷಯ: ಹಲಾಯುಧನ ಸ್ತುತಿ.

ವಿಶೇಷ: ಪ್ರತಿ ಚೆನ್ನಾಗಿದೆ. ಕೃತಿ ಸಮಗ್ರವಾಗಿದೆ. ಇದರೊಂದಿಗೆ ಮಲಯರಾಜ ಸ್ತೋತ್ರದ ಟೀಕು ಮುಂತಾದ ಕೃತಿಗಳಿವೆ.

—ಎಂಬಿಎಂ

291

ಕೆ. ೧೧೫೮/೫	**ಹಲಾಯುಧ ಸ್ತೋತ್ರ(ಸಟೀಕು)**	ಶ್ಲೋಕ-ಟೀಕು
೧೬" × ೨"	ಗುರುಲಿಂಗ	?
೫೫-೭೯ ಪತ್ರ	೮ ಪಂಕ್ತಿ	೬೫ ಅಕ್ಷರ

ಆದಿ : ಹಲಾಯುಧಸ್ತೋತ್ರ ಟೀಕು

ವೃ|| ಕಂದರ್ಪದರ್ಪಾಧ್ರಿ ವಿಭಿಂನ ಶಂಬಂ
ಕುಂದೇಂದು ವಿಹಾರ ವಿರಾಜಿತಾಂಗಂ
ವೃಂದಾರಕ್ಯೆರರ್ಚಿತಪಾದಪದ್ಮ
ವಂದೇನಿಶಂ ಶಂಕರಮವ್ಯಯಂ ಶಿವಂ

ಟೀಕು : ವಾಮೆ-ವಾಮಭಾಗದಲ್ಲಿ ಕುಂಠತ್-ರಾಹಿತ್ಯದಂತವನುಳ್ಳ. ಬೃಹತು-ದೊಡ್ಡಿತಾದ. ದಕ್ಷಿಣೆ - ದಕ್ಷಿಣಭಾಗದಲ್ಲಿಯ ಸ್ಥೂಳೆ-ಸ್ಥೂಲವಾದ. ದಂತಃ-ದಂತವನುಳ್ಳ ದ್ವಿರದವದನಃ-ವಿಘ್ನೇಶ್ವರನು.

ಅಂತ್ಯ : ಇತಿಶ್ರೀಮದ್ವೇದಾಗಮೋಪನಿಷತ್ಪುರಾಣೋಕ್ತ ಮಾರ್ಗ ಪ್ರವರ್ತ ಪ್ರವೀಣ ಪಂಡಿತಾರಾಧ್ಯ ದೇವನಾಮಾಚಾರ್ಯವರ್ಯ ತನೂಭವ ಗುರು ಲಿಂಗದೇವನಾಮದೇಯ ದೇಶಿಕೇಂದ್ರ ಪ್ರತಿಕೋದ್ಭವ ಗುರುದೇವ್ಯಾಖ್ಯಾನ ಕರ್ನಾಟ ಭಾಷಾಕೃತ ಹಲಾಯುಧಸ್ತವ ಟೀಕಾ ಪರಿಸಮಾಪ್ತ ಮಂಗಳ ಮಹಾ ಶ್ರೀ. ವಿಕಾರಿ ಸಂ। ರದ ಪಾಲ್ಗುಣ ಶುದ್ಧ ೭ ಭೌಮ್ಯವಾರ ಪುಸ್ತಕಂ ಸಂಪೂರ್ಣ ಮಂಗಳಮಸ್ತು.

ವಿಷಯ : ಹಲಾಯುಧದ ಸ್ತೋತ್ರ.

ವಿಶೇಷ : ಕೊನೆಯಲ್ಲಿ 'ಮಂಗಾಪುರದ ಶಿವಲಿಂಗಪ್ಪನವರ ವರಸುತ ಶಿವಲಿಂಗಪ್ಪನು ನುತಿಸಿದ ಗ್ರಂಥದ ವೈಹಿ' ಎಂದಿದೆ. ಇದೇ ಕಟ್ಟಿನಲ್ಲಿ ಮಲಯರಾಜಸ್ತೋತ್ರದ ಟೀಕು, ಮಹಿಮ್ನ ಸ್ತೋತ್ರದ ಟೀಕು ಮುಂತಾದ ಇತರ ೪ ಗ್ರಂಥಗಳಿವೆ.

—ಹಕರಾ

292

ಕೆ. ಎ. ೫೦೨/೨	**ಹಸೆಯ ಹಾಡುಗಳು**	ಹಾಡು
೧೯.೫" × ೯.೫"	?	?
೨೫-೨೮ ಪುಟ	೨೦ ಪಂಕ್ತಿ	೨೨ ಅಕ್ಷರ

ಆದಿ : ವಾಣಿಯೆ ಫಣಿವೇಣಿಯೆ ಗೀರ್ವಾಣಿಯೆ । ಜನವಿನುತೆಯೆ ಬೊಮ್ಮನ ರಾಣಿಯೆ ಗುಣಮಣಿಯೆ । ಮಾನದಣಿಯೆ ಮನದಣಿಯೆ ಬೊಮನಸುತೆ ವೀಣಾಪಾಣಿಯೆ । ಪದಯುಗಾಕೆ ಮುದದಿಂದ ॥ ೧ ॥
ಮೇನಕಿ ಹರಿನಾಯಕೆ ರಂಭೆಯೆ ನಾನಾ ಸುರಲಲನೆಯರನೆ । ಶಮೆ ಮೀನಾಕ್ಷಿಯೆ ಇಂದುಮುಖಿಯರು । ಮುಖಿಯರು ನೆರೆಪಾಡುತ ಪಾಡುತ ಜಾನಕಿ ಹಂಪೆಗೇಶಾರಾದಾರೇ ॥ ೨ ॥

ಅಂತ್ಯ : ವಡನಾಡುವಸತಿಪುರ ಗಡಣವಿ ಮುಡಿನಾಟಿದ ತಲೆಯಲಿ । ರಾಮನ ಕಡೆಗಾಗಿ ನೋಡಿ ನಗೆವೊಗನ । ನಗೆವೊಗದಾ ರಘುಕುಲತಿಲಕನ ಮಡದಿ ಬಾ ಹಾಸೇಮಾ ಚಾಗೊಲಿಕೆ । ೨೦ ।
ಆ ತರ ತೃತಿವಿಲಶಿತೆ ಹಾಕಾರಾದಿಮುಲೆ ಕೋಮಲೆ । ರಾಕಾಶಶಿವಸ್ತ್ರೆ ಸುಚಾರಿತ್ರೆ । ಸುಚರಿತೆ ಚಿತ್ರದಹಲಗೆ ಲೋ । ಕೇಶ್ವರಿ ಶೀತೇ ಹಾಸೆ ಗೇಳು ॥ ೨೧ ॥

ವಿಷಯ : ಹಸೆಯ ಹಾಡುಗಳು.

ವಿಶೇಷ : ಪ್ರತಿ ಚೆನ್ನಾಗಿದೆ. ಕಾಗುಣಿತವ ತಪ್ಪುಗಳಿವೆ.

—ಹಕರಾ

293

ಕೆ. ೧೫೮೫	ಹಸ್ತ್ಯಾಯುರ್ವೇದ	ಶ್ಲೋಕ, ಟೀಕು
೨೦.೨" × ೨"	?	?
೧–೫೭ ಪತ್ರ	೭ ಪಂಕ್ತಿ	೯೮ ಅಕ್ಷರ

ಆದಿ : . . . . ಸ್ತಭನ್ಯಷಃ ಸದೈವ ಘುತಿಭಿಃರ್ವಿಪ್ರೈ ಸಂನಂ ಸೇವಿತ ಸ್ತತ್ರಾಭೂತಿತಿ ಪಾಲಮ . . . ಪೊಸ್ತ್ರ ಸಿಂಹ್ವಾಭಿದಃ ॥ ತಸ್ಯಾತಿನ್ಮ ಹೀಷೆವಿ ಗೋಪತಿ ಭೃತಾಂ ಶ್ರೀವಾಕ್‌ಪ್ರಿಯಂ ಶಿವಾಸ್ತ್ಯಾಯಥಾ ಲಾವಣ್ಯಾವ್ರತ ದಾನ ಸತ್ಯ × × × × ಇದಕ್ಕೆ ಅರ್ತ್ಥ ಷಡ್ಗುಣ್ಯೈಶ್ವರ್ಯ್ಯ ಸಂಪನ್ನನಾದ ಅಂಗದೇಶದೊಳು ಚಂಪಾ ಪಟ್ಟಣಕ್ಕಧಿಪತಿಯಾದ ರೋಮಪಾದನೆಂಬ ಚಕ್ರವರ್ತ್ತಿಯು ಸಿಂಹಾಸನದೊಳು ಸುಖದಿಂ ಪ್ರಜಾಪಾಲನಂ ಮಾಡುತ್ತಿದ್ದಲ್ಲಿ

ಅಂತ್ಯ : ಆ ಹೇಳಿದ ತೀಕ್ಷ್ಣ ಕಬಳನನೂ ಹುಲ್ಲೊಳಗೆ ಕಟ್ಟಿ ತಿನುಸುವದೆಂದು ಪಾಲಕಾಪ್ಯಮುನಿ ಅಂಗರಾಜಗೆ ಹೇಳಿದನು । ಯಿಾ ಹೇಳಿದ ಆಹಾರ

ಗಳೊಳಗೆ ಯೆರಡು ಅಸಾಧ್ಯಗಳನು ಸಕ್ತವೆಂಬುದು ಸಂನ್ನಿಪಾತದಿಂದ ಹುಟ್ಟಿದ್ದ. ಯಿವ ಕೂಟ ಚಿಕಿತ್ಸೆ ಹೇಳಬೇಕೆಂದು ಬಳವಾಗೆ ಹೇಳಿದೆನು.
ಇತೀ ಶ್ರೀಪಾಲಕಾಪ್ಯೇ ಮಹಾಪಾಠೇ ಹಸ್ತ್ಯಾಯುರ್ವೇದೆ ಮಹಾರೋಗ ಸ್ಥಾನೆ ಆನಾಹ ಚಿಕಿತ್ಸಿತಂ ನಾಮ ಏಕವಿಂಶೋಧ್ಯಾಯಃ ಸಮಾಪ್ತ ಶ್ರೀನಾಹಃ ಶ್ರೀ.

ವಿಷಯ : ಆನೆಯ ಔಷಧೋಪಚಾರ.

ವಿಶೇಷ : ಅಸಮಗ್ರ. ಶಕಟರೇಫವಿದೆ. ಅಲ್ಲಲ್ಲಿ ಗರಿಗಳ ಅಂಚುಗಳು ಮುರಿದು ಲುಪ್ತವಾಗಿವೆ. ಬರಹ ಚೆನ್ನಾಗಿದೆ.

—ಕೆಆರ್‌ಎಸ್

294

ಕೆ. ಬಿ. ೭೨೪/೨	ಹಸ್ತಿಶಿಲ್ಪಚಕ್ರ	ಶ್ಲೋಕ, ಗದ್ಯ
೮" × ೬.೫"	?	?
೮೪–೮೬ ಪುಟ	೧೪ ಪಂಕ್ತಿ	೨೬ ಅಕ್ಷರ

ಆದಿ : ॥ ದೇವರು ಹೇಳುವ ಕ್ರಮವು ದಿಕ್ಕಿನ ಫಲ ॥
॥ ಇಂದ್ರನಲ್ಲಿ ಕೇಳಿ ಬಸವಂಣನ ಕಾಟ ಬೆಳ್ಳಿ ಹರಿಕೆ . . ॥ ೧ ॥
॥ ೨ ಅಗ್ನಿಯಲ್ಲಿ ಕೇಳಿ ಪರ್ವತದೇವರ ಕಾಟ ಗಂಗಾಳಹಕಿತಿ
॥ ೩ ಯಮುನಲ್ಲಿ ಕೇಳಿ ಯಲ್ಲಮ್ಮನ ಕಾಟ ಲಕ್ಷ್ಮಿ ಹರಿಕೆ
॥ ೪ ನೈರುತ್ಯದಲ್ಲಿ ಕೇಳಿ ಗುರುವಿಗೆ ನೀ ದೊಹರಿಕೆ ಹೆಂಣಿನ ಶರಿಗಿನಿಂದ ಬಮ್ದ ದೇವರ ಕಾಟ ॥

ಅಂತ್ಯ :

೭ ಕುಬೇರ	೮ ಯಿಶಾನ್ಯ	೯ ನವಗ್ರಹಾವೂ
ಯಿಾಯಿಂಟಿಲೋ ಉತ್ತರ ಗೊಡಕು ಗೂಡುಗಾನಿಶೀಕ ಗಾಡಿ ಗಾನಿದಾನಿಗು ವಭೂಮಿಲೋಗಬ್ರ ಮು–ಟ್ಟಲು ವೃಷಭ ಶಲ್ಯಾಲು ಉಂಡುನೂ ॥	ಯಿಾಯಿಂಟಿಲೊಯಿಾಶಾನ್ಯ ಮುಗಬ್ರಪ್ರಮಾಣಂ ತೋಲ್ವಿ ತಪಶವು ಶಲ್ಯಾಲು ಮಾರ್ಜಾಲಲು ಬೂಡದೆ ಕಂಠಪೆಂಕಲು ಸಹಾ ಉಂಡುನು ॥	ಯಿಾಯಿಂಟಿಲೊನ ಟಿನ್ರಡು ಮುನರು ಶಲ್ಯಾಲುಮರುಷ ಪ್ರಮಾಣಂತೋಲ್ವಿತೆ ಉಂಡನೂ

|| ಯಿದು ಹಸ್ತಿಸಿಲ್ಪ ಚಕ್ರವು ಸಮಾಪ್ತ ||

ವಿಷಯ: ಮನೆಕಟ್ಟುವ ವಿಚಾರ.

ವಿಶೇಷ: ಸಮಗ್ರ ಕೃತಿ. ಸುದೃಢ ಪ್ರತಿ ಮೋಡಿ ಅಕ್ಷರ ಈ ಕಟ್ಟಿನಲ್ಲಿ 'ಜಲಶಿಲ್ಪಿ' ಮುಂತಾದ ಕೃತಿಗಳಿವೆ.

—ಎಂಪಿಎಂ

295

ಕೆ. ಎ. ೬೦೦/೫	ಹಳೇಬೀಡು ಕೈಫಿಯತ್ತು	ಗದ್ಯ
೯.೬" × ೭.೩"	?	?
೧೧೩–೧೩೦ ಪತ್ರ	೧೭ ಪಂಕ್ತಿ	೨೧ ಅಕ್ಷರ

ಆದಿ: ಹಳೇಬೀಡಿನ ಕೈಫಿಯ್ಯತು । ಬರೆಯುವದಕ್ಕೆ ನಿರ್ವಿಘ್ನಮಸ್ತು ।
ನಮಸ್ತುಂಗಶ್ಶಿರಶ್ಚುಂಬಿ ಚಂದ್ರಚಾಮರ ಚಾರವೇ
ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ ||
ಹೊಯಿಸಳೇರ್ವೀರವಂಶಾಯ ಸ್ವಸ್ತಿವೈರಿಭೃತಾಂ
ಖಂಡನೇ ಮಂಡಲಾಗ್ರಾಮ . . ರ ಕಥಾರಾಗ್ರಜಂನ್ಮನೇ ||
ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನ ಶಕವರ್ಷಂಗಳು ೧೦೫೫ನೇ ವರ್ತಮಾನಕ್ಕೆ ಸಲುವ ಪ್ರಮಾದೀಚ ನಾಮ ಸಂವತ್ಸರದ ಮಾರ್ಗಿಶಿರ ಶು ೧೧ಲ್ಲುನಾವಿಷ್ಣು ಪೃಥ್ವೀಪತಿ ಯಂಬ ವಚನ ಪ್ರಕಾರ । ವಿಷ್ಣುವರ್ಧನರಾಯನು । ಯಿದ್ವಾರಾಪುರಿಯಂಬ ಪಟ್ಟ ಣವನು । ಸತ್ಯಸಂಧನಾಗಿ ರಾಜ್ಯಂಗೈಯುತ್ತಿರಲಾಗಿ

ಅಂತ್ಯ: ಶ್ರೀರಂಗರಾಯರು ಹೊರಟುಬಂದ ಯಿಕ್ಕೇರಿಯವರಿಗೆ ಹೇಳಿ ಕಳುಹಿಲಲಾಗಿ ನಾರಪ್ಪನಾಯ್ಕನು । ಶ್ರೀರಂಗನಾಯ್ಕನ ಕರದುಕೊಂಡು ಬಂದು ಯಿ ಬೇಲೂರು ಸಂಸ್ಥಾನವಂನು ಕೊಟ್ಟನೂ । ಪುನಹಾ ಪಾಛಾಯ ಬಗೆ ಮಹಿಸಂನ್ ಖಾನ್ ನೆಂಬವನು ಬಂದು ಯೇಳು ವರ್ಷ ಆಳಿದನು । ಪುನಹ ಯಿಕ್ಕೇರಿಯವರು ಕಟ್ಟಿಕೊಂಡರೂ । ಯಿವರರಿಂದ ಮಹಿಸೂರವರು ಕಟ್ಟಿಕೊಂಡು ಯಿದ್ದರೆ । ಮಂಗಳ ಶ್ರೀ.

ವಿಷಯ: ಹಳೇಬೀಡಿನ ಚರಿತ್ರೆ.

ವಿಶೇಷ: ಇವರ ಜೊತೆಯಲ್ಲಿ ರಂಗನಾಥಸ್ವಾಮಿ ಗುಡಿಯ ಲೆಖ್ಖ. ಬೆಟ್ಟದ ಕೋಟೆ ಕೈಫಿಯತ್ತು ಮೊದಲಾದ ಇತರ ನಾಲ್ಕು ಗ್ರಂಥಗಳಿವೆ.

— ಬಿಎಸ್‌ಎಸ್

296

ಕೆ. ೧೦೦೧/೬ ಹಾಡುಗಳು ಷಟ್ಪದಿ
೧೧″ × ೧.೮″ ? ?
೯ನೆಯ ಪತ್ರ ೭ ಪಂಕ್ತಿ ೩೨ ಅಕ್ಷರ

ಆದಿ: ಶ್ರೀಗುರುವೆಗತಿ
ಪಲ್ಲ ॥ ಅತಿಶಯನೂತನ
ಕ್ಷಿತಿಯಗಣಂಗಳ
ನುತಿಸಿ ಕೃತಾರ್ಥನಾಗುವೆನು ॥
ಪರಮಸಿದ್ಧೇಶ್ವರನ
ವರಶಿಷ್ಯರುಗಳಾದ
ನಿರುತನಿರಕ್ಷರ ಬೋಳಾ
ಕರುಣಬಸವೇಶನ
ಚರಣಕಮಲಗಳಿಗೆ
ಶರಣೆಂದು ಬದುಕುವೆನಾನೂ ॥ ೧

ಅಂತ್ಯ: ಮುರಿಗೆ ಸ್ವಾಮಿಯ ಪಾದ
ಸರಸಿಜಯುಗಳಕ್ಕೆ
ವರಭೃಂಗನಪ್ಪೆಸೀನುತಿಯಾ
ಬರದೋದಿವವರೆಲ್ಲ
ಹರನ ಕೈಲಾಸದ
ಯರಕಾದ ಮೋಕ್ಷ ವನೆಯಿದುವರೂ ॥ ೫ ॥

ವಿಷಯ: ಅರವತ್ತು ಮೂರು ಗಣಗಳ ಸ್ತೋತ್ರ.

ವಿಶೇಷ: ಇದರ ಜೊತೆಯಲ್ಲಿ ಜ್ಯೋತಿರ್ಮಯ ದೀಕ್ಷಾಬೋಧೆ, ಪ್ರಭುವಿನ ವಚನ ಇತ್ಯಾದಿ ೧೬ ಕೃತಿಗಳಿವೆ.

—ಜಿಜಿಎಂ

297

ಕೆ. ೧೧೩೮/೨೯ ಹಾಡುಗಳು ಹಾಡು
೭″ × ೧.೯″ ? ?
೧ ಪತ್ರ ೧೦ ಪಂಕ್ತಿ ೩೪ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ||
ಹರನಾಮುವನು ಬಿಡದೆ ಜಪಿಸಬಲ್ಲವರು ಭವಮರಣಮಾಯ
ಕರ್ಮಮಲ ಪಾಶಬಂಧ ಬಹುದುರಿತಸಂಸಾರ ಸಂತಾಪಸಂಚಯ
ವಳಿದು ವರಭೋಗವೋಕ್ಷವಹುದು ||

ಪದ || ಶಿವಮಹಾದೇವ ಶಂಕರಸರ್ವ ಪಾರ್ವತೀ
ಧವನಂದಿವಾಹ ದೇವೇಶಾನುದಕ್ಷುವಹ
ಸವನತಪದಂಭೋಜನಗಚಾಪ
ನಿರ್ಮಲನಿರಾತಂಕ ನೀಲಕಂಠಾ × ×

ಅಂತ್ಯ : ಉದಯಸಮಯದೊಳಿಂತು ನೂರೆಂಟು ನಾಮವನು
ಪದುಳದಿಂದೋದಿ ಕೇಳಿದವರ್ಗೆ ಶಂಭುಲಿಂ
ಗದಕರುಣದಿಂದಿನಿತು ಕೊರತೆಯಿಲ್ಲ ಸಕಲಸ
ಪದದೊಳೊಂದು ಗೂಡಿ ||
ಸದಮಲಜ್ಞಾನಭಕ್ತಿಗಳು ಮೊಳೆಯಲೊದವಿ
ಕೈಸಾರುತಿಹವಿಹದಲೀ ಪದದೊಳೊಂದಿದಗಣ ಪದವನೈದಿ
ನಿಜಸುಖದೊಳಿಹ ಮುಕ್ತಿ ದೊರೆವುದಿದುಸತ್ಯವೆಂದು ಶ್ರೀ ಶ್ರೀ || ೫ ||

ವಿಷಯ : ಶಿವನ ಅಷ್ಟೋತ್ತರ.

ವಿಶೇಷ : ಇದೇ ಕಟ್ಟಿನಲ್ಲಿ ಗುರುರಗಳೆ, ಷಡಕ್ಷರಿರಗಳೆ ಮೊದಲಾದ ೨೯ ಕೃತಿಗಳಿವೆ.

—ಜಿಜಿಎಂ

298

ಕೆ. ೧೫೪೯/೭	ಹಾಡುಗಳು	ಹಾಡು
೮.೩" × ೧.೫"	?	?
೩ ಪತ್ರ	೫ ಪಂಕ್ತಿ	೨೫ ಅಕ್ಷರ

ಆದಿ : ಯಲೆಲೆ ಮಾನುನಿ ನೋಡು ನಿಜಕರಸ್ಥಲದೊಳಿಹ ನಿಜಲಿಂಗವ
ಮಲಹರಾತ್ಮರ ಭಕ್ತಿ ಪಾಸದ ಬಲೆಗೆ ಸಿಲುಕಿದ ಲಿಂಗವಾ || ಪಲ್ಲ ||
ಮದವೊದಲು ಮೋಹಾಂತ ಪದಿನೆಂಟುದಿತದೋಷವ ತೊಲಗಿಸಿ
ಪುದಿದ ಭ್ರಮೆಯೆಂಟೇಳು ಯೆಸನವ ಮದಗಳೆಂಟರಿವರ್ಗವಾ
ನೊಡೆದುಯಿಾರೈದಿಂದ್ರಿಯಂಗಳ ಸದೆಬಡಿದು ದಸವಾಯುವಾ
ಕೆದರಿಸುತ ಕರಪೀಠಕೊದಗಿದ ಸದಮಲಾತ್ಮಕ ಲಿಂಗವಾ ||

ಅಂತ್ಯ : ಅಂತವೆಲ್ಲವ ನಟಿಸಿ ಜಗದೊಳಗಂತರಾವಿಯದಾಗುತ
ಭ್ರಾಂತಳಿದ ಸದ್ಭಕ್ತರೊಡನೆ ಸಂತತಂ ನೆಲಸಿಪ್ಪನು
ಅಂತು ನಿಜಗುರು ಸಿದ್ಧಶಾಂತನಕಾಂತೆ ಕೇಳೆಂನಂಗದಿ
ಸ್ವಾಂತು ಭಾವದ ತಿವಿಧರೂಪದನಾಂತು ಕರದೊಳು ನೆಲಸಿದಂ ॥ ೫ ॥

ವಿಷಯ : ಕರಸ್ಥಲಲಿಂಗದ ಸ್ತುತಿ.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ. ಇದೇ ಕಟ್ಟಿನಲ್ಲಿ ಬಸವಪವಾಡದ ಸಂಧಿ ವೊದಲಾದ ೮ ಕೃತಿಗಳಿವೆ.

—ಜಿಜಿಎಂ

299

ಕೆ. ೧೬೬೨/೬ ಹಾಡುಗಳು ಹಾಡು
೭.೫″ × ೧.೨″ ಕರಸ್ಥಲದನಾಗಲಿಂಗ ಸು. ೧೪೩೦
೨ ಪತ್ರ ೫ ಪಂಕ್ತಿ ೮೩ ಅಕ್ಷರ

ಆದಿ : ಬಳ್ಳಿಕೂಗಿದ ಫಲನುಬಲ್ಲೆ ಯೆಲೆ ಅಕ್ಕಾ
ವಳ್ಳಿತಲ್ಲವೆ ತಂಗಿಪುರದಜನರ್ಗ್ಗಳಿಗ ॥ ಪಲ್ಲ ॥
ಪುರದಮೂಡಣದಿಕ್ಕು ಅಡರಿಅಗ್ನಿಗೆ ಬಂದು
ಸ್ವರವನಿಕ್ಕ್ಯತಲಿದೆ ಯಮನೈರುತ್ಯಕಾಗಿ
ದೊರೆಗಳಳಿದರು ತಂಗಿ ಮರಣತಳವಾರರಿಗೆ
ನೆರಿಯಂಬಭೂಪತಿಗೆ ಸಾರುತಿದೆತಂಗಿ ॥ ೧ ॥

ಅಂತ್ಯ : ನಿಲುತಿದೆ ಈಸಾಂನ್ಯನಲ್ಲಿ ಜಂಬುಕ ತಾನು
ಯಲ್ಲ ಮಾತೇನು ಶಿವಪುರವಾದುದು
ತಲ್ಲೀಯವಾಗಿ ಗುರುಶಾಂತನೊಳ್ ಬೆರದು
ನಿಲ್ಲುತಿದೆ ಬಟ್ಟಂನೈಲೊಳಗೆ ಲಲಿತಾಂಗೀ ॥ ೩ ॥

ವಿಷಯ : ನರಿ ಕೂಗಿದರೆ ಉಂಟಾಗುವ ಫಲ, ವೈರಾಗ್ಯ ಪ್ರತಿಪಾದನೆ.

ವಿಶೇಷ : ಸಮಗ್ರ. ಇದರ ಜೊತೆಗೆ ಹಾಡು, ಮುತ್ತಿನಕಂತೆ ಸದ್ಗುರು ಅಂಕಿತದ ಹಾಡುಗಳು, ಚಂಪವಾಮನ ಹಾಡುಗಳು ಮುಂತಾದ ೧೧ ಕೃತಿಗಳಿವೆ.

—ಜಿಜಿಎಂ

300

ಕೆ. ೧೬೬೨/೯ **ಹಾಡುಗಳು** ಹಾಡು

೭.೫" × ೧.೨" ? ?

೧ ಪತ್ರ ೬ ಪಂಕ್ತಿ ೪೦ ಅಕ್ಷರ

ಆದಿ : ದೂರಿದೂಶಿಸುವರುಂಟೆ
ಹರನೆ ನಿಮ್ಮ ಗುಣವ ದೂರಿದೂಶಿಸುವರುಂಟೆ
ಗುರುವೆ ನಿಮ್ಮಗುಣವ ದೂರಿದೂಶಿಸುವರುಂಟೆ
ಶಿವನೆ ನಿಮ್ಮಗುಣವದೂರಿದೂಶಿಸುವರುಂಟೆ ||
ವೈರಿಗುಡಾರುವಲಿವ ಕಾರುಂಣ್ಯ ಮೂರ್ತಿಯಾ
ದೂರಿದೂಶಿಸುವರುಂಟೆ || ಪಲ್ಲ ||

ಅಂತ್ಯ : ಧರೆಯೊಳದಿಕು ಹೊಂನ್ನಗಿರಿಯಾ ಅಮ್ರುತೇಶನಾ
ಸರಿದೈವವಿಲ್ಲೆಂಬ ಕತೆಗಳೆಲ್ಲಾವೂ ಕೇಳಿ
ದೂರಿದೂಶಿಸುವರುಂಟೆ
ಹರನೆ ನಿಮ್ಮಗುಣವ ದೂರಿದೂಶಿಸುವಂರುಂಟೆ || ೩ ||

ವಿಷಯ : ವೀರಶೈವಸಿದ್ಧಾಂತ, ಶಿವಮಹಿಮೆ.

ವಿಶೇಷ : ಸಮಗ್ರ. ಇದರ ಜೊತೆಗೆ ಹಾಡು, ಮುತ್ತಿನಕಂತೆ ಸದ್ಗುರು ಅಂಕಿತದ ಹಾಡುಗಳು, ಚಂದಮಾಮನ ಹಾಡುಗಳು ಮುಂತಾದ ೧೧ ಕೃತಿಗಳಿವೆ.

—ಜಿಜಿಮ

301

ಕೆ. ೧೭೧೦ **ಹಾಡುಗಳು** ಹಾಡುಗಳು

೮.೯" × ೧.೨" ನಿಜಗುಣ ಶಿವಯೋಗಿ ಇತ್ಯಾದಿ ಸು. ೧೫೦೦

೪೨ ಪತ್ರ ೫ ಪಂಕ್ತಿ ೭೮ ಅಕ್ಷರ

ಆದಿ : . . . ಗ ದಿಂಡಾಕಂಡೂ || ೫
ರಾಘ ಸಾಳಗಾ |
ಪರಮಪಾವನ ಪಂಚಮುಖ ದಯಸಿಂಧುವೆ ಶಂಭುಲಿಂಗಾ
ವರದವಾಸವನಾಥ ಲೋಕೈಕ ಬಂಧುವೆ | ಶಂಭುಲಿಂಗಾ || ಪಲ್ಲ

ಅನುಪಮಚಲಭಕ್ತಿ ಭಾವನು ಕೂಲನೆ ಶಂಭುಲಿಂಗಾ
ಮನುಮುನಿಜನರ ತಪೋನಿಧಿ ಲೋಲನೆ ಶಂಭುಲಿಂಗಾ
ಜನನ ಮರಣಭಯಹರಜಿತ ಕಾಲನೆ ಶಂಭುಲಿಂಗಾ
ವನಜಭವಾಂಡಮಂಡಲ ಪರಿಪಾಲನೆ ಶಂಭುಲಿಂಗಾ ॥ ೧

ಅಂತ್ಯ : ಬರಲುಳ್ಳ ದುಃಖವನನುಭವಿಸದೆ ಬೇರೆ
ಪರಿಹಾರವದಕಿಲ್ಲವಿಹುದೆಂದೊಡೆ
ಪಿರಿದು ಸಾಹಸಿಗಳೆನಿಪರಾಮ ನಳ ಪಾಂಡ
ವರು ನೋಯಲೇಕೆ ನೀನಿದನಾರಿದೂ ॥ ೨
ಜನನ ಮರಣಪಾಗುಹೋಗಿನೊಳೊಡೆತನ
ವಿನಿತಿಲ್ಲದೆಂ . . .

ವಿಷಯ : ತತ್ವಬೋಧೆ.

ವಿಶೇಷ : ಅಸಮಗ್ರ ಶೀರತ್ರುಟಿತ.

—ಜಿಜಿಎಂ

302

ಕೆ. ೮೬೪/೧	**ಹಾಡುಗಳು**	ಪದ್ಯ
೧೦.೫″ × ೧″	?	?
೧–೫೮ ಪತ್ರ	೫ ಪಂಕ್ತಿ	೪೩ ಅಕ್ಷರ

ಆದಿ : ಶ್ರೀಮನೆ ಅಜಹರಿನದಿಂತಪಥನೆ ।
ಭೂಜಗ ಭೂಷಣನಸುತ ವಿಘ್ನದಾಯಕನೆ ॥ ಪ ॥
ಸುಂಡಾಲ ವದನೇಕದಂತಾಯ
. . . . ನೆಪವಗಾತ್ರ ಸಂಯುತನೆ ।
ಚಂಡಕರಶುಭ್ರಾಂಶು ಸಮತೇಜಯುತನೆ ।
ಕುಂಡಲಿ ವ್ರಜದಿಂದನೇರ್ವ ಮಂಡಿತನೇ ॥

ಅಂತ್ಯ : . . . . . ದಿ ಸಾಹಿತ್ಯ ವಿವರವನು ॥ ೭ ॥
ಅಷ್ಟದಶವರ್ಣನೆಂ . . . .
ಕಾವ್ಯವನು ವಿಸ್ತರದಿಸೊದಿ ಸಹಕಾವ್ಯ
. . . . ದಲಿಶೂ ದೊಡ್ಡರಸಿಂದ್ರಾ ಸುಖದೊಳಿರು

ವಿಷಯ : ವಿವಿಧ ವಿಷಯಗಳು.

ವಿಶೇಷ : ಓಲೆ ಬಹಳ ಜೀರ್ಣವಾಗಿದೆ. ಕೊನೆಯ ಪತ್ರ ಅರ್ಧ ಮಾತ್ರವಿದೆ.

—ಎಂಸಿಟಿ

303

ಕೆ. ೯೩೭/೬	ಹಾಡುಗಳು	ಹಾಡು
೮.೫" × ೧.೮"	?	?
३_೯ ಪತ್ರ	೯ ಪಂಕ್ತಿ	೪೦ ಅಕ್ಷರ

ಆದಿ : ಶ್ರೀಗುರುವೇ ಗತಿ ||
ಪದುಳವಲ್ಲವೆ ನೋಡೆ ಪದುಳವಲ್ಲವೆ
ಸದಮಲಾತ ಲಿಂಗದಲ್ಲಿ ಹುದುಗಿದಂತರ ಶರಣಜನಕೆ || ಪಲ್ಲ ||
ಅಂಗಹಸ್ತ ಶಕ್ತಿ ಭಕ್ತಿ
ಲಿಂಗತ್ರುಪ್ತಿ ವರ್ನಮುಖಉ
ಕಂಗಳಲ್ಲಿ ಕಂಡುವಿಷ್ಟ
ಲಿಂಗದಲ್ಲಿ ಬೆರದವರ್ಗೆ || ೧ ||
ಆದಿ ಅಂತ್ಯವಾದಯಂತ್ಯ
ವಾದಿ ಮೂಡಿ ಸೋಹಂ ಮೆರದು
ವಾದ ವರ್ನ್ನವೆರಡು ವಳಿದು
ನಾದ ಬ್ರಹ್ಮವಾದವರ್ಗೆ || ೨ ||

ಅಂತ್ಯ : (೯ ನೆಯ ಪತ್ರದ ಹಿಂಭಾಗದಲ್ಲಿರುವ ಹಾಡಿನ ಅಂತ್ಯ)
ವೇಧಾವ ನೋಡಿದರೇನು । ವಾದ ಮಾಡಿದರೇನು
ಕಾಡಿಕಡಿದಾಡಿ ಗೆಲಿದರೇನು
ಯೇನಾದರೇನು ಗ್ನಾಆ್ಯನವಿಲ್ಲದೆ ಮೋಕ್ಷವಿಲ್ಲಾ || ೨ ||
ಕಾನಾ ಸೇರಿದರೇನು ।
ಜಾಣತನವಿದ್ದರೇನು
ಜ್ಞಾನಬೋಧಾವ ಪ್ರಭುಸಾರಿದಾನು
ಯೇನಾದರೇನು ಜ್ಞಾನಾವಿಲ್ಲಾದೆ ಮೋಕ್ಷ ವಿಲ್ಲಾ || ೩ ||

ವಿಷಯ : ತತ್ತ್ವದ ಹಾಡುಗಳು.

ವಿಶೇಷ : ಈ ಏಳು ಪತ್ರದಲ್ಲಿ ತತ್ತ್ವಬೋಧಾತ್ಮಕವಾದ ೧೪ ಹಾಡುಗಳಿವೆ.

ಇದರಲ್ಲಿ ಶ್ರೀ ರಾಗ ಸೌರಾಷ್ಟ್ರದ ಕೋಗಿಲೆ ಚೆಲ್ವಕೋಗಿಲೆ । ಮುದ್ದು ಕೋಗಿಲೆ । ಜಾಣಕೋಗಿಲೆ ॥ ಎಂಬ ಹಾಡೂ ಇದೆ. ಇದೇ ಕಟ್ಟಿನಲ್ಲಿ ವಟಪುರ ಸಿದ್ಧಾಂತ ಸ್ತೋತ್ರ, ಗಿರಿಜಾಕಲ್ಯಾಣದೊಳಗಣಪದ, ಮಣ್ಣೇಶ್ವರ ನಾಂದ್ಯ, ವೈದ್ಯಶಾಸ್ತ್ರ ಇತ್ಯಾದಿ ಒಟ್ಟು ೯ ಗ್ರಂಥಗಳಿವೆ.

—ಕೆಆರ್‌ಎಸ್

304

ಕೆ. ೯೪೧/೧೭	ಹಾಡುಗಳು	ಹಾಡು
೧೮.೬" × ೧.೬"	?	?
೨೪—೨೬ ಪತ್ರ	೭ ಪಂಕ್ತಿ	೭೫ ಅಕ್ಷರ

ಆದಿ: ರಾಗ ॥ ಭೈರವಿ । ಅಟತಾಳ ॥
ಮನದೊಳಗೆ ನಾನೆನದ ಮುನ್ನವೆ
ಮನದಲಿದ್ದಂದದಲಿ ನಡೆವಳು
ಮನವು ಮುಂಚಿತು ಹಿಂಚಿತೆನ್ನಯ
ಮದನಕೇಳಿಯೊಳೊದಗುವ
ಘನತವಕದಲಿ ಮೇಲುವಾಯಿದಳು
ಮುನಿಸತೋಜದೆ ಮುಸಿದು ಮೆಚ್ಚುತ
ತನುವು ತನುವಂದಂತೆ ಸೊಗಯಿಸ
ತರುಣಿ ರಮಣಿಯನು ॥ ೧ ॥

ಅಂತ್ಯ: ಚಲಿಯು ಚಪ್ಪರ ತಾಳಮಂಚಮು ಪೈಸಿ ಚಿಕ್ಕಾಂಚಿ
ಅದ್ದಮುಪೈ ನಿಡಗನುಕೊನಿ । ತೊಲುತ ಮದನಕೇಳಿಲೊನಿರೀತಿ
ಜೂಜಿತೊ . . ವಿಶ್ರಮಿಂಚಿನಿವು । ನೆಲತರೊನಾಸಾಮಿ ಕಂಠೀರ
ವೇಂದ್ರುಡುನೆರ್ಪುನವು ಪರತಿಜರ್ಚುಕೊಂನಾಡಂಟ ।
ಪಲುಮಾರದ್ದವು ನಾರಜಾಪುಲ ಚೂಚುಕ । ಪದರಿ ಚಿರುನಖು
ತನುಂ ನದಾನವಪುಡು । ೩ । ಶ್ರೀ ಶ್ರೀ ಶ್ರೀ.

ವಿಷಯ: ಶೃಂಗಾರ ಮತ್ತು ವೈರಾಗ್ಯದ ಹಾಡುಗಳು.

ವಿಶೇಷ: ಇದರಲ್ಲಿ ಕನ್ನಡ ಮತ್ತು ತೆಲುಗು ಭಾಷೆಯ ಹಾಡುಗಳಿವೆ.

—ಎಸ್‌ಬಿಎ

305

ಕೆ. ೯೯೪/೨೮ | **ಹಾಡುಗಳು** | ಹಾಡು
೮" × ೨.೨" | ? | ?
೮ ಪತ್ರ | ೧೪ ಪಂಕ್ತಿ | ೩೮ ಅಕ್ಷರ

ಆದಿ : ಸುಕುಮಾರದಹನ ಕೃತ ಸುಭಸಿತಾಂಗ
ಕಮಲಾಪ್ತ ಕೋಟಿ ಪ್ರಕಾಶಜಯ ಪೊಂಪಾವಿರೂಪಾಕ್ಷ ॥ ೧೦
ಗೋವಿಂದ ವಿಶ್ವವನು ಪಾಲಿಸುವ ಜ್ವಾಲಿಸುವ
ಗೋವಿಂದ ಯಮಿಜನರ ರಕ್ಷಿಸುವ ಸಿಕ್ಷಿಸುವ
ಗೋವಿಂದ ದ್ರುಹಿಣಾಂಡ ಕೋಟಿಗಳ ಪ್ರೇರಿಸುವ
ಗೋವಿಂದ ಧರಜಯಜಯ ॥ ಪದ

ಅಂತ್ಯ : ಅಱಿಯಂ ತಾನಱಿದಿರ್ದ ತನ್ನ ಮಱಹಿಂದಂ ತೋರ್ಪಱಿದ್ಯರ್ಥಮಂ
ಮಱಿಯತಾಂ ಮಱದಿರ್ದಾತಂನಱಿಹಿನಿಂದಂತೋರ್ಪ ಸತ್ಯಾರ್ತ್ಥಮಂ
ವಱಹಂತಟ್ಟದೆ ಪುಟ್ಟದೊಂದಱವಿನೇಕಾಕಾರವಾದಂಗೆ ಮೆ
ತ್ತಱಿವೆಂದುಂಮಱಹೆಂದೋ ಓಪೋಕುಱುಹೊಂದುಂಟೆ ಶಿವಾ
ವಲ್ಲಭಾ ॥ ೩೬

ವಿಷಯ : ಶಿವ ಮತ್ತು ಶಿವಶರಣರನ್ನು ಕುರಿತ ಹಾಡುಗಳು. ಇದೊಂದು ಸಂಕಲನ.

ವಿಶೇಷ : ಇದರಲ್ಲಿ ಬಸವತ್ರಿವಿಧಿಯೇ ಮೊದಲಾದ ೨೭ ಕೃತಿಗಳಿವೆ.

— ಜಿಜಿಎಂ

306

ಕೆ. ೧೦೦೦/೩ | **ಹಾಡುಗಳು** | ಹಾಡು
೧೨.೮" × ೨" | ? | ?
೭೮–೮೦ ಪತ್ರ | ೧೩ ಪಂಕ್ತಿ | ೮೦ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ॥ ಪಲ್ಲ ॥
ವೃಷರಲೆನ್ನ ಳವಲ್ಲ ಶಶಿಮುಖಿಯಳೆ ಕೇಳು
ಹಸನಾಯಿ ಶಿವನನುವು ಮಿಸುಪ ಕಂಗಳ
ಪಾನೆಯೊಳಗೆ ರಂಜಿಸುತಿರ್ಪ
ಕುಸುಮಗರ್ದುಗೆಯ ಮೇಲೆ ಬಾಲೆ ॥ ಪದ ॥

ಅಂತ್ಯ : ಬಚ್ಚಬರಿಯ ಚಿತ್ಸುಧಾರಸಾಂಬುನಿಧಿಯೊಳು ಮುಳುಗಿ
ವೆಚ್ಚವಿಲ್ಲದಮಳ ಸುಖದಸುಗ್ಗಿ ಪಡೆವುತಾ
ಬಿಚ್ಚಿ ಬೇರುದೊರದಂತೆ ಶಂಭುಲಿಂಗವನಪ್ಪಿ
ಯಚ್ಚರಪುಗಿದಚ್ಚ ಪರವಸದೊಳು ನಿಂದೆನೂ ॥ ೩

ವಿಷಯ : ವೀರಶೈವಸಿದ್ಧಾಂತ.

ವಿಶೇಷ : ಈ ಕಟ್ಟಿನಲ್ಲಿ ಹಂಸಪವನಲಕ್ಷಣ, ಹಿರಿಯ ಮಂತ್ರಗೋಪ್ಯ ಇತ್ಯಾದಿ ೧೫ ಕೃತಿಗಳಿವೆ. ಅಲ್ಲದೆ ೧–೮೬ ಪತ್ರಗಳಲ್ಲಿ ಉದ್ಧರಣೆಯ ಪಟಲದ ಚಿತ್ರಗಳಿವೆ. ೬–೫೮ ಪತ್ರಗಳಿಲ್ಲ.

—ಜಿಜಿಎಂ

307

ಕೆ. ೧೦೦೫/೪	**ಹಾಡುಗಳು**	ಹಾಡು
೧೩" × ೧.೨"	?	?
೧ ಪತ್ರ	៦ ಪಂಕ್ತಿ	೪೬ ಅಕ್ಷರ

ಆದಿ : ದೊರಕಿತು ಯನಗೊಂದು ರತ್ನಾ
ಅಪೂರ್ವ ಮೂರುಲೋಕವನು ಬೆಳಗುತಿಹುದು ॥
ನಿರುಪಮ ನಿರ್ಮಳ ಯುಂದಿಗೆ ಮಾಜದು ಅದು
ಗುರುವಲಿದರೆ ಕೈಗೂಡುವದು ॥ ಪ

ಅಂತ್ಯ : ಮೂಕಸಕ್ಕರಿ ಮೆದ್ದದೂ ಆ ಸವಿಯು
ಮೂಕ ಪೇಳಲು ಬಲ್ಲನೆ
ಯೇಕಾಂತ ಗ್ನಾನಬೋಧಾಗುರುನಾಥ
ಯೇಕತತ್ವದೊಳಿರಿಸಿದಾ ॥ ೩.

ವಿಷಯ : ವೇದಾಂತ.

ವಿಶೇಷ : ಇದೇ ಕಟ್ಟಿನಲ್ಲಿ ಅನುಭವಮುಕುರ, ವಾಸನಾಕ್ಷಯ ಪದ ಮತ್ತು ೨ ಹಾಡುಗಳಿವೆ.

—ಜಿಜಿಎಂ

308

ಕೆ. ೧೦೧೨/೬	**ಹಾಡುಗಳು**	ಹಾಡು
೮.೫" × ೧.೯	?	?
೩ ಪತ್ರ	೬ ಪಂಕ್ತಿ	೩೦ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ । ರೂಪಕ ತಾಳ
ಮುಂಡೆಯರಾದರೆಲ್ಲ
ಪಿಂಡಾಂಡದೊಳಗಣ ಗಂಡನ ಕಾಣದೆ
ಮುಂಡೆಯರಾದರೆಲ್ಲ
ಆಧಾರ ಮೊದಲಾದ ಆರು ಚಕ್ರವ ಮೀರಿ
ನಾದ ಬಿಂದು ಕಳೆಯಾದ ಚಿತ್ತು
ವೇದಕ್ಕೆ ದೂರದ ಚಿದ್ರೂಪದ ಲಿಖಿತವ
ಪೋಡಿದ ಹೃದಯದೊಳೊಂದನೆ ಕಾಣದೆ ॥ ಮು ॥ ೧ ॥

ಅಂತ್ಯ : ಹೊಗಳದರಿಗುಬ್ಬಿ ನಲಿದಾಡಿ ಭಕ್ತಿಯ ಮಾಡಿ
ಹೊಗಳದಿದ್ದವರ ಸಾಮಾನ್ಯಗಂಡು
ಜಗದೊಳಗೆ ನಾ ಭಕ್ತನೆಂದು ಬೆಬ್ಬನೆ ಬೆರತು
ನಗುವರಿಗಿದಯಿಂತ ವಿಗಡ ಮನುಜರಿಗೆ ॥ ೪ ॥

ವಿಷಯ : ನೀತಿಯ ಹಾಡುಗಳು.

ವಿಶೇಷ : ಇದರೊಡನೆ ಕರಣಹಸಿಗೆ, ಪಂಚಸ್ತೋತ್ರ ಮೊದಲಾದ ಇತರ ಐದು ಗ್ರಂಥಗಳಿವೆ.

—ಬಿಎಸ್‌ಎಸ್

309

ಕೆ. ೧೦೩೧	**ಹಾಡುಗಳು**	ಹಾಡು
೧೧.೨" × ೧.೯"	ತಿರುಮಲಾಚಾರ್ಯ	೧೬೬೦
೧-೩೮ ಪತ್ರ	೭ ಪಂಕ್ತಿ	೪೬ ಅಕ್ಷರ

ಆದಿ : ಶ್ರೀಶ್ರೀ ಶಾರದಾಂಬಾಯೆ ನಮಃ × × × ಶುಭಮಸ್ತು ಶ್ರೀರಸ್ತು
ನಾಟರಾಗ । ಜಂಪೆ ತಾಳ
ಗೆಲವು ಗೆಲವಾನತಲಿಗೆಲ್ಲ ಗೆಲ್ಲವನೀವ
ಬಲವದಪ್ಪ ತಿಮ ಗೋಪಾಲರಾಯ ×ಗೆ ॥ ಪಲ್ಲವಿ ॥

× × ಜ್ಜನರ ಮನ್ನಣೆಯೊಳೋವಿ
ದುರ್ಜನರ ಕೊತ್ತಳದುಳಿದು ಜಾತಿಧರ್ಮವನು
ಅನುಗೊಳಿಸಲಪ × × ಯದುಕಲದಿ ನಂದಣ ।
ಪನಭಾನು ಫಲವೆನಿಸಿ ಬಳೆದ ಗೋವಳಗೆ ॥ ೧

ಅಂತ್ಯ : ಪರಿಪರಿ ಫಲಗಳ ಬಗೆಗೊಳಿಸದೆ ನಿನ್ನ
ಚರಣವ ಬಯಸುವ ಚದುರರಂತಾನು
ತಿರುಮಲೆಯಾರ್ಯರ ದಿವ್ಯಕೃತಿಯನಿದ
ನಿರವೆ ಪಾಡುವೆನು ಕೇಳಿ ತರವನರಿಯೆನು ॥ ೭

× × ×
ತಕ್ಕರನ್ನು ಪೆರ್ಚಿಸುವದಾಯಕ್ಕೆ ಮಂಗಳಂ
ಮಿಕ್ಕು ಮಿಗುವರಿವ ಮಹಿಮೆಗೆ ಮಂಗಳಂ
ಚಿಕ್ಕದೇವರಾಯನಿಗೆ ಸಿರಿಯನೇಳಿಗೆಗೊಂಬ
ಪೆಕ್ಕಳದೊಳೆಸೆವ ಹೊಸ ಬಿನ್ನಣಕೆ ಮಂಗಳಂ ॥ ೩
ಸುಗುಣೆ ರುಕ್ಮಿಣಿಗೆ ಶುಭಮಂಗಳಂ ॥ ಶ್ರೀರಾಮ ॥ ಶ್ರೀ ಶ್ರೀ.

ವಿಷಯ : ಕೃಷ್ಣನ ಸ್ತುತಿ.

ವಿಶೇಷ : ಪ್ರತಿ ಶುದ್ಧವಾಗಿದೆ. ತೆಲುಗು ಹಾಡುಗಳೂ ಇವೆ.

—ಜಿಜಿಎಂ

310

ಕೆ. ೧೧೨೬/೩	ಹಾಡುಗಳು	ಹಾಡು
೬.೧" × ೨.೧"	?	?
೧–೧೩ ಪತ್ರ	೧೨ ಪಂಕ್ತಿ	೩೭ ಅಕ್ಷರ

ಆದಿ : ಶ್ರೀರಾಗ
ಅಘಣಿತ ಮಹಿಮೆಯ್ಯನಗಲದ ವಿಭವಾನೆ ಜಾಣರ ದೇವಾ
ಸೊಗಸೂವ ಸುಗುಣಸಂತತಿಗೂಡಿದಭವನೆ ಜಾಣರ ದೇವಾ

ಅಂತ್ಯ : ಯಿಂತಪ್ಪ ಷೋಡಸರು ತೇರಸರು ದಶಗಣರು
ಮುಂತಾದ ಅಜುವತ್ತು ಮೂವರಂಘ್ರಿಯ ಕರುಣ
ಸಂತತಾ ಸಲಿಲದೊಳುಗಾಳುತ್ತ ಪಂಚಾಕ್ಷರೋಂಕಾರ ಪ್ರಣಮತ್ರ
ಯವಂ ॥

ಮಂತ್ರಸ್ಮರಣೆಗಳಿಂದ ಭಸ್ಮಾಕ್ಷ ಮಾಲೆಗಳ
ನಂತು ಸರ್ವಾಂಗದೊಳು ಧರಿಸಿಸುತ್ತ ಕರರು
ಹದ × ಸದ್ಗುರುವರನ ತ್ರಿಕಾಲದೊಳು ಭಜಿಸಿ
ಶಾಂತಮುಕ್ತಿಯನೀವನೂ ||

ವಿಷಯ : ವೈರಾಗ್ಯ ಪ್ರತಿಪಾದನೆಯ ಹಾಡುಗಳು.

ವಿಶೇಷ : ನಿಜಗುರುಶಾಂತಮಲ್ಲ, ಶಂಕರ, ಗುರುಬಸವ, ಗುರುಸಿದ್ಧಾದಿ ಅಂಕಿತದ ಹಾಡುಗಳಿವೆ. ಅಲ್ಲದೆ ಇದೇ ಕಟ್ಟಿನಲ್ಲಿ ಶಿವಕವಚ, ಹಾಡುಗಳು, ಗುರುನಂಜುಂಡನ ಪದಗಳು, ಘನಲಿಂಗಿದೇವರ ವಚನಗಳಿವೆ.

—ಜಿಜಿಎಂ

311

ಕೆ. ೧೧೩೮/೧	ಹಾಡುಗಳು	ಹಾಡು
೭.೨" × ೧.೫"	?	?
೧–೪ ಪತ್ರ	೧೦ ಪಂಕ್ತಿ	೪೨ ಅಕ್ಷರ

ಆದಿ : ತೋರ ಕರಸ್ಥಲದಿ ದೇವನ ತೋರ ಕಾರಸ್ಥಲಧಿ
ಗೋಪತಿಯ ಗೋಪದಾನ ತೋರ ಕಾರಸ್ಥಲದಿ
ತೋರ ಕಾರಸ್ಥಲದಿ ಲಿಂಗವ ತೋರ ಕರಸ್ಥಲದಿ
ತೋರ ಕಾರಸ್ಥಲದಿ ಬಸವ ತೋರ ಕಾರಸ್ತಲದಿ || ಪಲ್ಲ ||
ಬಾಲ ಕೈ ಪಾಲುಂಡಾ ವ್ಯಾಲದ್ಯಾತ್ಮಕರಂಡಾ
ಕಾಲಕರ್ಮದ ಕಂಡಾ ವ್ಯಾಳಕರ್ನ್ನ ಕುಂಡಲ ದೇವನ
ತೋರ ಕರಸ್ತಲದಿ || ೧ ||

ಅಂತ್ಯ : ಲ್ಯಾಯೇ ಕಭೀರ ಕುಶೋನಿಮೆಸೆಯೆ
ಭತೇ ನಧಿವೆಸಟೆ ರಾಮು
ಲೋಕಕಯಾ ಪೋದು ಬ್ಯಾದು ಬ್ಯಾ
ಅಲ್ಲಮು ಕೈಯ್ಯಾ ವೋದು ಬ್ಯಾ
ತಿದ ಪರ ಹೂರ್ವ್ವ ಸಾರಕ ಭೀರ ಭೂಲಗಯಾ ಮನವೆ || ೩ ||

ವಿಷಯ : ಭಕ್ತಿಯ ಹಾಡುಗಳು (ವೀರಶೈವ).

ವಿಶೇಷ : ನಾಲ್ಕು ಪತ್ರಗಳಲ್ಲಿ ಬೇರೆ ಬೇರೆ ಹಾಡುಗಳಿವೆ. ಇದೇ ಕಟ್ಟಿನಲ್ಲಿ

ಪಂಚವಿಂಶತಿ ಸ್ತೋತ್ರ, ನೀಲಾಂಬಿಕ ಲಲಿತಸ್ತೋತ್ರ ಮೊದಲಾಗಿ ಒಟ್ಟು ೧೭ ಕೃತಿಗಳಿವೆ.

—ಕೆಆರ್ಎಸ್

312

ಕೆ. ೧೧೫೭/೮	ಹಾಡುಗಳು	ಹಾಡು
೧೪.೩" × ೧.೮"	?	?
೬೨ ನೆಯ ಪತ್ರ	೬ ಪಂಕ್ತಿ	೪೫ ಅಕ್ಷರ

ಆದಿ : ಶ್ರೀ ಗಣಾಧಿಪತಯೆ ನಮಃ ‖ ಪದನೂ ‖
ಲಿಂಗಪೂಜೆಯ ಮಾಡದೇ ನಾಸಿರ್ದೆ
ಹೆಂಗಳೊಳು ಅತಿಸ್ನೇಹದೀ
ಲಿಂಗಪೂಜೆಯ ಮಾಡದೇ ‖

ಅಂತ್ಯ : ರತಿಗೆ ನಾಮತಿಗೆಟ್ಟೆನೋ
ಚೆಂದ್ರುಟಿಯ ಹಿತಉ ತಲೆಗೇರಿ ಬಿಡದೂ ಶಿವನೇ
ಅತಿಶಯದಿ ರಕ್ಷಿಸೆನ್ನಾ
ನಂಜುಂಡ ಕ್ಷಿತಿಯೊಳಗೆ ಗತಿಯ ತೋರೋ ಶಿವನೇ
ಲಿಂಗಪೂಜೆಯ ಮಾಡದೆ ‖ ೩ ‖

ವಿಷಯ : ಈಶ್ವರನ ಸ್ತುತಿ.

ವಿಶೇಷ : ಸಮಗ್ರ. ಶುದ್ಧವಾಗಿದೆ. ಇವರ ಜೊತೆಗೆ ಗುರುಭಕ್ತಾಂಡಾರಿಚರಿತೆ, ಕಪೋತ ಚರಿತೆ ಮುಂತಾದ ೧೩ ಕೃತಿಗಳಿವೆ.

—ಜಿಜಿಎಂ

313

ಕೆ. ೧೧೫೭/೧೪	ಹಾಡಗಳು	ಭಾಮಿನೀಷಟ್ಪದಿ
೧೪.೩" × ೧.೮"	?	?
೭೮–೭೩ ಪತ್ರ	೮ ಪಂಕ್ತಿ	೫೦ ಅಕ್ಷರ

ಆದಿ : ಶ್ರೀ ಗುರುಭ್ಯೋ ನಮಃ
ಎಂದಿಗಹುದೊ ನಿಮ್ಮಾ ನೆನಹು
ಎಂದಿಗಹುದೊ ನಿಮ್ಮ ನಿಜವು
ಎಂದಿಗಹುದೊ ನಿಮ್ಮ ಪೂಜೆ ಮಾಳ್ಪ ಸುಖವಾದು ‖ ಪ ‖

ಕಂಡ ಬಳಿಯ ನದಿಯ ಕೊಳನ
ಕಂಡ ಬಳಿಯ ಪುಷ್ಪಪತ್ರೆ
ಕಂಡ ಬಳಿಯ ನಿಮ್ಮ ಪೂಜೆ ಮಾಡಲೊಲ್ಲದೆ ।
ಕಂಡ ಕಂಡ ಊರ ತಿರುಗಿ
ಕಂಡ ಕಂಡ ಮನಿಯ ಹೊಕ್ಕು
ತುಂಡ ನಾಯಾ ಹಾಗೆ ತಿರುಗಿ ಕೆಟ್ಟೆನಕ್ಕಟ ॥ ೧ ॥

ಅಂತ್ಯ : ಪರರಿಗಿದ ಸೂಚಿಸದಿರು
ಶಿದ್ಧಾಂತ ಪರಮತತ್ವದ ತಿರುಳಿದೂ ಮನವೇ
ಗುರು ನಿರಂಜನಶಿದ್ಧನಾ । ಧ್ಯಾನಿಸಲು ।
ಶಿರಿಯಹುದೊ ಮುಕ್ತಿಯಹುದೋ
ಮನವೇ । ತೊಳಲದಿರು ಕಂಡ ಕಡೆಗೇ
ಚಿದ್ರೂಪನೊಳು ನಿನ್ನ ನಿಜವ ಸುಕಿಸೋ ಮನವೇ ॥ ೩ ॥

ವಿಷಯ : ವೀರಶೈವಸಿದ್ಧಾಂತ.

ವಿಶೇಷ : ಸಮಗ್ರ. ಶುದ್ಧವಾಗಿದೆ ಈ ಹಾಡುಗಳ ಸಂಗ್ರಹದಲ್ಲಿ ಷಡಕ್ಷರಿಯ ಲಿಂಗವೆ, ಗುರುಬಸವರಾಜ, ಗುರುತೋಂಟದ ಸಿದ್ಧಲಿಂಗ, ಶಂಭು ಲಿಂಗ ಎನ್ನುವ ಅಂಕಿತದ ಹಾಡುಗಳಿವೆ. ಇದಲ್ಲದೆ ಗುರುಭಕ್ತಾಂಡಾರಿ ಚರಿತೆ, ಕಪೋತ ಚರಿತೆ ಮುಂತಾದ ೧೩ ಕೃತಿಗಳಿವೆ.

—ಜಿಜಿಮಂ

314

ಕ. ೧೧೯೨/೧೪	ಹಾಡುಗಳು	ವಿವಿಧ ಛಂಧಸ್ಸು
೮.೨" × ೧.೬"	ವಿವಿಧ ಕರ್ತೃಕ	?
೨೦ ಪತ್ರ	೯ ಪಂಕ್ತಿ	೪೦ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ ॥ ಷಡಕ್ಷರಲಿಂಗವೆ ಗತಿ ಭೋಗ ಷಟ್ಪದಿ॥
ಮುದದಿ ಶರಣರುಗಳ ನುಡಿಗೆ
ಯಿದಿರ ನುಡಿಯ ನುಡಿಯುದವರು
ಪದುಳದಿಂದ ನುಡಿದ ಮಾಳ್ಕೆಯಿಂದ ನುಡಿವೆನೂ
ಪದ ॥ ಕಡಿದ ಕೊನರು ಚಿಗಿತಿತೆನಲು
ಕಡಿದ ಕೊನರು ಚಿಗಿತಿತೆಂಬೆ
ಮಡಿದ ಮನುಜನೆದ್ದನೆನಲುಯಿದ್ದನೆಂಬೆನೂ

ಕಡಿದ ಶಿರವು ಹತ್ತಿತೆನಲು
ಕಡಿವ ಶಿರವು ಹತ್ತಿತೆಂಬೆ
ಬಿಡದೆ ಬರಡು ಕರೆಯಿತೆನಲು ಕರಯಿತೆಂಬೆನೂ ||

ಅಂತ್ಯ : ಈ ಪದಂಗಳನುದಯ ಮಧ್ಯಾನ್ಹ ಸಂಜೆಯೊಳು
ವ್ಯಾಪಕತ್ವದಿ ಬರದೋದಿದಡೆ ಭಕ್ತಿಯಿಂ
ತಾಪ × ಸಂಗ ದುಸ್ವಪನಂಗಳಿವವು ಕಾಪಾಲಿ ಉಮೇಶನಾ
ಓಪಳೆನಿಸುವ ನೀಲಲೋಚನೆಯ ಸ್ತೋತ್ರಮಂ
ಪಾಪಕೋವಿರಹಿತ ದುಃಸಂಗ ದೂರವಹ
ಚಾಪಲರು ಭಜಿಸಿ ಭಕ್ತಿಯ ರಸವ ತುಂಬಿರ್ದು ಕೂಪಳೆನಿಸುವ
ಶಾಂತೆಯಾ ||

ವಿಷಯ : ವೈರಾಗ್ಯ, ಶಿವ, ನೀಲಲೋಚನೆ ಮುಂತಾದವರ ಸ್ತುತಿ.

ವಿಶೇಷ: ೧೪೩-೧೫೬ ನೆಯ ಪತ್ರದವರೆಗೆ ಪತ್ರಗಳಿವೆ. ೧೪೯ ನೆಯ ಪತ್ರ ಸಂಖ್ಯೆ ಎರಡಿದೆ. ಮುಂದೆ ಕ್ರಮಸಂಖ್ಯೆಯಿಲ್ಲದ ಆರು ಪತ್ರಗಳಿವೆ. ಇದರೊಡನೆ ನಾಮಲಿಂಗಾನುಶಾಸನ ಮುಂತಾದ ೧೯ ಕೃತಿಗಳಿವೆ. ಕೆಲವು ಪತ್ರಗಳಲ್ಲಿ ಯಂತ್ರ ಮಂತ್ರಗಳಿವೆ.

—ಜಿಜಿಮ

315

ಕೆ. ೧೩೧೩/೩	ಹಾಡುಗಳು	ಹಾಡು
೧೨.೮" × ೨.೧"	?	?
೭೧–೭೬ ಪತ್ರ	೧೩ ಪಂಕ್ತಿ	೭೪ ಅಕ್ಷರ

ಆದಿ : ಶ್ರೀ ಗುರು ಚೆಂನಬಸವೇಶ್ವರದೇವರ ಶ್ರೀಪಾದವೆ ಗತಿ ||
ಶರಣು ಶ್ರೀ ಗುರುವೆ ಕಾರುಣ್ಯ ಸಾಗರವೆ ನಿಜನಿರ್ವಾಣ
ದಿರುವೆ ಪರವೆ ಶರಣುಜನ ಸುರತರುವೆ ಸುಗ್ನಾನಮಂದಿರವೆ
ತ್ವರಿತದಿಂದೆನ ಹೊರೆದ ಗುರುವೆ || ಪಲ್ಲ ||

ತನುಕರಣ ಭುವನ ಭೋಗಾದಿ ತತ್ವಾನಿತಗಳ ಬಗೆಯನೆನಗೆ ತಿಳುಹಿ
ಕನಸಿನಂದದೊಳು ಪುಸಿಯೆಂದವನು ನೇತಿಗಳೆವನುವನೆನಗುಪದೇಶಿಸಿ
ಅನುದಿನವು ಮಿರುಗುತಿಹ ಪರತರ ಪರಂಜ್ಯೋತಿ ರೂಪ ನೀನೆಂದರುಹಿ
ಮನದ ಮರವೆಯ ಬಿಡಿಸಿ ಮಾಯಗುಣವ ತ್ಯಜಿಸಿ ಪರಿಪೂರ್ಣಮೆಯ
ನೆನಿದಾ ಗುರುವೆ || ೧ ||

ಅಂತ್ಯ : ಕರುಣಗುಣವಿರಹಿತಗೆ । ಕಂದಳಿತ ಶಂಭಕರಗೆ
ನಿರಘನಿರವದ್ಯ ಶಿವಶಂಕರನಿಗೆ ಜಯ ॥ ೨ ॥
ಕನನಿಕಾರೆಭದ್ರಾ . . . . ಳಿಂನ ಕರನೇತ್ರಭಾವಂಗಳೊಳು
ಮಿನುಗುತಿಹ ಗುರುಸಂಗಮೇಶ್ವರನಿಗೆ ಜಯ ಮಂಗಳಂ
ಸದಾ ಸುಭ ಮಂಗಳಂ ಮಂಗಳ ಮಹಾ ಶ್ರೀಶ್ರೀ. ॥ ೩ ॥

ವಿಷಯ : ಶಿವನ ಸ್ತುತಿ.

ವಿಶೇಷ : ಸಮಗ್ರ. ಇದೇ ಕಟ್ಟಿನಲ್ಲಿ ಕರಣಹಸಿಗೆ, ಮಿಶ್ರಾರ್ಪಣವೆಂಬ ಕೃತಿಗಳು ಇವೆ.

—ಜಿಜಿಎಂ

316

ಕೆ. ೧೪೦೮/೧ | ಹಾಡುಗಳು | ಹಾಡು
೮.೯" × ೧.೭" | ? | ?
೧–೨ ಪತ್ರ | ೧೦ ಪಂಕ್ತಿ | ೪೦ ಅಕ್ಷರ

ಆದಿ : ಶ್ರೀ ಗುರುವೆ ಗತಿ ॥ ರಾಗ ತೆಲುಗ ಕಾಂಬೋದಿ ॥ ಪಲ್ಲ ॥
ಆತ್ಮಅತ್ತ ಹೋಗಲದೇಕೆ ಬಹುಕಂಟಕದೊಳು ಬಳಲುತಿತ್ತಲಿಹುದು ಮಾರ್ಗವಿಡಿದು
ಆತ್ಮಯಿತ್ತ ಬಾ ಗುರುಕರುಣವೆಂಬ ಸನ್ಮಾರ್ಗವಡವುತ್ತ ನಡೆಬೇಡ ಸಾಜುದೆನು ॥
ಪದ ॥ ಆತ್ಮಷಡುವರ್ಗವೆಂಬ ಕುಣಿ ಕೊರಡು ಮುಳ್ಳು
ಮೆಳೆ ಸೋಂಕೆ ಹೊಡವ ಕೆಂಜೇಳು ಹೊಳಹುಗಳ
ಆತ್ಮ ಕೆಡೆಯೊದೆದು ಮೆಟ್ಟಿ ಸೀಳುವ ಕರಿಗಳೆಂಟು
ಗುಜ್ಜುಡುವವೆರಡೈದು ನಾಯಿಗಳು

ಅಂತ್ಯ : ಶಿವನಲ್ಲಿ ಚೈತಂನ್ಯ ವಷಭಾಭಕ್ತವಾಹನ
ತಾನಾದ ನಿಜಗುರು ಸಿದ್ಧಶಾಂತಗೆ ನಾನಾತನ ಕಾಣದಿರಲಾರೆ
ನೆಲೆಲೆ ಚಿನ್ಮಾನಿನಿ ಕರತಂದು ತೋರೆ ಬಸವನ ॥ ೩ ॥

ವಿಷಯ : ವೀರಶೈವಸಿದ್ಧಾಂತ.

ವಿಶೇಷ : ಇದೇ ಕಟ್ಟಿನಲ್ಲಿ ವಿರಕ್ತ ಮಹಾಲಿಂಗದೇವನ ಗುರುಬೋಧಾಮೃತವೆಂಬ ಕೃತಿಯೂ ಇದೆ.

—ಜಿಜಿಎಂ

317

ಕೆ. ೧೪೮೪/೨ ಹಾಡುಗಳು ಹಾಡು

೧೧.೨" × ೦.೧೧ ? ?

೧೭–೪೯ ಪತ್ರ ೮ ಪಂಕ್ತಿ ೬೦ ಅಕ್ಷರ

ಆದಿ : ಯೆಂಮೆಗುಂಬದ ಬ್ರಹ್ಮನು ದರಿತಂಗಳ
ಹಂಮು ಮುರಿದು ನಾಟ್ಯವನಾಡಿ ॥ ಪಲ್ಲ
ಬೊಲ್ಲನನೇಱಿ ವಾಗ್ಯವನೆಡಗೈಯೊಳು
ಬೊಲ್ಲೈಸುತ ಖುಲ್ಲರ ಮೇಲೆ
ಬಲ್ಲೆವ ಪಿಡಿದು ನಿಲ್ಲದೆ ದುರಿತಂಗಳ
ನೆಲ್ಲವ ಸಂವರಿಸುತ ಬಂದಾ ॥ ೧

ಅಂತ್ಯ : ಹರಿಕುಲವನಕೊಪ್ಪುವ ಮಱಿಯಾನೆ ತೋಳಂನಾಡೊ
ಮುರರಿಪುವನು ತೂಗಿದ ಯೆಂವೈಯ್ಯನೆ ತೋಳಂನಾಡೊ
ಶರಣಾಗತಪಾಲಕ ಯೆಂವೈಯನೆ ತೋಳಂನಾಡೊ
ನಿರವಧಿಮಹಿಮ ವುಜ್ಜಯಂತಗಿರಿಶನೆ ತೋಳಂನಾಡೊ ॥ ೫
ಕಮಲಾರಿದಿವ್ಯಾಂಗ
ಕರ್ಮವೆಂಬ ಕಾವನಕ್ಕೆ ಭೀಮಪಾವಕಾ ॥ ಪ ॥

ವಿಷಯ : ಜೈನತೀರ್ಥಂಕರರ, ದೇವತೆಗಳ ಸ್ತುತಿ.

ವಿಶೇಷ : ಅಸಮಗ್ರ. ಪ್ರತಿ ಚೆನ್ನಾಗಿದೆ. ಶಕಟರೇಫದ ಬಳಕೆಯಿದೆ. ಇದೇ ಕಟ್ಟಿನಲ್ಲಿ ಜಿನಸ್ತುತಿ ಮತ್ತು ರತ್ನಶಾಸ್ತ್ರ ಎನ್ನುವ ಕೃತಿಗಳಿವೆ.

—ಜಿಜಿಎಂ

318

ಕೆ. ೧೪೯೪/೨ ಹಾಡುಗಳು ಹಾಡು

೮.೧" × ೧.೧೦" ? ?

೨ ಪತ್ರ ೯ ಪಂಕ್ತಿ ೪೦ ಅಕ್ಷರ

ಆದಿ : ಅಷ್ಟಮಹಾ ಪ್ರತಿಹಾರ್ಯದ ಪದ । ಶ್ರೀಮಂಧರಸ್ವಾಮಿನೇ ನಮಃ
ಮಂಗಲ ಮಂಗಲಮಯ ದಿವ್ಯಾಂಗಗೆ
ಮಂಗಲ . . . . ಶರಣಾಂಕಗೆ
ಮಂಗಲ ಶ್ರೀಮಂದರಸ್ವಾಮಿಗೆ ಲೋಕೈಕ ಸುಮಂಗಲಗೆ ॥ ಪಲ್ಲವ ॥

ಜಂಬೂದ್ವೀಪದ ನಟ್ಟನಡುವೆ ನಿಂದ
ಪೊಂಬೆಟ್ಟಕೆ ಮೂಡಣದೆಸೆಯಲಿ ಸಿರಿ
ತುಂಬಿ ವಿದೇಹವೆನಿಪ ಸುಕ್ಷೇತ್ರ ಮೆರೆವುದು ಮತ್ತಲ್ಲಿ

ಅಂತ್ಯ : ಮಂಗಲಂ ಮಾಂಗಲ್ಯ ಮೂರ್ತಿಗೆ ಮಂಗಲಂ ಮಾಂಗಲ್ಯ ಕೀರ್ತಿಗೆ
. . . . ಪೃಥ್ವಿಗೆಹುದಪರಾಜಿತೇಶ್ವರೆಗೆ ಮಂಗಲಂ ಜಯ ಮಂಗಲ ಶ್ರೀ

ವಿಷಯ : ಜೈನ ಪ್ರಾತಿಹಾರ್ಯಗಳು ಮತ್ತು ಅಪರಾಜಿತೇಶ್ವರನ ಸ್ತುತಿ.

ವಿಶೇಷ : ಸಮಗ್ರ. ಇದೇ ಕಟ್ಟಿನಲ್ಲಿ ಮುನಿವಂಶಾಭ್ಯುದಯವೆಂಬ ಕೃತಿಯೂ ಇದೆ.

—ಜಿಜಿಎಂ

319

ಕೆ. ೧೫೩೮/೭	ಹಾಡುಗಳು	ಹಾಡು
೭.೭″ × ೨″	?	?
೧–೧೩ ಪತ್ರ	೮ ಪಂಕ್ತಿ	೨೩ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ ॥ ಶ್ರೀ ಶಂಬುವೆ ನಮಃ ॥
ರಾಗ ನಾದರಾಮಕ್ರೀ ॥
ಶ್ರೀಗುರುವೆ ನೀನೆ ಶರಣಾಗೆನಗೆ ನಿಜಸುಖದ
ಸಾಗರನೆ ಸಕಲ ವಿದ್ಯಗುಣ ನಿವಾಸಾ ॥ ಪದ ॥
ಮಲದ ಮರವೆಯನು ಮಾಯಾ ಮೋಹವನು ಕರ್ಮ
ಕುಲದ ಸುಖದುಃಖವನು ಪಚನ ಬಂದವನು
ಸಲೆ ತಿರೋಹಿತಿಯ ಸಾಹಸವೆಂಬುದನು ಬಿಡಿಸಿ
ನಲಿದೆಂನ ಬೋಧರೂಪವನೆ ಬೋಧಿಸಿದ ॥ ೧ ॥

ಅಂತ್ಯ : ಜಲದ ಮೇಲಾಡುವ ರಾಜಹಂಸನಗೂಡ
ಕೆಲದಲಾಡುವ ಸುರ್ಣ ಮಧ್ಯದಲ್ಲಿ
ಸುಲಲಿತ ಶಂಭುಲಿಂಗವೆ ಕಂಜದೊಳೆಂತುಂತೆ
ಬೆಳಗುತಿರ್ಪದನು ಭಾವಿಸುವಡೆ ತಾನೆ ॥ ಶ್ರೀ ಶ್ರೀ

ವಿಷಯ : ವೀರಶೈವಸಿದ್ಧಾಂತ.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ. ಇದೇ ಕಟ್ಟಿನಲ್ಲಿ ದೇಶಿಕೇಂದ್ರರ ಬಿರುದಾವಳಿಗಳು ಮೊದಲಾದ ೯ ಕೃತಿಗಳಿವೆ.

—ಜಿಜಿಎಂ

320

ಕೆ. ೧೫೩೮/೮	ಹಾಡುಗಳು	ಹಾಡು
೭.೭″ × ೨″	?	?
೧–೨ ಪತ್ರ	೯ ಪಂಕ್ತಿ	೨೩ ಅಕ್ಷರ

ಆದಿ: ಶ್ರೀ ಗುರುವೇ ಗತಿ
ಯೆಂತು ಮರೆಯುಲ ರಮಣಿ ಮಾಡಿದುಪಕಾರವನು
ಕಂತುರಿಪು ಸಂಗಮೇಶ್ವರನೊಲಿನನೆನಗೆ ॥ ಪಲ್ಲ ॥
ಚಂಡಕರ ಶಶಿಶಿಖಿಯು ಮಂಡಲಂಗಳ ಹೊರಗೆ
ಮಂಡನದ ವೇದಶಿರದಳದ ಸ್ಥಾನದಲ್ಲಿ
ತಂಡ ತಂಡದ ವಸುದೇವತೆಗಳಿಹ ಪರಿಯ
ಕಂಡೆನದನೇನೆಂಬೆ ಕಮಲದಳನೇತ್ರ ॥ ೧

ಅಂತ್ಯ: ಯಿಂನೂರಹದಿನಾರು ಲಿಂಗಗೋಳಕದಿ ಮಹ
ದುಂನತದ ಚತಿಶ ಲಿಂಗನಾಳದೊಳು ಮಿಗೆ × × ×
ಸರ್ವವರು ಹೆಡೆಯುಂನಾಳ್ವಾ ಸಿದ್ಧಪ್ರಭುವೆ ॥

ವಿಷಯ: ವೀರಶೈವಸಿದ್ಧಾಂತ.
ವಿಶೇಷ: ಸಮಗ್ರ. ಇದೇ ಕಟ್ಟಿನಲ್ಲಿ ದೇಶಿಕೇಂದ್ರರ ಬಿರುದಾವಳಿಗಳು ವೊದಲಾದ ೯ ಕೃತಿಗಳಿವೆ.

—ಜಿಜಿಎಂ

321

ಕೆ. ೧೬೪೮/೧	ಹಾಡುಗಳು	ಹಾಡು
೧೩″ × ೧.೫″	?	?
೨–೩ ಪತ್ರ	೫ ಪಂಕ್ತಿ	೩೬ ಅಕ್ಷರ

ಆದಿ: ಶ್ರೀ ಗಣಾಧಿಪತಯೇ ನಮಃ । ತುಂಡುಪದ ಬರವುದಕ್ಕೆ ಶುಭಮಸ್ತು ॥
ಅಣ್ಣ ಕೇಳು ಯಿಾ ಬಣ್ಣಗಾರಿಕೆ
ಹೆಣ್ಣು ಮಾ . . . ರಿಗಳೂ
ತನ್ನವಾನೆಂದು ನಿನ್ನನು ನಂಬಿಸೆ
ನಿನ್ನ ತಲೆಯು ತೆಗವಳು ಕಾಂತರೂಪಿನ ಹೊಂತಗಾರಿ ಕುಂತ್ರೈದಾನೆ
ವೋಜಿಲೀ

ಅಂತ್ಯ : ರಾಮ ನಿನ್ನ ನಾಮವನ್ನು ಪ್ರೇಮದಿಂದ ಭಜಿಸುವೆನು
ಕಾಮಿತಾರ್ಥವಿತ್ತು ಸಲಹೋ ಭೌಮನೇತ್ರನೇ
ಶೇಷಗಿರಿ ವರಶುಷ್ಣ ಲೀಲಾವೇಷ ಮುನಿಜನ ಪೋಸದೇವ
ವೇಷಜಭವನೊ . . ವೈದ್ಯಶೇಷಶಯನನೆ
ಮಾರಹರ ರಣಶೂರದಿ . . . . ಜಗದೋದ್ಧಾರದೇವ ವೀರಕಾರ್ಕಳವ

ವಿಷಯ : ಶೃಂಗಾರ ಮತ್ತು ಭಕ್ತಿರಸಪ್ರಧಾನವಾದ ಹಾಡುಗಳು.

ವಿಶೇಷ : ಇದೇ ಕಟ್ಟಿನಲ್ಲಿ ಚಂದ್ರಾವಳಿ ಪ್ರಸಂಗ ಎಂಬ ಮತ್ತೊಂದು ಕೃತಿಯಿದೆ.

—ವೈಸಿಬಿ

322

ಕೆ. ೧೭೬೨/೧	ಹಾಡುಗಳು	ಹಾಡು
೭.೫" × ೧.೨"	?	?
೧-೨ ಪತ್ರ	೪ ಪಂಕ್ತಿ	೩೨ ಅಕ್ಷರ

ಆದಿ : ಶ್ರೀಗುರುವೇ ಗತಿ ॥
ಜ್ಞಾನವಂದೇ ಸಾಕು ಮುಕ್ತಿಗೆ ಮ
ತ್ತಿನ್ನೇನು ಬೇಕುಚ್ಚು ಮರುಳು ಮಾಂನುವನೇ
ಗ್ನಾನವಂದೇ ಸಾಕು ಮುಕ್ತಿಗೇ ॥ ಪಲ್ಲ
ಮತ ಪಿತಾ ಸತಿ ಸೂತ ಹಗಲಿರಬ್ಯೇಡ
ಹೆತಿಯಾಗಿ ಆರಂಣ್ಯ ಚರಿಸಾಲಿಬೇಡ
ವ್ರತನೇಮ ಮಾಡಿ ನೀ ಥಣಿಯಾಲಿಬೇಡ
ಸತಿಯಾನಿಲ್ಲದೇ ಸದ್ಗತಿಯಲ್ಲೋ ಮೂಢ
ಗ್ನಾನವಂದೇ ಸಾಕು ಮುಕ್ತಿಗೇ ॥ ೧

ಅಂತ್ಯ : ಮಹಾಮೂರ್ತಿಗುರುವಾನೂ ಮರೆಯಬ್ಯಾಡಾ
ಸಾಹಸದಿಂದ ದೇಹ ದಂಡಿಸಬ್ಯಾಡಾ
ಕಾಕುಬುದ್ಧಿಯಿಂದಾ ಕುಣಿದಾಡಬ್ಯಾಡಾ
ಬಾಹಾಳಾ ಬಂಣಣೆಮಾತು ಕಲಿಯಾಲಿಬ್ಯಾಡ
ಗ್ನಾನವಂದೇ ಸಾಕು ಮುಕ್ತಿಗೇ ಮ
ತ್ತಿನ್ನೇನು ಬೇಕುಚ್ಚು ಮರುಳು ಮಾಂನ್ನುವನೇ
ಗ್ನಾನವಂದೇ ಸಾಕು ಮುಕ್ತಿಗೇ ॥ ೫

ವಿಷಯ : ವೈರಾಗ್ಯಬೋಧನೆ.

ವಿಶೇಷ : ಸಮಗ್ರ. ಇದರ ಜೊತೆಗೆ ಚಂದಮಾಮನ ಹಾಡು, ಕರಸ್ಥಲದವರ ವಚನ ಮುಂತಾದ ೧೧ ಕೃತಿಗಳಿವೆ.

—ಜಿಜಿಎಂ

323

ಕೆ. ೧೭೬೨/೭	ಹಾಡುಗಳು	ಹಾಡು
೭.೫″ × ೧.೨″	?	?
೨ ಪತ್ರ	೫ ಪಂಕ್ತಿ	೩೮ ಅಕ್ಷರ

ಆದಿ : ಯಂತಾ ಪರದೇಶಿ ಬಂದನೆ ಊರಿಂದ ಹೊರಗೆ
ನಿಂತಲ್ಲಿ ನೆಲನ ಮುಟ್ಟನೆ ನೋಡಮ್ಮ ಜ್ಯಾಣೆ ॥ ಪಲ್ಲ ॥
ಬಾಲಪ್ರಾಯದ ಪರದೇಶಿ ಆತಗೆ ಮುಂತ್ತೆ
ಕಾಲು ಕೈ ಕಣ್ಣುಗಳಿಲ್ಲವೆ ॥ ನೋಡಮ್ಮ ಜ್ಯಾಣೆ
ಸುಪ್ಪಿರಾಗವ ಪಾಡಿದ ಆತಗೆ ಮತ್ತೆ ಗಂಟಲೆ ವೊದಲಿಲ್ಲವೆ ॥
ಆರುಭೂತದ ಗಾರುಡಿಗ ಆತನು ಮತ್ತೆ
ಬ್ಯಾರೊಂದು ಮನೆಯ ಮಾಡಿದ ನೋಡಮ್ಮ ಜ್ಯಾಣೆ ॥

ಅಂತ್ಯ : ತುಂಬಿದಾಸ್ತವನೀವ ಸಾದಿಹಮೃತಾನ್ನನ ಹಾರವನುಂಡು ಯೋಗಿಣಿ ಯೋಗಿಣಿಯೇ
ನಿಟಿಲಾಂಬ ತೋಂಟದ ಶಿವಲಿಂಗನಲಿ ದ್ಯಾನದೊಳಿರು ಕಂಡ್ಯ ಯೋಗಿಣಿ ಯೋಗಿಣಿಯೇ ॥

ವಿಷಯ : ವೀರಶೈವತತ್ತ್ವ

ವಿಶೇಷ : ಸಮಗ್ರ. ಇದರ ಜೊತೆಗೆ ಹಾಡು, ಮುತ್ತಿನ ಕಂತೆ ಸದ್ಗುರು ಅಂಕಿತದ ಹಾಡುಗಳು, ಚಂದಮಾಮನ ಹಾಡುಗಳು ಮುಂತಾದ ೧೧ ಕೃತಿಗಳಿವೆ.

—ಜಿಜಿಎಂ

324

ಕೆ. ೧೭೬೨/೧೨	ಹಾಡುಗಳು	ಹಾಡು
೭.೫″ × ೧.೨″	?	?
೨೫–೫೫ ಪತ್ರ	೬ ಪಂಕ್ತಿ	೩೬ ಅಕ್ಷರ

ಆದಿ : ಶ್ರೀ ಶುಭಮಸ್ತು । ರಾಗ ಸೌರಾಷ್ಟ್ರ
ಶರಿರವೆಂಬುವ ಹೊಲನ ಹಸವ ಮಾಡಿ
ಪರತತ್ವ ಬೆಳೆಯಾನೆ ಬೆಳದುಣ್ಣಿರೊ ॥ ಪಲ ॥
ಶಮೆ ದಮೆಯಂದೆಂಬುವೆರಡೆತ್ತುಗಳ ಹೂಡಿ
ವಿಮಲಮಾನಸವ ನೇಗಿಲನೆ ಮಾಡಿ
ಮಮಕಾರವೆಂದೆಂಬೊಗರಿಕೆಯನು ಕಳದಿಟ್ಟು
ಕ್ಷಮತೆಯೆಂದೆಂಬ ಗೊಬ್ಬರವ ಚಲ್ಲಿ ॥ ೧

ಅಂತ್ಯ : ಪರಮತತ್ವದಿ ವಿನೋದ ಚಲದಂಕಮಯ
ಬಿರಿದನೆಲ್ಲವ ನೋಡಿ ಜರಿದೆ
ಮರುಳಾಟದಿ ಬಂದು ಕರುಗಳ ಕಾಯ್ದು
ಮುರುಗೆಯ ರುದ್ರನ ಕರದಲಿ ನಿಂದೆ
ಲಿಂಗಾಯನ್ನಂಗದೊಳ್ ಬೆರದ ಸಂಗವ ತೊರದೆ
ಅಂಗಜನನ ರೂಪನಳಿದೆ ॥ ೪

ವಿಷಯ : ವೀರಶೈವತತ್ವ, ವೈರಾಗ್ಯಪ್ರತಿಪಾದನೆ.

ವಿಶೇಷ : ಬೇರೆ ಬೇರೆ ಕರ್ತೃಗಳ ಹಾಡುಗಳು. ೩೬ನೆಯ ಗರಿಯ ಹಿಂಭಾಗದಲ್ಲಿ ಹಾಗೂ ೩೯, ೪೦ರಲ್ಲಿ ಬರವಣಿಗೆ ಇಲ್ಲ. ೪೯, ೫೦ ನೆಯ ಗರಿಗಳಲ್ಲಿ ಒಂದು ಕಡೆ ಬರವಣಿಗೆ ಇದೆ. ಕಡೆಯ ಮೂರು ಗರಿಗಳಲ್ಲಿ ಹಾಡುಗಳಿವೆ; ಆದರೆ ಓದಲು ಸ್ಪಷ್ಟವಾಗಿಲ್ಲ. ಇದರ ಜೊತೆಗೆ ಹಾಡುಗಳು, ಮುತ್ತಿನ ಕಂತೆ ಸದ್ಗುರು ಅಂಕಿತದ ಹಾಡುಗಳು ಮುಂತಾದ ೧೧ ಕೃತಿಗಳಿವೆ.

—ಜಿಜಿಎಂ

325

ಕೆ. ೧೭೬೩/೧	**ಹಾಡುಗಳು**	ಹಾಡು
೯.೫" × ೧.೪"	?	?
೧–೨ ಪತ್ರ	೬ ಪಂಕ್ತಿ	೩೬ ಅಕ್ಷರ

ಆದಿ : ಶ್ರೀ ಗಣಾಧಿಪತಯೆ ನಮಃ । ಸುಮುಷ್ತೂ
ಎಲ್ಲಿ ಹೋದೆಯೊ ಯೇ ಮುದ್ದು ನೀರೆ
ನಿಲ್ಲದುಯನ್ನ ಮನ ನೀಸಿತ್ತು ಬಾರೆ

ಪಲ್ಲವಾಧರೆ ನಿನ್ನಧರವ ತೋರಿ
ಸೊಲ್ಲು ಸೊಬಗಿನ ಮೇಲ್ಪಿಗಾತಿ ॥ ಪಲ್ಲ ॥

ಮುಡಿಯ ಮೇಗಳ ಮೊವರಗಳ ಸೂಸುತ್ತ
ಕಡೆಗಣ್ಣೊಳು ವಾರೆನೋಟವ ನೋಡುತ
ನುಡಿಯೊಳು ಗರ್ಜನೆ ಗುಡುಗುಟ್ಟುತ ಮಿಂಚುತ
ಗುಡುಗು ಶಿಡಿಲು ಕುಳಕುತ ಮಳೆ ಬರುತಯಲ್ಲಿ ಪೋದೆಯೋ ॥ ೧

ಅಂತ್ಯ : ನಿನ್ನ ಕಾಲಲಂದಿಗೆ ಗೆಜ್ಜೆಯು ಚಂದ
ನಿನ್ನ ಪಣೆಯೊಳು ವಿಭೂತಿ ಅಂದ
ನಾನೇನ ಹೇಳಲಿ ನಿನ್ನದೊಂದ
ನಮ್ಮ ಚೆಲುವ ಚೆನ್ನಿಗ ನೋಡ ಬಂದ

ನೀ ಪಟ್ಟೆಯ ಸೀರೇನುಟ್ಟು
ನೀ ಮೇಲಾರು ಕಂಚುಗಳ ತೊಟ್ಟು
ನಿನ್ನ ಕರ್ನಮುತ್ತಿನ ವಾಲೆಯು ನಿಟ್ಟು
ನಿನ್ನ ಪಣೆಯಾ ಕತ್ತುರಿಬೊಟ್ಟು × × ×
ನಿನ್ನ ಕರ್ಪುರದ ವೀಳ್ಯವ ಪಿಡಿದು ಯನ್ನನೆ
ನೀ ಬಾಯೆಂದು ಕರದು ನಮ್ಮ ಚೆನ್ನವೇಶ್ವರನೊಳು ಬೆರದು
ನಮ್ಮ ಚೆನ್ನಮಲ್ಲೇಶನ ದ್ರಿಷ್ಟಿಯೊಳಿರ್ದು ॥ ೪

ವಿಷಯ : ವೈರಾಗ್ಯಬೋಧೆ.

ವಿಶೇಷ : ಇದಾದನಂತರ ಮೂರು ಗರಿಗಳು ಅಸ್ಪಷ್ಟ. ಅಲ್ಲದೆ ಕೀರ್ತನೆಗಳು, ಖಡ್ಗ, ಕಾಲಚಕ್ರ, ವಿಶ್ವಕರ್ಮ ಪುರಾಣ ವ್ಯಾಖ್ಯಾನ ಮುಂತಾದ ೮ ಕೃತಿಗಳಿವೆ.

—ಜಿಜಿಮಂ

326

ಕೆ. ೧೭೬೩/೬	ಹಾಡುಗಳು	ಹಾಡು
೯.೫″ × ೧.೪″	?	?
೪ ಪತ್ರ	೫ ಪಂಕ್ತಿ	೩೬ ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಮಃ × × × ಉಯ್ಯಾಲೆ ಪದ ಬರೆಯು ವಕ್ಕೆ ಸುಬಮಸ್ತೂ ॥

ನಾಗೂತನಾಗಾಜಾತೇ ಸಹಿತ ಮಹಾದೇವ
ಸುಗುಣನಾಡಿದನುಯ್ಯಾಲೇಯ ॥ ಪಲ್ಲ ।

ರತ್ನ ಮಾಯ ಪೀಟದಲ್ಲಿ ಸ್ವಾಮಿಯನೂ
ಅತ್ಯದಿಂದೋಲೈಸುತಾ
ಈ ತೆರದಿ ನಿಂದೂ ಜನರೂ ವಂದಿಸುತ
ಅತ್ಯಧಿಕ ಮಹದೇವನ ॥ ೧ ॥

ಅಂತ್ಯ : ರತ್ನ ರತ್ನ ಜೀವದಂತೆ ರತ್ನ ರತ್ನ ಪ್ರಭೆಯಂತೆ
ರತ್ನ ಶಿದಾಂತ ಕಿರುಣದಂತೆ
ರತ್ನ ಸಂಜೀವನ ರತಗೂಡಿ ನಲಿವಂತೆ
ರತ್ನ ಪ್ರಬುದ ದಿನಮಣಿ ಹೋ ಕರ್ಪುರ ಜ್ಯೋತಿ ಪ್ರಕಾಶ ಹೋ ॥೩॥

ವಿಷಯ : ಶಿವಸ್ತುತಿ.

ವಿಶೇಷ : ಇದಲ್ಲದೆ ಕಾಲಚಕ್ರ, ವಿಶ್ವಕರ್ಮಪುರಾಣ ವ್ಯಾಖ್ಯಾನ ಮುಂತಾದ ೮ ಕೃತಿಗಳಿವೆ.

—ಜಿಜಿಎಂ

327

ಕೆ. ೧೮೩೫/೪ | ಹಾಡುಗಳು | ಹಾಡು
೧೧.೫″ × ೧.೮″ | ? | ?
೨ ಪತ್ರ | ೬ ಪಂಕ್ತಿ | ೪೦ ಅಕ್ಷರ

ಆದಿ : ರಾಗ ॥ ಪರಜು ॥

ಅನಂದಯೋ ಅಧ್ಯಾತ್ಮಯೋಗಿ
ಜೈನಾಗಮಯೋಗೀ ಜಯಸಿದ್ಧಯೋಗೀ ॥ ಪಲ್ಲ ॥

ಪವನ ವಿಜಯಯೋಗೀ ಭವನಯೋಗೀ
ಜೀವನ ಗೆಲ್ದ ಜಗದೇಕಯೋಗೀ ॥ ೧ ॥

ಧೈರ್ಯ ಜಾರದ ಯೋಗಿ ದಯಯುಳ್ಳ ಯೋಗಿ
ಸೂರ್ಯಪ್ರಕಾಶದ ಸುಜ್ಞಾನಯೋಗೀ ॥ ೨ ॥

ಅಂತ್ಯ : ಮುಪ್ಪು ಸಾಉ ಹುಟ್ಟುಜಾತಿ ನಿನಗುಂಟು । ತಾನುವೆ
ಮುಪ್ಪುಜಾತಿ ಹುಟ್ಟುಜಾತಿ ಸಾಉ ಹುಟ್ಟುಜಾತಿ ನನಗಿಲ್ಲ । ತಾನುವೆ

ಅಪ್ಪಜಿ ಶ್ರೀಮಂಧರೇಶವವ್ವಬ್ಬ ನನಗೆ ತನಗೆ
ಅಪ್ಪಂದಿರು ಯೆಂಭತ್ತುನಾಲ್ಕುಲಕ್ಷ ಸಿನಗೆ
ಸಾರೊ ಸಾರೊ ನಿನಗು ನನಗು ಯೇನು ಸಮಂದಾ ॥

ವಿಷಯ: ಜೈನಸಿದ್ಧಾಂತದಂತೆ ವೈರಾಗ್ಯನಿರೂಪಣೆ.

ವಿಶೇಷ: ಸಮಗ್ರ. ಪ್ರತಿ ಚೆನ್ನಾಗಿದೆ ಇದರ ಜೊತೆಗೆ ಶ್ರುತಃಜ್ಞಾನ ಮುಂತಾದ ೩ ಕೃತಿಗಳಿವೆ. ಇದರ ಜೊತೆಗೆ ೩ ಗುರುತಿಸಲಾರದ ಪತ್ರಗಳಿವೆ.

—ಜಿಜಿಎಂ

328

ಕೆ. ೧೮೫೬/೩	ಹಾಡುಗಳು	ಹಾಡು
೧.೮" × ೨"	?	?
೮ ಪತ್ರ	೧೦ ಪಂಕ್ತಿ	೩೮ ಅಕ್ಷರ

ಆದಿ: . . . . ದ ಜನ ಬಂದೂ ॥ ೧೨ ॥ × × × × ಆವಾವ ತೆರದ ಜೀವದ ನೋವೆಲ್ಲರ ತಂನ ನೋವದೆ ಬಾ ಮಮಜಗೆ । ಆಉದು ಜಮವಾವುದು ತರುವಾವುದು ದೇವಾರ್ಚನಂ ವಿದಗ್ಧ ಲಲಾಮಾ ॥ ೧೪ ॥

ಅಂತ್ಯ: ಚತುರಣವಿಲ್ಲದ ಕರಿಗಳೊಳ್ನುಡಿಯಿಲ್ಲದ
ಸೂಳೆ ಭಾವವಿಲ್ಲದರತಿಯುಬ್ಜುವಿಲ್ಲದ
ಕೊಳಂ ದಿನನಾಯಕ ನಿಲ್ಲದಂಬರಂ
ಮದಗಜವಿಲ್ಲದೊಡ್ಡು ಹಯಸಿಲ್ಲದ ಬಾಳುವೆ
ಧರ್ಮಪತ್ನಿ ಯಿಲ್ಲದ ಗೃಹದೇವತಾ ಭವನ
ವಿಲ್ಲದ ಪಟ್ಟಣವೊಪ್ಪಲಾರ್ಪುವೆ ॥ ೬೦ ॥

ವಿಷಯ: ನೀತಿಬೋಧೆ.

ವಿಶೇಷ: ಅಸಮಗ್ರ ಕೃತಿ. ಬರವಣಿಗೆ ಚೆನ್ನಾಗಿದೆ. ಇದರೊಂದಿಗೆ ಶ್ರೀರುದ್ರಭಾಷ್ಯ ಮುಂತಾದ ಕೃತಿಗಳಿವೆ.

—ಎಂಪಿಎಂ

329

ಕೆ. ಎ. ೩೯೩/೫ ಹಾಡುಗಳು ಹಾಡು

೧೧.೨" × ೭.೮" ? ?

೧೬೩–೧೬೬ ಪತ್ರ ೨೪ ಪಂಕ್ತಿ ೧೮ ಅಕ್ಷರ

ಆದಿ : ಬಾಗಿಲನು ತಡೆಯೊ ಪದಾ ।
ಮದನಜನಕ ತಡದನೆಂದು ಮಹಾಲಕ್ಷ್ಮಿ ಮನಸಿನಲ್ಲಿ
ಕ್ಷೀರಸಾಗರ ಕಂನ್ಯ ಬಹಳ ಚಿಂತಿಸುತಿರ್ದಳೂ ॥ ೧ ॥
ರಮಣಿ ಚಿಂತ್ಯೆಸುತ್ತಿರಲು ಧರ್ಮಸಾಕ್ಷ್ಯ ದಾಯದಿಂದ್ಪಾಗ
ಗರುಢವಾಹನವೇರಿ ಹರಿಯು ಬಂದನೂ ॥ ೨ ॥

ಅಂತ್ಯ : ಯಮಸುತನ ರಾಣೀ । ಗಕ್ಷಯದ ವಸ್ತ್ರವನಿತ್ತೆ
ಕ್ರಮದಿಂದ ಅಜಮಿಳನ ಕಾಯಿದೇ ।
ಅಂದು ಸಮಯುವೂ । ಸಮಯುಗಳುಂಟೇ
ಭಕ್ತವತ್ಸಲ ನಿಮಗೆ ಕಮಲಾಕ್ಷ
ವೈಕುಂಟಪತಿ ಚಂನ್ನರಾಯ ।
ಬಾಗಿಲನ್ನು ತೆಗದು ಶ್ರೀಕೃಷ್ಣ ಪಸಂನ್ನಾ ॥ ೩ ॥

ವಿಷಯ : ಬಾಗಿಲನ್ನು ತಡೆಯುವುದು ಇತ್ಯಾದಿ ಹಾಡುಗಳು.

ವಿಶೇಷ : ಇದರೊಡನೆ ವಾಲ್ಮೀಕಿರಾಮಾಯಣ, ನಾರದ ಕಲಹ, ಶಿವಕವಚ, ಕರಿಯಭಂಟನ ಕಥೆ ಈ ಗ್ರಂಥಗಳಿವೆ. ಮುಂದೆ ಕೆಲವು ಶುದ್ಧಪತ್ರ ಗಳಿವೆ.

—ಬಿಎಸ್ಎಸ್

330

ಕೆ. ಎ. ೩೮೮ ಹಾಡುಗಳು ಹಾಡು

೧೨.೧" × ೯.೧೦" ? ?

೧–೨೦೨ ಪುಟ ೨೪ ಪಂಕ್ತಿ ೧೬ ಅಕ್ಷರ

ಆದಿ : ಹಾಡುಗಳು
ಶಂಭುವಿಗೆ ಸಮದಂಡಿಯೆಂಬ ಬಲವಂತಾ
ಸಂಭ್ರಮದ ಸುಂಕ ಚೌವಡಿಯ ಹನುಮಂತಾ ॥ ಪ ॥

ಅಂಬುಜದಳಾಕ್ಷಿ ಅಂದನೆಗೆ ಸುತನಾದೆ
ಇಂಬಾದವರ್ಣೆಂದು ಇನನ ಬಳಿಗೈದೆ
ಚಂಬರಿಪು ಬರೆ ಕಾದಿ ಚಿರವರವ ಪಡೆದೆ
ನಂಬುಗೆಯ ಮಂತ್ರಿ ವಾನರಮುಖ್ಯಗಾದೆ ॥ ೧ ॥

ಅಂತ್ಯ : ಅಂಬರದಲಾಡುವದು ಅದು ಪಕ್ಷಿಯಲ್ಲಾ
ಕೊಂಬುಂಟು ಬಾಲುಂಟು ಮೃಗಜಾತಿಯಲ್ಲಾ ॥
ಸಂಭ್ರಮದ ಬಿಲ್ಲುಂಟು ರಣಕಣಕವಲ್ಲಾ
ಅಂಬುರುಹನಾಭ ವೆಂಕಟೇಶನೆ ಬಲ್ಲಾ ॥ ೫ ॥

ವಿಷಯ : ವಿನಾಯಕ, ಹನುಮಂತ, ರಾಜರುಗಳು ಮೊದಲಾದವರ ಮೇಲಿನ ಹಾಡುಗಳು.

ವಿಶೇಷ : ಮಧ್ಯೆಮಧ್ಯೆ ತೆಲುಗು ಹಾಡುಗಳೂ ಬರುತ್ತವೆ. ೧೯೮-೨೦೦ ಪುಟಗಳವರೆಗೆ ಮಹಿಮ್ನಸ್ತೋತ್ರ (ಸಂ) ಇದೆ. ಕೊನೆಯಲ್ಲಿ ೨೦೨ನೆಯ ಪುಟದಲ್ಲಿ ಜೋಸ್ಯಗ್ರಂಥಾ ಎಂಬ ಸಂಸ್ಕೃತ ಶ್ಲೋಕಗಳಿವೆ. ಇದನ್ನು ೧೯೫೩ರಲ್ಲಿ ಪ್ರತಿಮಾಡಲಾಗಿದೆ.

—ಬಿಎಸ್‌ಎಸ್

331

ಕೆ.ಎ. ೪೪೪	ಹಾಡುಗಳು	ಹಾಡು
೧೦.೩″ × ೬.೪″	ವೆಂಕಟಶರ್ಮ (?)	?
೧-೧೧೧ ಪುಟ	೨೦ ಪಂಕ್ತಿ	೨೬ ಅಕ್ಷರ

ಆದಿ : ಶೂರಮಹಾಜನಾ
ಕರಿಗಿರಿ ಶ್ರೀನಿವಾಸದೇವಾ ॥ ಪಲ್ಲ ॥
ಕಮಲಾಜಾರ್ಜಿತ ಚರಾಣಾ ಶ್ರೀಹರಿ
ಕಮನೀಯ ಮೃದುಭಾಷಣಾ
ಸೋಮಕಾಸುರ ಸಿ. ಹರಣವೇದೋದ್ಧರಣ
ಸ್ವಾಮಿ ಪರಾಕಯಚರಿತೆ ಪಾದಾವದಾನ ॥ ೧ ॥

ಅಂತ್ಯ : ಮಾತೆ ಚನ್ನಮ್ಮನುದರಾಬ್ಧಿ ಚಂದ್ರಮನೂ
ನೀತಿಯುತ ಜವನಯ್ಯನಾತ್ಮಸಂಭವನು
ಖ್ಯಾತಿಯುತ ಚೆಲುವಯ್ಯ ಜನಿಸಿ ಸುಖವಿಹನೂ
ಪ್ರೀತಿಯಲಿ ಶ್ರೀಕೃಷ್ಣ ರಕ್ಷಿಸನೂ ॥ ೩ ॥

ವಿಷಯ : ಭಕ್ತಿ ಮತ್ತು ನೀತಿಯ ಹಾಡುಗಳು.

ವಿಶೇಷ : ಅಸಮಗ್ರ ಪ್ರತಿ. ಕೆಲವು ಕಡೆ ಗ್ರಂಥ ಲುಪ್ತವಾಗಿದೆ.

—ವೈಸಿ ಬಿ

332

ಕೆ. ಎ. ೪೭೫/೪	**ಹಾಡುಗಳು**	ಹಾಡು
೧೦.೫″ × ೯.೬″	?	?
೨೨-೨೪ ಪುಟ	೨೦ ಪಂಕ್ತಿ	೨೦ ಅಕ್ಷರ

ಆದಿ : ಉದಯರಾಗ ||

ಏಳಯ್ಯ ಬೆಳಗಾಯಿತು (ಏಳಯ್ಯ ಬೆಳಗಾಯಿತು)
ಕುಂಕುಮದ ವರ್ಣವಾಗಿದೆ ಪೂರ್ವದೆಸೆಯಲ್ಲಿ
ಪಂಕಜಗಳರಳಿದವು ಪಾಡುತಿದೆ ತುಂಬಿಗಳು
ಪಂಕರನ ತನುಜನೇಳೊ ಸ್ವಾಮಿ ಏಳಯ್ಯ ಬೆಳಗಾಯಿತು || ಪಲ್ಲ ||
ವಾರಿಜಸಖನುದಿಸಿ ಯೇರಿದನು
ಮೇರುವನು ಚರಿಸುತಿದೆ ತಂಗಾಳಿ ಭೂಮಂಡಲವನೆಲ್ಲ
ಜಾರುತಿದೆ ನಿಶಿಯು ಕಂಗೆಟ್ಟು ಸಿತವಾಗುತಿದೆ
ಸಾರಿದವು ಮೃಗಜಾತಿ ತನ್ನ ಆಲಯಗಳಿಗೆ ಶ್ರೀ
ವೀರಭದ್ರನೇಳೊ ಸ್ವಾಮಿ || ೧ ||

ಅಂತ್ಯ : ನಾದವೆ ಶಬ್ದ ನಿಃಶಬ್ದವೆ ಬ್ರಹ್ಮ
ನಾದದೊಳಗಳ ಸುನಾದ ಧ್ವನಿಯು ನಾದವಡಗಲು
ಪ್ರಜ್ವಲಿಸಿ ಪ್ರಭೆಯಾಗಿ ನಿರುತವಾಕಾಶದಿಂದಾ
ನಾದ ಬಿಂದು [ಕಾಲತಿತ] (ಕಲಾತೀತ) ದೊಳು ವ್ಯೆಮರದು
ಭೇದವಿಲ್ಲದೆ ಮಹಾಬೆಳಗಿನೊಳು ಬೆಳಗಾದ
ಆದಿಗುರು ಕೂಡಲಾ ಚನ್ನಸಂಗಮನನೊಳು ಬೆಳಗು ಪರಿ
ಪೂರ್ಣವಾಯಿತ್ತು || ೭ ||

ಶ್ರೀ ಗುರುವೇ ಗತಿ ||

ವಿಷಯ : ತತ್ತ್ವಪದಗಳು.

ವಿಶೇಷ : ಇದರಲ್ಲಿ ಒಟ್ಟು ವಚನರೂಪವಾದ ಏಳು ಪದ್ಯಗಳಿವೆ. ಕೊನೆಯ ಹಾಡು ಚನ್ನಬಸವಣ್ಣನ ವಚನಗಳಲ್ಲಿ ಒಂದಾಗಿದೆ. ಇದೇ ಪುಸ್ತಕ

ದಲ್ಲಿ ಸಿದ್ಧೇಶ್ವರನ ತ್ರಿಪದಿ, ಸಿರಿಯಾಳ ಸೆಟ್ಟಿಯ ವಾರ್ಧಕ, ಸುಭಾಷಿತ, ನಿಜಲಿಂಗಶತಕಗಳೆಂಬ ಇತರ ಕೃತಿಗಳಿವೆ.

—ಕೆಆರ್‌ಎಸ್

333

ಕೆ. ಎ. ೫೦೨/೨	ಹಾಡುಗಳು	ಹಾಡು
೯″ × ೧೦.೪″	?	?
೨೫–೨೮ ಪುಟ	೨೦ ಪಂಕ್ತಿ	೨೨ ಅಕ್ಷರ

ಆದಿ: ಶುಭಮಸ್ತು ॥
ವಾಣಿಯೆ ಫಣಿವೇಣಿಯೆ ಗೀರ್ವಾಣಿಯೆ
ಜನವಿನುತೆಯೆ ಬೊಮ್ಮನ ರಾಣಿಯೆ ಗುಣಮಣಿಯೇ
ಮಾನಾದಣಿಯೆ ಮೇನದಣಿಯೆ ನಮ್ಮಿಸುವೆ ವೀಣಾಪಾಣಿಯೆ
ಪದಯುಗಾಕ್ಕೆ ಮುದದಿಂದಾ ॥ ೧ ॥

ಅಂತ್ಯ: ಆಕರಕೃತಿ ವಿಲಸಿತೆ ಹಾಕಾರದಿಮತಿಕೋಮಲೆ
ರಾಕಾಶ ಶಿವಕ್ತೆ ಸುಚಾರಿತ್ರೇ
ಸುಚರಿತ್ರೆ ಚಿತ್ರದ ಹಲಗೆ ಲೋಕೇಶ್ವರಿ ಶೀತೇ ಹಾಸೆಗೇಳು ॥ ೨ ॥

ವಿಷಯ: ಹಸೆಗೆ ಕರೆಯುವ ಹಾಡು.

ವಿಶೇಷ: ಇದರೊಂದಿಗೆ ಮಲ್ಲಿಕಾರ್ಜುನ ಶತಕ ಎಂಬ ಪುಸ್ತಕವಿದೆ.

—ವೈಸಿಬಿ

334

ಕೆ. ಎ. ೫೬೭/೭	ಹಾಡುಗಳು	ಹಾಡು
೧೦.೫″ × ೯.೫″	?	?
೩೨–೩೭ ಪುಟ	೨೦ ಪಂಕ್ತಿ	೧೫ ಅಕ್ಷರ

ಆದಿ: ರಾಗ ತೆಲಗ । ಕಾಂಬೋಧಿ ॥
ಪರಮ ಪಾವನ ಪುಣ್ಯಚರಿತ ಭಕ್ತಾನಂದ
ಭರಿತ ಭವ ಪಾಶ [ಸ] ರಹಿತ
ಶರಣಜನಪಾಲ ಸದ್ಗುಣಶೀಲ ಜಯಲೋಲ
ಗುರುವೆ ತೋಂಟದಸಿದ್ಧಲಿಂಗ
ಜಗದ್ಗುರುವೆ ತೋಂಟದಸಿದ್ಧಲಿಂಗ ॥ ಪಲ್ಲ ॥

ಅಂತ್ಯ : ಶಿವಗಂಗೆಯರಸನನು ಭವಸಿದ್ಧವಲ್ಲಭನ
ಶಿವತತ್ವ ವಚನಾಮೃತವನು
ಬಹಳ ವಿಧದಿಂದೋದಿದರೆ ಕೇಳಿದರೆ ಪಠಿಸಿ
ಧರೆ ಭವವ ಬಂಧನವ ನೀಗುವರು
ಶಿವಕವೀಶ್ವರರ ಚರಣಾಂಘ್ರಿಸರಸಿಜಭ್ರೂ
ಕವಿಪವಾಡನಿಗಿಷ್ಟಫಲವ
ವರ ಕವಿ ಪವಾಡನಿಗಿಷ್ಟಫಲವ
ಸುವಿಲಾಸದಿಂದೀವಯಿಡೆ [ಊ] (ಯೂ) ರಕ್ಷಿರ ಸದಾ
ಶಿವ (ಸಿದ್ಧಲಿಂಗ ಶರಣು) ?

ವಿಷಯ : ತೋಂಟದ ಸಿದ್ಧಲಿಂಗನ ಸ್ತುತಿ.

ವಿಶೇಷ : ಪ್ರತಿ ಚೆನ್ನಾಗಿದೆ. ಈ ಪುಸ್ತಕದಲ್ಲಿ ವೆಂಕಟರಮಣ ಬೆಟ್ಟದ ಸ್ಥಳ ಪುರಾಣ ಮೊದಲಾದ ೭ ಕೃತಿಗಳಿವೆ.

—ಜಿಜಿಎಂ

335

ಕೆ. ಎ. ೫೬೮/೨೧	ಹಾಡುಗಳು	ಹಾಡು
೧೨" × ೯.೮"	?	?
೧೫೯-೧೬೧ ಪುಟ	೨೪ ಪಂಕ್ತಿ	೨೦ ಅಕ್ಷರ

ಆದಿ : ಶ್ರೀಗುರುವೆ ಗತಿ
ಪದುಳವಲ್ಲವೆ ನೋಡೆ ಪದುಳವಲ್ಲವೆ
ಸದಮಲಾತಲಿಂಗದಲ್ಲಿ ಹುದುಗಿದಂತ ಶರಣಜನಕೆ ॥ ಪಲ್ಲ ॥

ಅಂಗಹಸ್ತ ಶಕ್ತಿ ಭಕ್ತಿ ಲಿಂಗ ತೃಪ್ತಿ ವರ್ನ ಮುಖವು
ಕಂಗಳಲ್ಲಿ ಕಂಡು ವಿಶ್ವಲಿಂಗದಲಾ ಬೆರದವರ್ಗೆ ॥ ೧

ಆದಿ ಅಂತ್ಯನಾದಿಯಂತ್ಯವಾದಿ ಮಾಡಿಸೋಹಮೇಂದು
ಪಾದವರ್ಣವೆರಡುವಳಿದು ನಾದಬ್ರಹ್ಮವಾದರ್ಗೆ ॥ ೨

ಅಂತ್ಯ : ಅಂಗನೆಯರು ತೊಡದಮುದಿದ ಲಿಂಗಗಂಪ ವಾಸಿಶುವರೆ
ಹಿಂಗದೆನ್ನ ನಾಸ ಪುಟಖ ನಗಡೆಯಾಗಲೀ
ಮಂಗಳಾತ್ಮಕ ಷಡಕ್ಷರಿಯು ಲಿಂಗದಂಘ್ರಿಗೆತ್ತ ಕುಸುಮ
ಹಾಂಗೆ ವಾಸಿಸುವರೆ ಪ್ರಾಣ ವಿಕಸವಾಗಲೀ ॥ ೫ ॥
ಸಂಪೂರ್ಣ.

ವಿಷಯ : ಈಶ್ವರನ ಸ್ತುತಿ. ವೇದಾಂತ.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ. ಇದರ ಜೊತೆಯಲ್ಲಿ ಶಿವಶರಣಾಷ್ಟಕ ಮೊದಲಾದ ೨೪ ಕೃತಿಗಳಿವೆ.

—ಜಿಜಿಎಂ

336

ಕೆ. ಬಿ. ೫೨೩/೧೧	ಹಾಡುಗಳು	ಹಾಡು
೮″ × ೬.೫″	?	?
೯೮-೧೦೭ ಪತ್ರ	೧೪ ಪಂಕ್ತಿ	೧೬ ಅಕ್ಷರ

ಆದಿ : ರಾಗ ॥ ಲೀಲಾಂಭರೀ ॥

ನಿಂನ ನಂಬಿದೆ ಶ್ರೀನಿವಾಸ । ಯಂನ ಪಾಲಿಸೋ ಕಾಶ್ರೀ ಗಿರಿಯ ನಿವಾಸಾ । ಪಲ್ಲ ॥ ದೇವಕಿವುದರದೊಳ್ ಬಂದೆ । ಗೋರ್ವರ್ಧನಗಿರಿ ಯೆತ್ತಿ ಗೋಕುಲ ಕಾಯ್ದೆ ಮಾವ ಕಂಸನ ಮದವ ಮುರಿದೆ । ಭಾವ ಮೋಹ ತಿಳಿದು ವಿಾಯಾಗೋರ್ಲಿದೆ ॥ ೧ ೧.

ನರಗೆ ಸಾರಥಿಯಾಗಿ ನಿಂದೆ । ತುರಗ ನೀರಡಿಸಿದರೆ ವಾರಿಯ ತಂದೆ । ಮರೆಯ ಚಕ್ರವ ಮಾಡಿದವನ ಕೊಂದೆ । ಕುರುಪತಿ ಗಾಂಗೇಯ ದ್ರೋಣರ ಗೆಲಿದೆ ॥ ೨ ॥

ಅಂತ್ಯ : ವಿಾರರಾರಳವೈಯ್ಯ ಮುಂನು ಮಾಡಿದ ಖರ್ಮ ಆರು ಪರಿಹರಿಶಿ ಕೊಂಬುವರಿಲ್ಲವೈ । ವಾರಿಜಾಕ್ಷ ವೈಕುಂಠ ಪುರಂದರ ವಿಟಲೇಶ ಕರುಣ ಕರ್ತ ನೀನೆ ಕಡೆಹಾಯಿಸ್ಯೆಯ್ಯಾ ಆರಿಗಾದರು ಪೂರ್ವಕಲ್ಪನೆಯು ತಪ್ಪದೂ ॥ ೫ ॥ ಶ್ರೀ ಶ್ರೀ ॥

ವಿಷಯ : ಕೀರ್ತನೆಗಳು.

ವಿಶೇಷ : ಇವರೊಡನೆ ಕೃಷ್ಣದಾನ ಮೊದಲಾದ ೧೨ ಕೃತಿಗಳಿವೆ.

—ಎಸ್‌ಎನ್‌ಕೆ

337

ಕೆ. ಬಿ. ೫೨೩/೧೩	ಹಾಡುಗಳು	ಹಾಡು
೮″ × ೬.೫″	?	?
೧೧೫–೧೮೯ ಪತ್ರ	೧೬ ಪಂಕ್ತಿ	೧೮ ಅಕ್ಷರ

ಆದಿ : ರಾಗಾ । ಶಂಕರಾಭರಣ ।

ಸರಶಿಜೋದ್ಭವನರಶಿಗೆ । ನೆರೆ ಬಜಿಸಿ । ವರ ಗಿರುಜಾನಂದನೆಗಭಿನಪುಶಿ ಗುರುಹಿರಿಯರ ಶಿರಿ ಚರಣವ ಸ್ಮರಿಶಿ । ಶ್ರೀಹರಿ ಚರಿತ್ರೆಯನು ಪೊಗಳುವೆ । ಶೋಭಾನೆ ॥ ೧ ॥.

ವರ ಸಾಕೇತುಮಂದಿರದ ಮಧ್ಯಾದಲಿ । ನಿರುಪಮತದ ರತ್ನ ಸಿಂಹ್ಮಸನದಿ । ವರದ ರಘುವರ ಶಿಂಗರಿಶಿ ಕುಳ್ಳಿರಲು । ಧರಣಿಯವಡೆಯರೆಸದಾರು ॥ ೨ ॥.

ಅಂತ್ಯ : ಹ್ಯಾಗೆ ವಲಿಸಿದೆ ಯಂಮ್ಮ ಶಿವನ ಮುದಿಜೋಗಿಯಂದಾ ॥.

ರಾಗಾ.... ॥ ತಾನೆ ಬಂದ ಕಾಣೆ । ಸದಾಶಿವ ತಾನೆ ಬಂದ ಕಾಣೆ । ನಂಜುಂಡಲಿಂಗ ತಾನೆ ಬಂದ ಕಾಣೆ ॥. ಯೆಳೆಗಂಗಳ ನೀರೆ ಯೆಷ್ಟೊತ್ತು ಯಿಾ ನಿದ್ರೆ ಬಳಲಿಕೆ ಚಿಂತೇನು ಬಯಲಾಯಿತ್ತು । ವಿರಳೊಬ್ಬಲಿನೆಯುನ ವಿವರೀಶಿ ನೋಡಿದೆ । ಅರಳೀದ ಪುಷ್ಪಕ್ಕೆ ಮರಿದುಂಬೆ ನೆರದ್ಯಾಗೆ ತಾನೆ ಬಂದ ಕಾಣೆ ॥ ೧ ॥

× × × ×· ಯಂನೊಡೆಯ ಪರ್ವತು....ಕ್ಯಾಲಕ್ಕೆ ಶಿರಿ ಬಂದಂಗಾಯಿತ್ತು ॥. . . . . .

ವಿಷಯ : ಹಾಡುಗಳು

ವಿಶೇಷ : ಕೊನೆಯಲ್ಲಿ ಅಪೂರ್ಣವಾದ ಹಾಡಿದೆ. ಇದರಲ್ಲಿ ವೀರಭದ್ರನ ಸವಾರಿ, ಚಾಮುಂಡೀ ಕೀರ್ತನೆ, ಲಕ್ಷ್ಮೀದೇವಿ ಶೋಭಾನೆ, ಆಂಜನೇಯ ಕೀರ್ತನೆ, ಪ್ರಸನ್ನ ಸುಬ್ರಮಣ್ಯ ಸ್ತುತಿ, ದೇವೀಪದ, ಕರೆಗಿರಿ ಚನ್ನನ ಸ್ತುತಿ, ನಿಸ್ಸಂಗ ರಂಗಪ್ಪನ ಶಿಷ್ಯ ಚನ್ನಪ್ಪನ ಅಂಕಿತವಿರುವ ಪದ, ಗೌರೀಪದ, ಶ್ರೀಕೃಷ್ಣ ಭೂತತಿ ಸ್ತುತಿ. ನರಸಿಂಹಸ್ವಾಮಿ ಶೋಭಾನೆ, ಮಂಗಳಗೌರೀ ಪದ. ರಂಗನಾಥ ಮಂಗಳಾ ಇದರಲ್ಲಿ ಮಾಗಡಿ ರಂಗಯ್ಯನ ಅಂಕಿತವಿದೆ, ಉದಯರಾಗ, ಲಾಲಿಪದ, ಸಂಗ್ರಹ ಭಾರತ, ಸೀತಾದೇವಿಗೆ ಬಳುವಳಿ ಕೊಟ್ಟದ್ದು, ಪಗಡೆ ಆಡಿದ ಪದ, ಜಲಕ್ರೀಡೆ, ಭಾರತ, ಗಂಗೆಹಾಡು.·ಪಾರಿಜಾತಕ ಈ ಪದಗಳಿವೆ. ಇದಲ್ಲದೆ ಕೃಷ್ಣದಾನ ಮೊದಲಾದ ಇತರ ೧೨ ಕೃತಿಗಳಿವೆ.

—ಎಸ್‌ಎಸ್‌ಕೆ

338

ಕೆ. ಬಿ. ೫೩೨/೧೦ **ಹಾಡುಗಳು (ಜೈನ)** ಪದ

೭.೯" × ೫.೭" ? ?

೧೭೪–೧೭೮ ಪತ್ರ ೨೧ ಪಂಕ್ತಿ ೧೬ ಅಕ್ಷರ

ಆದಿ: ಅರುಹಕ್ಷೇತ್ರವ ಗೋಮಠಜಿನರತೀರ್ತ್ಥವ
ಅರುಹಕ್ಷೇತ್ರವ ನೋಡೆ ಪರಿಹರ ಪಾಪ
ಸುರಪುರ ಜನರಿಗೆ ಕಲಿಯುಗದೊಳಗೆ
ಗಿರಿಯ ಮೇಲೆ ತ್ರೈಕಾಲ ಜಿನರ ನಟ್ಟ ನಡುವೆ ರಾಜಿಪ ಗೋಮಠೇಶ
ಮಹೇಶ ॥ ೧ ॥

ಅಂತ್ಯ: ಮಂಗಲ ರತ್ನತ್ರಯ ದ್ವರತಿದರೆ ಮು
ಕ್ತ್ಯಂಗನೆ ವಡನೆ ಸೋಕಿಸಭಹುದು
ಶೃಂಗಾಕವಿಯ ಪಾಲಿಪ ಸಮುದ್ರಾದಿಶ
ಸಂಗದೊಳೈಕ್ಯವಾಗಿರಬಹುದು ॥ ೫ ॥

ವಿಷಯ: ಗೋಮಟೇಶ್ವರನ ವಿವರ.

ವಿಶೇಷ: ಇದೇ ಪುಸ್ತಕದಲ್ಲಿ ಜೈನಕ್ರಿಯಾ ಸಾರ, ಶತಕತ್ರಯ (ಜಿನಭಕ್ತಿಸಾರ) ಹಾಡುಗಳು ಮೊದಲಾಗಿ ಇತರ ೧೩ ಕೃತಿಗಳವೆ.

—ಕೆಆರ್‌ಎಸ್

339

ಕೆ. ಬಿ. ೫೩೨/೧೨ **ಹಾಡುಗಳು (ಜೈನ)** ಪದ

೭.೯" × ೫.೭" ? ?

೨೨೯–೨೫೬ ಪತ್ರ ೨೩ ಪಂಕ್ತಿ ೧೮ ಅಕ್ಷರ

ಆದಿ: ಶ್ರೀಮನ್ಮಲೆಯೂರಾದಿಪರಮೇಶ್ವರಸ್ಯ ವುದೆರಾಗಂ ಲಿಖಿತಸ್ಯ
ಪ್ರಾರಂಭಃ । ನಿರಂತರಾಯೋಸ್ತು ।
ಯೇಳೈಯ್ಯ ಬೆಳಗಾಯ್ತು ನೀ
ನಾಲಸ್ಯವೆಂದು ಜಡತೆಯಿಂ ಮಲಗಿರಬೇಡ ಈ
ವೇಳೆಯೊಳು ಸ್ವಾಮಿ ಶ್ರೀಮುಖವ ದರುಶನವ ಮಾಡೂ ॥ ಭವ್ಯಾ ॥
ಯೇಳು ಯೇಳೈ ॥ ಪಲ್ಲ ॥

ಜಾರುತಿದೆ ಈ ಜಗಕೆ ಕವಿದ ಕತ್ತಲೆ
ತೋರುತಿದೆ ಮೂಡದೆಸೆಯೊಳತಿಕೆಂಪು ನಲ
ವೇರುತವೆ ಕಮಲಸಮೂಹ ವಲವಿಸಲಿ ॥
ಸಾರುತಿವೆ ಕುಕ್ಕುಟಗಳ್ಕ್ರ
ತ್ರೂರಿ ನಲವಿಂ ಕೂಗುತವೆ ಖಗಸಂಕುಲವು
ಈ ರೀತಿಯೊಳು ಬೆಳಗಾಯ್ತು ಭವ್ಯಯೊಳ್ಳೈ ॥ ೧ ॥

ಅಂತ್ಯ : ಐಲಿದು ಶ್ರೀಚಾರುಕೀರ್ತ್ಯರ್ಯರನ ಹೊರೆಯುತ್ತ
ಸಲೆ ಭವ್ಯರಯ್ದುವರ ಕಾಯ್ದೂ ಇಪ್ಪ
ಚೆಲುವರಾಜನ ಕಂಡು ತೊಲಗದು ಮನಸೂ ॥ ೫ ॥
ಶ್ರೀ ಜಿನಾಯ ನಮಃ ॥

ವಿಷಯ : ಜೈನತತ್ತ್ವ.

ವಿಶೇಷ : ಇದೇ ಪುಸ್ತಕದಲ್ಲಿ ಜೈನಕ್ರಿಯಾಸಾರ, ಭವ್ಯಾಮೃತ, ಹಾಡುಗಳು ಮೊದಲಾಗಿ ಒಟ್ಟು ೧೪ ಕೃತಿಗಳವೆ.

—ಕೆಆರ್‌ಎಸ್

340

ಕೆ. ಬಿ. ೫೩೨/೧೪ ಹಾಡುಗಳು ಹಾಡು
೭.೯″ × ೫.೯″ ? ?
೨೬೬–೨೬೮ ಪತ್ರ ೧೬ ಪಂಕ್ತಿ ೧೬ ಅಕ್ಷರ

ಆದಿ : ಅಯ್ಯಯ್ಯೊ ಪಾಪಿಜೀವವೆ ನೀ ಮಾಡಿದ
ಹುಯ್ಯಲಿಂನಾರಿಗ್ಹೇಳಲಿ ॥ ಪ್ಲ ॥
ಪಾಯಸವಟ್ಟ್ಯಾರುವನಕಾ ಕಂಡವರ
ಬಾಯತುತ್ತಿ ಗೆಳಸಿದೆಯಾ
ಕಾಯಾಗಿ ಹಂಣ್ಣಾಗುವನಕ ಕಾತರಿ
ಹೂವ್ವನೆ ನೀ ಹರಿದು ಮೆದ್ಧೆಯಾ ॥ ೧ ॥

ಅಂತ್ಯ : ಕ್ರೋಧಮಾನಯಂಗಳನೂ ಲೋಭಂಗಳ
ಚ್ಛೇದಿಸಿ ಕೈವಲ್ಯಬೋಧೆಯಾ
ಬೋಧಿ ಶೃಂಗಾರಕವಿಯ ಪಾಲಿಪ ಸನು
ದ್ರಾಧೀಶನಂಗದೊಳೈಕ್ಯಾವಾಗುವನಾ ॥ ೫ ॥ ಶ್ರೀ

ವಿಷಯ : ಜೈನತತ್ತ್ವ.

ವಿಶೇಷ : ದಪ್ಪಕಾಗದ. ಇದೇ ಪುಸ್ತಕದಲ್ಲಿ ಜೈನಕ್ರಿಯಾಸಾರ, ದೇವರಾಜಾಷ್ಟಕ ಮೊದಲಾಗಿ ೧೪ ಕೃತಿಗಳಿವೆ.

—ಕೆಆರ್‌ಎಸ್

341

ಕೆ. ಜಿ. ೫೩೮	ಹಾಡುಗಳು	ಹಾಡು
೯″×೬″	?	?
೬ ಪತ್ರ	೧೯ ಪಂಕ್ತಿ	೨೨ ಅಕ್ಷರ

ಆದಿ : . . ಡಿರಂಮ್ಮಾ ನಿಂಮ್ಮಾ ಬಲ್ಲಂತ ಹಿರಿಯಾ ಕೇಳಿದ್ದೆವಂಮ್ಮಾ ಯೆಲ್ಲೆಲ್ಲಿ ನೋಡದೀರಮುಮ್ಮಾ। ನಿಂಮ್ಮ ಸೊಲ್ಲಿನಲ್ಲಿರುವೊನೆ ಮಲ್ಲಾರ್ಯನಂಮ್ಮಾ ॥ ೫ ॥ ಗುರು ಶಾರಣರಿಗೆರಗಂಮ್ಮಾ . . .

ಶ್ರೀ–ತತ್ವ

ಮುಂದರಿತು ಗುರುಶಾವೆ ಮಾಡೊ ನೀನೊಂದೊಗೊ ಕಾಲದೊಳಿಂ . . ಬರಿಲ್ಲಾ ಮುೂಂದರಿತು ಗುರುಶಾವೆ ಮಾಡೂ ॥ ಪ ॥

ಮರವೆಂಬೊ ಮಾಯಿಗೆ ಶಿಕ್ಕನಿ ನರಳೂವದ್ಯಾತಕೊ ಶರಿರಾವು ಸುಕ್ಕಿ ಮಾಯಾದ ಸಂಸಾರಕ್ಕಾಗಿ ನಿನು ಮಾರಾನ ಬಾದಿಗೆ ಮರುಳಾಗಿ ಪೋಗಿಸ್ತಿಕವೆಂದು ಗುರುಪೂಜೆ ಮಾಡದೆ ನಾಳೆ ಕಿಂಕಾರ ಕೈಯೊಳು ಬಾಧೆಯು ಪಡದೆ ಮುಂದರಿತು ಗುರುಶ್ಯಾವೆ ಮಾಡೊ ॥ ೧ ॥

ಅಂತ್ಯ : ಶ್ರೀಗುರುಪ್ರಸಂನ್ನ ॥ ನಿಜನೆಂದು ಪಿಡಿದು ಪೂಜಿಸ ಗುರೂಚರಣಾ। ಚರಿಸೊ ನಿರ್ವಾಣಪ್ರಾಪುಂಚ್ಚಾದ ಸ್ತ್ರರಣಾ। ನಿತ್ಯವಿಲ್ಲದ ಕಾಯ ನೆಚ್ಚೀರ ಬ್ಯಾಡಾ। ನಿತ್ಯ ಭೋಗವ ಮಾಡಿ ಕೆಡದೀರೊ ಮೂಢಾ ॥೧॥ ವನಿತಭೋಗವ ಮಾಡಿ। ಕೆಡದೀರೊ ಮೂಢಾ। ವನಿತೇರ ಭೋಗವೆಂಬುದು ದೊಡ್ಡ ಶರದಿ। ಅನುಕೂಲದಿನದೊಳು ದಾಟೇನಿ ಬರದಿ ॥ ೨ ॥ ಸತ್ತು ಹುಟ್ಟುವ ದೇಹ ಸಹಜಾವೆ ನೋಡಿ। ನಿತ್ಯ ನಿರ್ಮ್ಮಲನಾಗಿ ಧಾನೀಸೊ ಮನದಿ। ಯೆಂದೀಗು ಮರಣ ತಪ್ಪದು ಕೇಳ್ ಮರುಳೆ। ಚೆದ್ರಾಶೇಖರನಾ ಧ್ಯಾನಿಸು ಹಾಗಾಲಿರುಳೇ। ಭಾಸೂರ ನೆಲೆವಾಸ ಗುರುಶೊಂಭೂಲಿಂಗಾ। ವಾಸಾರಿಸಲ ಮುಂನ್ನ ವರ ವಾತಾನೀವ ॥ ನಿಜವೆಂದು ಪಿಡಿದು ಪೂಜಿಸು ಗುರುಚರಣಾ ॥ ೩ ॥

ವಿಷಯ : ಹಾಡುಗಳು.

ವಿಶೇಷ : ಮೋಡಿ ಅಕ್ಷರ. ಇದರಲ್ಲಿ ಹಾಡುಗಳಿವೆ. ಇವುಗಳಲ್ಲಿ ಒಂದೆರಡು ತೆಲುಗು ಕೃತಿಗಳು ಕೊನೆಯಲ್ಲಿ ಆರು ಶುದ್ಧಪತ್ರಗಳಿವೆ. ಪತ್ರಗಳ ಎರಡು ಪಾರ್ಶ್ವಗಳಲ್ಲೂ ಬರೆದಿದೆ. ಆದಿಭಾಗ ಇಲ್ಲ.

—ಎಸ್‌ಎನ್‌ಕೆ

342

ಕೆ. ಬಿ. ೬೧೨/೧	**ಹಾಡುಗಳು**	ಹಾಡು
೭.೨′ × ೪.೩″	?	?
೩೭ ಪುಟ	೨೦ ಪಂಕ್ತಿ	೧೨ ಅಕ್ಷರ

ಆದಿ : ಶ್ರೀ ॥ ರಾಗಾ ॥ ನೀಲಾಂಬರಿ ॥

. . . ಮಾನಿಗೆ ನಲ್ಲಾ । ನೀರೆ ಸೈರಿ . . . ಳಲ್ಲಾ । ಗಾರುಮಾಡು ವಾಧಿ ಸಲ್ಲಾ । ಯೇನ್ನ ಪರಕು ವೈಕೂೞ ॥ ರಾ ॥ ತರುಣಿಯಾ । ರೊಳೂ ರಂಭೇ । ರತುನಾ । ಪುಥಳಿಬೊಂಬೆ । ಕರೆಯಲೆಟ್ಟಿದಳೇ ನಂಬೇ ॥ ಯೇನ್ಯಪಾರಕಾವೈಕೂ ॥ ೧ ॥

ಸೂಳೂವಾ । ಕಾಣಾದೆ ನಿಂನ್ನಾ । ಕಾಳವಳಿಪದು ರಂನಾ । ನಾಳಿ ನಾಕ್ಷಿಯೊಳೂ ಮೋಹಂನ್ನಾ ॥ ೨ ॥ ಹೆಂಣು ಮಾರುಗೆ ಬಂಗಾ । ಬಂಣಿಸಲಾನ್ನು ಸಂಗಾ । ಅಂಣಿಯಾಗಿರಿ ಯಾರಾಂಗಾ । ಯೆ ನೃಪರ ಕೂವೈಕೂ ॥ ೩ ॥ ಸಾಕು ಸುಂಮಾನೆ ಬಾರೇ ವ್ಯಾಕುಲ ಬೀಡದೀರೆ । ರಾಕೇಂದು ವಾದನದೋರೇ । ಬ್ಯಾಡಮಾಕು ಶಡಕೂ ॥ ಪಲ್ಲಾ ॥.

ಅಂತ್ಯ : ಕಂಡಾ ಕಂಡಾ ಬಾಲೆಯರಿಗೆ ಸಂಣ ಬಂಣದ ಶೀರೆ ಹುಡಿಸಿ ತಾಲೆ ಜಾಜಿ ತುರುಬ ಕಟ್ಟಿ ಕುಂಕುಮಾ ನಿಟಿಸೇ ॥ ಪುಂಡ ನಿಂನಲು ನಾಜೂ ಕಾಗಿ ನೆಲೆಯಾದಿಕೇಶಾವರಾಯ ಚಂಡೂಚೂತ ಮಾಡಿ ನಂಮಾ । ಬಳಲಿಸಿ ಕಳೂಯಿರಾರನೇ ॥ ೭ ॥

ವಿಷಯ : ಹಾಡುಗಳು.

ವಿಶೇಷ : ಹಳೆಯ ಕಾಗದ. ಅಕ್ಷರ ಅಸ್ಪಷ್ಟ. ಈ ಕೃತಿಗೆ ಮೊದಲಿನಲ್ಲಿ ಬಾಲಗ್ರಹ, ಜ್ವರ ಇವುಗಳಿಗೆ ಮಂತ್ರವಿದೆ. ಇದರೊಡನೆ ಕಲ್ಯಾಣಮ್ಮನವರ ಕಾಲಜ್ಞಾನ, ಗಟ್ಟಿವಾಳಯ್ಯನ ಕಾಲಜ್ಞಾನ, ಸರ್ವಜ್ಞ ಮೂರ್ತಿಯ ಕಾಲಜ್ಞಾನ, ಮಂತ್ರಚಿಂತಾಮಣಿ, ವಿವೇಕ ಚಿಂತಾ

ಮಣಿಪ್ರಶ್ನೆ, ರಾಮದೇವರಪ್ರಶ್ನೆ, ಸಿದ್ಧರಾಮದೇವರ ಕಾಲಜ್ಞಾನ, ಗಣೇಶ್ವರಸ್ತುತಿ, ವಿಭೂತಿ ಮತ್ತು ಪಾದೋದಕಮಾಹಾತ್ಮ್ಯವಿದೆ. ಹಾಡುಗಳಿರುವ ಪತ್ರಗಳಿಗೆ ಕ್ರಮಾಂಕ ಇರುವುದಿಲ್ಲ.

—ಎಸ್‌ಎನ್‌ಕೆ

343

ಕೆ. ಬಿ. ೬೫೧/೭	ಹಾಡುಗಳು	ಹಾಡು, ಷಟ್ಪದಿ
೬.೫" × ೮"	?	?
೧೫೮—೧೬೧ ಪತ್ರ	೧೫ ಪಂಕ್ತಿ	೨೦ ಅಕ್ಷರ

ಆದಿ: ಶ್ರೀಗುರುವೆ ಗತಿ ॥

ಅಂಗ ಮಾಸಿದ ಮಾಸಿದಡಷ್ಟವರಣದಿಂ ತೊಳಿಯದೆ
ಗಂಗಿಯೊಳು ಮುಳುಗಿ ಮಿಾಯಲು ಮುಕ್ತಿಯುಂಟೆ ॥ ಪಲ್ಲ ॥

ಹಲವು ಜನ್ಮದಿ ಹುಟ್ಟಿ
ನೆಲಿಗಳಿಲ್ಲದೆ ನೊಂದು
ಸಲೆ ದುಃಖ ಸುಖಗಳಾನನುಭವಿಸುತಾ ।
ಕ್ಯಲವು ಕಾಲದೊಳಿಪ್ಪ
ಮಲಭಾಂಡ್ಯದೇಹವನನೂ ।
ಬಲು ನೀರೊಳನುದಿನವು ತೊಳಿಯೆ ಸುದ್ಧವಹದೇ ॥ ೧ ॥

ಅಂತ್ಯ : ನಾನು ನೀನೇ ನೀನೆ ನಾನೂ
ಯೆಂದು ಅಪ್ಪಣಿ ಕೊಟ್ಟಿ ।
ಮಾನನಿಧಿ ಬಸವಲಿಂಗನ ಶಿರದಲ್ಲಿ ಕರವಿಟ್ಟಿ ।
ಸ್ನೇಶ ಬಾಪು ಗುರುವೆ
ಯಂತ ಬುದ್ಧಿ ಕೊಟ್ಟಿ ॥ ೫ ॥ ಶ್ರೀ ಶ್ರೀ ॥

ವಿಷಯ : ಶಿವಮಹಿಮಾ ಸ್ತೋತ್ರ.

ವಿಶೇಷ: ಸಮಗ್ರ. ಮೋಡಿ ಅಕ್ಷರ. ಇದರೊಂದಿಗೆ ಕೈವಲ್ಯ ಪದ್ಧತಿ ಮುಂತಾದ ಕೃತಿಗಳಿವೆ.

—ಎಂಪಿಎಂ

344

ಕೆ. ಬಿ. ೬೮೩ ಹಾಡುಗಳು ಹಾಡು

೫.೫" × ೮ ೫" ? ?

೧೦೩–೨೨೧ ಪತ್ರ ೧೯ ಪಂಕ್ತಿ ೧೬ ಅಕ್ಷರ

ಆದಿ : . . . . . ಕುಚಗಳ . . . ದಿಂದ್ಠೊರಕುವ ಗವು . . . ಮುತ್ತಿನ ಹಾರವು ಕ . . ವಿಾಗಾ ಕುರವೆತ್ತು ವಡೆನ್ದೇಳ . . ಬಿಗಿದ ಬೀಳೆ . . . ಭವಸುಖಕಾರಿನೀ . . . ಚಿತ್ತದಲೀ ।

ಅಂತ್ಯ : ಹಾಡು ॥ ಶ್ರೀರಾಮ ವಿಮಲ ವಿಶ್ರಿತ ಪಾರಿಜಾತೆ ವಾರಿಜನಿಲಯೆ ವಾರುಧಿತನುಜೆ_ ವಾರಿಜನಾಭನ ರಾಣಿ × × × ಬಾರೆಂದು . . ಹಸೆಗೆ ಕರದಾರು ಶೋಬಾನೆ ॥ ೧ ॥

ವಿಷಯ : ಸೋಬಾನ ಮುಂತಾದ ಹಾಡುಗಳು.

ವಿಶೇಷ : ಅತ್ಯಂತ ವೋಡಿ ಅಕ್ಷರ. ಶಿಥಿಲ ಪ್ರತಿ. ಅಸಮಗ್ರ ಕೃತಿ.

—ಎಂಪಿಎಂ

345

ಕೆ. ಬಿ. ೬೯೭/೫ ಹಾಡುಗಳು ವಚನ

೬" × ೮.೫". ? ?

೨ ಪತ್ರ ೧೬ ಪಂಕ್ತಿ ೧೯ ಅಕ್ಷರ

ಆದಿ : ಗುರುವಿನ ಗುಲಾಮನಾಗದೆ ಬರಿದೆ ಸುಂಮ್ಮನೆ ಬರುವದೆ ಬ್ರಂಹ್ಮ ಗ್ನಾನಾ ॥ ಬರಿಯೋದಿನ ಜ್ಯಾಣ್ಪೆಕಿಯಲಿ ತುಂಬೆದೆ ತೆರಪಿಲ್ಲದೆ ಲೂ ಗ್ನಾನಾ ಮರುಳೆ ॥ ಪಲ್ಲ ॥ ಹಗಲಿರುಳೆ ಬಿಡದೆ ಕರ್ಮಗಳನೂ ಸೊಗ ಸಿಲಿ ಮಾದಿದಡಿಲ್ಲಾ ಭುಗಿಭುಗಿಲೆಂಬೊ ಬೆಂಕ್ಕಿಯ ವಳಗೆ ಹೋಮವ ಹಾಕಿದರಿಲ್ಲಾ ॥ ಬಗಿ ಬಗಿಯಲಿ ಕೆರಿಭಾವಿ ತೀರ್ದಾ ಯಾತ್ರಿ ಮಾಡಿ ದರಿಲ್ಲಾ ॥ ನಗುನಗುತಲಿ ಸತ್ತೂರು ನಾಯಂದದಲಿ ಪೆರನಾಯಂದದಿ ಬೊಗಳಿದರಿಲ್ಲಾ ಮರುಳೆ ॥ ೧ ॥

ಅಂತ್ಯ : ನೋಡಲಿಂತಮಳ ಮಂತ್ರಾಳಿ ವಾಚಕ ಮಧರ । ಕೂಡಿರ್ಪ ಶಂಭು ಲಿಂಗದೆ ವಾಚ್ಯಲೂ । ರೂಡಿವೆತ್ತೀ ಪರಿಯೊಳಿಹುದನಾರೈದೆಳಸಿ ಮಾಡೆ ಜಪವನು ಮುಕ್ತಿ ಸಿದ್ಧಿಯಃಹುದೂ ॥ ೫ ॥

ವಿಷಯ : ವೀರಶೈವಸಿದ್ಧಾಂತ.

ವಿಶೇಷ: ಕೃತಿ ಸಮಗ್ರ. ಪ್ರತಿ ಸುದೃಢ. ಬರವಣಿಗೆ ಮೋಡಿಯಾಗಿದೆ. ಇದರೊಂದಿಗೆ 'ಸ್ತುತಿ' ಮುಂತಾದ ಕೃತಿಗಳಿವೆ.

—ಎಂಪಿಎಂ

346

ಕೆ. ಬಿ. ೬೯೭/೨೨	ಹಾಡುಗಳು	ಹಾಡು
೬" × ೮.೫"	?	?
೩೪–೩೮ ಪತ್ರ	೨೨ ಪಂಕ್ತಿ	೨೦ ಅಕ್ಷರ

ಆದಿ: ಶ್ರೀಗುರು ಬಸವಲಿಂಗಾಯ ನಮಃ ॥ ಪದಾ ॥
ಕಾರಣ ಬೈರ‍್ಯಾದೆ ।
ಸದ್ಗುರುವಿನ ಬೋಧನಿಬ್ಯಾರ‍್ಯಾದೆ ॥ ಪಲ್ಲ ॥
ಭೋರಿಡುತಾದೆ ತೋರುವದಲ್ಲ ।
ವಿಚಾರಿದ ಉನ್ಮನೆ ಶೆರಿದವನೆ ಬಲ್ಲಾ ॥ ೧ ॥
ಕಂಡವರಿಲ್ಲ ಉಂಡಾತ ಬಲ್ಲ ।
ಮಂಡೆಯೊಳಗೆ ತುಂಬಿ ತುಳುಕಿ ಸೂಸ್ಯಾಡುತದೆ ॥ ೨ ॥

ಅಂತ್ಯ : ವಳ ಹೊರಗೆ ಆಡಲರವು ।
ಥಳಥಳನೆ ಹೊಳಿವುವವು ।
ಬೈಳಗಿನೊಳು ಮಾಹ ಬೆಳಗುವಾಗುತ್ತಿಹದೂ
ಯಿಳಿಯೊಳಗೆ ಗುರು ನೃಷಾಭೇಶ್ವರನು ತಾ
ನುಳಿದು ಚಿತ್ಕಳಿಯು ಸಾವುನಿ
ಯೊಳಗೆ ಭವ ಕಳದ ನಂಮಾ ॥ ೩ ॥ ಶ್ರೀಶ್ರೀ.

ವಿಷಯ : ಶಿವಪಾರ್ವತಿಯರ ಸ್ತುತಿ.

ವಿಶೇಷ : ಸಮಗ್ರ ಕೃತಿ. ಸುದೃಢಪ್ರತಿ. ಇದರೊಂದಿಗೆ 'ದಶವಿಧ ಪಾದೋದಕ ವಿವರ' ಮುಂತಾದ ಕೃತಿಗಳಿವೆ.

—ಎಂಪಿಎಂ

347

ಕೆ. ಬಿ. ೬೯೯/೭	ಹಾಡುಗಳು	ಹಾಡು
೬" × ೮.೫"	?	?
೨ ಪತ್ರ	೨೭ ಪಂಕ್ತಿ	೨೦ ಅಕ್ಷರ

ಆದಿ : ಶ್ರೀಗುರು ಹಿರುರ ಚೆಂನಬಸವೇಶ್ವರನ ಪಾದವೇ ಗತಿ ॥ ಪದನು ॥
ಯಿರಬೇಕೆ । ಯಿರಬೇಕೆ । ಯಿಂತವನ ಕೂಡೆ ।
ಅರಗಳಿಗಂದ ಯಿರಬೇಕೆ ॥ ಪಲ್ಲ ॥
ಹಲ್ಲಿಗಿ ನಿಜ ಚಾನಿ ಹಚ್ಚಲಿಬೇಕೆ ।
ನಲ್ಲಾ ಬಾಯೆಂದು ಕರಿಯಲಿಬೇಕೆ ।
ಯಿಲ್ಲದ ರತ್ತಿಗಳ ತೋರಲುಬೇಕೆ ।
ಯಿರಬೇಕೆ ಯಿರಬೇಕೆ ॥ ೧ ॥

ಅಂತ್ಯ : ಕಂಣ ಮುಚ್ಚಣಿ ಕಿಯ್ಯಡೆ ಕರ ಚೆಲ್ವಿ ।
ಸಂಣ ಹುಂಣಿವಿ ಚಂದ್ರಮನಂತೆ ।
ಬಂಣ ಬಿಳದಿನ ಬೆಳಕಿಲಿ ।
ಕಂಣಿದ್ದು ಕಾಣಲರಿಯೆ ಕಾಮಿನಿ ।
ನಿಂನ ಪುಣ್ಯೆ ಪುರುಶ ಪ್ರಭು ಕಲ್ಯೆಣದ್ಯೆಯ್ಯ
ಗೊಲಿದೆ ನಲ್ಲಳೆ । ಸುತ್ತಿ ಸುತ್ತಿ ಸುಳಿಯ
ದಿರೆ ವೈಯ್ಯರಿ ॥ ೩ ॥ ಶ್ರೀ ಶ್ರೀ ॥

ವಿಷಯ : ಶಿವ ಮತ್ತು ಪಾರ್ವತಿಯರ ಗುಣಗಾನದ ಹಾಡುಗಳು.

ವಿಶೇಷ : ಶಿಥಿಲ ಪ್ರತಿ; ಸಮಗ್ರ ಕೃತಿ. ಮೋಡಿ ಅಕ್ಷರ. ಇದರೊಂದಿಗೆ ಉದಯರಾಗ ಮುಂತಾದ ಕೃತಿಗಳಿವೆ.

—ಎಂಪಿಎಂ

348

ಕೆ. ಬಿ. ೬೯೯/೬	ಹಾಡುಗಳು	ಹಾಡು
೬" × ೮.೫"	?	?
೨ ಪತ್ರ	೨೦ ಪಂಕ್ತಿ	೨೦ ಅಕ್ಷರ

ಆದಿ : ಶ್ರೀಗುರುವೆ ಗತಿ ॥ . . . ತಾಳಲಾರೆನು ನಾನು ಚಂದಮಾಮ ಹೇಳಲ್ಲ
ತಾಳಲ್ಲ ಬಾಳಲೋಚನ ಬಲ್ಲಾ ॥ ಪಲ್ಲ ॥

ಕತಾಲ್ಲಿಯೆಳು ಯಾತಿಲಿಂದಾಲ್ಲ ಬಂತು ಚಂದವಮಾವಮಾ ।
ಮುತ್ತಿನಂತ ಕೊಂಡಿ ಪೊತ್ತಿತು ಉರಿಭಾಳ ಚಂದವಮಾವು ॥ ೧ ॥
ಪ್ರಾಯದ ಬಾಲ್ಲೆ ಮಕ್ಕಳು ಮನೆ ತುಂಬ । ಚಂದವಮಾವಮಾ ।
ದಿಕ್ಕುಪಾಲಾ ಮಡಿವಕ್ಕಲಗೆಡಿಸಿತ್ತು ಚಂದವಮಾವಮಾ ॥ ೨ ॥

ಅಂತ್ಯ : ಯಂನಂಗ ಗುಣವನೆಲ್ಲ ಲಿಂಗ ವೊಖವ ಮಡಿ ಅಂಗಲಿಂಗಸಂಗ ಪರ ಮನಾಂದವನುದಿನ ನಡಸುತ । ಮಂಗಳತ್ಮಕ ಪ್ರಸಂನ ನಂಜುಂಡನಾ ಬೆಡಂಗಿ ನಿಂದಲ್ಲಿ ಕೂಡಬಲ್ಲ ಆರುಡಮಹಿಮಂಗಲ್ಲದೆ ॥ ೫ ॥

ವಿಷಯ : ಶಿವಮಹಿಮಾ ವರ್ಣನೆ.

ವಿಶೇಷ : ಕೃತಿ ಸಮಗ್ರ. ಪ್ರತಿ ಶಿಥಿಲ. ಬರವಣಿಗೆ ಮೋಡಿ. ಇದರೊಂದಿಗೆ ಷಡಕ್ಷರ ಸ್ವಾಮಿಯವರ ಪದ ಮುಂತಾದ ಕೃತಿಗಳಿವೆ.

—ಎಂಪಿಎಂ

349

ಕೆ. ಬಿ. ೬೧೦/೨ | **ಹಾಡುಗಳು** | ಹಾಡು

೬" × ೩.೯" | ? | ?

೧೮ ಪುಟ | ೧೫ ಪಂಕ್ತಿ | ೯ ಅಕ್ಷರ

ಆದಿ : ಜಯತು ಶಾರದದೇವಿ
ಜಯತು ನುತ ವಾಗ್ದೇವಿ
ಜಯತು ವಿದ್ಯಾದೇವಿ ಭವ್ಯಸಂಜೀವಿ
ಜಯತು ಜಯತು ॥ ಪ ॥
ಜಯತು ತತ್ವೋದ್ಧಾರಿ
ಜಯತು ಧರ್ಮವಿಚಾರೆ
ಜಯತು ಶಾಶ್ವತಶೂರೆ ಶರಧಿಗಂಭೀರೆ ಜಯತು ॥ ೧ ॥

ಅಂತ್ಯ : ಅಂಗನೆಯರೈವರು ಮಂಗಳಾರತಿವಿಡಿದು
ಶೃಂಗರವಾಗಿ ತಾವು ಭಕ್ತಿಯಿಂದಾ
ರಂಗುಳದಾರತಿ ಯತ್ತುತವಾಗಿ ಕೋಗಿಲೆಯಂತೆ ರಾಗವನು ಪಾಡುತ್ತ
ಯೋಗಿ ಸಿದ್ಧ್ರಂತರಿಗೆ ಆರತಿಯನೆತ್ತಿ ಆಗಮಸಿದ್ಧಾಂತ
ಯೋಗಿಗಳ ಧರ್ಮೋಪದೇಶವನು
ಯೋಗಿಗಳ ಉಪದೇಶವನು ಮುಗುಳ್ನಗೆಯೆಂದು ಶ್ರಾವಕ ಸೋಮುಗಳಿಗೆ ಬೆಳಗಪ್ಪ ॥ ೫ ॥

ವಿಷಯ : ಭಕ್ತಿನಿರೂಪಣೆ.

ವಿಶೇಷ : ಇದೇ ಕಟ್ಟನಲ್ಲಿ ತ್ರಿಲೋಕ ಚರಿತ್ರೆ. ಶ್ರವಣಬೆಳಗೊಳ ಸ್ಥಳಪುರಾಣ ಎಂಬ ಗ್ರಂಥಗಳಿವೆ.

—ವೈಸಿಬಿ

350

ಕೆ. ಬಿ. ೭೧೪/೫	ಹಾಡುಗಳು	ಹಾಡು
೮.೧″ × ೬.೮″	ವಿವಿಧ ಕರ್ತೃಕ	?
೭ ಪತ್ರ	೨೦ ಪಂಕ್ತಿ	೨೨ ಅಕ್ಷರ

ಆದಿ : ರಾಗ । ನಾಟ । ಪಾಲಿಸೆನಗೊಲಿದು ಪಾವನ ಮೂರ್ತಿ ಮಹಂಕಾಳಿ
ಕಾಳಿದೇವ ಕಮಟೇಶ್ವರನ ರಾಣಿ ಶರ್ವಾಣಿ
ಗೀರ್ವಾಣಧರನರಸಿ ಗಿರಿರಾಜನೊರಪುತ್ರಿ
ಶರೀರವೆ ಶಶಿನೇತ್ರೆ ಸರ್ವಾಸಿಗಾತ್ರೆ ॥ ಪಲ್ಲ ॥

ಅಂತ್ಯ : ಕಂಗಳಿಂದಲೆ ನೋಡಿ ದೇವ ನಿನ್ನಂಗ ಸಂಗವ ನೀಡಿ
ಮಂಗಳ ಮೂರುತಿ ರಂನವಿಠಲ ಮು
ದಂಗವಿಲ್ಲದಂತೆಯನೆಗೆ ದಯವಮಾಡೊ
ಭ್ರಾಂತನಾದೆನಲ್ಲಾ ಪರಗತಿ
ಚಿಂತೆಯೆಂಬುದಿಲ್ಲಾ ॥ ೩ ॥ ಶ್ರೀ ಶ್ರೀ.

ವಿಷಯ : ವೈರಾಗ್ಯಬೋಧನೆ, ಭಕ್ತಿ.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ. ಇದರ ಜೊತೆಯಲ್ಲಿ ಸರ್ವಜ್ಞನ ತ್ರಿಪದಿ ಮೊದಲಾದ ೫ ಕೃತಿಗಳಿವೆ.

— ಜಜಿಎಂ

351

ಕೆ ಬಿ. ೬೬೬/೪	ಹಾಡು ಲಾವಣಿ	ಹಾಡು
೬″ × ೪″	?	?
೧೭–೨೨ ಪತ್ರ	೮ ಪಂಕ್ತಿ	೧೮ ಅಕ್ಷರ

ಆದಿ : ಯಾರಿಗೆ ಯಾರಿಲ್ಲಯುರುವಿನ ಸಂಸಾರ
ನೀರ ಮೇಗಳ ಗುಳ್ಳೆ ನಿಜವಲ್ಲ ಪ್ರಭುವೆ ॥

ನಮಗ್ಯೆರಿಲ್ಲ ನಮಗ್ಯೆರಿದ್ದರೇನೈಯ ಮಾಲಿಂಗ ಪ್ರಭೂವೆ ನಮಗ್ಯೆರಿಲ್ಲ ॥ ಪ ॥

ತಂತೆ ತಾಯಿಲ್ಲ ಬಂಧು ಬಳಗವಿಲ್ಲ ನಾಳೆ
ಹೋಗುವ ಕಾಲಕ್ಕೆ ನಮಗೊಬ್ಬರಿಲ್ಲಾ ॥ ೨ ॥

ಅಂತ್ಯ : ಯಂನ ಮಾತನು ಮೀರದೆ ಮಮರದಿರಲಾರೆ
ಮನಸಿಜ ಸುಂದರಿ ಕೇಳೆ ॥ ಪ ॥

ತಿದ್ದದ ತಿಲುಕವು ಮಧ್ಯದಲ್ಲಿ ಕುರುಳು
ಸದ್ದು ಮಾಡದೆ ಬಂದು ತಬ್ಬಿಕೊಂಬರಗಿಣಿಯೆ ॥ ೧ ॥

ಬಾರಿಬಾರಿಗೆ ಬಂದು ಬಾಗಿಲೊಳಗೆ ನಿಂದು
ವಾರೆ ಕಂಣಿಂದ ನೋಡಿವಲಿದುಕೊ ಬಾ ಸಖಿಯೆ ॥ ೨ ॥

ಆರೇಳು ತಿಂಗಳಿಂದಾ ಆಸೆಯನಾಗೆ ಕೊಟ್ಟು
ಮೋಸ ಮಾಡಿದೆಯಲ್ಲೊ ಮೋಹನದರಗಿಣಿಯೇ ॥ ೩ ॥

ವಿಷಯ : ಭಕ್ತಿಯ ಹಾಡುಗಳು ಮತ್ತು ಲಾವಣಿ ಪದ.

ವಿಶೇಷ : ಮೂರು ಹಾಡುಗಳೂ ಒಂದು ಲಾವಣಿ ಪದವೂ ಈ ಗ್ರಂಥದಲ್ಲಿವೆ. ಪತ್ರದ ಎರಡು ಪಾರ್ಶ್ವಗಳಲ್ಲಿ ಬರಹವಿದೆ. ಇದೇ ಪುಸ್ತಕದಲ್ಲಿ ಗಿರಿಜಾ ಸ್ತೋತ್ರ, ಸದ್ಗುರು ಚೀಲಾಳ ಸ್ತೋತ್ರ, ಗುರುಃಕರುಣಾಮೃತ ವೆಂಬ ಇತರ ಮೂರು ಗ್ರಂಥಗಳಿವೆ

—ಕೆಆರ್‌ಎಸ್

352

ಕೆ. ಬಿ. ೫೩೨/೮	ಹಾಡು ಶೋಬಾನೆ ಪದ	ಪದ
೭.೯″ × ೫.೭″	?	?
೧೫೪–೧೬೧ ಪತ್ರ	೧೫ ಪಂಕ್ತಿ	೧೮ ಅಕ್ಷರ

ಆದಿ : ಶರಣು ಸಾರಿದೆನೂ ಕರುಣಾವಾರುಧಿ ಕರ್ಮ್ಮ ಹರನು ನೀನೆಂದೂ ॥ ಪಲ್ಲ॥
ತ್ರಿದಶೇಂದ್ರವಂದ್ಯ ಪದ ಪದ್ಮರಾಜಿತ ಶರಣು
ಮದನನುದ್ಧಟವನಿ ಮುರಿದೆ ಶರಣೂ ।
ಸದಮಲಜ್ಞಾನ ಸಂಪನ್ನ ಪಾವನ ಶರಣು
ಮದಮಾಯವರ್ಜ್ಜಿತ ನಿರಾಶ ಶರಣು ॥ ಶರಣು ಸಾರಿದೆನೂ ॥

ಅಂತ್ಯ : ನವ್ಯ ಭಾವ ಕರ್ಮವೆಂಬ
ಸೇವ್ಯ ಪದದ ತೌಡು ಹೋಗೆ
ದಿವ್ಯ ಪ್ರಭೆಯಾತ್ಮ ನಿಖಿಳ
ದಿವ್ಯವಾಗುವಂತೆ ಕಳಿಸು ॥ ೨ ॥

ಅಕಿಗಕುರವಿಲ್ಲಾ ಆತ್ಮ
ಚೊಕ್ಕವಾದರೆ ಜಂನ್ಮವಿಲ್ಲ
ಅಕ್ಕಟ ಭವಕೆ ಕೆಟ್ಟಂತೆ ಮರೆ
ಹೊಕ್ಕೆ ಚಿದಂಬರ ಪುರುಷನಾ ॥ ೩ ॥

ಶ್ರೀಜಿನಾಯ ನಮಃ ॥

ವಿಷಯ : ಹಾಡು ಹಾಗೂ ಶೋಬಾನೆಯ ಪದಗಳು.

ವಿಶೇಷ : ಇದೇ ಪುಸ್ತಕದಲ್ಲಿ ಜೈನಕ್ರಿಯಾಸಾರ, ಅಷ್ಟಕಗಳು, ಭರತೇಶ ವೈಭವ, ಹಾಡುಗಳು ಮೊದಲಾಗಿ ಒಟ್ಟು ೧೪ ಕೃತಿಗಳಿವೆ

—ಕೆಆರ್‌ಎಸ್

353

ಕೆ. ೬೪೭	**ಹಾಲಾಸ್ಯ ಪುರಾಣ**	ಚಂಪು
೧೭" × ೧.೮"	ಇಮ್ಮಡಿ ಗುರುಸಿದ್ಧ	ಸು. ೧೭೨೦
೧–೨೦೨ ಪತ್ರ	೧೦ ಪಂಕ್ತಿ	೭೮ ಅಕ್ಷರ

ಆದಿ : ಶ್ರೀಗುರು ಬಸವಲಿಂಗಾಯ ನಮಃ ॥ ಸುಂದರೇಶ್ವರನ ಹಾಲಸ್ಯ ಪುರಾಣವ . . . . ನಕೋಶಂ ಮಹಾನಂದ ವೇಷಂ ಸೋಮಾಂಚನ್ಮಾಲಿ ಭಾಗಂ ಮಲಿನರಹಿತ ಭೋಗಂ ಮಹಾನೋರ ವ್ಯವೇಗಂ ಕಾಮಾಂಧದ್ವಾಂತ ಸೂರ್ಯಂ ಕಲಿತ ಸಕಲ ಶೌರ್ಯಂ ಕಲಾಶಾಲಿ ಧೈರ್ಯಂ ಕ್ಷೇಮಂ ಪಾರಂಭಮಂ ಮಾಳ್ಕೆ . . . . . ॥
ಶರಜಜನಿತ್ರಿ ಶರ್ವಸುಖ ಧಾತ್ರಿಮೋದಯ ಮೌನಿ ನೇತ್ರಿಮಾ ವರಸುತ ಪಾಲೆ ವರ್ಜಿತ ಕುಶಿಲೇವ ಡಾನ್ಯೆ ಗುಣಾನುಕೂಲೆ ಸುಂ ದರ ನವರೂಪೆ ದಕ್ಷಮುಕಖ ಕೋಪೆ ದಯಾರಸ ಪೂರ್ಣ ಕೂಪೆ ಭಾ ಸುರಸ್ಮಿತ ಕೀರ್ತಿ . . . . ಶ್ರೀ ಪಾಲಿಸಾ ॥ ೨ ॥

ಅಂತ್ಯ : ಪರತರ ಷಟ್ಸ್ಥಲ ಬೋಧಕ ಶಿಷ್ಯ
ದ್ಗುರುಕುಲ ಮಸ್ತಕ ರತ್ನ ಸುಯತ್ನ

ಸಿರಘ ನಿರಂಜನ ತೋಂಟದ ಸಿದ್ಧೇ
ಶ್ವರ ಜಯಪಾಲಯಮಾಂಚಿತ ಮಾಯ ॥ ೧೬೮ ॥

ಗದ್ಯ : ಇದು ಸಕಲ ಸುರನರಾಸುರ ಪ್ರವರ ಪ್ರಕರ ಕನಕ ನವರತ್ನ ಖಚಿತ ಮೌಲೀ ಕೀಲಿತ ಸರೋರುಹ ರುಚಿರ ಶಿವಲಿಂಗಪ್ರಸಾದ ಲಬ್ಧೋದಯ ಕವಿತ್ವ ನಿಪುಣ ತತ್ವಾವರಣ ದ್ವಿತೀಯ ಮುರಿಗಾ ಗುರುಸಿದ್ಧ ಶಿವಯೋಗೀಂದ್ರ ಭಕ್ತಿ ವಿರಚಿತ ಸುಂದರೇಶ್ವರ ವಿಲಾಸ ಸ್ಕಾಂದಾಗಸ್ತ್ಯ ಸಂಹಿತಾ ಮಧ್ಯಗತ ಹಾಲಸ್ಯ ಪುರಾಣದೊಳಗಸ್ತ್ಯ ವಶಿಷ್ಠಾರ್ಯನೆನೆ ಮುನೀಶ್ವರ ಸಹಿತಾನಂದ ವನಾಂತರ ಕದಂಬವನ ಪ್ರತಿಭಾನ್ವಿತ ಸಪ್ತದಶಾಶ್ವಾಸ ಗರ್ಭಿತ ಧರ್ಮಾರ್ಥ ಕಾಮ ಮೋಕ್ಷಾತ್ಮಕ ಚತುರ್ಥಕಾಂಡಕ್ಕಂ ಪರಿಸಮಾಪ್ತಂ ಭದ್ರಂ ಬೂಯಾತ್ ಶ್ರೀ ಹಾಲಸ್ಯ ಪುರಾಣ ಸಂಪೂರ್ಣಂ ॥ ಇದು ಹಾಲಸ್ಯ ಪುರಾಣಂ ಶಿವಲಿಂಗಾನು ಜ್ಞಾನರೂಪಿತ ವುಭಯಕವಿತ್ವ ನಿಪುಣ । ಜ್ಞಾನ ವಿತ್ತಿತ್ತಿ ಶಿಷ್ಯಜ್ಞಾನದರಿದ್ರ ಪದಂ ವಾರಣಂ ದ್ವಿತೀಯ ಮುರಿಗಾ ಗುರುಸಿದ್ಧ ಶಿವಯೋಗೀಂದ್ರ ಜತೀಶ ಚನ್ನವೀರ ಕರಿಬಸವ ಚನ್ನ ಬಸವದೇವರುಗಳೆಂಬ ಚತುರ್ವಿದ ಶಿಷ್ಯದ್ವಾದಶಾಂತ್ಯಮಹಿಮಾ ನಿರೂಪಣಂ ಶಾಲಿವಾಹನ ಸಖ ೧೬೪೨ ನೆಯ ಶಾರ್ವರಿ ಸಂವತ್ಸರದ ಜೇಷ್ಟಮಾಸದ ಶುದ್ಧತದಿಗೆ ಆದಿತ್ಯವಾರ ಸಿಂಹಲಗ್ನ ಪುಷ್ಯನಕ್ಷತ್ರ ಧ್ರುವಯೋಗ ಗರಜಾಕರಣವುದಯದ ಪದಿನಾಲ್ಕು ಗಳಿಗೆಯೊಳಗೆ ಕವಿತ್ವ.

ವಿಷಯ : ಹಾಲಸ್ಯಕ್ಷೇತ್ರದ ಅಧಿಪತಿಯಾದ ಸೌಂದರೇಶನ ಲೀಲೆಗಳ ವರ್ಣನೆ.

ವಿಶೇಷ : ಗ್ರಂಥದ ಮೊದಲನೆಯ ಪತ್ರ ಸ್ವಲ್ಪ ಮುರಿದು ಲುಪ್ತವಾಗಿದೆ. ೨,೧೬೭ ಈ ಗರಿಗಳು ಮುರಿದಿವೆ.

—ವೈಸಿಬಿ

354

ಕೆ. ೧೧೫೪/೧	**ಹಾಲಾಸ್ಯ ಪುರಾಣ**	ಚಂಪು
೧೫.೭″ × ೨.೨″	ಇಮ್ಮಡಿ ಗುರುಸಿದ್ಧ	ಸು. ೧೭೭೦
೧–೧೯೫ ಪತ್ರ	೮ ಪಂಕ್ತಿ	೭೮ ಅಕ್ಷರ

ಆದಿ : ಶ್ರೀ ಮುರಿಗ್ಯಾಶಾಂತ ವೀರೇಶ್ವರಾಯ ನಮಃ ॥ ಪರಶುಪುರದ ನಿರಾಭಾಕೆ ಮುದ್ವೀರ ದೇಶಿಕೇಂದ್ರಾಯ ನಮಃ ॥ ಸುಂದರೇಶ್ವರನ

ಹಾಲಸ್ಯ ಪುರಾಣವ ಬರೆವುದಕ್ಕೆ ಶುಭಮಸ್ತು ॥ ಆಯುರಾರೋಗ್ಯ ಐಶ್ವರ್ಯಮಸ್ತು ॥ ವೃತ್ತ ॥

ಶ್ರೀಮನ್ಮೀನಾಕ್ಷ್ಯಧೀಶಂ ಮಧುರಿಮಗುಣಕೋಶಂ ಮಹಾನಂದ
ವೇಶಂ ।
ಸ್ವಾಮಂಚನ್ಮೌಲಿಭಾಗಂ ಮಲಿನನರಹತ ಭಾಗಂ ಮನೋರಮ್ಯವೇಗಂ
ಕಾಮಾಂದಧ್ವಾಂತ ಸೂರ್ಯಂಕಲಿತ ಸಕಲಶೌರ್ಯಂ ಕಲಾಶಾಲಿ
ಧೈರ್ಯಂ
ಕ್ಷೇಮ ಪ್ರಾರಂಭಮಂ ಮಾಳೆಮಗತಿ ದಯೆಯಿಂ ಸುಂಧರೇದ್ರಂಥ
ರೇಂದ್ರಂ ॥ ೧ ॥

ಅಂತ್ಯ : ಮ॥ ಸುರನಾಥಾರ್ಜಿತ ಭೋಗಮೋಕ್ಷದ ಚತುಷ್ಷಟ್ಟಲೀಲಾವಹಾ
ಸ್ಫುರಿತಾಂತರ್ಬಹಿರಂಗ ಯುಗ್ಮವಿಲ ಸತ್ಸದ್ವಾದ ಶಾಂತ್ಯಶ್ರಯ ।
ತರದಿಂ ಶಾಂಭವ ಭಕ್ತಿಲಿಂಗಮಯ ಸರ್ವಾದಿತ್ಯ ರೂಪಾಜ್ವಲ
ದ್ಗುರು ಮಂತ್ರಾತ್ಮಕಸಾಂತ ಪಾಪೋ ಶಿವಲಿಂಗೇಶಾನ ಸತ್ಸುಂಧರಾ
॥ ೧೬೬ ॥

ವಿಷಯ : ಹಾಲಸ್ಯಕ್ಷೇತ್ರದ ಅಧಿಪತಿಯಾದ ಸೌಂದರೇಶನ ಅರುವತ್ತು ನಾಲ್ಕು ಲೀಲೆಗಳ ವರ್ಣನೆ.

ವಿಶೇಷ : ಅಸಮಗ್ರ. ಇದೇ ಕಟ್ಟಿನಲ್ಲಿ ವಾತುಲಾಗಮ, ಅಷ್ಟಾವರಣ ವಿವೇಕ ಸ್ತೋತ್ರ ಮತ್ತು ಕೈವಲ್ಯಸಾರ ಎಂಬ ಗ್ರಂಥಗಳಿವೆ.

—ವೈಸಿಬಿ

355

ಕೆ. ೧೫೪೩/೨೧	**ಹಾಲಾಸ್ಯ ಪುರಾಣದ ನಾಂದ್ಯ**	ಕಂದ
೧೧.೨″ × ೧.೯″	?	?
೬೧-೬೩ ಪತ್ರ	೧೦ ಪಂಕ್ತಿ	೫೭ ಅಕ್ಷರ

ಆದಿ : ಹಾಲಾಸ್ಯಪುರಾಣವ ಕಂದ ನಾಂದ್ಯವ ಬರೆವುದಕ್ಕೆ ಶುಭಮಸ್ತು ॥
ಶ್ರೀಮನ್ಮೀನಾಕ್ಯಾಧೀಶಂ ಮಧುರಿಮಗುಣಕೋಶಂ ಮಹಾನಂದ
ವೇಶಂ
ಸೋಮಾಂಚನ್ಮೌಲಿಭಾಗಂ ಮಲಿನರಹಿತಂ ಭೋಗಂ ಮನೋರಮ್ಯ
ವೇಗ್ಯಂ

ಕಾಮಾಂಧ ಧ್ವಾಂತ ಸೂರ್ಯ್ಯಂ ಕಲಿತ ಸಕಲ ಶೌರ್ಯಂ ಕಲಾಶಾಲಿ ಧೈರ್ಯ್ಯಂ
ಕ್ಷೇಮ ಪ್ರಾರಂಭಮುಂ ಮಾಳ್ಕೆಮಗತಿದಯೆಯಿಂ ಸುಂದರೇಂದ್ರಂ ಧರೇಂದ್ರಂ ॥ ೧ ॥

ಅಂತ್ಯ : ಶ್ರೀಘನ ಮಾರ್ಗ್ಗ ಕಚಂಭವ
ಮೇಘ ಸಮೀರಂ ಮಹೇಂದ್ರ ಮಂದಿರ ದೈವಂ
ಸಾಗಧನುದ್ಭವ ಪುರಹರ
ನಾಗಘನ ಸಾರಂಗನೊವುಗದ್ದಿ ಶಿವಲಿಂಗಂ ॥ ೬೪ ॥

ವಿಷಯ : ಹಾಲಾಸ್ಯ ಪುರಾಣದ ಕಂದಗಳ ನಾಂದೀ ಪದ್ಯಗಳು.

ವಿಶೇಷ : ಇದರಲ್ಲಿ ೬೪ ಪದ್ಯಗಳಿವೆ. ಆದಿಯ ಒಂದು ವೃತ್ತವನ್ನುಳಿದರೆ ಮಿಕ್ಕ ವೆಲ್ಲಾ ಕಂದ ಪದ್ಯಗಳು. ಅವುಗಳು 'ಶಿವಲಿಂಗಂ' ಎಂಬ ಅಂಕಿತ ದಿಂದ ಮುಗಿಯುತ್ತವೆ. ಇದೇ ಕಟ್ಟಿನಲ್ಲಿ ನೀಲಾಂಬಿಕಾ ಲಲಿತ ಸ್ತೋತ್ರ, ಹಾಲಾಸ್ಯ ವಸ್ತುಕ ಪುರಾಣದ (ಸುಂದರೇಶ್ವರನ) ನಾಂದ್ಯ ಇತ್ಯಾದಿ ೩೧ ಗ್ರಂಥಗಳಿವೆ.

—ಕೆಆರ್‌ಎಸ್

356

ಕ. ೬೭೫	**ಹಾಲಾಸ್ಯ ಮಾಹಾತ್ಮ್ಯ**	ಗದ್ಯ
೨೦" × ೧.೩"	ಕಳಲೆ ನಂಜರಾಜ	ಸು. ೧೭೪೦
೧–೩೦೭ ಪತ್ರ	೫ ಪಂಕ್ತಿ	೭೭ ಅಕ್ಷರ

ಆದಿ : ಶುಭಮಸ್ತು ॥
ಶ್ಲೋಕ॥ ಮಾತಾಮಹ ಮಹಾಶೈಲಂ ಮಹಸ್ತದ ಪಿತಾಮಹಂ
ಕಾರಣಂ ಜಗತಾಂ ವಂದೆ ಕಂಠಾದು ಪರಿವಾರಣಂ ॥
ಟೀಕು॥ ಗಿರಿರಾಜನಾದ ಹಿಮವತ್ಪರ್ವತನೆ ಮಾತಾಮಹನಾಗಿಯುಳ್ಳ ಪಿತಮಹನಿಲ್ಲದ । ಕಂಠದಿಂದುಪರಿಭಾಗದಲ್ಲಿ ಗಜಸ್ವರೂಪನಾದ ಜಗತ್ತಿಗೆ ಕಾರಣನಾದ ತೇಜಸ್ಸನು ವಂದಿಸುವೆ ॥ ೧ ॥ ಯಿಾ ರೀತಿ ಯಲ್ಲಿಯಿರುವ ವಿಘ್ನೇಶ್ವರಗೆ ನಮಸ್ಕಾರವೆಂಬುದರ್ಥ ॥

ಅಂತ್ಯ : ಯಿಾ ಹಾಲಸ್ಯಕ್ಷೇತ್ರ ವೈಭವವನು ಬಹಳವಾಗಿ ಹೇಳುವದರಿಂದೇನು । ಭಕ್ತಿಯಿಂದ ಹೇಳುವನು ಕೇಳುವನು ಪಾಪಂಗಳ ಕೊಡಹಿಯಿಹ ಲೋಕ ಪರಲೋಕಂಗಳಲ್ಲಿ ಅನುಪಮ ಸುಖಂಗಳನನುಭವಿಸಿ ಕಡೆಗೆ

ಸಾಯುಜ್ಯನೆಂಬ ಪೆಸರನುಳ್ಳ ಪರಮ ಮುಕ್ತಿಯನ್ನೇದುವನು । ಆದಿ ಯಲ್ಲಿ ನಿಮ್ಮಿಂದ ಶ್ರೇಷ್ಠವಾದ ಲಿಂಗವು ಅದ್ಭುತವಾದ ತೀರ್ಥಉ ಉತ್ತಮವಾದ ಶಿವಕ್ಷೇತ್ರಉ ಕೇಳಲ್ಪಟ್ಟಿತು । ಅದುಯನ್ನಿಂದ ಹೇಳ ಲ್ಪಟ್ಟಿತು । ಸಕಲರು ಕಷ್ಟಂಗಳ ದಾಂಟಲಿ । ಸಕಲರು ಭದ್ರಂಗಳ ಪಡೆಯಲಿ । ಸಕಲರು ಸದ್ಗತಿಯನ್ನೈದಲಿ । ಸಕಲರಿಗು ಶುಭವಾಗಲಿ । ಯಿಾ ಪ್ರಕಾರ ಸರ್ವಜ್ಞನಾದ ಸೂತ ಪುರಾಣಿಕನು ಪ್ರಾರ್ಥಿಸಿ ಸಕಲ ಮುನಿಗಳನು ಕೃಪಾದೃಷ್ಟಿಯಿಂದನುಗ್ರಹಿಸಿ ಶಿವಧ್ಯಾನ ಪರನಾದನು । ಚಂದ್ರವಂಶೋದ್ಭವರಾದ ಬಾರದ್ವಾಜ ಸಗೋತ್ರದಾಶ್ವಲಾಯನ ಸೂತ್ರದಋಗ್ವೇದಿಗಳಾದ ಮಹಿಶೂರ ದಳವಾಯಿ ದೊಡ್ಡೈಯ್ಯನವರ ಪೌತ್ರರಾದ ಕಳಲೆ ವೀರರಾಜೈಯ್ಯನವರ ಪುತ್ರರಾದ ನಂಜರಾಜೈ ಯ್ಯನವರು ಸ್ಕಾಂದ ಪುರಾಣದೊಳ್ಪೇಳಿರ್ದ ಹಾಲಸ್ಯಪತಿಯಾದ ಸೌಂದರೇಶನ ಅರವತ್ತುನಾಲ್ಕು ಲೀಲೆಗಳಂ ಕರ್ಣಾಟಕೋಕ್ತಿ ಯಿಂದಖಿಲರರಿವಂತೆ ಪೇಳಿದ ನಂಜರಾಜ ವಾಣೀವಿಲ್ಸಾಸವೆಂಬೀ ಟೀಕಿ ನಲ್ಲಿ ಅಗಸ್ತ್ಯವಸಿಷ್ಠಾದ್ಯನಂತ್ತ ಮುನಿಗಳಿಗೆ ಆನಂದ ಕಾನನದಿಂದ ಕದಂಬವನ ಪ್ರವೇಶವೆಂದು ಪೇಳ್ದಲ್ಲಿಗೆ ಅಧ್ಯಾಯ ೭೧ಕ್ಕೆ ಮಂಗಳ ಮಹಾ ॥

ವಿಷಯ : ಹಾಲಸ್ಯಪತಿ ಸೌಂದರೇಶನ ಅರವತ್ತುನಾಲ್ಕು ಲೀಲೆಗಳು.

ವಿಶೇಷ : ಸ್ಫುಟಾಕ್ಷರ. ಸಮಗ್ರ.

—ವೈಸಿಬಿ

357

೬ ೧೩೧೭	**ಹಾಲಾಸ್ಯ ಮಾಹಾತ್ಮ್ಯ**	ಗದ್ಯ.
೧೪.೯" × ೨"	ಕಳಲೆ ನಂಜರಾಜ	ಸು. ೧೭೪೦
೧–೧೬೭ ಪತ್ರ	೯ ಪಂಕ್ತಿ	೯೦ ಅಕ್ಷರ

ಆದಿ : ಶ್ರೀ ಸಾಂಬಶಿವಾಯ ನಮಃ ॥ ಶ್ರೀ ಪಾರ್ವತ್ಯೇ ನಮಃ ॥ ಶ್ರೀ ನೀಲ ಕಂಠ ಭಾಷ್ಯಕಾರ ಮಹಾ ಗುರುವೇ ನಮಃ ॥ ಶ್ರೀ ಹರದತ್ತಾರ್ಯ ಗುರುವೇ ನಮಃ ಶ್ರೀಮದ್ಹಾಲಸ್ಯಕ್ಷೇತ್ರ ಮಹಿಮಯನ್ನು ಕನ್ನಡಿಸಿ ಬರವುದಕ್ಕೆ ಶುಭಮಸ್ತು ॥ . . . . . ದೆ ಕಂಠಾದು ಪರಿವಾರಣಂ ॥ ಟೀ ॥ ಗಿರಿರಾಜನಾದ ಹಿಮವತ್ಪರ್ವತನೆ ಮಾತಾಮಹನಾಗಿಯುಳ್ಳ ಪಿತಾಮಹನಿಲ್ಲದ ಕಂಠದಿಂದುಪರಿಭಾಗದಲ್ಲಿ ಗಜಸ್ವರೂಪನಾದ,

ಜಗತ್ತಿಗೆ ಕಾರಣನಾದ ತೇಜಸ್ಸನು . . . . . ಐಶ್ವರಂಪರಮಂ ತತ್ವಮಾದಿ ಮಧ್ಯಾಂತ ವರ್ಜಿತಂ । ಆಧಾರಂ ಸರ್ವಲೋಕಾನಾಮನಾಧಾರಮುಪಾಸ್ಮಹೆ

ಅಂತ್ಯ : ಈ ಹಾಲಸ್ಯಕ್ಷೇತ್ರ ವೈಭವವನು ಬಹಳವಾಗಿ ಹೇಳುವದರಿಂದೇನು ಭಕ್ತಿಯಿಂದ ಹೇಳುವನು ಕೇಳುವನು ಪಾಪಂಗಳ ಕೊಡಹಿ ಇಹಲೋಕ ಪರಲೋಕಂಗಳಲ್ಲಿ ಅನುಪಮ ಸುಖಂಗಳನನುಭವಿಸಿ ಕಡೆಗೆ ಸಾಯುಜ್ಯವೆಂಬ ಪೆಸರನುಳ್ಳ ಪರಮಮುಕ್ತಿಯನ್ನೈದುವನು ಆದಿಯಲ್ಲಿ ನಿಮ್ಮಿಂದಾ ಶ್ರೇಷ್ಠವಾದ ಲಿಂಗವು ಅದ್ಭುತವಾದ ತೀರ್ಥವು ಉತ್ತಮವಾದ ಶಿವ ಕ್ಷೇತ್ರವು ಕೇಳಲ್ಪಟ್ಟಿತೂ ಅದುಯನ್ನಿಂದಾ ಹೇಳಲ್ಪಟ್ಟಿತೂ ಸಕಲರು ಕಷ್ಟಂಗಳ ದಾಂಟಲಿ ಸಕಲರು ಭದ್ರಂಗಳ ಪಡೆಯಲಿ ಸಕಲರು ಸದ್ಗತಿಯನ್ನೈದಲಿ ಸಕಲರಿಗೂ ಶುಭವಾಗಲಿ ಯೀ ಪ್ರಕಾರ ಸರ್ವಜ್ಞನಾದ ಸೂತ ಪೌರಾಣಿಕನ ಪ್ರಾರ್ಥಿಸಿ ಸಕಲ ಮುನಿಗಳನು ಕೃಪಾದೃಷ್ಟಿಯಿಂದನುಗ್ರಹಿಸಿ ಶಿವಧ್ಯಾನಪರನಾದನೂ ॥ ಶ್ರೀ ಚಂದ್ರವಂಶೋದ್ಭವರಾದ ಭಾರಧ್ವಾಜ ಗೋತ್ರದಾಶ್ವಲಾಯನ ಸೂತ್ರದ ರುಗ್ವೇದಿಗಳಾದ ಮಹಿಶೂರದಳವಾಯಿ ದೊಡ್ಡಯ್ಯನವರ ಪುತ್ರರಾದ ಕಳಲೆ ವೀರರಾಜಯ್ಯನವರ ಪುತ್ರರಾದ ನಂಜರಾಜ್ಯನವರು ಸ್ಕಂದ ಪುರಾಣದೊಳ್ಪೇಳ್ದ ಹಾಲಸ್ಯ ಪತಿಯಾದ ಸೌಂದರೇಶನ ಅರುವತ್ತು ನಾಲ್ಕು ಲೀಲೆಗಳಂ ಕರ್ನಾಟಕೋಕ್ತಿಯಿಂದಖಿಲರರಿ ವಂತೆ ಪೇಳಿದ ನಂಜರಾಜ ವಾಣೀವಿಲಾಸತೆಂಬೀ ಟೀಕಿನಲ್ಲಿ ಅಗಸ್ತ್ಯ ವಸಿಷ್ಠಾದ್ಯನಂತ ಮುನಿಗಳಿಗೆ ಆನಂದಕಾನನದಿಂದ ಕದಂಬವನ ಪ್ರವೇಶವೆಂದು ಪೇಳ್ದಲ್ಲಿಗೆ ಅಧ್ಯಾಯ ೭೧ಕ್ಕಂ ಮಂಗಳ ಮಹಾ ಶ್ರೀ.

ವಿಷಯ : ಸೌಂದರೇಶನ ಅರುವತ್ತು ನಾಲ್ಕು ಲೀಲೆಗಳ ವರ್ಣನೆ.

ವಿಶೇಷ : ಮೊದಲನೆಯ ಪತ್ರ ಅರ್ಧ ಮುರಿದು ಲುಪ್ತವಾಗಿದೆ.

—ವೈಸಿಬಿ

358

ಕೆ. ೧೩೩೨	**ಹಾಲಾಸ್ಯ ಮಾಹಾತ್ಮ್ಯ**	ಗದ್ಯ
೧೮.೮″ × ೨.೩″	ಕಳಲೆ ನಂಜರಾಜ	ಸು. ೧೭೪೦
೧–೧೬೬ ಪತ್ರ	೧೦ ಪಂಕ್ತಿ	೮೩ ಅಕ್ಷರ

ಆದಿ : ಶ್ರೀಗುರುಭ್ಯೋಂ ನಮಃ × × × ಸ್ವಭಾನುನಾಮ ಸಂವತ್ಸರದ

ಚೈತ್ರ ಶು ೧ಲ್ಲು ಶ್ರೀಮದಾಲಸ್ಯ ಕ್ಷೇತ್ರ ಮಹಿಮೆಯಂನ್ನು ಕನ್ನಡಿಸಿ ಬರವುವಕ್ಕೆ ಐಶ್ವರ್ಯಾಭಿವೃದ್ಧಿರಸ್ತು ॥ × × ಯಿಂತೀಯಾದಿ ಪುರಾಣವಾದ ಸ್ಕಾಂಧದಲ್ಲಿ ಅಗಸ್ತ್ಯಸಂಹಿತೆಯಲ್ಲಿ ಹಾಲಾಸ್ಯ ಮಾಹಾತ್ಮ್ಯೆಯಂ ಕರ್ನಾಟಕ ಭಾಷೆಯಿಂದಾ ವಿರಚಿಸಲ್ಪಟ್ಟ ಮಹಿಶೂರ ಸೇನಾಧಿಪತಿ ದೊಡ್ಡರಾಜಗರ್ಭಾರ್ಬ್ಧಿ ಚಂದ್ರವೀರರಾಜ ತನೂಜ ತನೂಭವ ನಂಜರಾಜ ವಾಣೀವಿಲಾಸವೆಂಬ ಟೀಕಿನಲ್ಲಿ ಪೀಟಿಕಾ ವರ್ಣನೆ.

ಅಂತ್ಯ : ಚಂದ್ರವಂಶೋದ್ಭವರಾದ ಭಾರದ್ವಾಜಗೋತ್ರದಾಶ್ವಲಾಯನಸೂತ್ರ ದಾರುಗ್ವೇದಿಗಳಾದಾ ಮೈಸೂರು ದಳವಾಯಿದೊಡ್ಡೈಯ್ಯನವರ ಪೌತ್ರರಾದಾ ಕಳಿಲೆಯ ವೀರರಾಜೈಯನವರ ಪುತ್ರರಾದಾ ನಂಜರಾಜೈಯ್ಯನವರು ಸ್ಕಾಂದಪುರಾಣದೊಳ್ಪೇಳಿದಾ ಹಾಲಾಸ್ಯಪತಿಯಾದಾ ಸೌಂಧರೇಶನ ಅರುವತ್ತುನಾಲ್ಕು ಲೀಲೆಗಳಂ ಕರ್ಣಾಕೋಕ್ತಿಯಿಂದಖಿಳಜನರರಿವಂತೆ ಪೇಳಿದ ನಂಜರಾಜ ವಾಣೀವಿಲಾಸವೆಂಬ ಕೃತಿ ಸಮಾಪ್ತವಾದುದೀ ಕೃತಿಗೆ ನಿತ್ಯ ಜಯ ಮಂಗಳ ಮಹಾಶ್ರೀ ಶ್ರೀ.

ವಿಷಯ : ಮಧುರೆ ಹಾಲಾಸ್ಯನಾಥನಾದ ಸುಂದರನ ೬೪ ಲೀಲೆಗಳು.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ.

—ಜಿಜಿಎಂ

359

ಕೆ. ೧೬೯೧ **ಹಾಲಾಸ್ಯ ಮಾಹಾತ್ಮ್ಯ** ಗದ್ಯ

೧೧.೫″ × ೨.೨″ ಕಳಲೆ ನಂಜರಾಜ ಸು. ೧೭೪೦

೧೪೯—೨೧೨ ಪತ್ರ ೧೩ ಪಂಕ್ತಿ ೫೬ ಅಕ್ಷರ

ಆದಿ : ಸ್ತನ್ಯದಾನದಿಂ ಶೂಕರ ಶಿಶುಗಳ ಸಲಹಿದನೂ । ಮಹೇಶ್ವರನ ನಾಲ್ವತ್ತೈದನೆ ಲೀಲೆ ಹೇಳಲ್ಪಟ್ಟಿತೂ । ಯಿದು ಮಹಾಪಾಪವನು ಮಹಾತಾಪವಂನ್ನು ಪರಿಹರಿಸುವದೂ ॥ ಇಂತಿಯಾದಿ ಪುರಾಣವಾದ ಸ್ಕಾಂದದಲ್ಲಿ ಅಗಸ್ತ್ಯಸಂಹಿತೆಯಲ್ಲಿ ಹಾಲಾಸ್ಯಮಹಾತ್ಮೆಯಂ ಕರ್ನಾಟಕ ಭಾಷೆಯಿಂದ ವಿರಚಿಸಲ್ಪಟ್ಟು ಮಹೀಶೂರ ಸೇನಾಧಿಪತಿ ದೊಡ್ಡರಾಜ ಗರ್ಭಾರ್ಬ್ಧಿ ಚಂದ್ರವೀರರಾಜ ತನೂಭವ ನಂಜರಾಜ ವಾಣೀ

ವಿಲಾಸವೆಂಬೀ ಟೀಕಿನಲ್ಲಿ ಸೂಕರ ಶಿಶುಗಳಿಗೆ ಸ್ತನ್ಯಪಾನವನಿತ್ತ ರೆಂಬಲ್ಲಿಗೆ ಅಧ್ಯಾಯ ೫೧ಕ್ಕಂ ಮಂಗಳ ಮಹಾಶ್ರೀ ಶ್ರೀ.

ಅಂತ್ಯ : ಸಕಲರಿಗೂ ಶುಭವಾಗಲೀ ಆ ಪ್ರಕಾರ ಸರ್ವಜ್ಞನಾದ ಸೂತಪುರಾಣಿ ಕನು ಪ್ರಾರ್ಥಿಸಿ ಸಕಲ ಮುನಿಗಳ ಕೃಪಾದೃಷ್ಟಿಯಿಂದನುಗ್ರಹಿಸಿ ಶಿವ ಧ್ಯಾನಪರನಾದನು ॥ ಚಂದ್ರವಂಶೋದ್ಭವರಾದ ಭಾರದ್ವಾಜಗೋತ್ರ ದಾಶ್ವಲಾಯನ ಸೂತ್ರ ಋಗ್ವೇದಿಗಳಾದ ಮಹೀಶೂರ ದಳವಾಯಿ ದೊಡ್ಡಯ್ಯನವರ ಪಉತ್ರರಾದ ಕಳಲೆ ವೀರರಾಜಯ್ಯನವರ ಪುತ್ರ ರಾದ ನಂಜರಾಜೈಯ್ಯನವರು ಸ್ಕಂಧಪುರಾಣದೊಳ್ಪೇಳಿರ್ದ ಹಾಲಾಸ್ಯ ಪತಿಯಾದ ಸಉಂಧರೇಶನ ಅರುವತ್ತುನಾಲ್ಕು ಲೀಲೆಗಳಂ ಕರ್ನಾಟಕ ಸೂಕ್ತಿಯಿಂದಪಿಳರರಿವಂತೆ ಪೇಳಿದ ನಂಜರಾಜ ವಾಣೀವಿಲಾಸವೆಂ ಬೀ ಕೃತಿ ಸಮಾಪ್ತವಾದೀ ಕೃತಿಗೆ ಮಂಗಳ ಮಹಾಶ್ರೀ ಶ್ರೀ.

ವಿಷಯ : ಮಧುರೆಯ ಸುಂದರೇಶ್ವರನ ೬೪ ಲೀಲೆಗಳು.

ವಿಶೇಷ : ಅಸಮಗ್ರ. ಶಿವನ ಅರವತ್ತನಾಲ್ಕು ಲೀಲೆಗಳಲ್ಲಿ ಈ ಕಟ್ಟು ೪೬ ರಿಂದ ೬೪ ಲೀಲೆಗಳನ್ನೊಳಗೊಂಡಿದೆ.

—ಜಿಜಿಎಂ

360

ಕೆ. ೧೬೦೩ **ಹಾಲಾಸ್ಯ ಮಾಹಾತ್ಮ್ಯ** ಗದ್ಯ

೧೧.೪" × ೨" ಕಳಲೆ ನಂಜರಾಜ ಸು. ೧೬೪೦

೧-೧೪೮ ಪತ್ರ ೧೨ ಪಂಕ್ತಿ ೪೨ ಅಕ್ಷರ

ಆದಿ : ಸಿದ ಬರವದಕ್ಕೆ ಶುಭಮಸ್ತು ॥ ಶ್ಲೋಕಾ ॥

. . . . ಠಾದು ಪರಿವಾರಣಂ ॥

ಟೀಕೂ ॥ ಗಿರಿರಾಜನಾದ ಹಿಮವತ್ಪರ್ವತನೆ ಮಾತಾಮಹನಾಗಿ ಯುಳ್ಳ . . . . ಮಹಸಿಲ್ಲದ ಕಂಠದಿಂದಂ ಪರಿಭಾಗದಲ್ಲಿ ಜಗಸ್ವರೂಪ ನಾದ ಜಗತ್ತಿಗೆ ಕಾರಣನಾದ ತೇಜಸ್ಸನೂವಂದಿಸುವೆ । ಯಿಾ ರೀತಿ ಯಲ್ಲಿರುವ ವಿಘ್ನೇಶ್ವರಗೆ ನಮಸ್ಕಾರವೆಂಬುದರ್ಥ ॥ ೧ ॥

ಅಂತ್ಯ : ಅವರ ತಾಯಾದ ಸೂಕರಿಯೂ ಅವರ ತಂದೆಯಾದ ಸೂಕರನಾದವನು ಯಿವರಿಬ್ಬರೂ ಮುನಿಶಾಪದಿಂದ ಬೇಟೆಯುನಾಡಬಂದ ರಾಯನೊಡನೆ ಯುದ್ಧ ಮಾಡಿ ಸಉಂಧರೇಶ್ವರನು ವಾಮಭಾಗದಲ್ಲಿವಡವೆರಸಿದ

ಶರೀರವನುಳ್ಳ ಪಾರ್ವತಿಯೊಡನೆ ಶಿವನು ವೃಷಭಧ್ವಜ ಭೂಷಿತದನಾ ವಿಮಾನವನೆ ಶ್ರೀಶಂಕರನು ಸ್ವೇದೆಯಿಂದ ಆ ವನಾಂತರದಲ್ಲಿ ಸಂಚರಿಶಿದನೂ । ಆಗ ದೇವಿಯೂ ಸೂರ್ಯಕಿರಣಗಳಿಂದ ಸಂತಪ್ತರಾದ ಸೂಕರಿ ಶಿಶುಗಳ ನೋಡಿ । ಆ ಶಿಶುಗಳನೂ ನೋಡು ನೋಡೆಂದ್ದು ಪ್ರಭುಗಳಿಗೆ ತೋರಿಶಿದಳೂ । ಆ ವರಾಹ ಶಿಶುಗಳ ನೋಡಿ । ವರದಾನ ವಿಚಕ್ಷಣನಾದ ಶಿವನು ಅವರ ತಾಯ ರೂಪವ ಧರಿಶಿ । ಆ ಶಿಶುಗಳಿಗೆ ಸಂನ್ಯವನಿತು ಬಲವನೂ । ಜ್ಞಾನವನೂ ಸಾಮರ್ಥ್ಯವನೂ ಮನುಷ್ಯ ಶರೀರವನೂ ಪರಾಕ್ರಮವನೂ ಕೊಟ್ಟು । ಬಳಿಕ ಸಾಂಬಮೂರ್ತಿ ಅದೃಶ್ಯನಾದನೂ ॥ ಮೊಲೆನಾಲೆಂಬ ಅಮೃತವನುಂಡು । ಬಲಜ್ಞಾನಾದಿ ಸದ್ಗುಣಗಳಿಂದ ಮುಕ್ತನಾಗಿ । ಮುಖಮಾತ್ರ ವರಾಹಪರಾಗಿ । ಉಳಿದ ಶರೀರಲು ಮಾನಸಶರೀರ ಉಳ್ಳವರಾಗಿ ಕ್ಷಣಮಾತ್ರದಲ್ಲಿ ಶಿಶುಗಳು ಬೆಳದಉ । ಕಾಳಕೂಟ ವಿಷದಿಂದ ವಿರಾಜಿಸುವ ಕಂಠವನುಳ್ಳ ಹಾಲಸ್ಯನಾಥನಾದ ಭಗವಂತನುಯಿಾ ಪ್ರಕಾರ ।

ವಿಷಯ : ಹಾಲಸ್ಯಪತಿ ಸೌಂದರೇಶನ ಅರವತ್ತುನಾಲ್ಕು ಲೀಲೆಗಳು.

ವಿಶೇಷ : ಅಸಮಗ್ರ ಪ್ರತಿ.

—ವೈಸಿಬಿ

361

ಕೆ. ೧೭೦೬	ಹಾಲಾಸ್ಯ ಮಾಹಾತ್ಮ್ಯ	ಗದ್ಯ
೧೭.೪" × ೨"	ಕಳಲೆ ನಂಜರಾಜ	ಸು. ೧೭೪೦
೧-೨೪೪ ಪತ್ರ	೭ ಪಂಕ್ತಿ	೭೦ ಅಕ್ಷರ

ಆದಿ : ಶ್ರೀ ಹಯಗ್ರೀವಾಯ ನಮಃ ॥ ಶ್ರೀಮದ್ಹಾಲಾಸ್ಯ ಮಹಾತ್ಮೆ ಬರಯುವದಕ್ಕೆ ನಿರ್ವಿಘ್ನಮಸ್ತು ॥ ಶ್ಲೋಕಾ ॥

ಮಾತಾಮಹ ಮಹಾಶೈಲಂ ಮಹಸ್ತದಪಿತಾಮಹಂ
ಕಾರಣಂ ಜಗತಾಂ ವಂದೆ ಕಂಠಾದುಪರಿವಾರಣಂ ॥ × × ×

ಶ್ರೀಕೈಲಾಸವೆಂದುವೊಂದು ಮಹಾಗಿರಿಗಳಲ್ಲಿ ಉತ್ತಮ ಪರ್ವತವಿರುವದು ಅದು ಶ್ರೀಪತಿಯಾದ ನಾರಾಯಣ ವೊದಲಾದ ದೇವತೆಗಳಿಂದ ಭೋಗಮೋಕ್ಷಂಗಳಿಗೋಸ್ಕರ ಸೇವಿಸಲ್ಪಟ್ಟಿಹದು.

ಅಂತ್ಯ : ಇಂತಿಯಾದಿಪುರಾಣವಾದ ಸ್ಕಾಂದದಲ್ಲಿ ಅಗಸ್ತ್ಯಸಂಹಿತೆಯಲ್ಲಿ ಹಾಲಾಸ್ಯ ಮಹಾತ್ಮೆಯಂ ಕರ್ನಾಟಕ ಭಾಷೆಯಿಂದಾ ವಿರಚಿಸಲ್ಪಟ್ಟ

ಶ್ರೀ ಚಂದ್ರವಂಶೋದ್ಭವರಾದ ಭಾರದ್ವಾಜ ಗೋತ್ರದಾಶ್ವಲಾಯನ ಸೂತ್ರರಾದ ಋಗ್ವೇದಿಗಳಾದ ಮಹೀಶೂರ ದಳವಾಯಿ ದೊಡ್ಡೈಯ್ಯನವರ ಪೌತ್ರರಾದ ಕಳಲೆ ವೀರರಾಜಯ್ಯನವರ ಪುತ್ರರಾದ ನಂಜರಾಜಯ್ಯನವರು ಕಂನಡಿಸಿದ ಹಾಲಾಸ್ಯಮಾಹಾತ್ಮೆಯು ಸಮಾಪ್ತ ಮಂಗಳ ಮಹಾಶ್ರೀ ಶ್ರೀ.

ವಿಷಯ : ಮಧುರೆಯ ಸುಂದರೇಶ್ವರನ ೬೪ ಲೀಲೆಗಳು.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ.

—ಜಿಜಿಎಂ

362

ಕೆ. ೧೫೪೩/೨೨ ಹಾಲಾಸ್ಯವಸ್ತುಕಪುರಾಣದ ನಾಂದ್ಯ ವೃತ್ತ

೧೧.೨″ × ೧.೯″ ಇಮ್ಮಡಿ ಮುರಿಗಾಸ್ವಾಮಿ ?

೬೩–೭೦ ಪತ್ರ ೧೦ ಪಂಕ್ತಿ ೫೬ ಅಕ್ಷರ

ಆದಿ : ಶ್ರೀಮದ್ವಿತೀಯ ಮುರಿಗಾಸ್ವಾಮಿಗಳು ನಿರೂಪಿಸಿದ ಹಾಲಾಸ್ಯ ವಸ್ತುಕಪುರಾಣದ ಸುಂಧರೇಶ್ವರನಾ ನಾಂದ್ಯವ ಬರವುದಕ್ಕೆ ಸುಭಮಸ್ತು ॥ ವೃತ್ತಂ ॥

ನಿರುತಾನಂದಕರಂ ನೀರಂತರವರಂ ನಿರ್ಧೂತದೋಷೋತ್ಕರಂ
ಪರಿಪೂರ್ಣಾಂ ಪರಬಿಂದು ವರ್ಣಮುಜ ಚಂಪಾರಾಶರಪ್ರದಂ ವಸ್ತುತಂ
ಗಿರಿಜಾವಕ್ತ್ರ ಸರೋಜಭೃಂಗಮತುಳಾಕಾರಂ ಕಳಾಮಂದಿರಂ
ಪರಮೇಶಂನುತ ಸುಂಧರೇಶಮನಿಶಂ ರಕ್ಷಿಪ್ಪುದೆಮಂ ಸದಾ ॥ ೧ ॥

ಅಂತ್ಯ : ಕುಸುಮಶರನಿರತಿಶಯ ವೃತ್ತಂ ॥

ಜಿತರತಿ ಪತಿಯತಿ ನುತಿಗತಿ ರತಿ ಶತದಳಂ ಭುವನ ಪಾದಂ
ಹತಿವಿರಹಿತ ಮತಿಜಿತಯಮನತಿಶಯಮನತಿಶಯ ಕೃತಿ ನಿಧಿಹಿತ
ಗುಣಯುತಂ ಗಣಸಮೇತಂ
ವಿತವಿತರಣ ನಿಳಯನಘಗಿರಿಪವಿ ಶತಮುಖ ಸುತವರಸು ಶರದಂ
ನಿಗಮಾವಾದಂ ।
ಪ್ರತಿಮತವನದಿ ಕಳಶನೀ ನಿರುಪಮಿತ ಮಹಿಮ ಸಿಧಿ ಪೊರೆಗಚಲ
ತೋಂಟದ ಮಹೇಶಂ ॥ ೬೨ ॥

ಶ್ರೀಮದ್ಗುರು ಮುರಿಗಾಸ್ವಾಮಿಗಳು ನಿರೂಪಿಸಿದ ಸುಂಧರೇಶ್ವರ ಸ್ತೋತ್ರಂ ಪರಿಪೂರ್ನ್ನ೯ಂ ಸಮಾಪ್ತ ಮಂಗಳ ಮಹಾ ಶ್ರೀ.

ವಿಷಯ : ಸುಂದರೇಶ್ವರನನ್ನು ಕುರಿತ ಸ್ತೋತ್ರ ಪದ್ಯಗಳು

ವಿಶೇಷ : ಇದರಲ್ಲಿ ೬೨ ಪದ್ಯಗಳಿವೆ. ಬರಹ ಚೆನ್ನಾಗಿದೆ. ಇದೇ ಕಟ್ಟಿನಲ್ಲಿ ಸೀಲಾಂಬಿಕಾ ಲಲಿತ ಸ್ತೋತ್ರ, ದೇವೀ ಸ್ತೋತ್ರ (ಇಮ್ಮಡಿ ಮುರಿಗಾ ಸ್ವಾಮಿಗಳು ವಿರಚಿಸಿದ್ದು) ಇತ್ಯಾದಿ ೩೧ ಗ್ರಂಥಗಳಿವೆ.

—ಕೆಆರ್‌ಎಸ್

363

ಕೆ. ೬೬೦/೬ ಹಿರಿಯ ಮಂತ್ರಗೋಪ್ಯ (ಟೀಕು)

೧೯.೩" × ೨.೨" ಚೆನ್ನಬಸವಣ್ಣ ಸು. ೧೭೬೦

೧೧೩–೧೬೫ ಪತ್ರ ೧೦ ಪಂಕ್ತಿ ೧೦೫ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯೆ ನಮಃ। ಚೆಂನಬಸವರಾಜದೇವರು ನಿರೂಪಿಸಿದ ಫದಮಂತ್ರಗೋಪ್ಯದ ವ್ಯಾಕ್ಯಾನನ ಬರವುದಕ್ಕೆ ಸುಭಾಮಸ್ತು। ಪ್ರಥಮದಲ್ಲಿ ಪೀಠಿಕ ಸೂತ್ರ॥ ಶ್ರೀಮನ್ಮಹಾದೇವನಖಂಡನದ್ವಯಿಂ ನಿತ್ಯನಿರಂಜನ ಪರಂಜ್ಯೋತಿಸ್ವರೂಪ ಸಚ್ಚಿದಾನಂದ ಬ್ರಂಹ್ಮ . . . . . ನಿಃಖಲ ಪರಶಿವಲಿಂಗದಿಂದೆ। ನಿರ್ಮಿತವಾದ ಜಗದ್ವೈಭವದೊಳಗೆ। ವೇದಾಂತ ಸಿದ್ಧಾಂತಂಗಳು ಮೊದಲಾದ ಮಾರ್ಗ್ಗ೯ಂಗಳಿಗುತ್ತರವೆನಿಸುವ। ವೀರಸೈವಸಿದ್ಧಾಂತ ಮಾರ್ಗ್ಗ೯ದಲ್ಲಿ। ಆ ಪರಶಿವಲಿಂಗದ ಸ್ವಲೀಲಾನಂದ ಭಕ್ತಿಭಾವ ಸೂತ್ರವಿಡಿದು ಆಚರಿಸುತ್ತ। ಆ ಲಿಂಗದ ಸಮೇತ ಚಿತ್ಶಕ್ತಿಸ್ವರೂಪವಪ್ಪ ಷಟ್ಸ್ಥಲಜ್ಞಾನ ಪ್ರಕಾಶಮಧ್ಯದಲ್ಲಿ। ಲಿಂಗಾಂಗ ಸಂಯೋಗ ಸಮರಸವೆಂಬ ಶಿವಯೋಗಸಮಾದಿಯ ಮಹಾ ಹೊಲಬನಂದನಿಂದಾತನೆ ನಿತ್ಯನಿಜಲಿಂಗೈಕ್ಯನು। ಅಸಾಧ್ಯಸಾಧಕನು। ಆತನೆ ಜಗತ್ಪೂಜ್ಯನೆಂದು। ಆ ಶಿವಯೋಗಮಾರ್ಗ್ಗ೯ದ ಲಕ್ಷಣವನು। ಸಿದ್ಧರಾಮೇಶ್ವರಂಗೆ। ಚೆಂನಬಸವರಾಜದೇವರು ತಂಮ ಸ್ವಾನುಭಾವ ಪ್ರಸಂನ ವಾಖ್ಯಂಗಳಿಂದೆ ಬೋಧಿಸುತ್ತಿರ್ದ೯ರದರ ವಿಸ್ತಾರವೆಂತೆನಲು। ಆ ಸದ್ಯೋರ್ಥ ಸ್ವರೂಪವಪ್ಪ ಶಾಸ್ತ್ರಕ್ಕೆ ಮಂತ್ರಗೋಪ್ಯವೆಂಬ ನಾಮಪ್ರಸಿದ್ಧವಾದ ನಿರ್ವಚನ॥

ಅಂತ್ಯ : ಯಿಂತೀ ನಿಭಾ೯ವ ಪ್ರಸಾದ ಪ್ರಸಂಗ ಮಹಾಘನಲಿಂಗ ಕೂಡಲಚೆಂನಸಂಗೈಯನಲ್ಲಿ ಏಕಾರ್ಥವಾದ ಭೇದವು ಸಾಫಕತ್ವವು। ಅನು

ಭಾವಮೂರ್ತಿ ಪರಮಜಂಗಮ ಪ್ರಭುದೇವರ ಕರುಣ ಬಸವಂಣಂ ಗಾಯಿತ್ತೆಂದೂ । ಚೆಂನಬಸವೇಶ್ವರದೇವರು ನಿರೂಪಮಂ ಕೊಡುತ್ತ ವಿದ್ದಾರೂ ॥ ೨೭ ॥ ಚೆಂನಬಸವೇಶ್ವರದೇವರು ನಿರೂಪಿಸಿದ ಹಿರಿಯ ಮಂತ್ರಗೋಪ್ಯ ಸಮಾಪ್ತ ಮಂಗಳ ಮಹಾ ಶ್ರೀ ।

ಪುರುವರ್ಗ್ಗದ ಮಡಿವಾಳೈಯ್ಯನ ಹಸ್ತಮುಟ್ಟಿದ ಬರಹಾ ಸಮಾಪ್ತ ಮಂಗಳ ಮಹಾ ಶ್ರೀ ॥

ವಿಷಯ: ವೀರಶೈವಸಿದ್ಧಾಂತ.

ವಿಶೇಷ: ಸ್ಫುಟಾಕ್ಷರ. ಸಮಗ್ರಕೃತಿ. ಇದರೊಡನೆ ಪಂಚೀಕರಣ, ವಿಶ್ರಾ ರ್ಪಣ (ಟೀಕು), ಅಕ್ಕಗಳ ಸೃಷ್ಟಿಯ ವಚನ (ಟೀಕು), ಪ್ರಭುದೇವರ ಸೃಷ್ಟಿಯವಚನ (ಟೀಕು), ಏಕೋತ್ತರಶತಸ್ಥಲದ ಟೀಕೆ ಈ ಕೃತಿ ಗಳೂ ಇವೆ.

— ಎಸ್ ಎನ್ ಕೆ

364

ಕೆ. ೭೪೮/೭	**ಹಿರಿಯ ಮಂತ್ರಗೋಪ್ಯ**	ಗೀತ, ಪದ್ಯ
೧೨.೫" × ೨.೨"	ಚೆನ್ನಬಸವಣ್ಣ	ಸು. ೧೭೬೦
೩೪–೪೨ ಪತ್ರ	೧೩ ಪಂಕ್ತಿ	೭೬ ಅಕ್ಷರ

ಆದಿ: ಶ್ರೀಗುರು ಬಸವಲಿಂಗಾಯ ನಮಃ । ಅವಿಘ್ನಮಸ್ತು ॥ ಚೆಂನಬಸ ವೇಶ್ವರದೇವರು ನಿರೂಪಿಸಿದ ಹಿಱಿಯ ಮಂತ್ರಗೋಪ್ಯ ॥ ಪಲ್ಲವ ॥ ನೋಡಲಿಲ್ಲ ನುಡಿಯಲಿಲ್ಲ ಕೂಡಲಿಲ್ಲಿಪಸ್ರತಿಮಂಗೊಡಲೂಯಿಲ್ಲ ॥ ಸೂತ್ರ । ಯೀಪಲ್ಲವ ಪದನೆಂಮ । ಸೂತ್ರಸೂತ್ರವೆಂದು ಮುಂದೆ ಹೇಳುವಯಲ್ಲಾ ಪದಂಗಳರ್ತ್ಥವನ್ನು ಸಂಕೋಚವಾಗಿ ಗರ್ಭೀಕರಿಸಿ ಕೊಂಡಿಹುದೆಂದಱಿವುದು। ಅಂತೆಂದೊಡೆ

ಅಂತ್ಯ: ವಾಚ್ಯ। ಭಕ್ತ್ಯಾದ್ವೈತ್ಯಾಂತವಹ ಷಡಾಂಗ ಭಕ್ತಿಯು ವಿಕ್ರ । ಕ್ರಿಶಕ್ತಿ ವಿರಕ್ತಿ । ಮುಕ್ತಿಯೆಂಬ ಷಡ್ವಿಧಾಂಗ ಕಳೆಗಳೇಕಾಕಾರವಾಗಿ । ಆ ಶರಣನು । ಅಂಗವನು । ಕಳೆಯನೂ ವಿಾಱಿದನದೆಂತೆಂದಡೆ । ಯಿಾ ಯಲ್ಲವನಂಗೀಕರಿಸಿಕೊಂಡಿರುತ್ತಂಯಿಹ । ಘನಲಿಂಗದ ನಿರ್ಬ್ಬಾವ ಪ್ರಸಾದವು । ನಿರ್ಭಾವಪ್ರಸಾದವು । ನಿರ್ಭ್ರಾಂತಿಪ್ರಾಣಗ್ರಾಹಕನಾದ ಶರಣಂಗೆ। ಆ ನಿರ್ಭಾವಪ್ರಸಾದವೆನಿಸುವ ಪರಮತತ್ವವೊಯೇಕಾರ್ತ್ಥ।

ಅದು ಹೆಂಗೆಂದಡೆ । ನಿಭಾ೯ವ । ನಿಭ್ರಾಂತಿ । ದ್ವಂದವೂಯೇಕಾತ್ಮವಾಯಿತ್ತಾಗಿ ಜ್ಞಾನಶೂನ್ಯವೆನಿಸೂದು । ಯಿಂತೀ ನಿಭಾ೯ವಪ್ರಸಾದ ಪ್ರಸಂನಮಹಾಘನ ಲಿಂಗ ಕೂಡಲ ಚೆಂನಸಂಗೈಯ್ಯನಲ್ಲಿ । ಯೇಕಾತ್ಮವಾದ ಭೇದವೂ । ಸಾಧಕತ್ವವೂ । ಅನುಭಾವಮೂತಿ೯ ಪರಮ ಜಂಗಮ ಪ್ರಭುದೇವರ ಕರುಣವಾಯಿತ್ತು । ಬಸವಂಣಂಗಾಯಿತ್ತೆಂದು। ಚೆಂನಬಸವೇಶ್ವರದೇವರು ನಿರೂಪಮಂ ಕೊಡುತ್ತಂಯಿದ್ದಾರೂ।೨೭॥ ಚೆಂನಬಸವೇಶ್ವರದೇವರು ನಿರೂಪಿಸಿದ ಮಂತ್ರಗೋಪ್ಯ ಸಮಾಪ್ತ ಮಂಗಳ ಮಹಾ ಶ್ರೀ ॥

ವಿಷಯ : ವೀರಶೈವಸಿದ್ಧಾಂತ.

ವಿಶೇಷ : ಇದರೊಡನೆ ಕರಣಹಸಿಗೆ, ಏಕೋತ್ತರ ಶತಸ್ಥಲ ಮೊದಲಾದ ೨೯ ಗ್ರಂಥಗಳಿವೆ. ಕೊನೆಯಲ್ಲಿ ೯ ಸಂಕೀರ್ಣ ಓಲೆಗಳಿವೆ. ಕೆಲವು ಗ್ರಂಥಗಳಲ್ಲಿ ಶಕಟರೇಫದ ಬಳಕೆ ಇದೆ. ಕೆಲವು ಗರಿಗಳ ಅಂಚು ಮುರಿದು ಶಿಥಿಲವಾಗಿವೆ.

—ಎಸ್ ಎನ್ ಕೆ

365

ಕ. ೯೯೯/೭	ಹಿರಿಯ ಮಂತ್ರಗೋಪ್ಯ	ಗೀತ, ಪದ್ಯ
೮″ × ೨.೨″	ಚೆನ್ನಬಸವಣ್ಣ	ಸು. ೧೧೬೦
೫೧–೬೫ ಪತ್ರ	೧೪ ಪಂಕ್ತಿ	೪೮ ಅಕ್ಷರ

ಆದಿ: ಶ್ರೀಗುರುಬಸವಲಿಂಗಾಯ ನಮಃ ॥ ಚೆಂನಬಸವೇಶ್ವರದೇವರು ನಿರೂಪಿಸಿದ ಹಿಱಿಯ ಮಂತ್ರಗೋಪ್ಯ ॥

ಪಲ್ಲವ । ನೋಡಲಿಲ್ಲ ನುಡಿಯಲಿಲ್ಲ ಕೂಡಲಿಲ್ಲದಪ್ರತಿಮಂಗೊಡಲಿಲ್ಲ ॥

ಸೂತ್ರ । ಯಿ಼ಾ ಪಲ್ಲವ ಪದನೆಂದು ಸೂತ್ರ । ಸೂತ್ರವೆಂದು ಮುಂದೆ ಹೇಳುವಯಲ್ಲಾ ಪದಂಗಳತ್ಥ೯ವನು ಸಂಕೋಚವಾಗಿ ಗಭಿ೯ೀಕರಿಸಿ ಕೊಂಡಿಹುದೆಂದಱುವುದು ॥ ಅದೆಂತೆಂದಡೆ ॥ ಯೆಲ್ಲಾ ಪದಂಗಳತ್ಥ೯ಙು ಯಿ಼ಾಪಲ್ಲವ ಪದನೆನಿಸುವ ಮೂಲ ಸೂತ್ರದಲ್ಲಿಯೆ ಗಭಿ೯ೀಕೃತವಾಗಿ ಬೀಜದೊಳಗಡಗಿದ ವೃಕ್ಷದಂತೆ ತೋಱಿಕೆಯಿಲ್ಲದೆ ತೋಱಲುಳ್ಳದೆಂದಱುವುದು.

ಅಂತ್ಯ : . ಸೊಡರಿಲ್ಲದಾ ಬೆಳಗು ಕುಡಿವಱದ ಪ್ರಭೆಯೊಳಗ

ಪಿಡಿವ ಕರ್ಪುರದುರಿಯು ಮರದೊರಗಿತು
ಗಡಣವಿಲ್ಲದ ಬೆಳಗು ಕುಡಿಯು ಬೆಳಗಿನ ನಡುವೆ
ಹಿಡಿಹಿಡಿಯು ಬಯುಯಲಾದ ಕೂಡಲ ಚೆಂನಸಂಗಯ್ಯನೂ ॥ ೫
ಚೆಂನಬಸವೇಶ್ವರದೇವರು ನಿರೂಪಿಸಿದ ಮಂತ್ರಗೋಪ್ಯದ ಪದಂಗಳು ಸಮಾಪ್ತ ಮಂಗಳ ಮಹಾಶ್ರೀ ಶ್ರೀ.

ವಿಷಯ : ವೀರಶೈವಸಿದ್ಧಾಂತ.

ವಿಶೇಷ : ಇದೇ ಕಟ್ಟಿನಲ್ಲಿ ಕರಣಹಸಿಗೆಯೇ ಮೊದಲಾದ ಇತರ ೮ ಕೃತಿಗಳಿವೆ. ಅನ್ಯವಾದ ಕೋಲಾಹಲವೆಂಬ ಕೃತಿ ತೆಲುಗು ಭಾಷೆಯದು.

—ಜಿಜಿಎಂ

366

ಕೆ. ೧೧೮೪/೭	**ಹಿರಿಯ ಮಂತ್ರಗೋಪ್ಯ**	ಗೀತ, ಪದ್ಯ
೧೦.೭″ × ೨.೧″	ಚೆನ್ನಬಸವಣ್ಣ	ಸು. ೧೧೬೦
೧೪೫–೧೬೮ ಪತ್ರ	೧೩ ಪಂಕ್ತಿ	೫೬ ಅಕ್ಷರ

ಆದಿ : ಚೆಂನಬಸವೇಶ್ವರದೇವರ ನಿರೂಪಿಸಿದ ಹಿರಿಯ ಮಂತ್ರಗೋಪ್ಯ ॥
ಪಲ್ಲವ ॥ ನೋಡಲಿಲ್ಲ । ನುಡಿಯಲಿಲ್ಲ । ಚಕ್ರತಿಮಂಗೊಡಲುಯಿಲ್ಲಾ ॥ ಸೂತ್ರ ॥ ಪಲ್ಲವ ಪದನೆಂದು । ಸೂತ್ರಸೂತ್ರವೆಂದು । ಮುಂದೆ ಹೇಳುವೆಯಲ್ಲಾ ಪದಂಗಳರ್ಥವನು । ಸಂಕೋಚವಾಗಿ । ಗರ್ಭೀಕರಿಸಿ ಕೊಂಡಿಹುದೆಂದರುವುದು । ಅದೆಂತೆಂದೊಡೆ । ಯಲ್ಲಾ ಪದಂಗಳರ್ಥವು । ಯಿಾಪಲ್ಲವ ಪದನೆನಿಸುವ । ಮೂಲಸೂತ್ರದಲ್ಲಿಯು ಗರ್ಭೀಕೃತವಾಗಿ । ಬೀಜದೊಳಗಡಗಿದ ವೃಕ್ಷದಂತೆ । ತೋರುಕೆಯಿಲ್ಲದೆ ತೋಜಲುಳ್ಳದೆಂದೆರುವುದು ।

ಅಂತ್ಯ : ಯಿಂತೀ ನಿರ್ಭಾವಪ್ರಸಾದ ಪ್ರಸಂನ ಮಹಘನಲಿಂಗ । ಕೂಡಲ ಚೆಂನಸಂಗಯ್ಯನಲ್ಲಿ । ಯೇಕಾರ್ಥವಾದ ಭೇದವು ಸಾಧಕತ್ವವು । ಅನುಭಾವ ಮೂರ್ತಿ ಪರಮ ಜಂಗನು ಪ್ರಭುದೇವರ ಕರುಣ । ಬಸವಂಣಂಗಾಯಿತ್ತೆಂದು । ಚೆಂನಬಸವೇಶ್ವರದೇವರು ನಿರೂಪಮಂ ಕೊಡುತಂ ವಿದ್ಯಾರೂ ॥ ೨೭ ॥ ಚೆಂನಬಸವೇಶ್ವರದೇವರು ನಿರೂಪಿಸಿದ ಹಿರಿಯ ಮಂತ್ರಗೋಪ್ಯ ಸಮಾಪ್ತ ಮಂಗಳ ಮಹಾಶ್ರೀ.

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಸಮಗ್ರ ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಕರಣಹಸಿಗೆ, ಮಿಶ್ರಾರ್ಪಣ, ಪಂಚೀಕರಣ, ಸೃಷ್ಟಿಯ ವಚನಗಳೇ ಮೊದಲಾಗಿ ಒಟ್ಟು ಏಳು ಕೃತಿಗಳಿವೆ.

[ಕಹಪ್ರವಸೂ. ಚ. ಸಂ ಪುಟ ೫೪೫ ಕ್ರಮಾಂಕ 2059 ನೋಡಿ]

—ಕೆಆರ್ಎಸ್

367

ಕೆ. ೧೨೦೧/೬ | ಹಿರಿಯ ಮಂತ್ರಗೋಪ್ಯ | ಗೀತ, ಪದ್ಯ

೧೭.೩″ × ೧.೭″ | ಚೆನ್ನಬಸವೇಶ್ವರ | ಸು. ೧೧೬೦

೩೭–೪೭ ಪತ್ರ | ೮ ಪಂಕ್ತಿ | ೭೬ ಅಕ್ಷರ

ಆದಿ: ಶ್ರೀಗುರು ಬಸವಲಿಂಗಾಯ ನಮಃ। ಚೆನ್ನಬಸವೇಶ್ವರ ದೇವರು ನಿರೂಪಿಸಿದ ಹಿರಿಯ ಮಂತ್ರಗೋಪ್ಯ ॥ ರಾಗ ಮೌಳಿ ॥
ಪಲ್ಲ ॥ ನೋಡಲಿಲ್ಲ ನುಡಿಯಲಿಲ್ಲ ಕೂಡಲಿಲ್ಲದಪ್ರತಿಮಂಗೊಡಲು ಯಿಲ್ಲ ॥

ಸೂತ್ರ ॥ ಯೀ ಪಲ್ಲವ ಪದನೆಂದು ಸೂತ್ರವೆಂದು ಮುಂದೆ ಹೇಳುವ ಯೆಲ್ಲಾ ಪದಂಗಳರ್ಥವನು ಸಂಕೋಚವಾಗಿ ಗರ್ಭೀಕರಿಸಿಕೊಂಡಿಹುದೆಂದರಿವುದು ॥ ಅದೇಕೆಂದೆಡೆ ಯೆಲ್ಲಾ ಪದಂಗಳರ್ಥವುಯೀ ಪಲ್ಲವ ಪದನೆನಿಸುವ ಮೂಲ ಸೂತ್ರದಲ್ಲಿಯೆ ಗರ್ಭೀಕೃತವಾಗಿ ಬೀಜದೊಳಡಗಿದ ವೃಕ್ಷದಂತೆ ಕೋರಿಕೆಯಿಲ್ಲದೆ ತೋರವುಳ್ಳದೆಂದರಿವುದು ।

ಅಂತ್ಯ : ಏಕಾರ್ಥವಾದ ಭೇದವು ಸಾಧಕತ್ವವು । ಅನುಭಾವಮೂರ್ತಿ ಪರಮ ಜಂಗಮ ಪ್ರಭುದೇವರ ಕರುಣ ಬಸವಣ್ಣಗಾಯಿತ್ತೆಂದು ಚೆಂನಬಸವೇಶ್ವರ ದೇವರು ನಿರೂಪಮಂ ಕೊಡುತ್ತಂವಿದ್ದಾರು ॥ ಚೆನ್ನಬಸವೇಶ್ವರ ದೇವರು ನಿರೂಪಿಸಿದ ಹಿರಿಯ ಮಂತ್ರಗೋಪ್ಯ ಸಮಾಪ್ತ ಮಂಗಳ ಮಹಾ ಶ್ರೀ.

ವಿಷಯ : ವೀರಶೈವ ರಹಸ್ಯ.

ವಿಶೇಷ : ಸಮಗ್ರ. ಇದೇ ಕಟ್ಟಿನಲ್ಲಿ ಪವಮಂತ್ರಗೋಪ್ಯ, ಏಕೋತ್ತರ, ಶತಸ್ಥಲ, ಪ್ರಭುದೇವರ ಸೃಷ್ಟಿಯ ವಚನ, ಮಹದೇವಿಯಕ್ಕನ ಸೃಷ್ಟಿಯ ವಚನ, ಪಂಚೀಕರಣದ ಪದಗಳು, ಕರಣ ಹಸಿಗೆ ಎಂಬ ಗ್ರಂಥಗಳಿವೆ.

—ವೈಸಿಬಿ

368

ಕೆ. ೧೨೦೩/೨ **ಹಿರಿಯ ಮಂತ್ರಗೋಪ್ಯ** ಟೀಕು, ಪದ್ಯ

೧೪.೯" × ೨" ಚೆನ್ನಬಸವೇಶ್ವರ ಸು. ೧೧೬೦

೧–೩೩ ಪತ್ರ ೧೪ ಪಂಕ್ತಿ ೮೭ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ ॥ × × × ಚೆನ್ನಬಸವೇಶ್ವರ ದೇವರು ನಿರೂಪಿಸಿದ ಹಿರಿಯ ಮಂತ್ರಗೋಪ್ಯ । ಚೆನ್ನಬಸವೇಶ್ವರ ದೇವರು ಷಟ್ಸ್ಥಲ ಜ್ಞಾನ ಚಕ್ರವರ್ತಿಯಪ್ಪ ಚೆನ್ನಬಸವೇಶ್ವರ ಸ್ವಾಮಿಗಳೆಂಬ ಮಹಾಜ್ಞಾನ ಗುರುಮೂರ್ತಿಯ ನಿರೂಪಿಸಿದ ತಮ್ಮಂಶೀ ಭೂತವಾದ ನಿತ್ಯಾನಿತ್ಯ ವಸ್ತು ವಿವೇಕವಿಹಮುಕ್ತರಾರ್ಥ ಫಲ ಭೋಗ ವಿರಾಗ ಸಮಾಧಿ ಷಟ್ಸಂಪತ್ತಿ ಮುಮುಕ್ತತ್ವವೆಂಬ ಸಾಧನ ಚತುಷ್ಟಯ ಸಂಪನ್ನರಾದ ಸಕಲ ಶಿವಶರಣ್ಯರುಗಳು ಅಱಿದು ಆಚರಿಸಿ ಕೃತಾರ್ಥರಾಗಲಿಯೆಂದು । ತಮ್ಮ ಸ್ವಾನುಭಾವ ಉತ್ಕೃಷ್ಟ ವಾಕ್ಯಂಗಳಿಂದೆ ಹಾಲುಕ್ಕಿ ಮೇಲ್ಪರಿದೋಪಾದಿಯಲ್ಲಿ ಹಿಂದೆ ಕೋಟ್ಯಾನು ಕೋಟಿಯುಗದೊಳು ಅಬ್ಧಿಯಲ್ಲಿ ಜಲಚರ ಪ್ರಾಣಿಗಳ ನೊಂದ ನೀಱಲೀಯ್ಯದೆನೊಸಲಾಗಿಯಿಂ ಸುಟ್ಟು ವಡಬಾಗ್ನಿ ಮಂಟಪ ದಲ್ಲಿ ಮುಹೂರ್ತವ ಮಾಡಿಕೊಂಡು ಪಾರ್ವತಿದೇವಿಯುವರಿಗೆ ಶ್ರಿಮದ ನಂತ ಕೊಟ್ಟು ಬ್ರಹ್ಮಾಂಡ ಪಿಂಡಾಂಡ ತತ್ವ ತಾತ್ವಿಕ ಮಾಯಾ ಬಿಂದು ಮುಖ್ಯ ಚೇತನಾ ಚೇತನಾತ್ಮಕವಪ್ಪ ವಿಶ್ವಪ್ರಪಂಚಿನೊಳ ಹೊಱಗೆಲ್ಲಿಯ ಪರಿಪೂರ್ವ ವಾಗಿ ಸರ್ವಾಧಾರಕತ್ವ । ಸರ್ವಸಾಕ್ಷಿಕತ್ವ ಸರ್ವಶಕ್ತಿ ಕತ್ವ ।

ಅಂತ್ಯ : ತನ್ನ ಕಾರುಣ್ಯಾನುಂ ಮಹಾಗಣಂಗಳಿಗೆ ಬಿನ್ನೈಸುತ್ತಿರ್ದ್ದನಾ ಚೆನ್ನ ಬಸವೇಶ್ವರನಂ ನಿರೂಪವನು ಮಹಾ ಪ್ರಸಾದವೆಂದು ಕೈಕೊಂಡು ಸರ್ವಕಾಲದಲ್ಲೂ ಭಕ್ತಿ ಮುಕ್ತರಾಗಿ ತ್ರಿವಿಧ ಭಕ್ತಿಯಿಂದ ಕ್ರಿ ತಪ್ಪದೆ ಕ್ರಿವಿಡಿದಾಚರಿಸಿ ಬದುಕುವದೆಂಬು ವರತೆಯ ರಾಮಯ್ಯ ದೇವರು ಗಳು ನಿರೂಪಿಸಿದ ಮಂತ್ರಗೋಪ್ಯದ ಯಿಪ್ಪತ್ತೇಳು ಪದಂಗಳ ವ್ಯಾಖ್ಯಾನದ ವಾಜ್ಯದೊಳಗೆ ಪರಿಪೂರ್ನವಾಗಿಪ್ಪ ಶಿವಾನುಭಾವ ದರ್ಥಂಗಳಲ್ಲಿ ಕಾಶಿಯ ಶಿವಲಿಂಗ ದೇಶಿಕೇಂದ್ರನು ತನಗೆ ಕರುಣಿಸಿದ ಷ್ಟರ್ಥಮಂ ತೋಂಟದಾಚಾರ್ಯನು ಅನುಮಿತ ಬಂಧುತ್ವದೆಂ ನೆನೆದು ನೋಡಿ ದ್ವಿತೀಯಾಚಾರ್ಯರಾದ ಷಡುಸ್ಥಲಾನುಭಾವಿಗಳು

ಹೇಳುವ ಪ್ರಸಾದ ವಚನಂಗಳ ವಡಂಬಡಿಕೆಯಿಂದ ಬರದ ಮಂತ್ರ × × × ಸಮಾಪ್ತ ಮಂಗಳ ಮಹಾ ಶ್ರೀ.

ವಿಷಯ : ಶಿವಯೋಗ ರಹಸ್ಯ ವಿವರಣೆ.

ವಿಶೇಷ : ಶಕಟರೇಫದ ಪ್ರಯೋಗವಿದೆ. ಇದೇ ಕಟ್ಟಿನಲ್ಲಿ ಪ್ರಭುದೇವರ ಸೃಷ್ಟಿಯ ವಚನ. ಮಹಾದೇವಿಯಕ್ಕಗಳ ಸೃಷಿಯ ವಚನ, ಪಂಚೀಕರಣ, ಕರಣಹಸಿಗೆ, ಏಕೋತ್ತರ ಶತಸ್ಥಲ ಎಂಬ ಗ್ರಂಥಗಳಿವೆ.

—ವೈಸಿಬಿ

369

ಕೆ. ಬಿ. ೬೩೬/೭	**ಹಿರಿಯ ಮಂತ್ರಗೋಪ್ಯ**	ಗದ್ಯ
೧೩" × ४"	ಚೆನ್ನಬಸವೇಶ್ವರ	ಸು. ೧೧೬೦
೧೦೭–೧೧೯ ಪತ್ರ	೧೧ ಪಂಕ್ತಿ	೫೦ ಅಕ್ಷರ

ಆದಿ : ಶ್ರೀ ಗುರಬಸವಲಿಂಗಾಯ ನಮಃ । ಹಿರಿಮಂತ್ರಗೋಪ್ಯ ಬರೆವದಕ್ಕೆ ಸುಭಮಸ್ತು ॥ ನಿರ್ವಿಘ್ನಮಸ್ತು ॥ ಶ್ರೀ ಗುರವೆ ಗತಿ ॥

ರಾಗ । ಬವುಳಿ । ಕಾಳರಜ್ಜೆ ।

ಪಲ್ಲ ॥ ನೋಡಲಿಲ್ಲ ನುಡಿಯಲಿಲ್ಲ
ಕೂಡಲಿಲ್ಲದ ಪ್ರತಿಯಗೊಡಲುಯಿಲ್ಲ ॥

ಸೂತ್ರ ॥ ಯಿಾಪಲ್ಲವ ಪದ ಸೂತ್ರವೆಂದು । ಮುಂದೆ ಪೇಳುವೆಲ್ಲ ಪದಂಗಳರ್ಥವನು । ಸಂಕೋಚವಾಗಿ ಗರ್ಭೀಕರಿಸಿಕೊಂಡಿಹುದೆಂದರಿವುದು । ಅದೆಂತೆಂದೊಡೆ । ಯಲ್ಲಾ ಪದಂಗಳರ್ಥವು । ಯಿಾ ಪಲ್ಲವ ಪದವೆನಿಸುವ । ಮೂಲ ಸೂತ್ರದಲ್ಲಿಯೆ ಗರ್ಭೀಕೃತವಾಗಿ । ಬೀಜದೊಳಡಗಿದ ವೃಕ್ಷದಂತೆ । ತೋರಿಕೆಯಿಲ್ಲದೆ ತೋರುವದೆಂದರಿವುದು ॥

ಅಂತ್ಯ : ಅದು ಹ್ಯಾಗೆಂದಡೆ ॥ ನಿಭ್ರಾವ ನಿಭ್ರಾಂತಿದ್ವಂದವ । ಯೇಕಾರ್ಥವಾಯಿತ್ತಾಗಿ । ಜ್ಞಾನಶೂಂನ್ಯವೆನಿಸುವದು । ಯಿಂತೀ ನಿಭ್ರಾವ ಪ್ರಸಾದವ । ಪ್ರಸಂಗ ಮಹಾಘನಲಿಂಗ । ಕೂಡಲ ಚಂನಸಂಗೈಯನಲ್ಲಿಯೇಕಾರ್ಥವಾದ ಭೇದವ ಸಾಧಕತ್ವವ ಅನುಭಾವಮೂರ್ತಿ । ಪರಮಜಂಗಮ ಪ್ರಭುದೇವರ ಕರುಣ ಬಸವಂಗಿಗಾಯಿತ್ತೆಂದು ಚಂನಬಸವೇಶ್ವರ ದೇವರು । ನಿರೂಪಮಂ ಕೊಡುತ್ತಲಿರ್ದರು ॥ ೨೭ ॥ ಶ್ರೀ ಶ್ರೀ ॥

ಚಂನಬಸವೇಶ್ವರ ದೇವರು ನಿರೂಪಿಶಿದ ಮಂತ್ರಗೋಪ್ಯ ಸಂಪೂರ್ಣ ಮಂಗಳ ಮಹಾ ಶ್ರೀ ॥

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಕೃತಿ ಸಮಗ್ರ. ಸ್ಫುಟಾಕ್ಷರ. ಇದರೊಡನೆ ಕರಣಹಸಿಗೆ, ಪಂಚೀಕರಣ ಪದ, ಅಕ್ಕಗಳ ಸೃಷ್ಟಿಯ ವಚನ, ಪ್ರಭುದೇವರ ಸೃಷ್ಟಿಯ ವಚನ, ಮಿಶ್ರಾರ್ಪಣ, ಮಂಗಳ ಮಹಾ ಶ್ರೀ, ಶೈವಾಗಮ ಪೂಜಾವಿಧಾನ, ವಾಕ್ಯಕದಂಬವಚನ, ಶಾಂಭವೀಜ್ಞಾನ ದೀಕ್ಷಾಬೋಧೆ, ರುದ್ರಜಪ ಈ ಕೃತಿಗಳಿವೆ.

—ಎಸ್ಎನ್ಕೆ

370

ಕೆ. ೧೦೦೦/೪	**ಹಿರಿಯ ಮಂತ್ರಗೋಪ್ಯ (ಸಟೀಕು)**	ಹಾಡು
೧೬.೮″ × ೨″	ಚೆನ್ನಬಸವಣ್ಣ	ಸು. ೧೬೦೦
೮೬–೯೪ ಪತ್ರ	೧೪ ಪಂಕ್ತಿ	೮೭ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ ॥ ಚೆಂನಬಸವೇಶ್ವರ ದೇವರು ನಿರೂಪಿಸಿದ ಹಿರೇ ಮಂತ್ರಗೋಪ್ಯ ॥ ರಾಗ ಬಹುಳಿ ತಾಳ ರಚ್ಚೆ ॥

ಪಲ್ಲ ॥ ನೋಡಲಿಲ್ಲ ನುಡಿಯಲಿಲ್ಲ
ಕೊಡಲಿಲ್ಲದಪ್ರುತಿಮಂಗೊಡಲುಯಿಲ್ಲ ॥

ಸೂತ್ರ ॥ ಯಿೂ ಪಲ್ಲವ ಪದಸೂತ್ರ ಸೂತ್ರವೆಂದು ಮುಂದೆ ಹೇಳುವ ಯಲ್ಲ ಪದಂಗಳರ್ತ್ಥವನು ಸಂಕೋಚವಾಗಿ ಗರ್ಭೀಕರಿಸಿಕೊಂದಿಹುದೆಂದರಿವುದು

ಅಂತ್ಯ : ಪರನು ಜಂಗಮ ಪ್ರಭುದೇವರ ಕರುಣ ಬಸವಣ್ಣಂಗಾಯಿತ್ತೆಂದು ಚೆಂನಬಸವೇಶ್ವರ ದೇವರು ನಿರೂಪಮಂ ಕೊಡುತ್ತವಿದ್ಯಾರೂ ॥ ೨೭ ॥ ಚೆಂನಬಸವೇಶ್ವರ ದೇವರು ನಿರೂಪಿಸಿದ ಹಿರಿಯ ಮಂತ್ರ ಗೋಪ್ಯ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ.

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಈ ಕಟ್ಟನಲ್ಲಿ ಹಂಸಪವನ ಲಕ್ಷಣ, ಹಾಡುಗಳು, ಬಿರುದಾವಳಿಗಳು ಇತ್ಯಾದಿ ೧೫ ಕೃತಿಗಳಿವೆ. ಅಲ್ಲದೆ ೧–೮೬ ಪತ್ರಗಳಲ್ಲಿ ಉದ್ಧರಣೆಯ ಪಟಲದ ಚಿತ್ರಗಳಿವೆ. ೬–೫೧ ಪತ್ರಗಳಿಲ್ಲ.

—ಜಿಜಿಎಂ

371

ಕೆ. ೧೪೮೯/೧ | **ಹಿರಿಯ ಮಂತ್ರಗೋಪ್ಯ** (ಸಟೀಕು) | ವಚನ, ಟೀಕು

೧೦" × ೨.೧" | ಚೆನ್ನಬಸವಣ್ಣ (ತೋಂಟದಾಚಾರ್ಯ) | ಸು. ೧೧೬೦

೧–೯೧ ಪತ್ರ | ೧೩ ಪಂಕ್ತಿ | ೫೫ ಅಕ್ಷರ

ಆದಿ : ಶ್ರೀ ಗುರು ಬಸವಲಿಂಗಾಯ ನಮಃ ॥ ಷಟ್ಸ್ಥಳ ಚಕ್ರವರ್ತಿಯಪ್ಪ ಚೆಂನಬಸವೇಶ್ವರ ದೇವರು ನಿರೂಪಿಸಿದ ಹಿರಿಮಂತ್ರಗೋಪ್ಯ ॥ ಚೆಂನಬಸವೇಶ್ವರ ದೇವರೆಂಬ ಮಹಾಜ್ಞಾನ ಗುರುಮೂರ್ತಿಗಳು ತಂಮಂಶವಾದ ಶರಣ ಜನಂಗಳು ಅರಿದು ಆಚರಿಸಿ ಕೃತಾರ್ಥರಾಗಲಿ ಯೆಂದು ಸ್ವಾನುಭಾವಪ್ರಸಂಗವುತ್ಕೃಷ್ಟ ವಾಕ್ಯಂಗಳಿಂದ·

ಅಂತ್ಯ : ತೋಂಟದಾಚಾರ್ಯನು ಅನಿಮಿತ್ತಬಂಧುತ್ವದಿಂ ನೆನೆದು ನೋಡಿ ದ್ವಿತೀಯಾಚಾರ್ಯರಾದ ಷಟ್ಸ್ಥಲಾನುಭಾವಿಗಳು ಪೇಳುವ ಪ್ರಸಾದ ವಚನಂಗಳ ವಡಂಬಡಿಕೆಯಿಂದ ಬರದ ಮಂತ್ರಗೋಪ್ಯ ಇಪ್ಪತ್ತೇಳು ಪದಂಗಳ ವ್ಯಾಖ್ಯಾನದ ವಾಚ್ಯಾರ್ಥದಲ್ಲಿ ತಪ್ಪ ಕಂಡಡೆ ತಿದ್ದಿವಪ್ಪವಿಟ್ಟು ಕೊಂಬುವದು × × × ಚೆಂನಬಸವೇಶ್ವರ ದೇವರು ನಿರೂಪಿಸಿದ ಹಿರಿಯಮಂತ್ರ ಗೋಪ್ಯದ ವ್ಯಾಖ್ಯಾನವು ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ × × × ರಾಕ್ಷಸ ಸಂವತ್ಸರದ ಪುಷ್ಯ ಬಹುಳ ೫ಯಲ್ಲುಮಂನೆರವೊಸಲವಾಡದವೋದಿಸುವ ಗಂಗಾಧರ ದೇವರ ಶಿಷ್ಯಕ ರಜಿಬಿ ಮಟದ ಮುರಿಗಯ್ಯನು ಬರಕೊಟ್ಟ ಹಿರೇ ಮಂತ್ರಗೋಪ್ಯ ಸಂಪೂರ್ನ ಮಂಗಳ ಮಹಾ ಶ್ರಿ ಶ್ರೀ.

ವಿಷಯ : ವೀರಶೈವ ಸಿದ್ಧಾಂತ

ವಿಶೇಷ : ಸಮಗ್ರ. ಇದೇ ಕಟ್ಟಿನಲ್ಲಿ ಪ್ರಣವ ಸಂಬಂಧ ಮತ್ತು ದಶವಿಧ ಪಾದೋದಕದ ವಿವರಗಳೆಂಬ ಕೃತಿಗಳಿವೆ

—ಜಿಜಿಎಂ

372

ಕೆ. ೧೫೬೧/೭ | **ಹಿರಿಯ ಮಂತ್ರಗೋಪ್ಯ** | ಪದ್ಯ, ಟೀಕು

೧೩.೫" × ೨.೨" | ಚೆನ್ನಬಸವಣ್ಣ | ಸು. ೧೧೬೦

೨೪೫–೩೨೪ ಪತ್ರ | ೧೩ ಪಂಕ್ತಿ | ೭೦ ಅಕ್ಷರ

ಆದಿ : ಶ್ರೀ ಗುರು ಬಸವಲಿಂಗಾಯ ನಮಃ ॥ ಷಟ್ಸ್ಥಲ ಚಕ್ರವರ್ತಿ ಚೆಂನ

ಬಸವೇಶ್ವರ ದೇವರು ನಿರೂಪಿಸಿದ ಮಂತ್ರಗೋಪ್ಯ ॥ ಚೆಂನಬಸವೇಶ್ವರ ದೇವರೆಂಬ ಮಹಾಗ್ನಾನ ಗುರುಮೂರ್ತಿಯು ತಂಮಂಶವಾದ ಶರಣಜನಂಗಳು ಅರಿದು ಆಚರಿಸಿ ಕೃತಾರ್ಥರಾಗಲಿಯೆಂದು ಸ್ವಾನುಭಾವ ಪ್ರಸನ್ನ ಉತ್ಕೃಷ್ಟ ವಾಕ್ಯಂಗಳಿಂದೆ ಹಾಲುಕ್ಕಿ ಮೇಲುವರಿದೋಪಾದಿಯಲ್ಲಿ × × × ಯಿಪ್ಪತ್ತೇಳು ಪದಂಗಳಾಗಿ ಮಾಡಿ ಗೋಪ್ಯವೆಂಬ ಶಾಸ್ತ್ರವ ಮಾಡಲುದ್ಯೋಗಿಸಿ ನಿರ್ವಿಘ್ನದಿಂದ ಪರಿಸಮಾಪ್ತಿಯಾಗಲೋಸುಗವಾ

ಅಂತ್ಯ : ತಂನ ಕಾರುಂಣ್ಯ ಮಹಾಗಣಂಗಳಿಗೆ ಬಿಂನೈಸುತಿರ್ದನಾ ಚೆಂನಬಸವೇಶ್ವರನ ನಿರೂಪವನು ಮಹಾ ಪ್ರಸಾದವೆಂದು ಕೈಕೊಂಡು ಸಪಾ ಕಾಲದಲ್ಲು ಭಕ್ತಿ ಮುಕ್ತರಾಗಿ ತ್ರಿವಿಧ ಭಕ್ತಿಯಿಂದ ಕ್ರೀತಪ್ಪದೆ ಕ್ರೀವಿಡಿದಾಚರಿಸಿ ಬದುಕುವದೆಂದು ವರತೆಯ ರಾಮೈಯ್ಯ ದೇವರುಗಳ್ನಿರೂಪಿಸಿದ ಮಂತ್ರಗೊಪ್ಯದಿಪ್ಪತ್ತೇಳುಪದಂಗಳ ವಾಕ್ಯಾನದ ವಾಚ್ಯದೊಳಗೆ ಪರಿಪೂರ್ಣ × × × ಸಚ್ಚಿದಾನಂದ ನಿತ್ಯಪರಿಪೂರ್ಣ ಅವಿರಳಪರಂಜ್ಯೋತಿಸ್ವರೂಪ ಷಟ್ಸ್ಥಲ ಕೋವಿದ ಚೆಂನಬಸವೇಶ್ವರ ಸ್ವಾಮಿಗಳು ನಿರೂಪಿಸಿದ ಹಿರೇಮಂತ್ರಗೋಪ್ಯ ಸಮಾಪ್ತವಾದುದೀ ಶಾಸ್ತ್ರಕ್ಕೆ ಮಂಗಳ ಮಹಾ ಶ್ರೀ ಶ್ರೀ.

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ. ಮಂತ್ರಗೋಪ್ಯದ ಟೀಕೆಯ ಕರ್ತೃ ವರತೆಯ ರಾಮೈಯ ದೇವ. ಇದೇ ಕಟ್ಟಿನಲ್ಲಿ ಕರಣ ಹಸಿಗೆ ಮೊದಲಾದ ೭ ಕೃತಿಗಳಿವೆ.

—ಜಿಜಿಎಂ

373

ಕೆ. ೧೭೫೧/೭ — **ಹಿರಿಯ ಮಂತ್ರಗೋಪ್ಯ** — ಹಾಡು

೧೩.೮″ × ೨.೨೪″ — ಚೆನ್ನಬಸವಣ್ಣ — ಸು. ೧೧೬೦

೪೩–೫೩ ಪತ್ರ — ೯ ಪಂಕ್ತಿ — ೫೨ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ ॥ ಚೆಂನಬಸವೇಶ್ವರ ದೇವರು ನಿರೂಪಿಸಿದ ಹಿರಿಯ ಮಂತ್ರಗೋಪ್ಯ ॥ ಪಲ್ಲವ ॥

ನೋಡಲಿಲ್ಲ ನುಡಿಯಲಿಲ್ಲ ಕೂಡಲಿಲ್ಲದಪ್ರತಿಮಂಗೊಡಲುಯಿಲ್ಲ

ಸೂತ್ರ ॥ ಯಿ ಪಲ್ಲವ ಪದನೆಂದು ಸೂತ್ರ । ಸೂತ್ರವೆಂದು ಮುಂದೆ

ಹೇಳುವ ಯಲ್ಲಾ ಪದಂಗಳರ್ತ್ಥವನು ಸಂಕೋಚವಾಗಿ ಗರ್ಭೀಕರಿಸಿ ಕೊಂಡಿಹುದೆಂದರಿವುದು । ಅದೆಂತೆಂದೊಡೆ ಯಲ್ಲಾ ಪದಂಗಳರ್ಥವು ಯಿಾ ಪಲ್ಲವ ಪದನೆನಿಸುವ ಮೂಲ ಸೂತ್ರದಲ್ಲಿಯೆ ಗರ್ಭೀಕೃತವಾಗಿ

ಅಂತ್ಯ : ಪ್ರಭುದೇವರ ಕರುಣ ಬಸವಣ್ಣಗಾಯಿತೆಂದು ಚನ್ನಬಸವೇಸ್ವರ ದೇವರು ನಿರೂಪಮಂ ಕೊಡುತ್ತಲಿದ್ದಾರೂ ॥ ೨೭ ॥ ಚಂನಬಸವೇಶ್ವರ ದೇವರು ನಿರೂಪಿಸಿದ ಹಿರಿಯ ಮಂತ್ರಗೋಪ್ಯ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ.

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ. ಇದರ ಜೊತೆಯಲ್ಲಿ ಮಂತ್ರಗೋಪ್ಯ ಮೊದಲಾದ ಇತರ ಕೃತಿಗಳಿವೆ

—ಜಿಜಿಎಂ

374

ಕೆ. ೧೭೮೮/೬	**ಹಿರಿಯ ಮಂತ್ರಗೋಪ್ಯ**	ಚೌಪದಿ
೧೪.೫" × ೧.೨"	ಚೆನ್ನಬಸವಣ್ಣ	ಸು. ೧೧೬೦
೧೭–೨೦ ಪತ್ರ	೬ ಪಂಕ್ತಿ	೫೦ ಅಕ್ಷರ

ಆದಿ : ಶ್ರೀ ಗಣಾಧಿಪತಯೆ ನಮಃ ಶ್ರೀ ಗುರುವೆ ಗತಿ ॥ ಬಸವೇಶ್ವರ ಸ್ವಾಮಿ ನಿರುಪದ ಹಿರಿಯ ಮಂತ್ರಗೋಪ್ಯ ಬರೆಯುದಕ್ಕೆ ಶುಭಮಸ್ತು

ನೋಡಲಿಲ್ಲ ನುಡಿಯಲಿಲ್ಲ
ಕೂಡಲಿಲ್ಲವಾಪ್ರುತನು ವೊಡಲುಯಿಲ್ಲಾ ॥ ಪಲ್ಲ ॥

ಆಕಾರಪಿಡಿದು ಅರ್ಚನೆ ಪೂಜೆನೆಯು ಮಾಡಿ
ಏಕೋ ದೇವನದ್ವಿತೀಯನೆಂದುದು ಶ್ರುತಿ
ಯೇಕ ಹೃದಜೊಂಪ್ಮದ ಆತ್ಮನೆ ದೈವವೆಂಬ
ಭ್ರಾಂತಯೋಗಿ ಕೇಳು ವೀರ ಮಹೇಶ್ವರಾ ॥ ೧ ॥

ಆತ್ಮನಂತೆ ಪರಿಭವಕ್ಕೆ ಬಪ್ಪನೆ ಶಿವಯೋಗಿ
ಯಾತಕ್ಕೆ ನಿನ್ನ ಕಂಥೆ ಧರೆಯೊಳುಳಿದುದೂ
ನೀತಿವಿಡಿದು ಭಕ್ತಿ ಜ್ಞಾನ ವೈರಾಗ್ಯ ವೇದ್ಯಶರಣ
ಕಂತೆ ಸಹಿತ ಶಿವನ ಪಾದವನ್ನು ಬೆರಸುವಾ

ಅಂತ್ಯ : ಅಂಗಲಿಂಗವಾದುದೊಂದು ಪ್ರಭೆಯನ್ನು ಹೇಳುವೆ
ಲಿಂಗಕ್ಕೆ ಜಂಗಮವೆ ಕಳೆಯೆಂದು ಚೆನ್ನ ಸಂಗನಾದ ಭೇದವನ್ನು
ಲಿಂಗಸಂಗ ಪ್ರಭುವಿನ ಕರುಣ ಬಸವಗಾದುದೂ ॥ ೨೭ ॥
ಹಿರಿಯ ಮಂತ್ರಗೋಪ್ಯ ಸಮರ್ಪಣಮಸ್ತು ಶ್ರೀ ಶ್ರೀ.

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಸಮಗ್ರ. ಪ್ರತಿ ಚೆನ್ನಾಗಿದೆ. ಇದರ ಜೊತೆಗೆ ಸ್ಥಲ ಮಂತ್ರಗೋಪ್ಯ ಮುಂತಾದ ೧೮ ಕೃತಿಗಳಿವೆ. ಇವುಗಳಲ್ಲಿ ೧೧ ತೆಲುಗು ಕೃತಿಗಳು.

—ಜಿಜಿಎಂ

375

ಕೆ. ೮೫೫/೨ **ಹೇರೂರು ಹೆಣ್ಣಿನ ಸಾಂಗತ್ಯ** ಸಾಂಗತ್ಯ

೧೦.೬" × ೧.೨" ಮಹಾದೇವ ಸು. ೧೬೫೦

೧–೪೬ ಪತ್ರ ೫ ಪಂಕ್ತಿ ೩೮ ಅಕ್ಷರ

ಆದಿ : ಶ್ರೀ ಗಣಾಧಿಪತಯೇಂ ನಮಃ ॥ ಶುಭಮಸ್ತು ॥ ಹೇರೂರು ಹೆಂಣಿನ ಸಾಂಗತ್ಯಾ ॥
ಗುರುತರ ಪರಶಿವ ಸರಧಿ ಸಖನಧರ........
.................................ನೆ ॥
ಶಿರದಸ್ತ್ರಿರ ಧರ ಸೂಲದಜಶಿರಕರಧರ
ಗಿರಿಜೇಶನೊಲಿದು ರಕ್ಷಿಪುದೂ ॥ ೧ ॥

ಅಂತ್ಯ : ಭೂತಳದೊಳು ಭಕ್ತರಾತ್ಮಜ ಮನುಜಗ್ಗ್ರ
ಶಿವ ಕೊಡುವನು ತಂನ ಕೃಪೆಯಾ
ಜಾ........ರಹಿತ ಶರಣಗತ್ಯವ
ಜಾತಿ ನಿಪುಣ ಚಿತ್ತೈಸಿ ॥ ೮೨ ॥
ಯಿಳೆಯೊಳು ಆವ ಕುಲದವನಾಗಲಿ....ಣೆಯನ ಪೂ
................ಮಾಡಿದರೆ ॥
ವೊಲಿದು ಶರಣ ಪದವಿತ್ತು ಶ್ರುತಿಗಳು
ಸಾರಿದವು ಸಂದಿ ಸಂಪೂರ್ಣ ॥ ೮೩ ॥
ಅಂತು ಸಂದಿ ೩ ಕಂ ಪದನು ೪೫............ಮಂಗಳ ಮಹಾ ಶ್ರೀ.

ವಿಷಯ : ಶಿವನನ್ನು ತನ್ನ ವ್ರತದಿಂದ ಮೆಚ್ಚಿಸಿದ ಹೇರೂರು ಹೆಣ್ಣಿನ ಕಥೆ.

ವಿಶೇಷ : ಆದಿಯ ಕೆಲವು ಪತ್ರಗಳ ಅಂಚುಗಳು ಮುರಿದುಹೋಗಿವೆ. ಗ್ರಂಥದ ಎಲ್ಲಾ ಪತ್ರಗಳಿಗೂ ಹುಳು ಹೊಡೆದಿದೆ. ೩ಲನೆಯ ಪತ್ರ ವಿಲ್ಲ. ೨೧ನೆಯ ಪತ್ರದ ಅರ್ಧ ಭಾಗ ಮುರಿದು ಲುಪ್ತವಾಗಿದೆ. ಶಕಟರೇಫವನ್ನು ಬಳಸಿದೆ.

—ಕೆಆರ್‌ಎಸ್

376

ಕೆ. ಎ. ೪೧೪	**ಹೇರೂರು ಹೆಣ್ಣಿನ ಸಾಂಗತ್ಯ**	ಸಾಂಗತ್ಯ
೧೦.೫″ × ೯.೪″	ಮಹಾದೇವ	ಸು. ೧೬೫೦
೧–೭೯ ಪುಟ	೨೦ ಪಂಕ್ತಿ	೧೨ ಅಕ್ಷರ

ಆದಿ : ಹೇರೂರು ಹೆಣ್ಣಿನ ಸಾಂಗತ್ಯ

ಸಾಂಗತ್ಯ ॥

ಗುರುತರ ಪರಶಿವ ಪರಧಿ ಸಖನದ
.......................ನೆ ।
ಶಿವದಸ್ತ್ರಧರ ಶೂಲದಜಶಿರಕರಧರ
ಗಿರಿಜೇಶನೊಲಿದು ರಕ್ಷಿಪುದು ॥ ೧ ॥

× × × ×

(ಹೇರೂರ ಹೆಣ್ಣು) ಜೈನನ ಕಂಡು ಮನ ಹೇಸಿ
ಮಾರಮರ್ದನನಿಳೆಗೈದೀ ।
ನಾರಿ ಗಂಡಾಗಿ ಧಾರುಣಿಯೊಳು ಮೆರೆದ [ಪರಾಪರ] ವಿ
ಚಾರವನೊಲಿದು ಬಣ್ಣಿಸುವೆ ॥ ೩ ॥

ತೊಡಗುವೆನೀ ಕೃತಿಯನು ಶಿವಕವಿಗಳ
ಅಡಿಯ ನೆನೆದು ವರವಡೆವೆ
ಮೃಡಕವಿ ಮಹದೇವನ ವರ ಸದ್ಭಾವದ
ನುಡಿಯ ಸ(ಜ್ಜನರಾಲಿಪುದು) ॥ ೪ ॥

ಅಂತ್ಯ : ಇಳೆಯೊಳು ಆವ ಕುಲದವನಾಗಲಿ
ತ್ರಿಣೆಯನ ಪೂಜೆ ಮಾಡಿದರೆ
ಒಲಿದು ಶರಣ ಪದವಿತ್ತು ಶ್ರುತಿಗಳು
ಸಾರಿದವು ಸಂಧಿ ಸಂಪೂರ್ಣ ॥ ೮೩ ॥

ಅಂತು ಸಂಧಿ ೩ಕ್ಕಂ ಪದನು ೪೫ ...ಕ್ಕಂ ಮಂಗಳ ಮಹಾ ಶ್ರೀ.

ವಿಷಯ : ಹೇರೂರ ಹೆಣ್ಣು ಜೈನನನ್ನು ಕಂಡು ಮನಹೇಸಿ ಧೀರಳಾಗಿ ಮೆರೆದ ಕಥೆ

ವಿಶೇಷ : ಕೆಲವು ಪದ್ಯಗಳಲ್ಲಿ ಪದಗಳನ್ನು ಕಂಸದೊಳಗೆ ಕೊಡಲಾಗಿದೆ. ಪ್ರತಿ ಮಾಡುವಾಗ ಪ್ರತಿಯಲ್ಲಿ ಲುಪ್ತವಾಗಿದ್ದುದನ್ನು ಪ್ರತಿಕಾರರು ಸೇರಿಸಿರಬಹುದು. ಇವನ್ನು ಮುದ್ರಾಪಿಸಿನಲ್ಲಿ ಪ್ರತಿಮಾಡಲಾಗಿದೆ

— ಬಿಎಸ್‌ಎಸ್

377

ಕೆ. ಎ. ೫೮೮	**ಹೊಸಗನ್ನಡ ನುಡಿಗನ್ನಡಿ**	ಗದ್ಯ
೧೨″ × ೯.೯″	ವಿ. ಕೃಷ್ಣಮಾಚಾರ್ಯ	೧೮೩೮
೧–೨೧೬ ಪುಟ	೨೫ ಪಂಕ್ತಿ	೨೫ ಅಕ್ಷರ

ಆದಿ : ಶ್ರೀ ಚೆನ್ನಪಟ್ಣದಲ್ಲಿರುವ ಸದರದಾಲತ್ತು ಕೋರ್ಟಿನಲ್ಲಿ ಪ್ಲೀಡರಾಗಿರುವಂಥಾ ಶ್ರೀರಂಗಪಟ್ಣದ ಕೃಷ್ಣಮಾಚಾರ್ಯರು ಮಾಡಿದಂಥಾ ಹೊಸಗನ್ನಡ ನುಡಿಗನ್ನಡಿ ಯೆಂಬ ಹೊಸಗನ್ನಡವ್ಯಾಕರಣವು. ಇದು ಚೆನ್ನಪಟ್ಣದಲ್ಲಿ ಮೌಂಟು ರೋಡ್ಡಿನಲ್ಲಿರುವ ಮೇಲಸ್ಸೈಲವೆಂಬ ಅಚ್ಚಾಫೀಸಿನಲ್ಲಿ ಶಾಲಿವಾಹನ ಶಕಾಬ್ದ ೧೭೬೧ನೇ ವಿಳಂಬಿ ಸಂವತ್ಸರದಲ್ಲಿ ಎಳುಂಬೂರು ಅರುಣಾಚಲದಿಂದ ಅಚ್ಚುಹಾಕಿಸಿ ಪ್ರಸಿದ್ಧಿ ಮಾಡಲ್ಪಟ್ಟಿತು.

ಶ್ರೀ ರಮಣನ ಪದಕಮಲದ–ಸಿರದಿಂ ಸಾಷ್ಟಾಂಗವೆರಗಿ ಕೃಷ್ಣಾಚಾರ್ಯಂ ಶ್ರೀರಂಗಪುರನಿಕೇತಂ ಬರೆದ ಹೊಸಗನ್ನಡ ನುಡಿಗನ್ನಡಿಯೊಲವಿಂ × × ×

ಸಂಜ್ಞಾ ಪ್ರಕರಣ

ಪ್ರಶ್ನೆ	ಉತ್ತರವು
೧. ಕನ್ನಡ ಮಾತೆಷ್ಟು ವಿಧವಾಗಿರುವುದು.	ಹೊಸಗನ್ನಡವೆಂತಲೂ–ಹಳಗನ್ನಡವೆಂತಲೂ ಎರಡು ವಿಧವಾಗಿರುವದು.
೨. ಹೊಸಗನ್ನಡವು ಯಾವುದು.	ಕರ್ಣಾಟಕ ದೇಶವಲ್ಲೀಗಿನ ಹಿರಿಯುವರು ಮಾತನಾಡಿಕೊಳ್ಳುವ ಮಾತು.
೩. ಹಳಗನ್ನಡವು ಯಾವುದು.	ಗ್ರಂಥಗಳಲ್ಲಿ ಮಾತ್ರವೇ ಪ್ರಯೋಗಿಸಲ್ಪಡುವ ಮಾತು.

ಅಂತ್ಯ :

೧೧೨ ಕನ್ನಡ ವಾಕರಣ ವಿಷಯುವಾಗಿನ್ನು ಹೇಳಬೇಕಾದ ವಿಷಯುವುಂಟೊ.	ಬಹಳವುಂಟು ಅವುಗಳನ್ನು ಹಳಗನ್ನಡ ವ್ಯಾಕರಣ ವಲ್ಲಿ ವಿಸ್ತಾರವಾಗಿ ಹೇಳುವದ್ದರಿಂವಲ್ಲಿ ನೋಡಿ ಕೊಳ್ಳುವುದು.

ಇಂತು ೧೧ನೆ ಪ್ರಯೋಗ ಪ್ರಕರಣ ಮುಗಿಯಿತು.
ಇಂತು ಹೊಸಗನ್ನಡ ನುಡಿಗನ್ನಡಿಯೆಂಬ ವ್ಯಾಕರಣವು ಮುಗಿಯಿತು.
ಮಂಗಳ ಮಹಾ ಶ್ರೀ.

ವಿಷಯ : ವ್ಯಾಕರಣ

ವಿಶೇಷ : ಕಲ್ಲಚ್ಚಿನ ಪ್ರತಿ. ಅಚ್ಚಾದ ಕಾಲ ೧೮೩೮. ಗ್ರಂಥದ ಆದಿಯಲ್ಲಿ ಮುನ್ನುಡಿ, ವಿಷಯ ಸೂಚಿಗಳನ್ನೊಳಗೊಂಡ ಏಳು ಪುಟಗಳಿವೆ. ಪ್ರತಿ ಚೆನ್ನಾಗಿದೆ.

—ವೈಸಿಬಿ

378

ಕೆ. ಬಿ. ೭೧೪ /೩	**ಹೋರಾ ಶಾಸ್ತ್ರ**	ಶ್ಲೋಕ, ಟೀಕು
೮." ೧ × ೬. ೮"	?	?
೧೧ ಪತ್ರ	೧೫ ಪಂಕ್ತಿ	೧೬ ಅಕ್ಷರ

ಆದಿ : ಶ್ರೀಮುಖ ಸಂ ಫಲ್ಗುಣ ಶು ೯ಲ್ಲು ಕಡನ್ನೂರ ಚಿಕ್ಕಾಚಾರಿಯವರಿಗೆ ಹೋರಾ ಶಾಸ್ತ್ರ ಲಿಖ್ಯಾತೇ ॥ ಶುಭಮಸ್ತು ॥
ಆರೂಢೆ ಪ್ರಕೃತಿ ವದಂತಿ ಶುದಿ ರೋಗೋದ್ಭವಂ ಬಾಧಾಯ ಪ್ರತಿ ಲಗ್ನೈಷ ಬಲೇತವಾ ಮಾಯಗಣವಾ ಚ ತ್ರಿದಶೋದ್ಭವಾ ತದ್ಭಾವಾತ್ ಶಷ್ಟ ಪೆತದ್ ಬಲಿನ್ಯಾ ಪೇಷ್ಟುರ್ಣ ಬಾಧೋದ್ಭವಾ ನಿರ್ವಿಶೇತ್ × × ಟೀಕು॥ ಪ್ರಸ್ನೆ ಲಗ್ನಕಾದ್ರು ಪ್ರಸ್ನೆ ಲಗ್ನದ ಪತ್ತಿಗಾದ್ರು ಚೆಕ್ರಹರು ಕೆಂದ್ರಾತ್ರಿಕೋಣಾದ್ರಿಷ್ಟಿಯಿದ್ದು ಅರಿವಂತನಾಗಿಯಿದ್ದರೆ ರೋಗ ನಡವಲಗ ೩೬ ದಿ ಪತ್ತಿಯೂ

ಅಂತ್ಯ : ಶುಕ್ರ ಶುಕ್ಲಪಕ್ಷದ ಚಂದ್ರನು ಪಾಪಗ್ರಹಯಿಾ ಕೂಡಿದರು ನೋಡಿದರು ರುಜ ರೋಗ ಪಿಶಾಚಿಗಳ ದ್ರಿಷ್ಟಿಯಿಂದ ರೋಗವೆಂಬ ಅರ್ಥ ॥೩೮॥

ವಿಷಯ : ಜ್ಯೋತಿಷ, ಪ್ರಶ್ನ ಶಾಸ್ತ್ರ.

ವಿಶೇಷ : ಅಸಮಗ್ರ. ಮೋಡಿ ಅಕ್ಷರ. ಇವರ ಜೊತೆಯಲ್ಲಿ ಸರ್ವಜ್ಞನ ಪದ ಮೊದಲಾದ ೫ ಕೃತಿಗಳಿವೆ.

—ಜಿ.ಜಿ.ಎಂ

ಅನುಬಂಧಗಳು

1

ಕೆ. ಎ. ೫೮೬ / ೯ | **ಅಂಗದ ಸಂಧಾನ** | ಭಾಮಿನೀ ಷಟ್ಪದಿ

೧೧. ೫" × ೭.೯" | ಕುಮಾರ ವಾಲ್ಮೀಕಿ | ಸು. ೧೫೮೦

೧೨೦ — ೧೨೬ ಪತ್ರ | ೨೩ ಪಂಕ್ತಿ | ೨೫ ಅಕ್ಷರ

ಆದಿ : ಶುಭಮಸ್ತು ॥ ಶ್ರೀ ಲಕ್ಷ್ಮೀನೃಸಿಂಹಾಯ ನಮಃ ॥ ಶ್ರೀರಸ್ತು ॥
ಅಂಗದ ಸಂಧಾನ ಬರೆಯುವದಕ್ಕೆ ನಿರ್ವಿಘ್ನಮಸ್ತು ॥
ವೀರ ವಿಜಯ ಭುಜ ಪ್ರತಾಪನು
ದಾರ ಸಾಹಸ ಮಲ್ಲ ವಾಲಿಕು
ಮಾರ ಸಂಧಿಗೆ ಹೋಗಿ ಸವರಿದನಖಿಳ ರಾಕ್ಷಸರಾ ॥ ಸೂಚನೆ ॥

ಕೇಳಿಸೈ ರಾಜೇಂದ್ರಸುತ ದಶ
ಮೌಳಿಯಿಂದೀ ಜಗದೊಳಗೆ ಕಡು
ಖೂಳರುಂಟೆಂದೆನಿಸಬೇಡತಿಶಯದ ಮೂರ್ಖರಿಗೆ
ಕೇಳಕೆಯು ಮನ ಛತ್ರಭಂಗದ
ಮೇಲೆ ಮುರಿಯದೆ ಛಲ ಪದದ ಪರಿ
ಪಾಳಿಯಂದುಪ್ಪವಡಿಸಿದನುಪ್ಪರದ ಗರ್ವದಲಿ ॥ ೧ ॥

ಅಂತ್ಯ : ಹೊಗದುದಧಿಕ ಕ್ರೋಧಶಿಖಿ ಬಳಿ
ಕಗಿವ ರಭುದ್ರಾವೇಶದಲಿ ಭುಗು
ಭುಗಿಸಿ ಬಲಿಮುಖ ಚಕ್ರಿ ಕೈವೀಸಿದನು ಕಾಳಗಕೆ
ನಗಮಹೀರುಹ ಹಸ್ತರುಬ್ಬಿದರ
ರಗಲದಲಿ ಖೋಯೆಂದು ತೊರವೆಯ
ನಗರದಧಿಪತಿ ಹಾರವಿಸೆ ಹತ್ತಿದರು ಲಗ್ಗೆಯಲಿ ॥ ೭೧ ॥
ಅಂಗದ ಸಂಧಾನ ಸಂಧಿ ಸಂಪೂರ್ಣ ಮಂಗಳ ಮಹಾ ಶ್ರೀ

ವಿಷಯ : ರಾಮನು ರಾವಣನ ಬಳಿಗೆ ಅಂಗದನನ್ನು ದೂತನನ್ನಾಗಿ ಕಳುಹಿಸಿದ ಕಥೆ.

ವಿಶೇಷ : ಇದರೊಂದಿಗೆ ವಿವೇಕಚಿಂತಾಮಣಿ, ಪದಮಂತ್ರಗೋಪ್ಯ ಮೊದಲಾದ ಕೃತಿಗಳಿವೆ.

—ವೈಸಿಬಿ

2

ಕೆ ೧೧೯೩ / ೪ **ಅಖಂಡೇಶ್ವರನ ಜೋಗುಳ ಪದ** ಹಾಡು

೧೩.೪ " × ೧.೬ " ಷಣ್ಮುಖಸ್ವಾಮಿ ?

೭೮ — ೮೧ ಪತ್ರ ೮ ಪಂಕ್ತಿ ೫೨ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ ಅಖಂಡೇಶ್ವರ ಜೋಗುಳ ಪದನು ॥
ಜೋಜೊಯೆಂನಿ ಅಂಬಿಕಾಪತಿಗೆ
ಜೋಜೊಯೆಂನಿ ಶಂಭುಶಂಕರಗೆ
ಜೋಜೊಯೆಂನಿ ಅವಿರಳ ಶಿವಗೆ ॥ ಪಾಡಿ ॥
ಜೋಜೊಯೆಂನಿ ಅಖಂಡೇಶ್ವರಗೆ ಜೊಜೊ ॥ ೧ ॥

ಅಂತ್ಯ : ಅಜಹರಿ ಸುರ ಮುನಿ ಕೀರ್ತಿಗಳಿಂದೆ
ನಿಜಗುರು ಬಸವಾದಿ ಪ್ರಮಥರು ಮುಂದೆ
ಗಜಮುಖಗುಹವೀರವೃಮೆ ಸಹ ಬಂದೆ । ನಿತ್ಯಾ ।
ಮಜ ಭಾಪು ಪರಬ್ರಹ್ಮ ಯಂನೊಳು ನಿಂದೆ ಜೊಜೊ ॥ ೪೧ ॥
ಶಂಣ್ಮುಖ ಸ್ವಾಮಿಗಳು ನಿರೂಪಿಸಿದ ಅಖಂಡೇಶ್ವರನ ಜೋಗುಳದ
ಪದ ಸಮಾಪ್ತಂ ಮಂಗಲ ಮಹಾ ಶ್ರೀ ಶ್ರೀ *

ವಿಷಯ : ವೀರಶೈವ ಸಿಧ್ಧಾಂತ

ವಿಶೇಷ : ಪ್ರತಿ ಚೆನ್ನಾಗಿದೆ. ಇದೇ ಕಟ್ಟಿನಲ್ಲಿ ದೀಕ್ಷಾಬೋಧೆ ಮುಂತಾದ ಕೃತಿಗಳಿವೆ

— ವೈ.ಸಿ.ಬಿ

3

ಕೆ ೧೧೫೪/೩ **ಅಷ್ಟಾವರಣ ವಿವೇಕಸ್ತೋತ್ರ** ಶ್ಲೋಕ, ಟೀಕು

೧೫.೭" × ೨.೨" ? ?

೨೩೬—೨೪೦ ಪತ್ರ ೧೪ ಪಂಕ್ತಿ ೧೦೩ ಅಕ್ಷರ

ಆದಿ : ಶ್ರೀ ಗುರು ಶಾಂತಿವೀರೇಶ್ವರಾಯ ನಮಃ ॥ ಅಷ್ಟಾವರಣ ವಿವೇಕ ಸ್ತೋತ್ರಂ ॥ ವಸಂತತಿಲಕ ॥
ಯಸ್ಯೈವ ಶಕ್ತಿಮಪರೆ ಪರವಾಸುದೇವ ಶಾಹಶ್ಚಿ ದೇವಶ್ಚಾಹುಶ್ಚಿ ದೈವನಿಗಮಾಂತ ವಿದೋವದಂತಿ । ಶಾಕಾಶ್ಚ ಶಕ್ತಿರಿತಿ ಬಿಂದು ಮಯೇತಿಕೆ ಚಿತ್ತಂ ನಾದರೂಪ ಗಿರಿಜಾಪತಿ ಮಾಶ್ರಯಾಮಃ ॥

ಟೀ ॥ ಯಸ್ಯ । ಆವನಾನೊಬ್ಬ ಪರಮೇಶ್ವರನ । ಶಕ್ತಿರೇವ । ಸ್ತ್ರೀ ಯನೆ । ಅಪರೆ । ವೈಷ್ಣವರಾದ ಕೆಲಂಬರು । ಪರವಾಸುದೇವಶ್ಚೇತಿ । ವಾಸುದೇವಃ । ಪರಾಪ್ರಕೃತಿಃ ಯೆಂಬ ಶೃತಿಯಿಂದೆ ಆದಿನಾರಾಯಣ ನೆಂದು । ಆಹುಃ । ಹೇಳುವರು । ನಿಗಮಾಂತವಿದಃ । ನಿಗಮ । ವೇದಂ ಗಳ । ಅಂತ । ಶಿರಸ್ಸುಗಳಾದುಪನಿಷತ್ತುಗಳನು । ವಿದಃ । ಬಲ್ಲಂಥಾ ವೇದಾಂತಿಗಳು । ಚಿದ್ವೈವ । ಪ್ರಜ್ಞಾನಂ ಬ್ರಹ್ಮಯೆಂಬ ಶೃತಿಯಿಂದೆ । ಜ್ಞಾನವೆ । ಇತಿ । ಹೀಗೆಂದು । ವದಂತಿ । ನುಡಿವುತ್ತಧಾರೆ । ಶಾಕ್ತಾಶ್ಚ । ಶಕ್ತಿಬಹ್ಮವಾದಿಗಳಾದ ಶಾಕ್ತೆಯರು ।

ಅಂತ್ಯ : ಟೀ ॥ ಯಃ । ಆವಾತನು । ಸ್ಮೃತಿಭಿಃ । ಮನ್ವಾದಿ ಸ್ಮೃತಿಗಳಿಂದ । ಪುರಾಣೈಃ । ಅಷ್ಟಾದಶ ಪುರಾಣಂಗಳಿಂದೆ । ಆಗಮೈರಪಿ । ಅಷ್ಟಾ ವಿಂಶದ್ದಿವ್ಯಾಗಮಂಗಳಿಂದಲೂ । ಬೋಧಿತಂ । ಬೋಧಿಸಲ್ಪಟ್ಟ । ನಿಗಮ ಸಾರಂ । ವೇದ ವೇದಾಂತಗಳಲ್ಲಿ ಶ್ರೇಷ್ಟವಾದ । ವೀರಶೈವ ಪ್ರಸಿದ್ಧಂ । ವೀರಶೈವ । ಅತ್ಯಾಶ್ರಮದಲ್ಲಿ । ಪ್ರಸಿದ್ಧಂ । ಪ್ರಖ್ಯಾತವಾದ । ಬೋಧ ಮೂಲಂ ಜ್ಞಾನ ಕಾರಣವಾದ । ಅಚಲ ಶೈವ ಪ್ರಾಪ್ತಿಧಂ । ಅಚಲ । ನಾಶರಹಿತವಾದ ಶೈವ ಶಿವಸಂಬಂಧವಾದ ನಿಜಮೋಕ್ಷದ ಪ್ರಾಪ್ತಿ ದಂ । ಲೋಭವನು ಕೊಡುವಂಥ । ಅಷ್ಟಾವರಣಂ । ಅಷ್ಟಾವರಣ ವಿವೇಕವೆಂಬ । ಏತತ್ ಯಿಾ ಸ್ತೋತ್ರಂ । ಸ್ತುತಿಯನು । ಪಠತಿ । ಭಕ್ತಿಯಿಂ ಪಠಿಸುವನೊ । ಸಃ । ಆತನು । ಶಿವರೂಪಃ । ಶಿವಸಮಾನ ರೂಪನು । ಭವತಿಹಿ । ಆಗುತ್ತಧಾನಲ ॥ ೧ ॥

ಇತಿ ಶ್ರೀ ಅಷ್ಟವರಣ ಮಹತ್ವ ಪರಿ ಸಂಪೂರ್ಣ ಮಂಗಳ ಮಹಾ ಶ್ರೀ.

ವಿಷಯ : ವೀರಶೈವತತ್ತ್ವ ಬೋಧೆ

ವಿಶೇಷ : ಇದೇ ಕಟ್ಟಿನಲ್ಲಿ ಹಾಲಾಸ್ಯ ಪುರಾಣ, ವಾತುಲಾಗಮ ಮತ್ತು ಕೈವಲ್ಯ ಸಾರ ಎಂಬ ಕೃತಿಗಳಿವೆ.

—ವೈಸಿಬಿ

4

ಕೆ. ೧೬೫೮/೧	ಆನಂದ ಕಲ್ಲೋಲ	ಶ್ಲೋಕ, ಟೀಕು.
೧೩.೩″ × ೨.೩″	ಶಿವಯೋಗೀಂದ್ರ	?
೧–೬೧ ಪತ್ರ	೯ ಪಂಕ್ತಿ	೫೪ ಅಕ್ಷರ

ಆದಿ : ಶ್ರೀಮನ್ಮಹಾದೇವಾಯ ನಮಃ । ಶುಭಮಸ್ತು । ತತ್ವಶಾಸ್ತ್ರದಲ್ಲಿ ಆನಂದಕಲ್ಲೋಲ ಪ್ರಕರಣ ॥

ವಚಃ । ಪಾರಾವಾರಃ ಪ್ರಮುದಗಮಹಿಮಾಶ್ರುವಿತತೇ ಪ್ರಸಿದ್ಧಂ
ಯದ್ವಸ್ತು ಪ್ರಥಿತ ನವನಿತೋಽಪಮಮುಭೂತೌ
ತದದ್ವೈತ ಶ್ರಾಂತ ಪ್ರತಿಪದಮವದೂತಃ ಪ್ರಭುಃ ಶಿವಃ
ಪ್ರಣೀತಂ ಯದ್ವಸ್ತು ಪ್ರದಯತಿ ಜಗಂ ನಿಸ್ಪೃತಿಕರಂ ॥
ಗ್ರಂಥ ॥ ತತ್ವಪದ ವಿವೇಕೋಕ್ತಿಮವದೂತ ಸದಾಶಿವಃ ।
ಕುರುತೇ ಬಾಲಬೋಧಾಯ ಯಥಾ ವೇದಾಂತ ಪದ್ಧತಿ

× × × ×

ಯೆಂಬ ಶಾಸ್ತ್ರಸಮಯವುಂಟಾಗಿ ಯಿಾ ಮಹಾ ಗ್ರಂಥಾರಂಭದಲ್ಲಿ
ವಸ್ತು ನಿರ್ದೇಶ ಹೇಳಲ್ಪಟ್ಟಿತು.

ಅಂತ್ಯ : ಯಸ್ಯೋಽಪದೇಶಾದ್ವಿಯದಾದಿಭಿ........ಧ್ಯಾತ್ಮಮತಿಃ ಪ್ರತಿತಾ
ತಂ ಯೋಗಿರ್ಯೈರ್ಯಂ ಪರಮಾವಧೂತಂ ಜ್ಞಾತ್ವಾ ಕೃಪಾಳುಂತ
ರಸಾಭಜಧ್ವಂ ಮೋದಿದತ್ತ ಹಸ್ತೇನ ಮ........ವಾದಿನಾ
ಅವಧೂತ ಶಿವೇನೇಮೆ ವರ್ನ್ನ್ಯಾ ದಶವರ್ನ್ನತಾ ॥
ಇತಿ ಶ್ರೀಮತ್ಕೈವಲ್ಯಾನ್ವಯ ಪ್ರವರ್ತಕ ಶ್ರೀಮತ್ಪರಮಹಂಸ
ಪರಿವ್ರಾಜ........ವರ್ಯ್ಯ ಪರಶಿವಪಾದಯುಗಳ ಕಮಲಿನೀ ರಾಜ
ಹಂಸಾವಧೂತ ಶಿವಯೋಗೀಂದ್ರ ವಿರಚಿತ ವಾಕ್ಯ ಜೀವ....ಸಮಾಪ್ತ.

ವಿಷಯ : ತತ್ತ್ವಶಾಸ್ತ್ರ.

ವಿಶೇಷ : ಮಧ್ಯೆ ಕೆಲವು ಪತ್ರಗಳು ಮುರಿದಿವೆ. ಇದರೊಡನೆ ಹರಗಣಮಾಲೆ, ಮಲ್ಲಿಕಾಮಾಲೆ ಮೊದಲಾದ ಗ್ರಂಥಗಳಿವೆ. ೬೨ನೆಯ ಪತ್ರದಲ್ಲಿ ಕೆಲವು ಶ್ಲೋಕಗಳಿವೆ.

—ಬಿಎಸ್ಎಸ್

5

ಕೆ. ೧೭೬೯/೨	**ಏಕೋತ್ತರಶತಸ್ಥಲ**	ಶ್ಲೋಕ, ಟೀಕು
೯.೫″ × ೧.೫″	ಮಗ್ಗೆಯ ಮಾಯಿದೇವ	೧೪೩೫
೧೪ ಪತ್ರ	೯ ಪಂಕ್ತಿ	೬೨ ಅಕ್ಷರ

ಆದಿ : ಶ್ರೀ ಗುರುವಾನಂದ ಬಸವಲಿಂಗಾಯಂ ನಮಃ ॥ ಮೊಗ್ಗೆ ಮಾಯಿ
ದೇವಪ್ರಭು ಪಂಡಿತರು ನಿರೂಪಿಸಿದ ಪದ ಯೇಕೋತ್ತರ ಶತಸ್ಥಲ
ವಾರ್ಧಿಕ ಷಟ್ಪದಿ ॥
ಪಲ್ಲ ॥ ದೇವಸಭೆಯೊಳಗೆ ದೇವರದೇವನೊಲಿದು ಗಿರಿ
ಜಾವನಿತೆಗೊರೆದನೀ ಯೇಕೋತ್ತರ ಶತಸ್ಥಲದ

ಭಾವದನುಭಾವಮಂ ಭೂಮಿಯೊಳು ಪೇಳ್ದ ಬಸವೇಶ ಸದ್ಭಕ್ತ ಜನಕೆ

ಪದ ॥ ಶ್ರೀಮದಮರೇಂದ್ರಾದಿವಂದಿತ ಪದಾಂಭೋಜ
ಸಾಮಗಾನ ಪ್ರೇಮನತುಳಬಳ ನಿಸ್ಸೀಮಭೀಮ ಗಿರಿಜಾ
ವಾಮಭಾಗೋಗಭೋಗೇಂದ್ರೋರುಭೀಷಣಾನ್ನತ ಭೂಷಣಾ
ಕಾಮವೈರಿ ಪುರಾರಿ ಭರ್ಗನುಗ್ರಂ ಪಶುಪವ್ಯೋಮಕೇಶಮರೀಶವೀಳಯ
ಸೋಮಶೇಖರ ಪ್ರಭುವೆ ವಿಭುವೆ ಶ್ರೀಗುರುನಾಥ ಮತಿಗೆ ಮಂಗಳ
ವೀಉದು ॥ ೧ ॥

ಅಂತ್ಯ : ವೇದಾಂತ ಸಿದ್ಧಾಂತಮಂ ಪರಿವಿಡಿಯಂ ತಿರಸ್ಕರಿಸಿ ವೀರಶೈವ ಸಿದ್ಧಾಂತಮಂ ಕ್ರಿಯಾಜ್ಞಾನವಿಡಿದಾಚರಿಸಿ ಭಕ್ತಿ ಜ್ಞಾನ ವೈರಾಗ್ಯವ ಕೈಕೊಂಡು ಭವಿ ಭಕ್ತರಿಗೆ ಸರಿಯಿಲ್ಲೆಂದು ಮಗ್ಗೆಯ ವಿಜಯಸ್ತಂಭವಂ ನೆಟ್ಟು ನೆಲಲ್ಲಲಿವಾ ಕಡೆಗೆಯು ಯೆಂದ ಮಾಯಿದೇ ಪ್ರಭು ನಿಪಿಸಿದ ಪದ ಏಕೋತ್ತರ ಶತಸ್ಥಲ ॥ ಶರಣ ಸಂಜೀವ ದಿನ ಮಣಿರತ್ನ ಪುಂಜರಂಜಿತ ಹಾರಮಾಲೆಯಲಿ ಧರಿಸಿದ ಶರಣರರಿಗಾ ಚರಿಸಿ ಅಳವಡಿವುದು....... ಪದ । ಏಕೋತ್ತರ ಶತಸ್ಥಲ ಸಮಾಪ್ತ ಮಂಗಲ ಮಹಾಶ್ರೀ ಶ್ರೀ ವೀರಶೈವಾಗಮೋದ್ಧಾರ ಮಾಯಿದೇವ ಪ್ರಭು ನಿರೂಪಿಸಿದ ಸ್ಥಲ ಕರಣ ಹಸಿಗೆ ವಿಶ್ರಾಂರ್ಪಣ ಮಂತ್ರಗೋಪ್ಯ ವನ್ನು ಬರದಾತ ದ್ಯಾವನು ಇದನೋದಿ ಕೇಳಿ ತಿಳಿದು ಬರೆವ ಸಾಧು ಜನರು ನಿಮ್ಮ ಸಹೋದರನೆಂದೆಳಸಿ ಕೈತಪ್ಪು ಪ್ರತಿತಪ್ಪು ಇದ್ದರು ತಿದ್ದಿ ಓದಿ ಬರೆವುದು. ನಿಮ್ಮ ನಿಜ ಕರುಣದಿಂದ ॥ ೧ ॥

ವಿಷಯ : ವೀರಶೈವ ತತ್ತ್ವ.

ವಿಶೇಷ : ಸಮಗ್ರ. ಶಿಥಿಲ. ಪತ್ರ ಸಂಖ್ಯೆ ಇರುವ ಅಂಚು ಮುರಿದು ಕಾಣುವು ದಿಲ್ಲ. ಇದರೊಂದಿಗೆ ಕರಣಹಸಿಗೆ, ಮಿಶ್ರಾರ್ಪಣ ಎಂಬೆರಡು ಕೃತಿ ಗಳು ಇವೆ.

—ಹಕರಾ

6

ಕ. ೧೧೭೦/೨	**ಕರ್ಣಾಟಕಧಾತು**	ಗದ್ಯ, ಪದ್ಯ
೧೩.೬" × ೨"	ಕೇಶಿರಾಜ	ಸು. ೧೨೬೦
೧ ಪತ್ರ	೭ ಪಂಕ್ತಿ	೮೪ ಅಕ್ಷರ

ಆದಿ : ಶ್ರೀ ಗುರು ಬಸವಲಿಂಗಾಯ ನಮಃ ।
ವೇದ ಸಮನಾಗಿ ಭೀಮನಿ
ನಾದುದು ಸಂಸ್ಕೃತದ ಧಾತುಃವಾ ತೆರದಿಂದಂ
ಯಾದವ ಕಟಕಾಚಾರ್ಯನಿ
ನಾದದು ಕರ್ಣಾಟಧಾತು ಕವಿ ಕೇಶವನಿಂ ॥ ೧ ॥

ಅಂತ್ಯ : ನಿಗೂ ತ್ಯಜನೆ । ಹುಡುಗು ಗೋಪನೆ । ಸಿಡುಗು ಹಸ್ತಾನ್ವೇಷನೆ । ಪೊಂಗುಸ್ಫುಟನೆ । ನುಂಗುಃಗಿಳನೆ । ಕುನುಗು ಸಂಕೋಚನೆ । ತಾಂಗು ಧಾರಣ ಸಂಘಟ್ಟನಯೋಃ । ಜಿನುಗು ಜಿನುಂಗು ಅವ್ಯಕ್ತಧ್ವನೌ । ವರ್ಷ ಭೇದೇ ಚ । ಮಲಗು ಮಲಗು ವಪದಾನಾವಲಂಬೆ । ಉಪದಾನೆ ಚ । ಚೆಲುಂಗು ಕರಮುಕ್ತೆ । ತೊಲಗು ವಿವಿಕ್ತೆ । ಪಿಂಗು ಅವಸರಣೆ । ಮಿಸುಗು ಕಾಂತೌ । ಯುಸಗು ಉದ್ಯೋಗೆ । ಮಸಗು । ವಿಜ್ರುಂಭಣೆ । ಕರಗು ವಿಲೀನೆ । ಕೊರಗು ಸರಸವಿಹೀನೆ । ಹರಗು ಸಸ್ಯಕ್ರಿಯಾಯಾಂ । ಮರುಗು ಸಂತಾಪೆ । ಯರಗು ಪ್ರಣೀತೆ । ಮಿರಗು ಚಕಚಕಾಯ ಮಾನೆ । ತುರುಗು ಸಂಚ್ಛುಂನೆ । ಉರಗು ವಕ್ರಭಾವೆ । ವರಗು ಸುಪ್ತೌ ।

ವಿಷಯ : ಕನ್ನಡ ಧಾತುಪಾಠ.

ವಿಶೇಷ : ಅಸಮಗ್ರ. ಈ ಕೃತಿಯ ಬಳಿಕ ಒಂದು ಪತ್ರದಲ್ಲಿ ಗುರುತಿಸಲಾಗದ ಸಂಸ್ಕೃತ ಕೃತಿ ಇದೆ. ಇದರೊಂದಿಗೆ ಅಮರಕೋಶ, ಸಿದ್ಧಲಿಂಗ ಸ್ತೋತ್ರದ ಷಟ್ಪದ ಎಂಬ ಕೃತಿಗಳಿವೆ.

—ವೈಸಿಬಿ

7

ಕೆ. ಎ. ೫೭೮	**ಚಾಮುಂಡಿಕಾ ಲಘು ನಿಘಂಟು**	ಶ್ಲೋಕ, ಟೀಕು
೧೩.೨ " × ೭.೬ "	ಮುಮ್ಮಡಿ ಕೃಷ್ಣರಾಜ	೧೮೫೦
೨೧ ಪತ್ರ	೮ ಪಂಕ್ತಿ	೩೮ ಅಕ್ಷರ

ಆದಿ : ಶ್ರೀ ಶುಭಮಸ್ತು
ಕಲಯಾಯ್ಯೆಕ ನಿದಾನಂ ಕಲಯೇ ಕಂದರ್ಪ ಕೋಟಿಲಾವಣ್ಯಾ
ಚಂಡಾದಿ ಭೇದನೌಡಂ ಚಾಮುಂಡಾಖ್ಯ ಮಹಃ ಪರಂಭಾವೇ ।

ಅಂತ್ಯ : ಯಿೂ ಚಾಮುಂಡಾ ಲಘುನಿಘಂಟಿನ ಮೂರು ಪ್ರಕರಣಕ್ಕ್ಯೂ ವಟ್ಟು ಪದಾರ್ಥಗಳು × × × ಪದಾರ್ಥಗಳು ನಾಮಭೇದಗಳು ಮುಂತಾದ ವಿಶಿಷ್ಟವುಯೊ ಶ್ರೀ ಚಾಮುಂಡಿಕಾ ಮಹಾ ನಿಘಂಟಿನಲ್ಲಿ ಬುದ್ಧಿವಂತ

ರಾದವರು ನೋಡಿ ತಿಳಿದುಕೊಳ್ಳತಕ್ಕದ್ದು || ಇತಿ ಶ್ರೀ ಚಾಮುಂಡಾ ಲಘು ನಿಘಂಟೌ ಪ್ರಕರಣತ್ರಯಂ ಸಂಪೂರ್ಣಂ ಶ್ರೀಚಾಮುಂಡಾಯೈ ನಮಃ ||

ವಿಷಯ : ನಿಘಂಟು.

ವಿಶೇಷ : ಕಲ್ಲಚ್ಚಿನ ಪ್ರತಿ. ಲಿಪಿ ದೇವನಾಗರಿಯಲ್ಲಿದೆ.

—ವೈಸಿಬಿ

8

ಕೆ. ೧೬೫೪ / ೧೦ | ದೀಕ್ಷಾ ವಿಧಾನ | ವಚನ
೧೩. ೩″ × ೨.೩″ | ಚೆನ್ನಬಸವಣ್ಣ | ಸು. ೧೧೬೦
೭೨ — ೭೮ ಪತ್ರ | ೧೦ ಪಂಕ್ತಿ | ೫೪ ಅಕ್ಷರ

ಆದಿ : ಶ್ರೀ ಗುರು ಬಸವಲಿಂಗಾಯ ನಮಃ | ಚೆಂನಬಸವರಾಜ ದೇವರು ನಿರೂಪಿಸಿದ ದೀಕ್ಷಾವಿಧಾನವೂ |

ಭವಿತನಕ್ಕೆ ಹೇಸಿ ಭಕ್ತನಾಗಬೇಕೆಂಬಾತನು ಸದ್ಗುರುವನರಸಿಕೊಂಡು ಬಂದು ಅವರ ಕಾರುಣ್ಯದಿಂದ ಮುಕ್ತಿಯ ಪಡೆವೆನೆಂದು ಆ ಶ್ರೀಗುರುವಿಂಗೆ ದಂಡಪ್ರಣಾಮವಂ ಮಾಡಿ ಭಯ ಭಕ್ತಿಯಿಂದ ಕರಂಗಳಂ ಮುಗಿದು × × × ಸಿದ್ಧದಯಾಧರ್ಮ ಭಿಕ್ಷವೆಂಬ ಶಬ್ದ ಪರುಷದ ಸೂಜಿ | ಅರಿವೆಂಬ ದಾರ | ವ್ಯಾಘ್ರಚರ್ಮದ ಗದ್ದುಗೆ | ಪದ್ಮಾಸನ ಸಿಂಹ್ಮದ ವಾಹನ | ಶುದ್ಧ ಸಿದ್ಧ ಪ್ರಸಿದ್ಧಪದದಿಂ ಸುಖಿಯಾಗಿಪ್ಪರು ಶುಚಿಗಳು || ೧ ||

ಅಂತ್ಯ : ಯಿೂ ಮಂತ್ರದಿಂದ ಆ ಶಿಷ್ಯನ ಕರ್ನ್ನದಲ್ಲಿ ಶಿವಮಂತ್ರಮಂ ನಿರೂಪಿಸುವದು || ೩೪ || ಯಿಂನು ಶತಪತ್ರದೊಳಗಣ ಮನಸಾ ಪ್ರಾಣದೊಳಗಿಪ್ಪ ಪ್ರಾಣಲಿಂಗಕ್ಕೆ ಪೊಂದು ಯಿಷ್ಟಲಿಂಗಸ್ಥಲಮಂ ತೋರಿಸಿ ಆ ಶಿಷ್ಯನ ಕೃತಕೃತ್ಯನಂ ಮಾಡುವದು ಕೂಡಲ ಚೆನ್ನಸಂಗೈಯ್ಯ ನಿಮ್ಮ ಧರ್ಮ ನಿಮ್ಮ ಧರ್ಮ || ದೀಕ್ಷಾವಿಧಾನ ಸಮಾಪ್ತ ಮಂಗಳಮಹಾಶ್ರೀ.

ವಿಷಯ : ವೀರಶೈವ.

ವಿಶೇಷ : ಸಮಗ್ರ. ಇದರೊಡನೆ ಮಠಸ್ಥಲ, ದೇವೀಸ್ತೋತ್ರ (ಸಂ), ಶೈವ ಸಂಜೀವನಿ ಮೊದಲಾದ ಗ್ರಂಥಗಳಿವೆ.

—ಬಿಎಸ್‌ಎಸ್

9

ಕೆ. ಬಿ. ೬೯/೧.೭	**ಪಂದೆ**	ಕಂದ, ಷಟ್ಪದಿ
೬" × ೮.೫"	?	?
೨೧–೨೨ ಪತ್ರ	೨೭ ಪಂಕ್ತಿ	೨೦ ಅಕ್ಷರ

ಆದಿ : ಶ್ರೀ ಗುರು ಬಸವಲ್ಲಿಂಗಾಯ ನಾಮಃ ॥ ಪಂದೆ ಭರವದಕ್ಕೆ
ಸುಭಮಸ್ತು ॥
ಯತಂತಲ್ಲೆವಗಿದಡಂ
ಪತ್ತಳಥ ನಿರಥರಗವದು । ಅದುತರನಜಂ
ಪತಾತತ್ತಲ್ಲೆವಗಿದಡಂ
ಸತ್ತಿತ ರಾಮನಾಹನಿ ಪ್ರಣಥ ಕೆಡಂ ॥ ೧ ॥

ಅಂತ್ಯ : ಯೆಂಣೆಹೊಳಿಗೆ ತುಪ್ಪ ಸಕ್ಕರೆ
ಹಂಣು ಹಾಲು ಪರಡಿ ಪಾಯಸಾ ಉಂಣುತಿರೆ ವ್ಯೆ
ಬಂಣವೆರಲು ಕಣ್ಣ ಮುಚ್ಚುತಲಿ
ಹೆಂಣಿಗೋಸ್ಕರ ಬಿದುಮುಯದ ಹುಂಣುತ್ತೆಗುಲ್ಲಿ
ಕೊಂಡು ಬಾಯೊಳು । ಮೊಂಣನೆ
ಹೊಯಿಕೊಂಡು ಬಿಳರು ಬವದ ಕುಣಿಯೊಳಗೆ ॥ ೧೦ ॥

ವಿಷಯ : ವೇದಾಂತ.

ವಿಶೇಷ : ಕೃತಿ ಸಮಗ್ರ. ಪ್ರತಿ ಶಿಥಿಲ. ಅಕ್ಷರ ಮೋಡಿ. ಬರವಣಿಗೆ ಅಶುದ್ಧ. ಇದರೊಂದಿಗೆ ನೀತಿಪದ ಮುಂತಾದ ಕೃತಿಗಳಿವೆ. ಕೆ. ಬಿ. ೬೯/೧ಲ 'ಸಿದ್ಧಿಯೋಗದ ಮಂತ್ರ' ಎಂಬ ಸಂಸ್ಕೃತ ಕೃತಿ.

—ಎಂಪಿಎಂ

10

ಕೆ. ೧೭೫೮/೧೫	**ಪಂಪಾಶತಕ**	ವೃತ್ತ
೧೩.೩" × ೨.೩"	ಹರಿಹರ	ಸು. ೧೨೦೦
೧೪೧–೧೪೨ ಪತ್ರ	೯ ಪಂಕ್ತಿ	೬೫ ಅಕ್ಷರ

ಆದಿ : ....ಗಳೇಕೆ ಸಲೆ ಕೇಳದ ಕರ್ನ್ನಗಳೇಕೆ ಭಕ್ತಿಯಿಂ
ಪಾಡದ ಬಾಯ್ಗಳೇಕೆ ಪೆಸಗೊರ್ಳ್ಳದ ಜಿಹ್ವೆಯದೇಕೆ ಪೂಜಿಪ........
................ನಗೆ ಹಂಪ್ಪೆಯ ಲಿಂಗ್ಗನೆ ನಿಂಮೊಳಳ್ಳರಿಂ ॥ ೧॥

ಅಂತ್ಯ : ಯರಗುವೆಯೆಂನ್ನ ಹಂಪ್ಪೆಯರಸಂಗೆಹಂಗೆ ಮಿಕ್ಕಿನ
ಗೆರಗಿದರುಂಟೆ ಪಂಚಮುಖವ್ವುಂಟ್ಟೆ ಗಜಾಜಿನಮುಂಟ್ಟೆ
ಪತ್ತು ತೋಳ್
ಕರಿಗೊರಲುಂಟ್ಟೆ ಕೆಂಜೆಡೆಗಳುಂಟೆ ಮರುಳ್ಗಣಮುಂಟ್ಟೆ ಭಾಳದೊಳ್
ಮಿರುಗುವ ನೇತ್ರಮುಂಟ್ಟೆ ಶಶಿಯುಂಟ್ಟೆ ವೃಷಭಧ್ವಜಮುಂಟ್ಟೆ
ಮತ್ತಾವ ದೇವರೊಳ್ ॥

ವಿಷಯ : ಹಂಪೆಯ ವಿರೂಪಾಕ್ಷನ ಸ್ತುತಿ.

ವಿಶೇಷ : ಅಸಮಗ್ರ. ೧೬ ಪದ್ಯಗಳು ಮಾತ್ರ ಇವೆ. ೧೪೧ನೆಯ ಪತ್ರ ಬಹಳಮಟ್ಟಿಗೆ ಮುರಿದು ಲುಪ್ತವಾಗಿದೆ. ಇದರೊಡನೆ ಕಾಳಹಸ್ತೀಶ್ವರ ಶತಕ (ತೆ), ಶೈವಸಂಜೀವಿನಿ (ಸಟೀಕು) ಮೊದಲಾದ ಗ್ರಂಥಗಳಿವೆ.

—ಬಿಎಸ್‌ಎಸ್

11

ಕೆ. ೧೯೨/೫	**ಪ್ರಭುದೇವರ ಪುರಾಣದ ನಾಂದ್ಯ**	ಪದ್ಯ
೮″ × ೧.೮″	?	?
೧೯–೧೧೭ ಪತ್ರ	೧೦ ಪಂಕ್ತಿ	೫೪ ಅಕ್ಷರ

ಆದಿ : ಶ್ರೀ ಗುರು ಬಸವಲಿಂಗಾಯನಮಃ ಪ್ರಭುದೇವರ ಪುರಾಣ ನಾಂದ್ಯ ಬರುವದಕ್ಕೆ ಶುಭಮಸ್ತು ॥ ಪರಿವರ್ಧಿನಿ ಷಟ್ಪದಿ ॥ ರಾಗ ಕಲ್ಯಾಣಿ ॥
ಶ್ರಿದ್ಭಪಿತಾಂಗ ವಿಹೃದ್ಭೂಭಂಗ ಲ
ಸದ್ಭಕ್ತಿಪರುದುರೋದ್ಭೂದವಭವ ।
ಭಿದ್ಭೀಮಾರ್ಜುನ ಹಾತಾಶ ನಕೋದ್ಭೂವಪ್ರತ್ಯರ್ಥಿ
ಸದ್ಧಾತುಂಧಮುರುದ್ಭೂತೋತ್ಸ್ವರುಳಿ
ಸದ್ಭವ್ಯವಯಕೃದ್ಭಯಜನೇಜ
ಗದ್ಭಯ ತನ್ನ ಮನ ಹರಬೃಹದ್ಭಾನ್ವಕ್ಷಿ ಜಯಾ ॥ ೧ ॥

ಅಂತ್ಯ : ಕರತರಳ ನಯನ ನಯದಯುಗಘರಹಸನ ಶಶಧರ ಶಕವಕ ।
ಗತತಹರ ಗಗನ ಕಚ ಸಚರ ತರರ ಚನಕರ ।
ತತಚಯದ ಸಹ ಸಯಶದಶ ಶತಕದಳಶರನ ।
ಹತಚಷಕ ತಳತಳನತತರನನಘರಥನತನಯಕದನ ತಥನಾ ॥
ಪ್ರಭುದೇವರ ಪುರಾಣ ನಾಂದ್ಯಪದಂಗಳು ಸಮಸ್ತ ಮಂಗಳಾನಿ ಭವಂತು

ವಿಷಯ : ಪ್ರಭುದೇವರ ಪುರಾಣ ಸಾಂದ್ಯ.

ವಿಶೇಷ : ವೈದ್ಯ, ಶಿವಮಹಿಮಾಶತಕ, ಮಹಾನಾಟಕ, ಕಾಳಿದಾಸನ ಕಲ್ಮಾಲೆಯ ವೃತ್ತ ಮುಂತಾದ ಕೃತಿಗಳಿವೆ.

—ಎಂಸಿಪಿ

12

ಕೆ. ೧೩.೨೩	**ಪ್ರಭುಲಿಂಗಲೀಲೆ**	ಭಾಮಿನೀ ಷಟ್ಪದಿ
೯.೫″ × ೧.೫″	ಚಾಮರಸ	೧೪೩೦
೧–೧೧೦ ಪತ್ರ	೯ ಪಂಕ್ತಿ	೪೨ ಅಕ್ಷರ

ಆದಿ : ಶ್ರೀ ಶಿವಾಯಂ ನಮಃ।........ರ್ಯ ಮಸ್ತು ।........
ದೇವರು ಹೇಳಿದ ಶೃಷ್ಟಿಸ್ಥಲದ ವಚನ । ಸಹದಿಂದ
ನಿರಾಲಂಬವಾಯಿತ್ತು । ನಿರಾಲಂಬದಿಂದ ನಿರಾಳವಾಯಿತ್ತು ।
................ಲಾಯಿತ್ತು । ನಿರವಯದಿಂದ ಆದಿಯಾಯಿತ್ತು ।
ಆದಿಯ ಮೂರ್ತಿಯೊಡನೊಬ್ಬ । × × ×

ಕಂದ ॥ ಪ್ರಭುಲಿಂಗಲೀಲೆ........
........ವಿಪ್ಪತ್ತ್ರೈದ ಗತಿಯೊಳಂತಾ ಗತಿಯೊಳ್
ಪ್ರಭುಲಿಂಗಲೀಲೆ ಗಗನ
ಪ್ರಭೆ ಕಿಱುಗನ್ನಡಿಯೊಳೆಸೆವ ತೆಱ........

ಅಂತ್ಯ : ದೇವ ಬಿನ್ನಹ ಮನವನಳಿದ ನಿ
ರಾವಲಂಬಿಯ ಕುಱುಹದೆ........
ಜೀವನೊ ಪರಮನೊ ಪರಾಪರನಾಮವುಳ್ಳವನೋ
ಆವುದಾಗಿಹುದಾತನಿಂಗಿಷ
ನಾವು ತಿಳಿವಂತಿರೆ ನಿರೂಪಿಸಿ
ಕಾವುದೆನು................

ವಿಷಯ : ಅಲ್ಲಮಪ್ರಭುದೇವನ ಚರಿತ್ರೆ.

ವಿಶೇಷ : ಅಸಮಗ್ರ ಕೃತಿ. ಪತ್ರಗಳು ಅಲ್ಲಲ್ಲಿ ತ್ರುಟಿತ. ಶಕಟರೇಫದ ಬಳಕೆಯಿದೆ. ಕೆಲವು ಗರಿಗಳು ತುಂಬ ಶಿಥಿಲವಾಗಿವೆ.

—ಎಂಪಿಎಂ

13

ಕೆ. ೧೬೫೮/೭ **ಪ್ರಭುವಿನ ಅಷ್ಟಕ** ಹಾಡು

೧೩.೩″ × ೨.೩″ ? ?

೭೦–೭೧ ಪತ್ರ ೧೦ ಪಂಕ್ತಿ ೫೪ ಅಕ್ಷರ

ಆದಿ : ಪ್ರಭು ಅಷ್ಟಕ । ಶ್ರೀ ಗಣಾಧಿಪತಯೇ ನಮಃ ।
ದೇವ ಮುಕ್ತಿಯನೀವ ದಯ ಸಂಜೀವ ದುರಿತ ಕಾವನಾ
ಭಾವಭರಿತನ ಭವವಿನಾಶನ ರಾವಣಗೆ ಪದವಿತ್ತನಾ
ಪಾವಕಾಕ್ಷನ ಪರಮ ಪುರುಷನ ಭಾವಜನ ಸುಟ್ಟಾತನಾ
ಭಾವಕೀ ನೀ ತಂದು ತೋರೆಲೆ ದೇವಯೆತಿ ಪ್ರಭುರಾಯನಾ ॥ ೧ ॥

ಅಂತ್ಯ : ಕಪ್ಪುಗೊ೦ಳನ ಕರುಣಿದೇವನ ಸರ್ಪಭೂಷಣ ಸ್ವಾಮಿಯಾ
ಪುಷ್ಪಹಾರನ ಪೂಜ್ಯವಂತನ ಮುಪ್ಪುರವ ಸ೦ಟೇಶನಾ
ಕುಪ್ಪಸ ಕಂಥೆಯು ಚೆನ್ನಮಲ್ಲನವೊಪ್ಪುವಾ ಕರಜಾತನಾ
ಕಪ್ಪುರಗಂಧಿ ನೀ ತಂದು ತೋರೆಲೆ ಅಪ್ಪಯೆತಿ ಪ್ರಭುರಾಯನಾ ॥ ೮ ॥
ಇತಿ ಪ್ರಭು ಅಷ್ಟಕ ಸಂಪೂರ್ನ್ನ ಮಂಗಳ ಮಹಾಶ್ರೀ.

ವಿಷಯ : ಅಲ್ಲಮ ಪ್ರಭುದೇವನ ಸ್ತುತಿ.

ವಿಶೇಷ : ಸಮಗ್ರ. ಇದರೊಡನೆ ವಿಭೂತಿ ರುದ್ರಾಕ್ಷಿ ಮಂತ್ರಗಳು, ದೇವೀ ಸ್ತೋತ್ರ (ಸಂ) ಮೊದಲಾದ ಗ್ರಂಥಗಳಿವೆ.

—ಬಿಎಸ್‌ಎಸ್

14

ಕೆ. ೯೫೧ **ಬೃಹಜ್ಜಾತಕ** ಶ್ಲೋಕ, ಟೀಕು

೧೩″ × ೨″ ಭಟ್ಟೋತ್ಪಲ ?

೧–೧೭೬ ಪತ್ರ ೧೦ ಪಂಕ್ತಿ ೭೦ ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಮಃ × × × ವಿಶ್ವಾವಸು ಸಂವತ್ಸರದ
ಮಾರ್ಗಶಿರ ಬಹುಳ ೧ ರವಿವಾರ ಬರಜಾಕ ಪ್ರಾರಂಭ ಮಾಡಿದ
ಶ್ರೀ ಮಹಾ ಹೋರಾಶಾಸ್ತ್ರದ ವ್ಯಾಖ್ಯಾನ ಪುಸ್ತಕಂ ಶುಭಮಸ್ತು
ಮೂರ್ತಿತ್ವೇ ಪರಿಕಲ್ಪಿತಃ ಶಶಭೃತೋ ವರ್ತ್ಮಾ ಪುನಃ
ಜನ್ಮನಾ ಮಾನ್ಯೇತ್ಯಾತ್ಮನಿದಾಂ ಕ್ರತುಶ್ಚವಸಿತಾಂ
ಭರ್ತಾಮರಜ್ಯೋತಿಷಾಂ ಲೋಕಾನಾಂ ಪ್ರಲಯಾದಯಃ

ಸ್ಥಿತಿವಿಭುಃ ಶ್ಯಾನೈಕಥಾ ವಾಸ್ಮೃತಃ ವಾಂಛನನ್ಯದ
ಧಾತುನ್ನೈಕ ಕಿರಣಃ ತ್ರೈಲೋಕ್ಯ ರೂಪೋ ರವಿಃ ॥ ೧ ॥

ಶಾಸ್ತ್ರದಲ್ಲಿ ಕೆಲವು ಸಂಬಂಧಾಭಿಧೇಯ ಪ್ರಯೋಜನಗಳಂ ನೇತುಲ್ ಪಡುತ್ತಂವಿಂಥಾವು.

ಅಂತ್ಯ : ಸ್ತ್ರೀಜಾತಕಾಧ್ಯಾಯದಲ್ಲಿ ವಿಭೇ........ದಲ........ವು ಪಾಣಿಗ್ರಹಣ ಮುಹೂರ್ತ ಕಾಲವಲ್ಲಿ ವರ್ತಿಸುವ ಸುಮುಹೂರ್ತದಲ್ಲಿ ಪ್ರಧಾನ ಮುಹೂರ್ತದಲ್ಲಿಯೂ ವಿವಾಹಪ್ರಶ್ನೆಯಲ್ಲಿಯು ಯೋಚಿಸಿಕೊಳ್ಳಬೇಕು. ಶ್ರೀ ಶ್ರೀ ಶ್ರೀ. ಇತಿ ಶ್ರೀ ಭಟ್ಟೋತ್ಪಲ ವಿರಚಿತಾಯಾಂ ಜಗಚ್ಚಂದ್ರಿಕಾಯಾಂ ಬೃಹಜ್ಜಾತಕ ವಿವರಣೆ ಹೋರಾಶಾಸ್ತ್ರೇ ಸ್ತ್ರೀಜಾತಕಂ ನಾಮ ತ್ರಯೋವಿಂಶೋಧ್ಯಾಯಃ ಶ್ರೀ ಶ್ರೀ ಶ್ರೀ.

ವಿಷಯ : ಜ್ಯೋತಿಷ.

ವಿಶೇಷ : ತಿಗಳಾರಿ (ತುಳು) ಲಿಪಿ.

—ಬಿಎಸ್‌ಎಸ್

15

ಕೆ. ೧೬೫೮/೯	ಮಃಟಸ್ಥಲ	ಗದ್ಯ
೧೩.೩" × ೨.೩"	?	?
೭೧–೭೨ ಪತ್ರ	೧೦ ಪಂಕ್ತಿ	೫೪ ಅಕ್ಷರ

ಆದಿ : ಶ್ರೀ ಗುರು ಬಸವಲಿಂಗಾಯ ನಮಃ । ಮಟಸ್ಥಲ । ಶ್ರೀ ಗುರು ಪಂಚಬ್ರಂಹ್ಮ ತತ್ವ ನಾಲ್ಕು । ಆಚಾರ್ಯರು ನಾಲ್ವರು । ಕಳಸ ನಾಲ್ಕು ....ನಾಲ್ಕು । ವೇದವರ್ನ್ನ ನಾಲ್ಕು । ಚಂದ ನಾಲ್ಕು । ದೇವತೆ ನಾಲ್ಕು । ಗಾಯತ್ರಿ ನಾಲ್ಕು । ಶಿವಲಿಂಗ ನಾಲ್ಕು ।

ಅಂತ್ಯ : ಆ ಲಿಂಗ ಶಿಲಾಲಿಂಗ । ಪಂಚಶಿಖಿ । ಪಾಸ್ಪತಿ ಮಕುಟ ಚಿಬ್ಬುದಂಡ । ಆಚಾರಕಪ್ಪರ ತಾಂಬ್ರದ ಮುದ್ರೆ ದೇವಾ ನಮ ಶಿವಾಯ । ಭಿಕ್ಷಯೆಂಬ ಶಬ್ದ । ಅರುಹೆ ಸೂಜಿ । ಕುರುಹೆ ದಾರ । ಕಾವಿಕಾಶಾಂಬ್ರದ ವಸ್ತ್ರ । ಸ್ವಯಂಪಾಕ । ಹಂಸೆವಾಹನ ಸುಖಾಸನದಿಂದಿಪ್ಪರು । ನಿರಾಕಾರದಲ್ಲಿ ॥ ಳ ॥ ಅಂತು ಮಟಸ್ಥಲ ಳಕ್ಕೆ ಮಂಗಳ ಮಹಾಶ್ರೀ.

ವಿಷಯ : ವೀರಶೈವತತ್ತ್ವ.

ವಿಶೇಷ : ಸಮಗ್ರ. ಇದರೊಡನೆ ದೇವಿಸ್ತೋತ್ರ(ಸಂ), ದೀಕ್ಷಾವಿಧಾನ ವೊದಲಾದ ಕೃತಿಗಳಿವೆ.

—ಬಿಎಸ್ಎಸ್

16

ಕೆ. ೧೭೧೭/೨ | **ಮದನಕಾಮೇಶ್ವರೀ ಚೂರ್ಣ** | ಶ್ಲೋಕ, ಟೀಕು

೮.೩″ × ೧.೨″ | ? | ?

೩೭–೪೯ ಪತ್ರ | ೫ ಪಂಕ್ತಿ | ೩೦ ಅಕ್ಷರ

ಆದಿ : ಮದನ ಕಾಮೇಶ್ವರಿ ಚೂರ್ನ ॥ ಸಂವ್ಯ ॥ ಸಂಮ್ಯಗ್ಮಾರುತಮಭ್ರಕಂ ಕಡುಫಲಂ ಕಷ್ಟಾಶ್ವಗಂಧಾಮೃತಾಮಿಂಡಿ ವೋಚರಸಾವಿದಾರಿ ಮುಸರಿ ಗೋಕ್ಷೂರಕೆ ಕ್ಷೂರಕಂ । × × × ಸೇವಯೇತ್ ॥ ಟೀಕೂ ॥ ವೊಳ್ಳಹ ಅಭ್ರಕ ಸಿಂದೂರ । ಬೆಟ್ಟ ಸುಂಡೆ ಹಂಣು । ಕೋಷ್ಠ । ಹಿರಿಮದ್ದಿನ ಬೇರು । ಅಮರದವಳ್ಳಿ ಶರ್ಕರಿ । ಮೆಂಥೆಯ । ಯವಲದ ಹಗಿನು । ನೆಲಗುಂಬಳದ ಗೆಡ್ಡೆ । ಬೀಜ । ನೆಲದಾಳಗೆಡ್ಡೆ । ನೇಗಿಲ ಬೇರು । ಕೊಳವಳಿಕೆಯ ಬೀಜ ಬಾಳೆ ಗೆಡ್ಡೆ । ಆಷಡಿ ಗೆಣಸು ।

ಅಂತ್ಯ : ಯಿವಂ ಸಮಾನಂಗೊಂಡು ಚೂರ್ನಂ ಮಾಡಿ । ಯಿಾ ಚೂರ್ನದ ಸಮಾನ ಭಂಗಿ ಬೆರಸಿ । ಯಿದರ ಯರಡುಮಡಿ ಸರ್ಕರೆವೆರಸಿ ಜೇನು ತುಪ್ಪದಲ್ಲಿ ಕಲಸಿ ಯರಡು ತೂಕ । ಪ್ರಮಾಣ ಗುಳಿಗೆಯಂ ಕೊಂಬುದು ಯಿದು ಮದನ ಕಾಮೇಶ್ವರಿ ವಡುಕ

ವಿಷಯ : ಚೂರ್ಣ ತಯಾರಿಸುವ ವಿಧಾನ.

ವಿಶೇಷ : ಇದೇ ಕಟ್ಟಿನಲ್ಲಿ ಭೇಷಜ ಶಾಸ್ತ್ರ, ನಾಡೀ ಪರೀಕ್ಷೆ ಎಂಬ ಗ್ರಂಥಗಳಿವೆ.

—ವೈಸಿಬಿ

17

